
ಪುಸ್ತಕ ಪ್ರಪಂಚ

ಏಪ್ರಿಲ್ – ಮೇ ೧೯೯೫



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦೦೦೬

ಕೃತಜ್ಞತೆಗಳು



ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ಶಾಲಾ ಕಾಲೇಜುಗಳು, ಶಿಕ್ಷಕರ ತರಬೇತಿ ಕೇಂದ್ರಗಳು ಸಮಿತಿ ಪ್ರಕಟಣೆಗಳಾದ 'ಬೆಳಕು' ವಾರಪತ್ರಿಕೆ ಹಾಗೂ 'ಪುಸ್ತಕ ಪ್ರಪಂಚ'–ಮಾಸಿಕಕ್ಕೆ ಅಜೀವ ಚಂದಾದಾರರಾಗುವಂತೆ ಶ್ರೀ ಆರ್. ಸುರೇಶ್, ಐ.ಎ.ಎಸ್., ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು ಅ 5 (2) ವಾ. ಪ. ಅ. ಅ. 67/-94-95 ದಿನಾಂಕ 7-1-95 ರ ಮೂಲಕ ಆದೇಶ ಹೊರಡಿಸಿರುತ್ತಾರೆ. ಈ ರೀತಿ ಪ್ರೋತ್ಸಾಹ ನೀಡಿದುದಕ್ಕಾಗಿ ಶಿಕ್ಷಣ ಆಯುಕ್ತರಿಗೆ ಕೃತಜ್ಞತೆಗಳು.

—ಸಂಪಾದಕ ಮಂಡಳಿ

ಹೆಚ್ಚುವರಿ ಪುಟಗಳೊಂದಿಗೆ ಏಪ್ರಿಲ್–ಮೇ ಸಂಚಿಕೆಯನ್ನು ಅನಿವಾರ್ಯವಾಗಿ ಒಟ್ಟಾಗಿ ಪ್ರಕಟಿಸಿದೆ. ಮಾನ್ಯ ಓದುಗರು ಸಹಕರಿಸಬೇಕಾಗಿ ಕೋರಿಕೆ.

—ಸಂ

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೫ ಸಂಚಿಕೆ ೮-೯

ರಕ್ಷಾಪುಟ ಚಿತ್ರ

ಶ್ರೀ ಕೆ. ಕೆ. ಹೆಬ್ಬಾರ್

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ: ರೂ. 6

ವಾರ್ಷಿಕ ಚಂದಾ: ರೂ. 60

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. 400

ಸಂಸ್ಥೆಗೆ: ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-570 006

ಪುಸ್ತಕ ಪ್ರಪಂಚ

ದೇಜಗೌ

ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಕೆಲವು ವರ್ಷಗಳಿಂದ ಗ್ರಹಪೀಡೆಗೆ ತುತ್ತಾಗಿರುವುದು ಸರ್ವವೇದ್ಯ ಸಂಗತಿ. ಅದರ ಪ್ರಾಮುಖ್ಯತೆಯನ್ನರಿತ ಮಾಜಿ ಸಚಿವರಾದ ಶ್ರೀ ಪ್ರಭಾಕರ ರಾಣೆಯವರು ಆ ಸಂಸ್ಥೆಗೆ ಸೂಕ್ತ ವಿಧಿವಿಧಾನುಗಳನ್ನೊದಗಿಸುವ ಮೂಲಕ ಕಾಯಕಲ್ಪವನ್ನು ನೆರವೇರಿಸಿ, ಅದನ್ನು ಸಚೇತನಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿ ಮುಖ್ಯಮಂತ್ರಿಗಳ ಅವಕೃಪೆಯಿಂದಾಗಿ ವಿಫಲವಾದದ್ದುಂಟು. ಸಮಿತಿಯ ಉಪಾಧ್ಯಕ್ಷರೂ, ಇಂದಿನ ಶಾಸಕರೂ ಆದ ಶ್ರೀ ಮಹದೇವಪ್ರಸಾದರು ಈ ಸಂಸ್ಥೆಯ ಬಗ್ಗೆ ವಹಿಸಿರುವ ಕಾಳಜಿಯಂತು ಸ್ತುತ್ಯರ್ಹವಾದದ್ದು. ಶ್ರೀಸಾಮಾನ್ಯನ ಏಳ್ಗೆಗಾಗಿ ದುಡಿಯುವ, ಹಸ್ತಶುದ್ಧಿಯ, ನೇರ ನಡೆಯ ಪ್ರೌಢ ಶಿಕ್ಷಣ ಸಚಿವ ಶ್ರೀ ಎಚ್. ಜಿ. ಗೋವಿಂದಗೌಡರು ಈ ಸಮಿತಿಯ ಹಣೆಯಲ್ಲಿ ಏನು ಬರೆಯುತ್ತಾರೋ ಕಾದು ನೋಡಬೇಕಾಗಿದೆ.

ಇಂದಿನ ಅಧ್ಯಕ್ಷರು, ನಿರ್ದೇಶಕರು ಮತ್ತು ಪ್ರಧಾನ ಕಾರ್ಯದರ್ಶಿಗಳು ಸಮಿತಿಯ ಕರ್ಣಧಾರತ್ವವನ್ನು ವಹಿಸಿಕೊಂಡ ನಂತರ ಅದಕ್ಕೆ ಜೀವತುಂಬಲು ಶ್ರದ್ಧಾನಿಷ್ಠೆಯಿಂದ ಶ್ರಮಿಸುತ್ತಿರುವುದು ಅಭಿನಂದನಾರ್ಹವಾದ ಸಂಗತಿ. ಶ್ರೀ ಶಾಂತರಾಜ್ ಅವರು ಸಮಿತಿಯ ಇತರ ಚಟುವಟಿಕೆಗಳನ್ನು ಚುರುಕುಗೊಳಿಸುತ್ತಿರುವವರಲ್ಲದೆ, ಹಿಂದಿನವರು ಸಾಯಿಸಿಬಿಟ್ಟರೇನೋ ಎಂದುಕೊಂಡಿದ್ದ ಪುಸ್ತಕ ಪ್ರಪಂಚದಲ್ಲಿ ಪ್ರಾಣಸಂಚಾರವಾಗುವಂತೆ ಜೀವರಕ್ಷಕ ಸೂಜಿಮದ್ದು ಕೊಟ್ಟು, ಅದರ ಬೆಳವಣಿಗೆಗೆ ನಿರಂತರ ಶ್ರಮಿಸುತ್ತಿದ್ದಾರೆ. ಅದನ್ನು ಆಕಾಶದೆತ್ತರಕ್ಕೇರಿಸುವ, ಕರ್ನಾಟಕದ ಉದ್ದಗಲಗಳಲ್ಲಿ ಅದನ್ನು ಚೆಲ್ಲುವ ಮಹತ್ವಾಕಾಂಕ್ಷೆ ಅವರದು. ಆ ಮಹತ್ವಾಕಾಂಕ್ಷೆಯನ್ನು ಕಾರ್ಯಗತಗೊಳಿಸುವಲ್ಲಿ ಅನೇಕ ಉಪಾಯಗಳನ್ನು ರೂಪಿಸಿದ್ದಾರೆ; ಕೆಲವು ಉನ್ನತಾಧಿಕಾರಿಗಳನ್ನು ಭೇಟಿಮಾಡಿ, ಪುಸ್ತಕ ಪ್ರಪಂಚದ ಉಪಯುಕ್ತತೆಯನ್ನವರಿಗೆ ಮನನ ಮಾಡಿಸಿ, ಅವರ ಆಶೀರ್ವಾದವನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ರಾಜ್ಯದ ಶಿಕ್ಷಣ ಇಲಾಖೆಯ ಆಯುಕ್ತರಾದ ಶ್ರೀ ಆರ್. ಸುರೇಶ್ ಮತ್ತು ವಯಸ್ಕರ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಬಿ. ಭೀಮಯ್ಯ ಅವರ ದೂರದೃಷ್ಟಿ, ಶೈಕ್ಷಣಿಕ ಜಾಗ್ರತಿ ಮತ್ತು

ವಾತ್ಸಲ್ಯ ಹಾಗೂ ವಿಶಾಲ ಬುದ್ಧಿಯಿಂದಾಗಿ ಪುಸ್ತಕ ಪ್ರಪಂಚದ ಆಜೀವ ಸದಸ್ಯರ ಸಂಖ್ಯೆ ಇಪ್ಪತ್ತೈದು ಸಾವಿರವನ್ನು ಮೀರುವ ನಿರೀಕ್ಷೆಯಿದೆ. ಶಿಕ್ಷಣ ಪ್ರಿಯರೂ, ಶಿಕ್ಷಣ ಪ್ರಸಾರ ನಿಷ್ಠರೂ, ವಿವೇಕಿಗಳೂ ಆದ ಈ ಇಬ್ಬರು ಅಧಿಕಾರೀ ಮಿತ್ರರನ್ನು ಸಂಪಾದಕ ಮಂಡಲಿ ಮತ್ತು ವಾಚಕವೃಂದ ಕೃತಜ್ಞತಾಪೂರ್ವಕವಾಗಿ ವಂದಿಸುತ್ತದೆ. ಇದರಿಂದಾಗಿ ಸಂಪಾದಕ ಮಂಡಲಿಯ ಜವಾಬ್ದಾರಿಯೂ ಬಹುವಾಗಿ ವರ್ಧಿಸಿದೆಯೆಂಬುದನ್ನು ನೆನೆಯಬೇಕಾಗಿದೆ.


ವಿದ್ಯಾಪೀಠಗಳು

ಶ್ರೀ ಎಚ್. ಡಿ. ದೇವೇಗೌಡರ ನೇತೃತ್ವದ ಜನತಾ ದಳದ ಸರ್ಕಾರ ಜನತೆಯಲ್ಲಿ ನಂಬುಗೆ ಮೂಡುವಂತೆ ದಿಟ್ಟ ಹೆಜ್ಜೆ ಇಡುತ್ತಿರುವುದು, ಆಡಂಬರ ದೌಲತ್ತುಗಳನ್ನು ಬದಿಗೊತ್ತಿ ರಾಜ್ಯದ ಏಳ್ಗೆಯೊಂದೇ ಗುರಿಯಾಗಿ ಕಾರ್ಯಾರಂಭ ಮಾಡಿರುವುದು ಸಂತೋಷದ ಸಂಗತಿ. ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ನೂತನ ಶಾಸಕರಿಗೆ ಅಲ್ಪಕಾಲದ ತರಬೇತಿ ವ್ಯವಸ್ಥೆಗೊಳಿಸಿರುವುದು ಸರ್ಕಾರದ ದೂರದೃಷ್ಟಿಗೂ ವ್ಯವಹಾರ ಕೌಶಲಕ್ಕೂ ಸಾಕ್ಷಿಯಾಗಿದೆ. ಈ ವ್ಯವಸ್ಥೆಗೆ ವಿಧಾನಸಭೆಯ ಅಧ್ಯಕ್ಷರೂ ಕಾರಣರೆಂಬುದನ್ನು ಮರೆಯುವಂತಿಲ್ಲ. ತರಬೇತಿಯ ವಿವರಗಳು ಪತ್ರಿಕೆಗಳಲ್ಲಿ ಪ್ರಕಟವಾದ ಹಾಗೆ ಕಾಣುವುದಿಲ್ಲ. ಇತರ ವಿಷಯಗಳ ಜತೆಗೆ, ಕರ್ಣಾಟಕ ಸಂಸ್ಕೃತಿ ಮತ್ತು ಕನ್ನಡ ಮಾಧ್ಯಮದ ಬಗ್ಗೆಯೂ ಶಾಸಕರಿಗೆ ತಿಳಿವಳಿಕೆ ನೀಡಬಹುದಿತ್ತೇನೊ ಎನಿಸುತ್ತದೆ.

ಈಗಾಗಲೇ ಜಿಲ್ಲಾ ಪರಿಷತ್ ಮತ್ತು ತಾಲ್ಲೂಕು ಪರಿಷತ್ತುಗಳಿಗೆ ಚುನಾವಣೆಗಳು ಮುಗಿದಿವೆ. ಅವು ಹಳಿತಪ್ಪದಂತೆ ಸರಿಯಾಗಿ ನಡೆಯಬೇಕಾದರೆ ಗ್ರಾಮೀಣ ಪರಿಸರದಿಂದ ಬರುವ ಆ ಎಲ್ಲ ಸದಸ್ಯರಿಗೂ ಪರಿಷತ್ತುಗಳ ಇತಿಮಿತಿ ವ್ಯಾಪ್ತಿಗಳ ಬಗ್ಗೆ, ಗ್ರಾಮಾಭಿವೃದ್ಧಿಯ ಬಗ್ಗೆ, ಕರ್ನಾಟಕ ಸಂಸ್ಕೃತಿ ಮತ್ತು ಕನ್ನಡ ಭಾಷೆಯ ಬಗ್ಗೆ, ರಚನಾತ್ಮಕ ಚಟುವಟಿಕೆಗಳ ಬಗ್ಗೆ, ಸದಸ್ಯರ ನೀತಿ ಸಂಹಿತೆಯ ಬಗ್ಗೆ ಒಂದು ವಾರದ ಅಥವಾ ಹತ್ತು ದಿನಗಳ ತರಬೇತಿ ಅತ್ಯಂತ ಸೂಕ್ತವಾದದ್ದು. ಶ್ರೀ ನಜೀರ್‌ಸಾಬ್‌ರ ನಂತರ ಯಾವ ಇಲಾಖೆಯನ್ನಾದರೂ ಸಮರ್ಥವಾಗಿ ನಡೆಸಬಲ್ಲ ದಕ್ಷ ಮಂತ್ರಿಗಳೆಂದರೆ ಶ್ರೀ ಎಂ. ವೈ. ಘೋರ್ಪಡೆ ಮತ್ತು ಶ್ರೀ ಎಂ. ಪಿ. ಪ್ರಕಾಶ್ ಅವರು. ಅವರಿಬ್ಬರಲ್ಲಿ ಅಭಿಪ್ರಾಯಭೇದವಿರಬಹುದು ; ಆದರೆ ಪ್ರಾಮಾಣಿಕರು ; ಇಬ್ಬರೂ ವಿಸ್ತೃತ ಲೋಕಾನುಭವವುಳ್ಳವರು, ಬುದ್ಧಿವಂತರು, ವಿದ್ವಾಂಸರು, ಪರಿಣತರು ; ಗ್ರಾಮಾಭಿವೃದ್ಧಿ ನಿಷ್ಠರು. ಪ್ರಕಾಶ್ ಅವರು ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯ ಸಚಿವರಾದದ್ದು ಶುಭೋದಯದ ನಾಂದಿ ಎಂದೇ ಹೇಳಬಹುದು.

ಡೆನ್ಮಾರ್ಕ್ ಮಾದರಿಯ ವಿದ್ಯಾಪೀಠಗಳು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಅನವದ್ಯ ಅಮೂಲ್ಯ ಸಂತಾನವೆಂದೇ ಹೇಳಬಹುದು. ಸಮಿತಿಯ ಅದೃಷ್ಟದೊಡನೆ ಅವುಗಳ ಅದೃಷ್ಟವೂ ತಳಕು ಹಾಕಿಕೊಂಡಿದೆಯೆಂಬುದು ನಿಜ. ಈ ವಿದ್ಯಾಪೀಠಗಳು ಗ್ರಾಮೀಣ ಯುವಕರ ಮತ್ತು

ಸಾಕ್ಷರರ ಉನ್ನತ ತರಬೇತಿ ಸಂಸ್ಥೆಗಳಾಗಬೇಕು, ಸಾಂಸ್ಕೃತಿಕ ಕೇಂದ್ರಗಳಾಗಬೇಕು, ರಾಜಕಾರಣಿಗಳ ವಿದ್ಯಾಕೇಂದ್ರಗಳಾಗಬೇಕು ಗ್ರಾಮೀಣ ಜನರ ಭರವಸೆಯ ಸ್ಫೂರ್ತಿಯ ಸೆಲೆಗಳಾಗಬೇಕೆಂದು ಅವುಗಳನ್ನು ಸ್ಥಾಪಿಸಿದವರ ಉದ್ದೇಶ. ಇಂಥ ವಿದ್ಯಾಪೀಠಗಳು ಡೆನ್ಮಾರ್ಕಿನಲ್ಲಿ ಅಲ್ಲಿಯ ರಾಜಕೀಯ ಸಾಂಸ್ಕೃತಿಕ ಜೀವನದ ಜೀವನಾಡಿಗಳಾಗಿವೆಯೆಂಬುದನ್ನು ಮರೆಯುವಂತಿಲ್ಲ. ಅದೇ ನಿಟ್ಟಿನಲ್ಲಿ ಬೆಳೆಯುತ್ತಿದ್ದ ಈ ಸಂಸ್ಥೆಗಳು ನಿರಾಸಕ್ತರ, ದೂರದೃಷ್ಟಿ ವಿಹೀನರ, ಅಸಮರ್ಥರ ಕೈಗೆ ಸಿಕ್ಕಿ ನರಳುವಂತಾದದ್ದು ದುರ್ದೈವ. ಈಗಲೂ ಇವು ರಾಜ್ಯದ ಭವಿಷ್ಯದ ಆಶಾ ಕೇಂದ್ರಗಳಾಗುವ ಸಾಧ್ಯತೆಯಿದೆ. ಪಂಚಾಯತ್ ರಾಜ್ಯದ ಪರಿಧಿಯಲ್ಲಿ ಬರುವ ಸದಸ್ಯರಿಗೆ ತರಬೇತಿ ನೀಡಬಲ್ಲ ಕೇಂದ್ರಗಳನ್ನಾಗಿ ಅವುಗಳನ್ನು ಪರಿವರ್ತಿಸುವ ಸಾಧ್ಯತೆಯಿದೆ; ಹೇಗೆ ಪರಿವರ್ತಿಸಬೇಕೆಂಬುದು ವಿವರಣೆಯ ಸಂಗತಿ. ಈ ಮೂಲಕ ಅವುಗಳನ್ನು ಪುನರುಜ್ಜೀವನಗೊಳಿಸುವುದಾದರೆ ಅವು ಸದಸ್ಯರ ಯಾತ್ರಾ ಕೇಂದ್ರಗಳಾಗುವುದಲ್ಲದೆ, ಪ್ರಗತಿ ರಥದ ಚಕ್ರಗಳಾಗುತ್ತವೆ, ಗ್ರಾಮೀಣ ಜೀವನದ ಜೀವನಾಡಿಗಳಾಗುತ್ತವೆಂದು ಧೈರ್ಯವಾಗಿ ಹೇಳಬಹುದು. ವಿವೇಕಿಗಳೂ, ಜಾಣರೂ, ಗ್ರಾಮಾಣಾಭಿವೃದ್ಧಿಯಲ್ಲಿ ಆಸೆಯುಳ್ಳವರೂ ಆದ ಶ್ರೀ ಎಂ. ಪಿ. ಪ್ರಕಾಶ್ ಮತ್ತು ಶ್ರೀ ಎಚ್. ಜಿ. ಗೋವಿಂದಗೌಡರು ಈ ದಿಶೆಯಲ್ಲಿ ಯೋಚನೆ ಮಾಡುವರೆಂದು ಆಶಿಸಬಹುದಾಗಿದೆ.



ಇನ್ನೊಬ್ಬರನ್ನು ನೋಯಿಸುವ ಕಾರ್ಯದಲ್ಲಿ ಎಂದೂ ತೊಡಗಬೇಡ. ಆ ನೋವಿನ ಅರಿವು ನಿನಗಿರುವಂತೆಯೇ ಅವರಿಗೂ ವೇದನೆಯುಂಟುಮಾಡುವದೆಂಬುದನ್ನು ಊಹಿಸಿಕೊ.

—ಭಗವಾನ್ ಬುದ್ಧ

ತುಳಸೀ ಸನ್ಮಾನ ವಿಜೇತ ಕೆ. ಕೆ. ಹೆಬ್ಬಾರ್

ಸಿ. ನಾಗಣ್ಣ

ಇಂಗ್ಲಿಷ್ ಮೂಲ ಲೇಖನ: ಪ್ರೊ॥ ವಿ. ಎಂ. ಶೋಲಾಪೂರ್‌ಕರ್*

ಕಟ್ಟಂಗೇರಿ ಕೃಷ್ಣ ಹೆಬ್ಬಾರರು ಉಡುಪಿಗೆ ಸಮೀಪದ ಕಟ್ಟಂಗೇರಿಯಲ್ಲಿ ೧೯೧೧ ರಲ್ಲಿ ಜನಿಸಿದರು. ಹೊಟ್ಟೆಪಾಡಿಗಾಗಿ ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಕೈಕೊಂಡರು. ಚಿತ್ರಗಳ ಮೂಲಕವೇ ಪಾಠ ಹೇಳುತ್ತಿದ್ದುದು ಅವರ ಬೋಧನೆಯ ವೈಶಿಷ್ಟ್ಯ. ಮೈಸೂರಿನ ಚಾಮರಾಜೇಂದ್ರ ಚಿತ್ರಕಲಾ ಶಾಲೆಯ ಅಧ್ಯಯನದ ನಂತರ ಮುಂಬೈಗೆ ತೆರಳಿದರು. ಅಲ್ಲಿ ಜಿ. ಎಸ್. ದಂಡಾವತಿಮಠ ಅವರ ನೂತನ ಕಲಾಶಾಲೆಯಲ್ಲಿ ಕಲೆಯ ಅಧ್ಯಯನಕ್ಕೆ ಸೇರಿದರು. ೧೯೩೮ ರಲ್ಲಿ ಮುಂಬೈನ ಜೆ. ಜೆ. ಕಲಾಶಾಲೆಯಿಂದ ರೇಖಾಚಿತ್ರ ಹಾಗೂ ವರ್ಣಚಿತ್ರಗಳಲ್ಲಿ ಡಿಪ್ಲೊಮಾ ಪದವಿ ಪಡೆದರು. ಅದೇ ಸಂಸ್ಥೆಯಲ್ಲಿ ೧೯೩೯ ರಿಂದ ೧೯೪೦ ರಲ್ಲೂ ನಂತರ ೪೩ ರಿಂದ ೪೭ ರವರೆಗೆ ಅಧ್ಯಾಪಕರಾಗಿ

ಪ್ರೊ. ವಿ. ಎಂ. ಶೋಲಾಪೂರ್‌ಕರ್*

ಸೆಪ್ಟಂಬರ್ ೨೭, ೧೯೧೧ರಲ್ಲಿ ಬಿಜಾಪುರದಲ್ಲಿ ಜನಸಿದ ಶೋಲಾಪೂರ್‌ಕರ್‌ರವರು ಮುಂಬೈನ ಪ್ರಖ್ಯಾತ ಸರ್. ಜೆ. ಜೆ. ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಕಲಿತವರು. ೧೯೩೭ ರಿಂದ ೬೯ರವರೆಗೆ ಅಲ್ಲಿಯೇ ಚಿತ್ರಕಲಾವಿಭಾಗದ ಬೋಧಕರಾಗಿ ಸೇವೆ ಸಲ್ಲಿಸಿದರು. 'ಫ್ರೀಪ್ರೆಸ್ ಜರ್ನಲ್', 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗಳಲ್ಲಿ ಕಲಾವಿಮರ್ಶಕರಾಗಿ ಬರೆದಿದ್ದಾರೆ. ಮೈಸೂರಿನ "ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ"ಯ ಸ್ಥಾಪಕ-ಡೀನರು. ಮೈಸೂರು ದಸರಾ ವಸ್ತು ಪ್ರದರ್ಶನದ ಲಲಿತ ಕಲೆ ಹಾಗೂ ಕರಕೌಶಲ್ಯ ಸಮಿತಿಯ ಅಧ್ಯಕ್ಷರಾಗಿದ್ದವರು. ವರ್ತಮಾನದಲ್ಲಿ 'ತೆಳುಮರದ ಕಲೆ'ಯನ್ನು ಪ್ರಚುರ ಪಡಿಸುತ್ತಿದ್ದಾರೆ. ಈ ಲೇಖನ ಬರೆಯುವ ಕಾಲಕ್ಕೆ ಪ್ರೊ. ವಿ. ಎಂ. ಶೋಲಾಪೂರ್‌ಕರ್‌ರವರು ಏಪ್ರಿಲ್‌ನಲ್ಲಿ ಮುಂಬೈನಲ್ಲಿ ನಡೆಯುವ ತಮ್ಮ ಏಕವ್ಯಕ್ತಿ ಪ್ರದರ್ಶನಕ್ಕೆ ಸಿದ್ಧತೆ ನಡೆಸುತ್ತಿದ್ದರು. ವಿದ್ಯುನ್ಮಾನಯುಗದಲ್ಲಿ ಕಲೆ, ಕಲಾವಿದರು ಹಾಗೂ ಸಾಹಿತಿಗಳು, ಕಲಾ ಶಿಕ್ಷಣ-ಅಭಿರುಚಿ ನಿರ್ಮಾಣ, ಭವಿಷ್ಯತ್ತಿನಲ್ಲಿ ಕಲೆ-ಇತ್ಯಾದಿ ಹಲವು ಹತ್ತು ವಿಷಯಗಳ ಬಗ್ಗೆ ಪ್ರೊ. ಶೋಲಾಪೂರ್‌ಕರ್ ಉತ್ಸಾಹದಲ್ಲಿ ಮಾತನಾಡುವುದನ್ನು ಕೇಳಿಸಿಕೊಳ್ಳುವುದು ಒಂದು ಅನುಭವ.

ಸೇವೆ ಸಲ್ಲಿಸಿದರು. ೧೯೪೯ ರಲ್ಲಿ ಯುರೋಪಿಗೆ ಅಧ್ಯಯನ ಪ್ರವಾಸ ಕೈಕೊಂಡರು. ಲಂಡನ್, ಬರ್ನ್ ಹಾಗೂ ಪ್ಯಾರಿಸ್‌ನಲ್ಲಿ ಚಿತ್ರ ಪ್ರದರ್ಶನ ಮಾಡಿದ್ದಾರೆ. ಏಕ ವ್ಯಕ್ತಿ ಚಿತ್ರಪ್ರದರ್ಶನಗಳು ಭಾರತದ ಪ್ರಮುಖ ನಗರಗಳಲ್ಲಿಯೇ ಅಲ್ಲದೆ ನ್ಯೂಯಾರ್ಕ್, ಬರ್ಲಿನ್, ಸಿಡ್ನಿ, ಅಡಿಲೇಯ್ಡ್ ಮೊದಲಾದ ಪ್ರಮುಖ ನಗರಗಳಲ್ಲೂ ನಡೆದಿವೆ.

ಕೆ. ಕೆ. ಹೆಬ್ಬಾರರು ಪಾಶ್ಚಾತ್ಯ ಕಲೆಯಿಂದ ಪ್ರಭಾವಿತರಾಗಿದ್ದರೂ ಭಾರತೀಯ ಪುರಾತನ ಚಿತ್ರ ಸಂಪ್ರದಾಯಕ್ಕೆ ಮನಸೋತವರು. ಸಾಮಾನ್ಯರ ಬದುಕನ್ನೇ ರೇಖೆಗಳಲ್ಲಿ ಚಿತ್ರಿಸಿದರು. ಅವರು ಪಡೆದಿರುವ ಕೆಲವು ಮುಖ್ಯ ಪ್ರಶಸ್ತಿಪದಕಗಳನ್ನು ಹೆಸರಿಸಬಹುದಾಗಿದೆ: ೧೯೪೭ ರಲ್ಲಿ ಕಲ್ಕತ್ತಾ ಕಲಾ ಅಕಾಡೆಮಿ ಚಿನ್ನದ ಪದಕ; ೧೯೫೮ ರಲ್ಲಿ ಭಾರತ ಸರ್ಕಾರದ ಪಾರಿತೋಷಕ; ೧೯೫೬, ೫೭, ೫೮ ರಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ; ೧೯೬೧ ರಲ್ಲಿ ಪದ್ಮಶ್ರೀ ಪ್ರಶಸ್ತಿ.

೧೯೭೬ ರಲ್ಲಿ ಕೇಂದ್ರ ಲಲಿತ ಕಲಾ ಅಕಾಡಮಿಯ ಫೆಲೋ; ೧೯೭೫ ರಲ್ಲಿ ಜರ್ಮನಿಯ ಕಲಾ ಅಕಾಡೆಮಿಯ ಸದಸ್ಯರಾದರು; ೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿತು; ೧೯೯೩ ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪ್ರಾಪ್ತವಾಯಿತು. ಇದೆಲ್ಲದಕ್ಕೂ ಕಿರೀಟಪ್ರಾಯವಾಗಿ ಈಗ ಡಾ. ಹೆಬ್ಬಾರರಿಗೆ ಮಧ್ಯಪ್ರದೇಶದ ಪ್ರತಿಷ್ಠಿತ "ತುಳಸೀ ಸಮ್ಮಾನ" ದೊರಕಿದೆ. ಪ್ರಸ್ತುತ ಡಾ. ಕೆ.ಕೆ. ಹೆಬ್ಬಾರವರು. ಮುಂಬೈನಲ್ಲಿ ತಮ್ಮದೇ ಕಲಾಭವನವನ್ನು ಸ್ಥಾಪಿಸಿಕೊಂಡು ಅಲ್ಲೇ ವಾಸವಾಗಿದ್ದಾರೆ.

ಡಾ. ಕೆ. ಕೆ. ಹೆಬ್ಬಾರರನ್ನು ಹತ್ತಿರದಿಂದ ಕಂಡ ಪ್ರೊ. ವಿ. ಎಂ. ಶೋಲಾಪೂರ್‌ಕರ್‌ರವರ ಅನುಭವಗಳು ಈ ರೀತಿ ಇವೆ:

ಡಾ. ಕೆ. ಕೆ. ಹೆಬ್ಬಾರರನ್ನು ನಾನು ಮೊದಲು ಕಂಡದ್ದು ಐವತ್ತರ ದಶಕದಲ್ಲಿ. ಆಗ ನಾನು ಬಹಳ ನಾಚಿಕೆ ಸ್ವಭಾವದ, ವಿಸ್ಮಯಗೊಳ್ಳುತ್ತಿದ್ದ ಕಲಾ ವಿದ್ಯಾರ್ಥಿ. ಮುಂಬೈನ ನೂತನ್ ಕಲಾ ಮಂದಿರ್‌ನಲ್ಲಿ ಹೆಬ್ಬಾರರು ಕಲಾ ಬೋಧಕರಾಗಿದ್ದರು. ಕರ್ನಾಟಕದಿಂದ ಹೋದ ಕಲಾವಿದ್ಯಾರ್ಥಿಗಳು ಹಾಗೂ ಕಲಾವಿದರ ಹಾಗೆಯೇ ಹೆಬ್ಬಾರರು ದಿವಂಗತ ಶ್ರೀ ಜಿ. ಎಸ್. ದಂಡಾವತಿಮಠ ಅವರನ್ನು ತುಂಬಾ ಗೌರವಿಸುತ್ತಿದ್ದರು. ಕಲಾ ಶಿಕ್ಷಣಕ್ಕೆ ದಂಡಾವತಿಮಠರು ಸಲ್ಲಿಸಿದ ನಿಸ್ವಾರ್ಥ ಸೇವೆ ಹೆಬ್ಬಾರರಿಗೆ ಮೆಚ್ಚುಗೆಯಾಗಿತ್ತು. ನಾವು ವಿದ್ಯಾರ್ಥಿಗಳಾಗಿದ್ದ ಕಾಲಕ್ಕೆ ಹೆಬ್ಬಾರರಲ್ಲಿ ಒಂದು ಬಗೆಯ ಸೃಜನಾತ್ಮಕವಾದ ಕಳೆ ಎದ್ದು ಕಾಣುತ್ತಿತ್ತು; ಇದರಿಂದ ನಮ್ಮಲ್ಲಿ ಅವರ ಬಗ್ಗೆ ಪೂಜ್ಯ ಭಾವನೆಯೇ ಅಂಕುರಿಸಿತ್ತು ಎನ್ನುವುದು ಉತ್ಪ್ರೇಕ್ಷೆಯು ಮಾತಲ್ಲ.

ಮುಂಬೈ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಭಾಂಗಣದಲ್ಲಿ ಅವರ ವರ್ಣಚಿತ್ರಗಳನ್ನು ನೋಡುವ ಅವಕಾಶ ನಮಗೆ ದೊರಕಿತು. ಆ ವರ್ಣಚಿತ್ರಗಳನ್ನು ವೀಕ್ಷಿಸುವ ಸಂದರ್ಭದಲ್ಲಿ ಎಲ್ಲರೂ ಮೂಕವಿಸ್ಮಿತರಾಗಿದ್ದರು. ಒಂದು ಚಿತ್ರಕ್ಕೆ ಇವರು "ಡ್ರಮರ್" ಅಥವಾ "ಢಕ್ಕೆ ಬಡಿಯುವವ" ಎಂದು ಹೆಸರು ಕೊಟ್ಟಿದ್ದರು. ಆ

ಚಿತ್ರದ ಮುಂದೆ ನಾವು ನಿಂತಾಗ ಆ ಥಕ್ಕೆಯಿಂದ ಹೊರ ಹೊಮ್ಮುವ ನಾದವನ್ನು ನಾವು ಆಲಿಸುತ್ತಿದ್ದಂತೆ ಭಾಸವಾಯಿತು. ಹೆಬ್ಬಾರರು ಮಾಡಿದ್ದ ಮಾಂತ್ರಿಕತೆ ಎಂದರೆ ಆ ಥಕ್ಕೆಯ ಮೇಲೆ ಎರಡು ಸಣ್ಣ ರೇಖೆಗಳನ್ನೆಳೆದಿದ್ದರು, ಅಷ್ಟೆ. ಅಮಾಯಕವಾದ ಆ ಎರಡು ಎಳೆಗಳು ನಾದ ತರಂಗಗಳನ್ನು ಎಬ್ಬಿಸಿ ವೀಕ್ಷಕನ ಕಿವಿಗೆ ತಲುಪಿಸುವಂತಿದ್ದವು. ದೃಶ್ಯಕ ಭಾಷೆಗೆ ನಾವು ತೆರೆದುಕೊಂಡರೆ ಖಂಡಿತಾ ನಮಗೆ ದಮ್ಮಡಿ ಶಬ್ದ ಕೇಳಿಸುತ್ತದೆ ಎಂದು ನಮ್ಮ ಹಿರಿಯ ಸಹಪಾಠಿಗಳು ನಮಗೆ ತಿಳಿಸಿದರು. ನೋಡಿದ ದೃಶ್ಯವನ್ನು ನಾವು ಶಬ್ದವಾಗಿ ಪರಿವರ್ತಿಸುವ ಕಲೆಯನ್ನು ಕಲಿಯಬೇಕಾಗಿತ್ತು. ಆ ವೇಳೆಗಾಗಲೇ ಹೆಬ್ಬಾರರ ಕೀರ್ತಿ ರಾಷ್ಟ್ರವ್ಯಾಪಿಯಾಗಿದ್ದ ಕಾರಣ, ಅವರ ವರ್ಣ ಚಿತ್ರಗಳ ಬಗ್ಗೆ ಜನರು ಮಾತನಾಡಿಕೊಳ್ಳುತ್ತಿದ್ದುದರಲ್ಲಿ ನಮಗೆ ಎಳ್ಳಷ್ಟೂ ಅನುಮಾನ ಕಾಣಲಿಲ್ಲ..

ಅನೇಕ ವರ್ಷಗಳ ತರುವಾಯ ಹೆಬ್ಬಾರರು ತಮ್ಮ "ಹಾಡುವ ರೇಖೆಗಳು" ಎಂಬ ಪುಸ್ತಕವನ್ನು ಪ್ರಕಟಿಸಿದರು. ನಮ್ಮ ದೇಶದ ಪ್ರಖ್ಯಾತ ಲೇಖಕರು ಹಾಗೂ ಕಲಾ ವಿಮರ್ಶಕರೂ ಆದ ಶ್ರೀ ಮುಲ್ಕ್ ರಾಜ್ ಆನಂದ್ ಈ ಪುಸ್ತಕಕ್ಕೆ ಪಾಂಡಿತ್ಯಪೂರ್ಣವೂ, ಉಲ್ಲಾಸ ಪೂರಿತವೂ ಆದ ಮುನ್ನುಡಿಯನ್ನು ಬರೆದಿದ್ದಾರೆ. ರೇಖಾ ಅಭಿವ್ಯಕ್ತಿಯ ಸುಪ್ತ ಶಕ್ತಿಯನ್ನು ಪರಿಚಯ ಮಾಡಿಕೊಡುವಲ್ಲಿ ಈ ಪುಸ್ತಕ ಯಶಸ್ವಿಯಾಗಿದೆ. ಪ್ರತಿಯೊಂದು ಮಹತ್ವದ ದೃಶ್ಯಕ ಅನುಭವವನ್ನೂ ಬಿಳಿಯ ಹಾಳೆಯ ಮೇಲೆ ರೇಖೆಗಳನ್ನು ಮೂಡಿಸುವುದರ ಮೂಲಕ 'ಅವಕಾಶ ಕಾವ್ಯ'ವಾಗಿ ಅರಳಿಸಬಹುದೆಂದು ಹೆಬ್ಬಾರರು ತೋರಿಸಿದರು. ಈ ಬಗೆಯ ಅಭಿವ್ಯಕ್ತಿಯನ್ನು ಹೆಬ್ಬಾರರು ವಿಶೇಷವಾಗಿ ಇಷ್ಟಪಟ್ಟಿದ್ದರಲ್ಲದೆ ಇದರಲ್ಲಿ ಬಹಳ ಸಂತೋಷವನ್ನೂ ಪಡೆಯುತ್ತಿದ್ದರು. ಒಂದು ದೃಷ್ಟಿಯಿಂದ ಗಮನಿಸಿದರೆ ಈ ರೇಖಾತ್ಮಕ ಅಭಿವ್ಯಕ್ತಿ ಎನ್ನುವುದು ತೀರಾ ಹೊಸತೇನಲ್ಲ; ಆದಿ ಮಾನವನಷ್ಟು ಹಳೆಯದು. ಅವನು ಗುಹೆಗಳಲ್ಲಿ ಮೊದಲು ಈ ಕಲೆಯನ್ನು ಪಡಿಮೂಡಿಸಿದ್ದಾನೆ. ಆದಾಗ್ಯೂ ಈ ಮಾದರಿಯನ್ನು ಸಮಕಾಲೀನ ಸನ್ನಿವೇಶದಲ್ಲಿ ಹೆಬ್ಬಾರರಷ್ಟು ತೀವ್ರವಾಗಿ ಪರಿಗಣಿಸಿದವರು ಬಹಳ ಮಂದಿ ಇಲ್ಲ. ಇದೊಂದು ಸ್ವತಂತ್ರ ಅಭಿವ್ಯಕ್ತಿ ಎನ್ನುವಷ್ಟರ ಮಟ್ಟಿಗೆ ಈ ಕಲೆಯನ್ನು ಎತ್ತರಕ್ಕೆ ಕೊಂಡೊಯ್ದ ಕೀರ್ತಿ ಹೆಬ್ಬಾರರಿಗೆ ಮಾತ್ರ ಸಲ್ಲುತ್ತದೆ. ವರ್ಣಮಾಧ್ಯಮದಲ್ಲಿ ಬಹಳ ಪರ್ಯಾಯಗಳಿದ್ದ ಪರಿಣಾಮವಾಗಿ ಕಲಾವಿದರು ಅವುಗಳ ಆಕರ್ಷಣೆಗೆ ಒಲಿದರು; ರೇಖೆಗಳು ಕೇವಲ ಬಣ್ಣಗಳ ಬಡ ಸಂಬಂಧಿಯ ಸ್ಥಾನವನ್ನು ಪಡೆದವು. ಸಂಪೂರ್ಣವಾದ ಅಭಿವ್ಯಕ್ತಿಯು ರೇಖೆಗಳಿಗೆ ನಿಲುಕುವುದಿಲ್ಲ ಎಂದು ತಿಳಿದದ್ದೇ ಈ ಪ್ರಮಾದಕ್ಕೆ ಕಾರಣವಾಯಿತು. ಸುದೈವದಿಂದ ಡಾ. ಹೆಬ್ಬಾರರ ನೇತೃತ್ವದಲ್ಲಿ ಭಾರತೀಯ ಕಲಾವಿದರಲ್ಲಿ ಕೆಲವರಾದ ಕೆ. ಎಸ್. ಕುಲಕರ್ಣಿ, ಡಿ. ಜಿ. ಕುಲಕರ್ಣಿ, ನ್ಯೂಟನ್ ಸೌಜ ಹಾಗೂ ಗೆಟೊಂಡೆಯವರು ರೇಖಾಚಿತ್ರ ಕಲೆಗೆ ಹೊಸ ಜೀವ ಹಾಗೂ ಘನತೆಯನ್ನು ತಂದು ಕೊಟ್ಟರು. ಇದರಿಂದ ರೇಖಾಚಿತ್ರ ಕಲೆ

ಸಮಕಾಲೀನ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವಾಗಿ ಸ್ವೀಕೃತವಾಯಿತು.

ರಾಷ್ಟ್ರವ್ಯಾಪಿಯಾದ ಹೆಬ್ಬಾರರ ಕಲೆಯ ಜನಪ್ರಿಯತೆಯಿಂದ ನನ್ನ ತಲೆಮಾರಿನವರು ಅವರ ಬಗ್ಗೆ ಹಾಗೂ ಅವರು ಸಮುದಾಯದಲ್ಲಿ ಬೆರೆಯುವ ರೀತಿಯನ್ನು ತಿಳಿಯಲು ಹೆಚ್ಚು ಹೆಚ್ಚು ಕುತೂಹಲಿಗಳಾಗಿದ್ದೆವು. ಆ ವೇಳೆಗೆ ನಾನು ಡಾ. ಹೆಬ್ಬಾರರನ್ನು ತುಂಬಾ ನಿಕಟವಾಗಿ ಕಾಣುವ ಸದಾವಕಾಶವನ್ನು ಹೊಂದಿದ್ದೆ. ಮುಂಬೈನ ಕಲಾನಗರದ ಅವರ ವಸತಿ ಸ್ಟುಡಿಯೋಗೆ ನಾನು ಆಗಾಗ ಭೇಟಿ ಕೊಡುತ್ತಿದ್ದೆ. ಅವರೊಡನೆ ನಡೆಸಿದ ಮಾತುಕತೆಯಿಂದ ಕಲಾವಿಮರ್ಶಕನಾಗಿ ಬರೆಯಲು ನನಗೆ ಅನುಕೂಲವಾಯಿತು. ೧೯೮೦ ರಲ್ಲಿ ಒದಗಿ ಬಂದ ಒಂದು ಒಳ್ಳೆಯ ಅವಕಾಶದಿಂದಾಗಿ ಡಾ. ಹೆಬ್ಬಾರರ ಜೊತೆ ಒಂದು ತಿಂಗಳಿಗೂ ಹೆಚ್ಚು ಕಾಲ ಒಟ್ಟಿಗೇ ಇರುವಂತಾಯಿತು. ಮಧ್ಯಪ್ರದೇಶದ ಖೈರಾಘರ್‌ನ ಇಂದಿರಾ ಸಂಗೀತ ಕಲಾ ವಿಶ್ವವಿದ್ಯಾನಿಲಯದಲ್ಲಿ ಅವರೊಡನೆ ಸಹ-ಪ್ರಾಧ್ಯಾಪಕನಾಗುವ ಅವಕಾಶವದು. ಹೆಬ್ಬಾರರನ್ನು ಹತ್ತಿರದಿಂದ ಕಾಣುವ ಸುಯೋಗ ಮತ್ತೊಮ್ಮೆ ಲಭ್ಯವಾಗಿತ್ತು.

ಆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರೊಡಗೂಡಿ ಡಿಸೆಂಬರ್ ಚಳಿಯ ಮುಂಜಾನೆ ಡಾ. ಹೆಬ್ಬಾರರನ್ನು ಬರಮಾಡಿಕೊಳ್ಳಲು ಡೋಂಗಾರ್‌ಘರ್‌ನ ರೈಲ್ವೆ ನಿಲ್ದಾಣಕ್ಕೆ ಹೋದ ನೆನಪು ಇನ್ನೂ ಹಸಿರಾಗಿದೆ. ನಾವು ಖೈರಾಘರ್ ತಲುಪಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಲಲಿತ ಕಲಾ ವಿಭಾಗದ ತಬಲಾ ಪ್ರವೀಣ ಶ್ರೀ ತಡೇಜಿಯವರು ಹಠಾತ್ತಾಗಿ ನಿಧನ ಹೊಂದಿದ್ದರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ. ಎಂ. ಆರ್. ಗೌತಮ್‌ರಿಗೆ ನಾನು ಡಾ. ಹೆಬ್ಬಾರರನ್ನು ಪರಿಚಯಿಸಿದುದು ಅವರೆಲ್ಲ ತಡೇಜಿಯವರ ಶವ ಸಂಸ್ಕಾರಕ್ಕೆ ಸರಂಜಾಮು ಮಾಡಿಕೊಳ್ಳುತ್ತಿದ್ದ ಸಮಯದಲ್ಲಿ.

ಆ ರಾತ್ರಿ ಕಳೆಯಿತು. ಮಾರನೆಯ ದಿನ ನಾವು ಕಛೇರಿಗೆ ಹೋದಾಗ ಮಂದಿ ತಮ್ಮ ಎಂದಿನ ಸಮಾಧಾನವನ್ನು ಮರಳಿ ಪಡೆದು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದರು. ಸಾವಿನ ದುಃಖಕ್ಕೆ ನಾವು ಸಂಪೂರ್ಣವಾಗಿ ಶರಣಾದರೆ ದಿನದ ಕೆಲಸ ನಡೆಯುವುದಾದರೂ ಹೇಗೆ? ಡಾ. ಎಂ. ಆರ್. ಗೌತಮ್ ಘನಪಂಡಿತರೂ, ಗಾನಕಲೆಯಲ್ಲಿ ಅದ್ವಿತೀಯರೂ ಆಗಿದ್ದವರು. ಅವರು ಮೂಲತಃ ಮೈಸೂರಿನವರು ಎಂದು ತಿಳಿದಾಗ ಡಾ. ಹೆಬ್ಬಾರರಿಗೆ ಸುಖಾಶ್ಚರ್ಯವಾಗಿತ್ತು, ಪ್ರಮುಖ ಅತಿಥಿಗಳ ಸಮ್ಮುಖದಲ್ಲಿ ಡಾ. ಗೌತಮರು ತಮ್ಮ ಭವ್ಯ ಭವನದಲ್ಲಿ ಸಂಜೆ ಹಾಗೂ ಮುಂಜಾನೆ ಅನೇಕ ಬಾರಿ ಸಂಗೀತದ ರಸದೌತಣ ನೀಡಿದರು. ಖೈರಾಘರ್ ವಿಶ್ವವಿದ್ಯಾನಿಲಯವು ಛತ್ತಿಸ್‌ಘರ್ ಆದಿವಾಸೀ ವಲಯದ ಮಧ್ಯಭಾಗದಲ್ಲಿ ಇರುವುದರಿಂದ ಜಾನಪದ ಹಾಗೂ ಬುಡಕಟ್ಟು ಸಂಸ್ಕೃತಿಗಳ ಸಂಗಮವಾಗಿರುವುದೇ ಅಲ್ಲದೆ ನಮ್ಮ ಸಂಗೀತ ಶಿಕ್ಷಣ ಪರಂಪರೆಯಲ್ಲಿ ತುಂಬಾ ಮಹತ್ವದ ಸ್ಥಾನ ಪಡೆದಿದೆ. ಖೈರಾಘರ್‌ನಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ತಂಗಲು ಡಾ. ಹೆಬ್ಬಾರರು ಮನಸ್ಸು

ಮಾಡಿದ್ದ ಕಾರಣ ಆದಿವಾಸಿಗಳೂ ಹಾಗೂ ಅವರ ಕಲಾರೂಪಗಳ ಅಧ್ಯಯನಕ್ಕೆ ಆ ತಾಣದಲ್ಲಿ ಒಂದು ಅಪರೂಪದ ಅವಕಾಶ ಲಭಿಸಿತ್ತು. ಹೆಬ್ಬಾರರ ಪ್ರಜ್ಞಾಪೂರ್ವಕವಾಗಿಯೇ ಈ ರೀತಿ ಆಯ್ಕೆ ಮಾಡಿಕೊಂಡಿದ್ದರು.

ಬಹಳ ಮಹತ್ವದ ಆ ನಾಲ್ಕು ವಾರಗಳ ಕಾಲ ಡಾ. ಹೆಬ್ಬಾರರು ನೇತೃತ್ವದಲ್ಲಿ ವಿದ್ಯಾರ್ಥಿಗಳು ಅನೇಕ ವಿಷಯಗಳನ್ನು ಕಲಿತರು. ಸುಮ್ಮನೆ ಒಂದು ಕಡೆ ನಿಲ್ಲಲು ಬಿಡದೆ ಪ್ರತಿಯೊಂದು ಬುಡಕಟ್ಟು ಚಟುವಟಿಕೆಯನ್ನು ನಾವೆಲ್ಲ ಗಮನಿಸಬೇಕೆಂಬ ಇಚ್ಛೆಯಿಂದ ಹೆಬ್ಬಾರರು ವಾರದ ಸಂತೆಗಳಿಗೆ, ಹಬ್ಬಗಳನ್ನು ಆಚರಿಸುವ ಕಡೆ ಹಾಗೂ ಇತರೆ ಸಾರ್ವಜನಿಕ ಸಾಂಸ್ಕೃತಿಕ ಸಭೆಗಳಿಗೆ ಕರೆದೊಯ್ದರು. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಈ ಎಲ್ಲದರ ಪರಿಚಯ ಅಗತ್ಯವಾಗಿ ಆಗಬೇಕೆಂಬುದು ಅವರ ಅಭಿಮತವಾಗಿತ್ತು. ಬಹುತೇಕ ವಿದ್ಯಾರ್ಥಿಗಳು ಆ ನಾಡಿನವರಾಗಿದ್ದುದರಿಂದಲೋ ಏನೋ ಅವರಿಗೆ ತೋರಿಸಿದ ಪ್ರಸಂಗಗಳಲ್ಲಿ ಅವರಿಗೆ ಅಷ್ಟಾಗಿ ಆಸಕ್ತಿ ಇದ್ದಂತಿರಲಿಲ್ಲ. ಡಾ. ಹೆಬ್ಬಾರರುಮಾತ್ರ ಒಂದೊಂದು ದೃಶ್ಯವನ್ನೂ ತದೇಕ ಚಿತ್ತದಲ್ಲಿ ಗಮನಿಸಿ ಮನಸ್ಸಿನಲ್ಲಿ ಎಲ್ಲವನ್ನೂ ದಾಖಲು ಮಾಡಿಕೊಳ್ಳುತ್ತಿದ್ದರು. ಬುಡಕಟ್ಟು ಜನರ ಬಣ್ಣಬಣ್ಣದ ವಸ್ತ್ರ-ಉಡುಗೆಗಳು ಅವರಿಗೆ ಬಹುವಾಗಿ ಹಿಡಿಸಿದ್ದವು. ಮುಗ್ಧರಾದ ಆ ಗ್ರಾಮಾಂತರ ಜನರ ಹಾವಭಾವಗಳನ್ನು ರೇಖೆಗಳಲ್ಲಿ ಪಡಿಮೂಡಿಸುತ್ತಾ ಎಲ್ಲವನ್ನೂ ಮರೆತ ಹೆಬ್ಬಾರರನ್ನು ಅಲ್ಲಿಂದೆಬ್ಬಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಕರೆತರುವ ಹೊತ್ತಿಗೆ ನಮಗೆ ಸಾಕು ಬೇಕಾಯಿತು.

ಡಾ. ಹೆಬ್ಬಾರರಿಗೆ ಮುಂಜಾನೆ ಹವಾಸೇವನೆಗೆ ಹೊರಡುವ ಅಭ್ಯಾಸ. ಖೈರಾಘರ್ ಕಾಡಿನ ಮಧ್ಯೆ ನಡೆದು ಹೋಗುವಾಗಲೆಲ್ಲಾ ಹಣ್ಣುಗಳನ್ನು ಹೊರಲಾರದೆ ಹೊತ್ತು ನಿಂತ ಸೀಬೆ ಮರಗಳ ಸಾಲುಸಾಲೆ ನಮಗೆ ಗೋಚರಿಸುತ್ತಿತ್ತು. ಆ ವಯಸ್ಸಿನಲ್ಲೂ ಹೆಬ್ಬಾರರು ಬೇಲಿ ಹಾರಿ ಪಕ್ಕಾಗಿ ಮಾಗಿದ ಸೀಬೆ ಹಣ್ಣುಗಳನ್ನು ತೆಕ್ಕೆ ತುಂಬಾ ತುಂಬಿ ತರುತ್ತಿದ್ದರು. 'ಹೀಗೇಕೆ ಸರ್'? ಎಂದು ನಾವು ಕೇಳುವಾಗ ಅವರು ಬಹಳ ಸ್ವಾರಸ್ಯಕರವಾದ ಉತ್ತರ ಕೊಡುತ್ತಿದ್ದರು: "ನಮ್ಮ ಮನೆಯಲ್ಲಿ ನನ್ನ ಆರೋಗ್ಯದ ಬಗ್ಗೆ ಎಲ್ಲರಿಗೂ ಎಚ್ಚರಿಕೆ. ಹಾಗಾಗಿ ಒಂದು ತಿಂದರೆ ಒಂದು ತಿನ್ನುವ ಹಾಗಿಲ್ಲ. ಅವರಿಂದ ಹೇಗೂ ದೂರವಾಗಿದ್ದೇನೆ; ಇಲ್ಲಿ ನನಗೆ ಇಷ್ಟವಾದದ್ದು ಬೇಕಾದಷ್ಟು ತಿನ್ನಬೇಕೆನ್ನಿಸಿದೆ" ಡಾ. ಹೆಬ್ಬಾರರು ಎಷ್ಟೇ ಖ್ಯಾತಿವಂತರಾಗಿದ್ದರೂ ಅವರ ಹೃದಯ ಮಾತ್ರ ಹಸುಗೂಸಿನಂಥ ಮುಗ್ಧ ಹೃದಯ; ಆದಿವಾಸಿಯ ಮನಸ್ಸು ಎಂದರೂ ನಡೆದೀತು. ತಮ್ಮ ಬದುಕನ್ನು ಮತ್ತೆ ಮೊದಲಿನಿಂದ ಪ್ರಾರಂಭಿಸಲು ಅವಕಾಶ ಸಿಗುವುದಾದರೆ ಪ್ರಾಯಶಃ ಸಂಕೀರ್ಣವಲ್ಲದ ಆದಿವಾಸಿಗಳ ಸರಳವಾದ ಬದುಕನ್ನೇ ಅವರು ಆರಿಸಿಕೊಳ್ಳುತ್ತಿದ್ದರು ಎಂಬುದರಲ್ಲಿ ಅನುಮಾನವಿಲ್ಲ. ವಿಷಾದದ ಸಂಗತಿಯೆಂದರೆ ಹೆಬ್ಬಾರರ ಜ್ಞಾನಸಂಪತ್ತಿನಿಂದ ಅರಳಬೇಕಾಗಿದ್ದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ಆರಾಧ್ಯ ದೈವಗಳನ್ನು ಹೊಂದಿ

ದ್ದುದು ಚಲನಚಿತ್ರ ಮಂದಿರಗಳೊಳಗೆ. ಸಿನೆಮಾ ಹೀರೋಗಳ ಭರಾಟೆಯಲ್ಲಿ ಹೆಬ್ಬಾರರಂಥವರ ಪ್ರಭಾವವೂ ಕೊಂಚ ತಗ್ಗಿದುದು ವಿಚಿತ್ರವೆನಿಸಿತ್ತು.

ಬುಡಕಟ್ಟಿನವರ ಬದುಕು ಹಾಗೂ ರೀತಿ ರಿವಾಜುಗಳಿಗೆ ಮಾರು ಹೋಗಿ ತುಂಬಾ ತೀಕ್ಷ್ಣವಾಗಿ ಅವರ ಜೀವನ ವಿಧಾನವನ್ನು ಗಮನಿಸುತ್ತಿದ್ದ ಈ ಇಬ್ಬರು ಪ್ರಾಧ್ಯಾಪಕರಿಂದ ಏನು ತಾನೆ ಕಲಿಯುವುದು ಎಂದು ವಿದ್ಯಾರ್ಥಿಗಳಿಗೆ ಆಶ್ಚರ್ಯವೆನಿಸಿರಬೇಕು. ಇಷ್ಟಕ್ಕೂ ಮೊದಲು ಅವರ ಹೀರೋಗಳು ಹೊರಗೆಲ್ಲೋ ಇದ್ದರು ಎಂಬುದನ್ನು ಈಗ ತಾನೆ ತಿಳಿಸಿದೆನಷ್ಟೆ. ಈ ಎಲ್ಲದರ ಮಧ್ಯೆ ಡಾ. ಹೆಬ್ಬಾರರು ವ್ಯಕ್ತಿ ಚಿತ್ರ ತೆಗೆಯುವ ಒಂದು ಪ್ರಾತ್ಯಕ್ಷಿಕೆಯನ್ನು ತೋರಿಸಿದರು. ತುಂಬಾ ವರ್ಣರಂಜಿತ ವ್ಯಕ್ತಿಯೂ, ವಿಶ್ವವಿದ್ಯಾನಿಲಯದ ಆವರಣದಲ್ಲಿ ಎಲ್ಲರ ಕಣ್ಮನ ಸೆಳೆಯುವವರೂ ಆಗಿದ್ದ ಕುಲಪತಿ ಡಾ. ಎಂ. ಆರ್. ಗೌತಮ್‌ರ ಚಿತ್ರವನ್ನು ಹೆಬ್ಬಾರರು ಒಂದೆರಡು ದಿನಗಳಲ್ಲಿ ಮುಗಿಸಿದರು. ಪ್ರಕಾಂಡ ಸಂಗೀತ ವಿದ್ವಾಂಸರೂ, ಗಾಯಕರೂ ಆಗಿದ್ದ ಗೌತಮ್‌ರಿಗೆ ಡಾ. ಹೆಬ್ಬಾರರು ಈ ರೀತಿಯಾಗಿ ಅಭಿನಂದನೆ ಸಲ್ಲಿಸಿದರು, ವಿದ್ಯಾರ್ಥಿಗಳಿಗೂ ಪರೋಕ್ಷವಾಗಿ ಪಾಠ ಕಲಿಸಿದ್ದರು.

ಖೈರಾಘರ್‌ನ ನಮ್ಮ ವಾಸ್ತವ್ಯ ಅಖೈರಾಗುವ ಮೊದಲು ಕಡೆಯ ವಾರವನ್ನು ಇಡಿಯಾಗಿ ಆ ಪ್ರಾಂತ್ಯದ ಬುಡಕಟ್ಟು ಜನರ ವಿನ್ಯಾಸಗಳೂ ಹಾಗೂ ಪ್ರದರ್ಶನಗಳನ್ನು ನೋಡಲು ಮುಡಿಪಾಗಿಟ್ಟೆವು. ಈ ಸಂದರ್ಭದಲ್ಲಿ ನನ್ನ ಕುಟುಂಬದವರೆಲ್ಲಾ ಬಂದಿದ್ದರು. ಡಾ. ಹೆಬ್ಬಾರರನ್ನು ಹತ್ತಿರದಿಂದ ಕಾಣುವ ಸುಯೋಗ ಅವರಿಗೂ ಲಭ್ಯವಾಯಿತು. ಒಮ್ಮೊಮ್ಮೆ ಆದಿವಾಸಿಗಳ ಮನೆಯ ಅಟ್ಟಗಳನ್ನೇರಿ ಹೆಬ್ಬಾರರು ಮಣ್ಣು, ಮರ ಹಾಗೂ ಲೋಹದಿಂದ ತಯಾರಿಸಿದ ಆದಿವಾಸಿ ಕುಶಲ ವಸ್ತುಗಳಿಗಾಗಿ ಶೋಧನೆ ನಡೆಸುತ್ತಿದ್ದರು. ನಮ್ಮ ಕುಟುಂಬದವರು ಬಂದ ನಂತರ ವಿಶ್ವವಿದ್ಯಾನಿಲಯದ ಆವರಣದಿಂದ ಶ್ರೀ ಎಸ್. ಕೆ. ಶ್ರೀವಾಸ್ತವ ಅವರ ಮನೆಗೆ ನಾವು ಸ್ಥಳ ಬದಲಾಯಿಸಿದೆವು. ಶ್ರೀವಾಸ್ತವರವರು ಜೆ. ಜೆ. ಕಲಾ ಶಾಲೆಯಲ್ಲಿ ಒಂದು ಕಾಲದಲ್ಲಿ ನನ್ನ ವಿದ್ಯಾರ್ಥಿಯಾಗಿದ್ದವರು ಆಗ ಚಿತ್ರಕಲಾ ವಿಭಾಗದ ಮುಖ್ಯಸ್ಥರಾಗಿದ್ದರು; ಜೊತೆಗೆ ಬಹಳ ಒಳ್ಳೆಯ ಜನಪದ ಗಾಯಕರೆಂದು ಪ್ರಖ್ಯಾತರಾಗಿದ್ದರು. ಅವರ ವಿಶಿಷ್ಟವಾದ ಗಾಯನದಿಂದ ನಮ್ಮ ವಾಸ್ತವ್ಯ ಹೂವಿನಷ್ಟು ಹಗುರವಾಯಿತು; ಶ್ರೀವಾಸ್ತವರ ಅತಿಥಿ ಸತ್ಕಾರದ ದರ್ಶನವಾಯಿತು. ಖೈರಾಘರ್‌ನಲ್ಲಿ ಇರುವ ಕಾಲಕ್ಕೇ ಹೆಬ್ಬಾರರು ವಿದ್ಯಾರ್ಥಿಗಳಿಗೆ ಅಡುಗೆ ಮಾಡುವುದು ಹೇಗೆ ಎಂದು ತೋರಿಸಿಕೊಟ್ಟರು. ಪಾಕ ಪ್ರವೀಣರಾಗಿದ್ದ ಅವರ ಉಪದೇಶವೇನೆಂದರೆ, ಸೃಜನಾತ್ಮಕತೆ ಎನ್ನುವುದು ಕೇವಲ ಒಬ್ಬ ಚಿತ್ರಕಲಾವಿದನಿಗೆ ಅಥವಾ ಒಬ್ಬ ಹಾಡುಗಾರನಿಗೆ ಸೀಮಿತವಾದುದಲ್ಲ; ಅಡುಗೆ ಮಾಡುವುದರಲ್ಲಿ ನೈಪುಣ್ಯ ಸಾಧಿಸಿದರೆ ಅದೂ ಕೂಡ ಸೃಜನಾತ್ಮಕತೆಯೇ. ಒಂದರ್ಥದಲ್ಲಿ ಇದು ಹೆಬ್ಬಾರರ ದರ್ಶನ ವಿಶೇಷ ಎನ್ನಬಹುದು.

ಮುಂಬೈನಿಂದ ಬರುವಾಗ ನನಗೋಸ್ಕರ ಡಾ. ಹೆಬ್ಬಾರರು ಶಿವರಾಮು

ಕಾರಂತರ "ಮೂಕಜ್ಜಿಯ ಕನಸುಗಳು" ಪುಸ್ತಕವನ್ನು ತಂದಿದ್ದರು. ಈ ಪುಸ್ತಕವನ್ನು ನಾನು ಓದಬೇಕೆಂಬುದು ಹೆಬ್ಬಾರರ ಆಸೆ. ಆ ವೇಳೆಗಾಗಲೇ ನಾವು ಆದಿವಾಸಿಗಳು ತಯಾರಿಸಿದ ಮಣ್ಣಿನ ಕಲಾಕೃತಿಗಳ ವಿವಿಧ ಮಾದರಿಗಳನ್ನು ಸಾಕಷ್ಟು ಶೇಖರಿಸಿದ್ದೆವು. ನಮ್ಮ ಕೊಠಡಿಯ ತುಂಬೆಲ್ಲಾ ಅವೇ ಅವು. ಸಮರಾತ್ರಿ ಮೀರಿ ಬಹಳ ಹೊತ್ತಿನತನಕ ನಾನು ಕಾರಂತರ ಕಾದಂಬರಿಯನ್ನು ಓದುತ್ತ ಕೂರುತ್ತಿದ್ದೆ. ಆವಾಗ ನನ್ನ ಸುತ್ತ ಒಪ್ಪವಾಗಿಟ್ಟ ಆ ಕಲಾಕೃತಿಗಳಿಗೆ ಜೀವ ಬಂದು ನನ್ನೊಡನೆ ಅವು ನಾಮುಂದು ತಾಮುಂದು ಎಂದು ಮಾತನಾಡಲು ಉತ್ಸುಕವಾಗಿರುವುವೋ ಎನ್ನುವ ಭಾವನೆ ಮೂಡುತ್ತಿತ್ತು. ತಮ್ಮ ಕಾಲದ ವೃತ್ತಾಂತವನ್ನೂ, ಸಕಲ ಸನ್ನಿವೇಶವನ್ನೂ ಹಂಚಿಕೊಳ್ಳಲು ಅವು ತುಡಿಯುತ್ತಿರುವಂತೆ ಗೋಚರವಾಗುತ್ತಿತ್ತು. ಈ ಬಗೆಯ ಭ್ರಾಮಕ ಅನುಭವವನ್ನು ಕುರಿತು ಹೆಬ್ಬಾರರು ಪದಗಳಿಗೆ, ಗೆರೆಗಳಿಗೆ, ರೂಪ ಹಾಗೂ ಬಣ್ಣಗಳಿಗೆ ಇದೇ ಬಗೆಯಾದ ಶಕ್ತಿ ಇರುವುದಾಗಿ ತಿಳಿಸಿದರು. ಕಾಲ ದೇಶಗಳ ಪರಿಮಿತಿಯನ್ನು ದಾಟಿಸಿ ಮನಸ್ಸನ್ನು ಬೇರೊಂದು ಮಜಲಿಗೆ ಕೊಂಡೊಯ್ಯುವ ಶಕ್ತಿ ಅದು.

ತಾವು ಒಬ್ಬರೇ ಇದ್ದಾಗ ತಮ್ಮ ಬಾಲ್ಯಕಾಲದ ನೆನಪುಗಳನ್ನು, ಅನೇಕ ಘಟನೆಗಳನ್ನು ಒಂದಿನಿತೂ ಮರೆಯದ ರೀತಿ ಒಂದೊಂದಾಗಿ ಬಿಡಿಸಿ ಹೇಳುತ್ತಿದ್ದರು. ಶ್ರೀಮಂತರೊಬ್ಬರ ಮನೆಯ ಗೋಡೆಯ ಮೇಲೆ ಅವರು ಬರೆದ ಗಿಳಿ ಚಿತ್ರಕ್ಕಾಗಿ ಅವರಿಗೆ ನಾಲ್ಕಾಣೆ ದೊರಕಿತ್ತು. ಅಲ್ಲಿಂದ ಮುಂದೆ ಅವರು ಮುಂಬೈ (ಬಾಂಬಾಯಿ)ಗೆ ಪ್ರಯಾಣಿಸಿದ್ದರು. ಸರ್.ಜೆ.ಜೆ. ಕಲಾಶಾಲೆಯಲ್ಲಿ ಅವರು ಒಂದು ನೆಲೆ ಕಂಡುಕೊಳ್ಳಲು ಮಾಡಿದ ಹೋರಾಟದ ವೃತ್ತಾಂತ ಇನ್ನೊಂದು ರೀತಿಯದು. ಚಿಕ್ಕವರಾಗಿದ್ದಾಗ ಹೆಬ್ಬಾರರು ಕಥಕ್ ನೃತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು; ಹಾಗಾಗಿ, ಅಂಗಾಂಗದಲ್ಲಿ ಬೆರೆತುಹೋದ ಲಯ ಅವರು ಮೂಡಿಸಿದ ಚಿತ್ರಗಳಲ್ಲಿ, ಗೆರೆಗಳಲ್ಲಿ ಮರು ಹುಟ್ಟು ಪಡೆದದ್ದು ಸಹಜವೇ ಆಗಿದೆ.

ಮುಂಬೈಗೆ ಅವರು ಹೊರಟ ದಿನ ವಿದ್ಯಾರ್ಥಿಗಳೊಡನೆ ರಾಯ್‌ಪುರ್ ರೈಲ್ವೆ ನಿಲ್ದಾಣಕ್ಕೆ ಅವರನ್ನು ಬೀಳ್ಕೊಡಲು ಹೋದೆವು. ರೈಲು ಹೊರಡುವುದಕ್ಕೆ ಕೊಂಚ ಮುಂಚೆ ಅವರಿಗೆ ಬಲು ಇಷ್ಟವಾಗಿದ್ದ ಸೀಬೆಹಣ್ಣಿನ ನೆನಪಾಯಿತು. ಸುದೈವದಿಂದ ಹಣ್ಣಿನಂಗಡಿಯಲ್ಲಿ ಸೀಬೆ ಹಣ್ಣಿನ ರಾಶಿ ಕಣ್ಣು ಕುಕ್ಕುತ್ತಿತ್ತು. 'ಮತ್ತೆ ಮನೆಗೆ ಮರಳುವ ಮೊದಲು ನಿಮಗೆ ಇಷ್ಟವಾದ ಈ ಹಣ್ಣನ್ನು ಮನಸ್ಸು ಪೂರ್ತಿ ಮೆಲ್ಲಿ' ಎಂದು ಕಿಟಕಿಯ ಮೂಲಕ ಒಂದಷ್ಟು ಸೀಬೆ ಹಣ್ಣು ತೂರಿಸಿದೆ. ಆಗ ಹೆಬ್ಬಾರರು ಸೂಸಿದ ನಗೆ ಎಂದೂ ಮಾಸುವುದಿಲ್ಲ.

ಹಿಂದಿರುಗಿ ನೋಡಿದರೆ ಡಾ|| ಹೆಬ್ಬಾರರೊಡನೆ ನಾನು ಕಳೆದ ಕೆಲವು ವಾರಗಳು ತಮ್ಮದೇ ಆದ ಕಾಂತಿ ಹಾಗೂ ಸ್ಮೃತಿ ಸಮೃದ್ಧಿಯಿಂದ ಮಿನುಗುತ್ತವೆ. ನಮ್ಮ ಕಾಲದ ಒಬ್ಬ ಮಹಾನ್ ಕಲಾವಿದನೊಡನೆ ಕಳೆದ ಒಂದೊಂದು ನಿಮಿಷವೂ ಅಮೂಲ್ಯವೆನ್ನುವುದು ಉತ್ಪ್ರೇಕ್ಷೆಯ ನುಡಿಯಲ್ಲ. ಅಲ್ಲಿನ ವಿದ್ಯಾರ್ಥಿಗಳು ಒಂದು ಕಡೆ ಮುಂಬೈ

ಸಿನೇಮಾ ಹೀರೋಗಳಿಗೆ ಮುಗಿಬಿದ್ದಿದ್ದರೂ ಅದೇ ವೇಳೆಯಲ್ಲಿ ತಮ್ಮ ಜನಪದ ಹಾಡುಗಳನ್ನು ವೈಮನಸ್ಸುಗಳಲ್ಲಿ ತುಂಬಿಕೊಂಡಿದ್ದವರು. ನಿರಂತರವಾಗಿ ಒಂದಾದ ಮೇಲೊಂದರಂತೆ ಹಾಡಿ ರಾತ್ರಿ ಹಗಲು ಮಾಡುತ್ತಿದ್ದರು; ಇರುಳು ಪಾಳಿಯ ಕಾವಲುಗಾರ ಕೂಡ ಪರಿಣತ ಬಾನ್ಸುರಿ ವಾದಕ (ಐದಡಿ ಉದ್ದದ ಬುಡಕಟ್ಟಿನವರ ಕೊಳಲು) ವಿಶ್ವವಿದ್ಯಾನಿಲಯದ ಗೋಪುರದಿಂದ ಸುತ್ತೆಲ್ಲ ಬಿತ್ತರವಾಗುವ ಶಾಸ್ತ್ರೀಯ ಸಂಗೀತವನ್ನು ಆಲಿಸುತ್ತಲೇ ಪುರದ ಜನತೆ ಹಾಸಿಗೆ ಬಿಟ್ಟೇಳುತ್ತದೆ.

ನಾನು ಮೈಸೂರಿಗೆ ಬಂದು "ಚಾಮರಾಜೇಂದ್ರ ದೃಶ್ಯಕಲೆಗಳ ಅಕಾಡೆಮಿ" (ಕಾವಾ-CAVA)ಯನ್ನು ಸ್ಥಾಪಿಸಲು ಪ್ರೇರಣೆ ಇತ್ತವರೂ ಸಹ ಡಾ. ಹೆಬ್ಬಾರರೆ. ನಮ್ಮ ರಾಷ್ಟ್ರದಲ್ಲಿ ಕಲೆಯ ಶಿಕ್ಷಣಕ್ಕಾಗಿ ಹೆಬ್ಬಾರರು ನೀಡಿರುವ ಕೊಡುಗೆಯನ್ನು ಹಾಗೂ ಪ್ರಮುಖವಾದ ಕಲಾಶಾಲೆಗಳೊಡನೆ ಅವರು ಹೊಂದಿರುವ ಸಂಬಂಧದ ಮಹತ್ವವನ್ನು ಇನ್ನೂ ಸರಿಯಾಗಿ ಅಧ್ಯಯನ ಮಾಡಿಲ್ಲವೆಂದೇ ನನ್ನ ತಿಳಿವಳಿಕೆ. ತಮ್ಮ ವೃತ್ತಿಪರವಾದ ಕಾಯಕವನ್ನು ತ್ಯಾಗಮಾಡಿ ಕಲಾ ವಿದ್ಯಾರ್ಥಿಗಳ ಅವಶ್ಯಕತೆಯನ್ನು ಅರಿತು ಅವರೊಡನೆ ವಿಚಾರ ವಿನಿಮಯಮಾಡಿಕೊಳ್ಳಲು ಹೆಬ್ಬಾರರು ಸದಾ ಸಿದ್ಧರಾಗಿದ್ದಾರೆ. ಈ ಸಂದರ್ಭದಲ್ಲಿ ಅಮೆರಿಕದ ಪ್ರಖ್ಯಾತ ಭಾಷಾಶಾಸ್ತ್ರಜ್ಞ ಮತ್ತು ಚಿಂತಕ ನೋಮ್ ಚೋಮ್‌ಸ್ಕಿಯ ನೆನಪಾಗುತ್ತದೆ. ತನ್ನ ಸಂಶೋಧನಾ ವಿದ್ಯಾರ್ಥಿಗಳು ಚಿಂತಿಸುತ್ತಿರುವ ಪ್ರಮೇಯದ ಬಗ್ಗೆ ಏನಾದರೂ ಹೊಳೆದರೆ ಮುಸ್ಸಂಜೆಯಾಗಿರಲಿ, ಮಧ್ಯರಾತ್ರಿಯಾಗಿರಲಿ ಚೋಮ್‌ಸ್ಕಿ ಬಾಗಿಲು ತಟ್ಟಿ ಅವರನ್ನೆಬ್ಬಿಸಿ, 'ನಿಮ್ಮ ಸಮಸ್ಯೆಗೆ ಒಂದು ಉತ್ತರ ಹೊಳೆದಿದೆ—ಹೀಗೆ ಅದನ್ನು ಸಮೀಪಿಸಿದರೆ ಹೇಗೆ?' ಎಂದು ವಿವರಿಸಿ ಹೇಳುತ್ತಾರೆ. ವಿದ್ಯಾರ್ಥಿಗಳನ್ನು ಜ್ಞಾನ ಮಾರ್ಗದಲ್ಲಿ ನಡೆಸುವಾಗ ಹೆಬ್ಬಾರರು ಇದೇ ಮಾದರಿಯನ್ನು ಅನುಸರಿಸಿದವರು. ಅವರ ಶಿಷ್ಯ ವಾತ್ಸಲ್ಯ ಅನುಪಮವಾದುದು.

೧೯೮೫ರಲ್ಲಿ ಆಲೋಕಾ ಆವರಣದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುತ್ತಾ ಡಾ|| ಹೆಬ್ಬಾರ್ ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. ಶಾಂತಿನಿಕೇತನದ ಮಾದರಿಯಲ್ಲಿ ಸರ್.ಜೆ.ಜೆ. ಕಲಾಶಾಲೆಯ ರೀತಿ ಮೈಸೂರಿನ ಈ ಕಲಾ ಅಕಾಡೆಮಿ ಒಂದು ವಿಶ್ವವಿದ್ಯಾನಿಲಯವಾಗಿ ಅರಳಬೇಕೆಂದು ಆಶಿಸಿದರು. ಆ ಕನಸನ್ನು ನನಸು ಮಾಡುವ ಕರ್ತವ್ಯ ಆ ಅಕಾಡೆಮಿಯ ಸೂತ್ರ ಹಿಡಿದವರು ವಿದ್ಯಾರ್ಥಿಗಳ ಹಾಗೂ ಬೋಧಕರ ಮೇಲೆ ಇದೆ. ಅಕಾಡೆಮಿ ಅರಳುವ ಹಾದಿಯಲ್ಲಿ ಇರಬಹುದಾದ ಕಲ್ಲು ಮುಳ್ಳುಗಳು ದೂರವಾಗಲಿ; ಕಲಾ ಶಿಕ್ಷಣ ವ್ಯಾಪಕವಾಗಿ ಹಬ್ಬಿ ಸಮಾಜವನ್ನು ತಬ್ಬಿರುವ ತಮಸ್ಸು ತಗ್ಗಲಿ. ಇದರಿಂದ ಎಂಭತ್ತೈದರ ಇಳಿವಯಸ್ಸಿನಲ್ಲಿರುವ ಹೆಬ್ಬಾರರ ಮನಸ್ಸಿಗೆ ಸಂತೋಷವಾಗುತ್ತದೆ.

ಡಾ|| ಕೆ. ಕೆ. ಹೆಬ್ಬಾರರು ಸೃಜನಾತ್ಮಕ ಬದುಕು ಬಹಳ ವೈವಿಧ್ಯಮಯವಾದದ್ದು. ಅವರ ಜೀವನಾದರ್ಶ ಹಾಗೂ ಕೃತಿಗಳು ಎಂದೆಂದಿಗೂ ರಾಷ್ಟ್ರೀಯ ಸಂಪತ್ತಾಗಿವೆ ಎಂದು ಧೈರ್ಯವಾಗಿ ಹೇಳಬಹುದು.

ಈ ಲೇಖನ ಅಚ್ಚಾಗುತ್ತಿರುವ ಕಾಲಕ್ಕೆ ಹೆಬ್ಬಾರರು ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಪ್ರಥಮ "ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ"ಯನ್ನು ಸ್ವೀಕರಿಸಿದುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಶ್ರೀ ವೆಂಕಟಪ್ಪ ಕಲಾ ಪ್ರದರ್ಶನಾಲಯದಲ್ಲಿ ಡಾ. ಹೆಬ್ಬಾರರ ಚಿತ್ರಗಳ ಶಾಶ್ವತ ಪ್ರದರ್ಶನಕ್ಕೆ ಇದೇ ಸಂದರ್ಭದಲ್ಲಿ ವ್ಯವಸ್ಥೆಯಾದುದೂ ಕೂಡ ಅರ್ಥಪೂರ್ಣವಾಗಿದೆ. ಕರ್ನಾಟಕದ ಕಲಾ ಸಾಮ್ರಾಜ್ಯದಲ್ಲಿ ವೆಂಕಟಪ್ಪನವರ ಜೊತೆ ಜೊತೆಯಲ್ಲೇ ಹೆಬ್ಬಾರರು ವಿರಾಜಮಾನರಾಗಿರುತ್ತಾರೆ ಎಂದು ಮುಖ್ಯಮಂತ್ರಿಗಳು ಹೇಳಿದುದು ಕೇವಲ ಭಾವಾವೇಶದ ಹೇಳಿಕೆಯಲ್ಲವೆಂಬುದು ಸ್ಪಷ್ಟ.

ಬದುಕಿನ ಅಡ್ಡಿ ಆತಂಕಗಳನ್ನು ಎದುರಿಸಿ, ಬಡತನದ ಬೇಗೆಯನ್ನು ದಾಟಿ, ನಾಡಿನ ಸಾಂಸ್ಕೃತಿಕ ಜೀವನವನ್ನು ಸಮೃದ್ಧಗೊಳಿಸುತ್ತಿರುವ ವಿರಳರ ಪಂಕ್ತಿಗೆ ಹೆಬ್ಬಾರರು ಸೇರಿದ್ದಾರೆ. ತೆಳು ಕಾಯದ ಪಾರದರ್ಶಕ ವ್ಯಕ್ತಿತ್ವದ ಹೆಬ್ಬಾರರು ಇತ್ತೀಚಿನ ವರ್ಷಗಳಲ್ಲಿ ಅನಾರೋಗ್ಯದ ನಿಮಿತ್ತ ಕೊಂಚ ಕುಗ್ಗಿದ್ದಾರೆ. ಆದರೆ ಇವರ ಕುಂಚಕ್ಕೆ ಮಾತ್ರ ಬಿಡುವಿಲ್ಲವೆಂಬುದು ಸಮಾಧಾನದ ಸಂಗತಿ. ಇಂಥ ಕಲಾವಿದರಿರುವಲ್ಲಿ ಕ್ಷೋಭೆಯಡಗಿ ಶೋಭೆ ಹೆಚ್ಚುವುದೆಂದು ನಿಸ್ಸಂದೇಹವಾಗಿ ಹೇಳಬಹುದು.



ಲೋಕೋತ್ತರನಾದ ಮಹಾಪುರುಷನ ಮನಸ್ಸನ್ನು ಯಾರು ತಾನೆ ಅರಿಯಬಲ್ಲರು? ಅದು ವಜ್ರಕ್ಕಿಂತ ಕಠೋರವಾಗಿಯೂ ಹೂವಿಗಿಂತ ಕೋಮಲವಾಗಿಯೂ ಇರುತ್ತದೆ.

—ಭವಭೂತಿ

ಹಣತೆ ತನಗಾಗಿ ಉರಿಯುವುದಿಲ್ಲ. ಜಗತ್ತಿಗೆ ಬೆಳಕು ನೀಡಲು ತನ್ನನ್ನು ತಾನು ಸುಟ್ಟುಕೊಳ್ಳುವದು.

—ಪರಮಹಂಸ

ಅದೃಶ್ಯ ಲೋಕದ ಅಶರೀರ ವಾಣಿ

ಜಿ. ಟಿ. ನಾರಾಯಣರಾವ್

ಅನ್ಯಲೋಕಗಳಲ್ಲಿ ಬುದ್ಧಿವಂತ ಜೀವಿಗಳಿವೆಯೇ? ಅಥವಾ ಸಮಸ್ತ ವಿಶ್ವದಲ್ಲಿ ಮಾನವ ಏಕಮೇವಾದ್ವಿತೀಯ ಸೃಷ್ಟಿ ವೈಚಿತ್ರ್ಯವೇ? ಬುದ್ಧಿವಂತಿಕೆ ಎಂದರೇನು? ಭೂಮಿಯಿಂದ ಹೊರಗೆ, ಇನ್ನೂ ನಿಖರವಾಗಿ ಹೇಳುವುದಾದರೆ ಸೌರವ್ಯೂಹದಿಂದ ಆಚೆಗೆ, ಇರಬಹುದಾದ ಜೀವಿಗಳು, ವಿಜ್ಞಾನ ಮತ್ತು ತಂತ್ರವಿದ್ಯೆಯಲ್ಲಿ ಕನಿಷ್ಠ ಪಕ್ಷ ನಮ್ಮ ಮಟ್ಟವನ್ನಾದರೂ ಏರಿದ್ದರೆ ಅವು ಬುದ್ಧಿವಂತಿಕೆ ಗಳಿಸಿವೆ ಎನ್ನುತ್ತೇವೆ. ಅವುಗಳಿಗೆ ಭೂಮ್ಯತೀತ ಬುದ್ಧಿವಂತ ಜೀವಿಗಳು ಅಥವಾ ಸಂಕ್ಷೇಪವಾಗಿ ಭೂಮ್ಯತೀತ ಬುದ್ಧಿವಂತಿಕೆ (extra terrestrial intelligence) ಎಂದು ಹೆಸರು. ಬುದ್ಧಿವಂತಿಕೆಯ ಈ ವಿಶಿಷ್ಟ ಮಟ್ಟ ಅಥವಾ ಮಾನಕ ಏನು? ಇಂದು ನಾವು ರೇಡಿಯೊ ತರಂಗಗಳ ನೆರವಿನಿಂದ ಭೂಮಿಯ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಹೆಚ್ಚುಕಡಿಮೆ ತಾತ್ಕ್ಷಣಿಕ ಸಂಪರ್ಕ ಪಡೆಯುತ್ತೇವೆ. ವಾಯುಮಂಡಲದಲ್ಲಿ ವಿಮಾನಯಾನ ಗೈಯ್ಯುತ್ತೇವೆ. ಆಕಾಶಲಂಘನ ಮಾಡಿ ಚಂದ್ರನ ಮೇಲೆ ಇಳಿದು ಹಿಂದೆ ಬಂದಿದ್ದೇವೆ. ದೂರದ ಗುರುಗ್ರಹದ ಭೂವಿಮುಖ ಅಗೋಚರ ಭಾಗಕ್ಕೆ ದಾಳಿ ಹೊಡೆಯಲು ಮುನ್ನುಗ್ಗಿದ ಧೂಮಕೇತು ಪಥಮಧ್ಯೆ ಉರಿದು ನಾಶವಾದುದನ್ನು ನೋಡಿದ್ದೇವೆ. ವಿಶ್ವದ ವಿವಿಧ ಭಾಗಗಳಿಗೆ ರೇಡಿಯೊ ತರಂಗಗಳನ್ನು ಪ್ರಸರಿಸಿ "ನಾವಿಲ್ಲಿದ್ದೇವೆ" ಎಂದು ಅರುಹ ಬಲ್ಲವರಾಗಿದ್ದೇವೆ. ಅದೇ ವೇಳೆ ಆಕಾಶದಿಂದ ನಮ್ಮತ್ತ ಪ್ರವಹಿಸುತ್ತಿರುವ ರೇಡಿಯೊ ತರಂಗ, ಬೆಳಕು, ಎಕ್ಸ್ ಕಿರಣ ಮುಂತಾದ ವಿದ್ಯುತ್ಕಾಂತ ವಿಕಿರಣವನ್ನು ಕಲೆಹಾಕಿ ವಿಶ್ಲೇಷಿಸಿ ವಿಶ್ವದ ಬಗ್ಗೆ ಹೊಸ ಮಾಹಿತಿಗಳನ್ನು ತಿಳಿಯಬಲ್ಲವರಾಗಿದ್ದೇವೆ. ಆದ್ದರಿಂದ ಪ್ರಸಕ್ತ ಸಂದರ್ಭದಲ್ಲಿ "ಬುದ್ಧಿವಂತಿಕೆ" ಪದದ ಅರ್ಥನಿರ್ಣಯ ಇದು: ಅನ್ಯ ಲೋಕಗಳ ಜೊತೆ ಸಂಪರ್ಕ ಸಾಧಿಸಬಲ್ಲ ಪ್ರಬುದ್ಧ ತಂತ್ರವಿದ್ಯೆಯಲ್ಲಿ ಪರಿಣತಿ ಮತ್ತು ಇಂಥ ಪರಿಣತಿಗಳಿಸಿರುವ ಜೀವಿ ಸಮೂಹ. ಮಾನವ ಈ ಮಜಲು ಏರಿದ್ದು ೧೯೩೦ ರಿಂದ ಈಚೆಗೆ ಮಾತ್ರ. ಆದ್ದರಿಂದ ಬುದ್ಧಿವಂತಿಕೆಯ ಈ ನೂತನ ಮಾನಕದಲ್ಲಿ ಆತ ಇನ್ನೂ ಕಣ್ಣು ಬಿಡುತ್ತಿರುವ ಹಸುಗೂಸು.

ಭೂಮ್ಯತೀತ ಬುದ್ಧಿವಂತಿಕೆ ಇದೆ ಎಂಬುದನ್ನು ತಾತ್ತ್ವಿಕವಾಗಿ ಒಪ್ಪಿಕೊಂಡ ಬಳಿಕ ಅದಕ್ಕಾಗಿ ಶೋಧನೆ ನಡೆಸುವುದು

ಮುಂದಿನ ಮಜಲು. ಜೀವಿಯ ರೂಪ ಅಭಿವರ್ಧನೆ ಮುಂತಾದುವು ಹೇಗೆಯೇ ಇದ್ದರೂ ಅವು ನಕ್ಷತ್ರದಲ್ಲಿ ಬದುಕಿ ಉಳಿದಿರಲಾರದು ಎಂಬುದು ಸ್ವತಃಸಿದ್ಧ. ನಕ್ಷತ್ರವನ್ನು ಪರಿಭ್ರಮಿಸುತ್ತಿರುವ ಗ್ರಹದಲ್ಲಿ ಮಾತ್ರ ಇರಬಲ್ಲದು. ಹೀಗಾಗಿ ವಿಜ್ಞಾನಿಗಳ ಲಕ್ಷ್ಯ ಮೊದಲು ಗ್ರಹಯುಕ್ತ ನಕ್ಷತ್ರಗಳ ಶೋಧನೆಯತ್ತ ಹರಿಯಿತು. ನಮ್ಮ ಸೂರ್ಯ ಸದಸ್ಯ ತಾರೆಯಾಗಿರುವ ಆಕಾಶ ಗಂಗೆಯೊಂದರಲ್ಲೇ ಸುಮಾರು ನಲವತ್ತು ಸಾವಿರ ಕೋಟಿ ನಕ್ಷತ್ರಗಳಿವೆ. ಇವುಗಳ ಪೈಕಿ ಹತ್ತು ಲಕ್ಷ, ಅಂದರೆ ಶೇಕಡಾ ೦.೦೦೦೨೫, ನಕ್ಷತ್ರಗಳಿಗಾದರೂ ಗ್ರಹವಲಯಗಳಿರುವುದು ಸಂಭಾವ್ಯ. ಇನ್ನು ವಿಶ್ವದಲ್ಲಿರುವ ಒಟ್ಟು ಬ್ರಹ್ಮಾಂಡಗಳ ಸಂಖ್ಯೆ ಎಣಿಕೆಗೆ ನಿಲುಕಿಲ್ಲ. ಅಂದ ಮೇಲೆ ಸಮಗ್ರವಾಗಿ ವಿಶ್ವದಲ್ಲಿ ಎಷ್ಟು ಕೋಟಿ ಗ್ರಹಯುಕ್ತ ನಕ್ಷತ್ರಗಳಿರಬಹುದೆಂದು ಅಂದಾಜಿಸುವುದು ಕಷ್ಟ.

ನಕ್ಷತ್ರವೊಂದು ಗ್ರಹಪರಿವೇಷ್ಟಿತವಾಗಿದೆಯೆಂದು ಪ್ರಮಾಣೀಕರಿಸುವುದು ಹೇಗೆ? ಎಷ್ಟೇ ಪ್ರಬಲ ದೂರದರ್ಶಕದಿಂದಾದರೂ ನೇರ ದಿಟ್ಟಿಸಿ ಅಥವಾ ಛಾಯಾಚಿತ್ರೀಕರಿಸಿ ಇದನ್ನು ರುಜುವಾತಿಸುವುದು ಅಸಾಧ್ಯ. ಬಾನಿನಾಳದ ಆ ಕೊನೆಯಲ್ಲಿ ಅರಿಲಿನ ಬೆಳಕಿನ ಹೊನಲಿನಲ್ಲಿ ನಕ್ಷತ್ರವನ್ನು ಸುತ್ತುತ್ತಿರಬಹುದಾದ ಗ್ರಹಕಣಗಳು ಪ್ರತ್ಯೇಕವಾಗಿ ಗೋಚರಿಸುವುದೇ ಇಲ್ಲ. ನಮಗೆ ಸೂರ್ಯನಾದ ಬಳಿಕ ತೀರ ಹತ್ತಿರದಲ್ಲಿರುವ ಪ್ರಾಕ್ಸಿಮಾ ಸಂಟಾರಿಯ ದೂರವೇ ೪.೩ ಜ್ಯೋತಿರ್ವರ್ಷಗಳು—ಅಂದರೆ ಇಂದಿನಿರುಳು ನಮಗೆ ಗೋಚರಿಸುವ ಈ ನಕ್ಷತ್ರ ೪.೩ ವರ್ಷಗಳಷ್ಟು ಹಿಂದಿನದು. ಸಮೀಪತಮ ನಕ್ಷತ್ರದ ಪಾಡೇ ಹೀಗಾದರೆ ಹಲವು ಲಕ್ಷ ಜ್ಯೋತಿರ್ವರ್ಷಗಳಷ್ಟು ದೂರ ಎಲ್ಲೆಲ್ಲಿಯೋ ಹರಡಿ ಹೋಗಿರುವ ಅಸಂಖ್ಯ ನಕ್ಷತ್ರಗಳ ಪರಿಸ್ಥಿತಿ ಏನು? ಅರಿಯುವುದು ಹೇಗೆ? ಕಾಲ ದೇಶಗಳ ಅಗಾಧತೆಯ ಎದುರು ಮಾನವ ಪ್ರಯತ್ನಗಳ ಕ್ಷುದ್ರತೆ ಎದ್ದು ಕಾಣುತ್ತದೆ. ಇಂಥ ಸನ್ನಿವೇಶಗಳು ವಿಜ್ಞಾನದ ಗಜಗಮನದಲ್ಲಿ ಎದುರಾದಾಗ ವಿಜ್ಞಾನಿ ಪರೋಕ್ಷ ತಂತ್ರಗಳನ್ನು ಹುಡುಕಿಯೇ ತೀರುತ್ತಾನೆ. ಸದಾಚಲನೆಯಲ್ಲಿರುವ ನಕ್ಷತ್ರದಿಂದ ನಮಗೆ ಲಭಿಸುವ ಬೆಳಕು, ರೇಡಿಯೊ ತರಂಗಗಳು ಮುಂತಾದ ಶಕ್ತಿ ರೂಪಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಅದರ ನಿಜಪಥವನ್ನು ಗಣಿಸಿ ನಿರ್ಧರಿಸುವುದು ಸಾಧ್ಯವಿದೆ. ಇತ್ತ ಪ್ರತ್ಯೇಕವಾಗಿ ಆ ನಕ್ಷತ್ರದ ವರ್ತನೆಯನ್ನು ಹಲವಾರು ವರ್ಷ ಕಾಲ ಅನುಸರಿಸಿ ಅದರ ವಾಸ್ತವಿಕ ಪಥವನ್ನು ರೇಖಿಸುವುದು ಕೂಡ ಸಾಧ್ಯವಿದೆ. ಇವೆರಡರ, ಅಂದರೆ ಗಣನೆ ಮತ್ತು ವಾಸ್ತವಿಕತೆ, ನಡುವೆ ಹೊಂದಾಣಿಕೆ ಏರ್ಪಡದಿದ್ದರೆ, ಉಭಯ ಅಂಶಗಳನ್ನೂ ಪುನಃ ಪರಿಶೀಲಿಸಿ, ಎಲ್ಲಿಯೂ ದೋಷ ನುಸುಳಿಲ್ಲವೆಂದು ಖಾತ್ರಿ ಮಾಡಿಕೊಂಡು, ನಕ್ಷತ್ರದ ವಾಸ್ತವಿಕ ಪಥ ನಿಜಪಥದಿಂದ ವಿಚಲಿತವಾಗಲು ಬಾಹ್ಯ ತಾಡನೆ ಏನೋ ಇರಬೇಕೆಂದು ತೀರ್ಮಾನಿಸಬಹುದು. ವಿಚಲನೆಯ ಮೊತ್ತ ಆ ಅಜ್ಞಾತಕಾರಕದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು—ಉದಾಹರಣೆಗೆ ಅವರ ರಾಶಿ, ನೆಲೆ, ಚಲನದಿಶೆ ಇತ್ಯಾದಿಗಳನ್ನು—ಒದಗಿಸಬಲ್ಲದು. ಅತಿ ದೂರದ ನಕ್ಷತ್ರವೊಂದರ ಗ್ರಹದಿಂದ ನಾವು ಸೂರ್ಯನ ವರ್ತನೆ

ಯನ್ನು ಅಭ್ಯಸಿಸಿದ್ದಾದರೆ ಎಂಥ ಅನುಭವ ಮೂಡೀತು? ಸೂರ್ಯನೇ ಮಸಕು ಬೆಳಕಿನ ಹುಡಿಯಾಗಿ ಕಾಣುವ ಅಲ್ಲಿಗೆ, ಸೌರವ್ಯೂಹದ ಮಹಾದೈತ್ಯ ಗ್ರಹವಾದ ಗುರುವನ್ನೂ ಒಳಗೊಂಡಂತೆ, ಯಾವ ಗ್ರಹವೂ ಸುತರಾಂ ಗೋಚರಿಸದು. ಇನ್ನು ಸೂರ್ಯನ ಪಥ? ನಿಜ ಹಾಗೂ ವಾಸ್ತವಿಕ ಪಥಗಳ ನಡುವೆ ವಿಚಲನೆ ಎದ್ದು ತೋರ ದಿರದು. ಸೂರ್ಯನ ಮೇಲೆ, ಪ್ರಾಯಶಃ, ಗ್ರಹಗಳ ಗುರುತ್ವಾಕರ್ಷಣ ತಾಡನೆಯೇ ಇವರ ಕಾರಣವೆಂದು ಆಗ ನಾವು ತೀರ್ಮಾ ನಿಸುವುದು ಸಾಧುವಾಗಿದೆ. ಈಗ ಭೂಮಿಗೆ ಮರಳೋಣ. ಈ ದಿಶೆಯಲ್ಲಿ ಬಾರ್ನಾರ್ಡನ ನಕ್ಷತ್ರ ವಿಜ್ಞಾನಿಗಳ ವಿಶೇಷ ಲಕ್ಷ್ಯ ಆಕರ್ಷಿ ಸಿದೆ. ವೃಶ್ಚಿಕ ರಾಶಿಯ ಉತ್ತರ ಪಾರ್ಶ್ವ ದಲ್ಲಿ, ನಮ್ಮಿಂದ ಸುಮಾರು ೬ ಜ್ಯೋತಿರ್ವರ್ಷ ದೂರದಲ್ಲಿರುವ ಮಸಕು ರಕ್ತ ಕುಬ್ಜ ತಾರೆ ಇದು. ನಲವತ್ತು ವರ್ಷ ಗಳಿಗೂ ಮಿಕ್ಕಿ ಇದನ್ನು ಛಾಯಾಚಿತ್ರೀ ಕರಿಸಿ ಇದರ ವರ್ತನೆಯನ್ನೂ ಅಭ್ಯಸಿಸ ಲಾಗಿದೆ. ಈ ನಕ್ಷತ್ರವನ್ನು ಕನಿಷ್ಠ ಪಕ್ಷ ಎರಡು ಕಪ್ಪು ವಸ್ತುಗಳಾದರೂ ಸುತ್ತು ತ್ತಿವೆ. ಒಂದೊಂದರ ರಾಶಿಯೂ ಗುರುವಿನದ ರಷ್ಟೇ ಇದೆ ಎಂದು ಈ ಅಧ್ಯಯನದಿಂದ ತಿಳಿದಿದೆ. ಇಷ್ಟೇ ಅಲ್ಲ. ಸೂರ್ಯನ ನೆರೆ ಯಲ್ಲಿರುವ ಸುಮಾರು ಆರು ತಾರೆಗಳಿಗೆ ಗುರುರಾಶಿಯ ಒಂದರಿಂದ ಹತ್ತು ಮಡಿ ರಾಶಿಗಳಿರುವ ಕಪ್ಪು ಸಂಗಾತಿಗಳಿವೆ ಎಂದು ಕೂಡ ತಿಳಿದಿದೆ. ಇವೆಲ್ಲ ಕಾರಣಗಳಿಂದ ವಿಜ್ಞಾನಿಗಳು ವಿಶ್ವದಲ್ಲಿ 'ಸೌರವ್ಯೂಹ ಗಳು'–ಅಂದರೆ ಗೃಹ ಮಂಡಲ ಸಹಿತ ನಕ್ಷತ್ರಗಳು–ವಿಪುಲವಾಗಿ ಹರಡಿಹೋಗಿವೆ ಎನ್ನುತ್ತಾರೆ. ಲಕ್ಷ ಲಕ್ಷ ಸಂಖ್ಯೆಗಳಲ್ಲಿ ನಿರ್ದಿಷ್ಟ ನಕ್ಷತ್ರಗಳನ್ನು ಅತಿದೀರ್ಘಕಾಲ ಅಭ್ಯಸಿಸಿದಾಗ ಮಾತ್ರ ಏನಾದರೂ ಸುಳುಹು ದೊರೆತೀತು ಅಷ್ಟೆ. ೨೧ ನೆಯ ಶತಮಾನ ಈ ನಿಟ್ಟಿನಲ್ಲಿ ಹೊಸ ದಿಗಂತ ತೆರೆದೀತು.

ಭೂಮಿಯಲ್ಲಿ ಜೀವಿಗಳು ವೈದಳೆದು ವಿಕಸಿಸಿರುವ ಪರಿಯನ್ನು ವಿಶ್ಲೇಷಿಸಿದರೆ ಇದು ಆಕಸ್ಮಿಕವಲ್ಲ, ಏಕೈಕವೂ ಅಲ್ಲ ಎಂದು ಸ್ಪಷ್ಟವಾಗುತ್ತದೆ: ಅಸಂಖ್ಯ ನೈಸರ್ಗಿಕ ಸ್ಥಿತಿಗತಿಗಳು ಒಂದು ಗ್ರಹದಲ್ಲಿ ಎರಕಗೊಂಡಾಗ ಅಲ್ಲಿ ಜೀವಿಚಿತ್ರ ಆರಂಭ ವಾಗುವುದು ಸಂಭಾವ್ಯ. ಆದರೆ ಆ ಜೀವಿ ಭೂ ಜೀವಿ ತೆರದಲ್ಲೇ ಇರಬೇಕೆಂದೇನೂ ಇಲ್ಲ, ಆದ್ದರಿಂದ ಅಲ್ಲಿಯ ನಾಗರಿಕತೆ ಕೂಡ ನಮ್ಮಲ್ಲಿಯದಕ್ಕಿಂತ ಬೇರೆಯೇ ಆಗಿರು ವುದು ಸಾಧ್ಯ. ಆದರೆ ವಿಶ್ವದಲ್ಲಿರಬಹುದಾದ ಸಕಲ ಜೀವಿಗಳಿಗೂ ಸಾಮಾನ್ಯವಾದವು ನಿಸರ್ಗದ ಬಲಗಳು ಮತ್ತು ಇವು ವರ್ತಿ ಸುವ ನಿಯಮಗಳು. ಎಂದೇ ವಿಶ್ವದಲ್ಲಿಯ ಸಮಸ್ತ ಜೀವಿಗಳೂ ವಿಕಾಸಪಥದಲ್ಲಿ ಮೂರು ಮುಖ್ಯ ಮಜಲುಗಳನ್ನು ದಾಟ ಬೇಕಾಗುತ್ತದೆ: ನೈಸರ್ಗಿಕ ಸ್ಥಿತಿ–ಉದಾ ಹರಣೆಗೆ ನಮ್ಮ ಕಾಡು ಪ್ರಾಣಿಗಳು; ಬುದ್ಧಿವಂತಿಕೆಯ ಆದಿಮರೂಪ–ಉದಾ ಹರಣೆಗೆ ಮೊದಲ ಮಾನವ; ಬುದ್ಧಿವಂತಿ ಕೆಯ ಪ್ರೌಢರೂಪ–ಉದಾಹರಣೆಗೆ ತಂತ್ರ ವಿದ್ಯಾಪಾರಂಗತ ಆಧುನಿಕ ಮಾನವ. ನಾವು ಈ ಮೂರನೆಯ ಮಜಲನ್ನು ಏರಿದ್ದು ವರ್ತಮಾನ ಶತಮಾನದ ಉತ್ತ ರಾರ್ಧದಲ್ಲಿ ಎಂಬುದನ್ನು ನೆನಪಿಸಿ ಕೊಳ್ಳೋಣ.

ಭೂವ್ಯಾತೀತ ಬುದ್ಧಿವಂತಿಕೆ ಅಥವಾ ನಾಗರಿಕತೆಗಳ ಜೊತೆ ಸಂಪರ್ಕ ಸಾಧಿಸುವುದು ಹೇಗೆ? ವಿಶ್ವದ ವಯಸ್ಸು ಸುಮಾರು ೧೫೦೦ ಕೋಟಿ ವರ್ಷಗಳು. ವ್ಯಾಪ್ತಿ ಮತ್ತು ಕಾಲ ಎರಡರಲ್ಲಿಯೂ ಅತ್ಯಗಾಧವಾಗಿರುವ ಇದರಲ್ಲಿರಬಹುದಾದ ಸಮಸ್ತ ನಾಗರಿಕತೆಗಳೂ ನಮ್ಮ ಮಟ್ಟದಲ್ಲಿಯೇ ಇರುವುವೆಂದು ಭಾವಿಸಬೇಕಾಗಿಲ್ಲ. ಕೆಲವು ಇನ್ನೂ ಆದಿಮ ಸ್ಥಿತಿಯಲ್ಲಿ, ಅಂದರೆ ನಮ್ಮ ೧೭ನೆಯ ಶತಮಾನದ ಮಟ್ಟದಲ್ಲಿದ್ದರೆ, ಇನ್ನು ಕೆಲವು ನಮ್ಮ ಮಟ್ಟಕ್ಕೆ ಬಂದಿರಬಹುದು. ಅದೇ ರೀತಿ ಹಲವಾರು ನಾಗರಿಕತೆಗಳು ನಾವು ೩೦ ನೆಯ, ೪೦ ನೆಯ, ೫೦ ನೆಯ ಇತ್ಯಾದಿ ಶತಮಾನಗಳಲ್ಲಿ ಐದಲಿರುವ ಮಜಲುಗಳನ್ನು ಈಗಾಗಲೇ ತಲಪಿರಬಹುದು. ನಮ್ಮ ಮತ್ತು ನಮಗಿಂತ ಎತ್ತರ ಮಟ್ಟಗಳಲ್ಲಿರುವ ಬುದ್ಧಿವಂತಿಕೆಗಳ ಜೊತೆ ನಾವು ತಾತ್ತ್ವಿಕವಾಗಿ ಸಂಪರ್ಕ ಏರ್ಪಡಿಸಿ ವಿಚಾರ ವಿನಿಮಯ ಮಾಡುವುದು ಸಾಧ್ಯವಿದೆ. ಇಂಥ ಸೇತುವೆ ಕಟ್ಟಲು ಎರಡು ಹಾದಿಗಳಿವೆ: ಆಕಾಶ ನೌಕೆಗಳನ್ನು ತೇಲಿಬಿಡುವುದು, ರೇಡಿಯೊ ಸ್ಪಂದಗಳನ್ನು ಪ್ರೇಷಿಸುವುದು. ವಿಶ್ವದ ಮಹಾಗರ್ತದೊಂದಿಗೆ ಹೋಲಿಸುವಾಗ ಇಡೀ ಸೌರವ್ಯೂಹವೇ ಅಂಗೈ ಅಗಲಕ್ಕೆ ಕುಗ್ಗುತ್ತದೆ. ಉದಾಹರಣೆಗೆ ಭೂಮಿಯಿಂದ ನೆರೆ ತಾರೆಯ ದೂರ ಭೂಮಿ ಸೂರ್ಯ ಅಂತರದ ಸುಮಾರು ೨,೮೨,೫೦೦ ಮಡಿ ದೊಡ್ಡದು. ಇತ್ತ, ಭೂಮಿಯ ನೆರೆಗ್ರಹ ಮಂಗಳಕ್ಕೆ ತೆರಳಲು ಅಥವಾ ತೆವಳಲು ನಮ್ಮ ವೈಕಿಂಗ್ ನೌಕೆ ತೆಗೆದುಕೊಂಡ ಅವಧಿ ಸುಮಾರು ಒಂದು ವರ್ಷ. ಆದ್ದರಿಂದ ನಾವು ಸಶರೀರವಾಗಿ ಆಗಲಿ ನಮ್ಮ ಯಂತ್ರ ಪ್ರತಿನಿಧಿ ಮೂಲಕವಾಗಿ ಆಗಲಿ ಯಾವುದೇ ಇತರ ನಾಗರಿಕತೆಗೆ ಪಯಣಿಸಿ ಕೊಲಂಬಸನ ಅಥವಾ ನೀಲ್ ಆರ್ಮ್‌ಸ್ಟ್ರಾಂಗನ ಸಾಹಸವನ್ನು ಪುನರಾವರ್ತಿಸುವುದು ಪ್ರಸಕ್ತ ಶತಮಾನದ ತಂತ್ರ ವಿದ್ಯೆಗೆ ಎಟುಕದ ದ್ರಾಕ್ಷಿ. ಆಯ್ದ ಕೆಲವು ತಾರೆಗಳನ್ನು ಸುತ್ತುತ್ತಿರಬಹುದಾದ ಗ್ರಹಗಳಿಗೆ ನಮ್ಮ ಸ್ನೇಹವಾಣಿಯನ್ನು ಬೆಳಕಿನ ವೇಗದಿಂದ ಧಾವಿಸುವ ರೇಡಿಯೊ ತರಂಗಗಳ ಮೂಲಕ ಬಿತ್ತರಿಸೋಣವೇ? ನಮ್ಮ ಪಕ್ಕದ ಗ್ರಹಯುಕ್ತ ತಾರೆ ಬಾರ್ನಾರ್ಡನ ನಕ್ಷತ್ರವಾಗಿರಬಹುದು ಎಂದಿರುವುದು ಸರಿಯಷ್ಟೆ. ಆ ಗ್ರಹಕ್ಕಾದರೂ ರೇಡಿಯೊಸ್ಪಂದ ತಲಪಿ ಹಿಂಪುಟಿದು ಬರಲು ೧೨ ವರ್ಷಗಳೇ ಬೇಕು. ವಾಸ್ತವವಾಗಿ ಅಲ್ಲಿ ಗ್ರಹವೇ ಇರದಿದ್ದರೆ; ಇದ್ದರೂ ನಾಗರಿಕತೆ ಅರಳಿರದಿದ್ದರೆ? ಆದ್ದರಿಂದ ಅರಿಯದ ಆಗಾಧತೆಗೆ ಕುರುಡು ನೆಗೆತ ಜಿಗಿದು ಹೊಸ ಅರಿವು ಪಡೆದೇವೆಂಬುದು ವ್ಯರ್ಥ ಪ್ರಯತ್ನವಾದೀತು.

ವಿಜ್ಞಾನಿಗಳು ಈ ಅತಿ ಜಟಿಲ ಸಮಸ್ಯೆಯನ್ನು ಇನ್ನೊಂದು ನಿಲವಿನಿಂದ ಅವಲೋಕಿಸಿದ್ದಾರೆ. ತಂತ್ರವಿದ್ಯೆಯಲ್ಲಿ, ಆ ಕಾರಣದಿಂದ ಬುದ್ಧಿವಂತಿಕೆಯಲ್ಲಿ, ನಮಗಿಂತ ಎಷ್ಟೋ ಎತ್ತರದ ಮಜಲುಗಳನ್ನು ಐದಿರುವ ನಾಗರಿಕತೆಗಳು ವಿಶ್ವದ ವಿವಿಧ ಭಾಗಗಳಲ್ಲಿ ವಿಕಸಿಸಿರುವುವು ಎಂಬುದನ್ನು ಅಂಗೀಕರಿಸಿದ ಬಳಿಕ, ಅವು ಪರಮಾಣವಿಕ ಯುದ್ಧಗಳಿಂದ ಅಥವಾ ಪರಿಸರಮಾಲಿನ್ಯದಿಂದ ಹರಾಕಿರಿಗೆ ತುತ್ತಾಗದೆ ಶಾಂತಿಮಾರ್ಗಗಾಮಿಗಳಾಗಿ ಸ್ತಿಮಿತ ಪ್ರಗತಿ ಸಾಧಿಸಿದ್ದೇ ಆದರೆ, ಈ ವೇಳೆಗೆ ಅನ್ಯಗ್ರಹ

ಗಳಲ್ಲಿ ಬುದ್ಧಿವಂತಿಕೆ ಅನ್ವೇಷಣೆ ನಡೆಸುವ ದಿಶೆಯಲ್ಲಿ ಸಾಕಷ್ಟು ಯಶಸ್ಸು ಗಳಿಸಿರುತ್ತವೆ ಎಂಬ ಅಂಶ ಸಹಜವಾಗಿ ಅನುಗತವಾಗುತ್ತದೆ. ಅರ್ಥಾತ್ ಅವುಗಳಿಂದ ಜಗತ್ತಿನ ನಾನಾತಾಣಗಳತ್ತ ಇಂಥ ಅನ್ವೇಷಣೆಯ ಸಲುವಾಗಿ ಸ್ಪಂದಗಳೂ ವಾಹನಗಳೂ ರವಾನೆಗೊಂಡಿರುವುದು ಸಂಭಾವ್ಯ. ಈ ಶೋಧದ ತಳದಲ್ಲಿರುವ ವಿಜ್ಞಾನ ಮತ್ತು ತಂತ್ರವಿದ್ಯೆ ನಮಗೆ ಅರ್ಥವಾಗವು. ವಿಶ್ವದ ಭೌತನಿಯಮಗಳನ್ನೂ ಪದಾರ್ಥಗಳ ಗುಣಧರ್ಮಗಳನ್ನೂ ಚೆನ್ನಾಗಿ ತಿಳಿದಿರುವ ವಿಜ್ಞಾನಿಗಳ ಅಭಿಪ್ರಾಯದಲ್ಲಿ ಅತಿ ದೂರದ ಒಂದು ಗ್ರಹದಿಂದ ಯಾವುದೇ ವಾಹನ ಜೀವಸಹಿತ ಅಥವಾ ಜೀವರಹಿತ ಇಲ್ಲಿವರೆಗೆ ಬರುವುದು ತೀರ ಅಸಂಭಾವ್ಯ ಎಂದಿದೆ. ಆದ್ದರಿಂದ ಅವರ ಪ್ರಧಾನಲಕ್ಷ್ಯ ರೇಡಿಯೊ ಸ್ಪಂದಗಳ ಶೋಧನೆಯತ್ತ ಹರಿದಿದೆ. ಅನ್ಯನಾಗರಿಕತೆಗಳು ಈಗ ಸಾವಿರ, ಲಕ್ಷ ವರ್ಷಗಳ ಹಿಂದಿನಿಂದಲೇ ವಿಶ್ವದಲ್ಲಿಯ ಇತರ ಬುದ್ಧಿವಂತಿಕೆಗಳ ಅನ್ವೇಷಣೆಯಲ್ಲಿ ನಿರತವಾಗಿದ್ದು ನಿರ್ದಿಷ್ಟ ಸ್ಪಂದಗಳನ್ನು ಉದ್ದಿಷ್ಟ ಲಕ್ಷ್ಯಗಳತ್ತ ಪ್ರೇಷಿಸುತ್ತಿರಬಹುದು. ಇಂಥ ಲಕ್ಷ್ಯಗಳ ಪೈಕಿ ಸೌರವ್ಯೂಹ–ಅಂದರೆ ನಾವು – ಸೇರಿರುವುದು ಅಸಂಭಾವ್ಯವಲ್ಲ. ವಿವಿಧ ಆಕರಗಳಿಂದ ಆಗಮಿಸುತ್ತಿರುವ ರೇಡಿಯೊಸ್ಪಂದಗಳು ಈಗ ಭೂಮಿಯನ್ನು ಆವರಿಸಿರಬಹುದು. ಈ ಸ್ಪಂದ ಸಮುದ್ರದಿಂದ ಖಚಿತ ಮಾಹಿತಿ ಹೆಕ್ಕಿ ಹೊರ ತೆಗೆದು ವಿಶ್ಲೇಷಿಸಿ ಅದು ಅನ್ಯಲೋಕ ನಾಗರಿಕತೆಗಳ ಸ್ನೇಹವಾಣಿ, ಸಂಪರ್ಕಸಂಕ ಎಂಬುದಾಗಿ ನಾವು ಸ್ಥಿರೀಕರಿಸಿದ್ದೇ ಆದರೆ, ಭೂವ್ಯತೀತ ಬುದ್ಧಿವಂತಿಕೆಗಾಗಿ ಅನ್ವೇಷಣೆಗೈಯುವ ದಿಶೆಯಲ್ಲಿ ಅದೊಂದು ಹನುಮಂತ ಲಂಘನವೇ ಆದೀತು. ಅದನ್ನು ಸಾಧಿಸಬಲ್ಲ ಮಟ್ಟಕ್ಕೆ ನಮ್ಮ ತಂತ್ರವಿದ್ಯೆ ಈಗ ಅಭಿವರ್ಧಿಸಿದೆ. ಜ್ಞಾನವೀಗ ಹೊಸ ಸೀಮೆಗೆ ನೆಗೆಯಲು ಉಡಾವಣತಡಿ ಮೇಲೆ ನಿಂತಿದೆ. ಅದೃಶ್ಯ ಲೋಕದ ಅಶರೀರ ವಾಣಿಯನ್ನು ಆಲಿಸಲು ಇಂದು ಯೋಜನೆಗಳು ಕಾರ್ಯರೂಪಕ್ಕೆ ಇಳಿದಿವೆ. ಎಂದೇ ಬಾರ್ನಾರ್ಡನ ನಕ್ಷತ್ರ ಮುಂತಾದ ನಿರ್ದಿಷ್ಟ ಲಕ್ಷ್ಯಗಳತ್ತ ವಿಶೇಷ ಗಮನಹರಿಸಲಾಗಿದೆ. ಸದ್ಯವೇ ಆ ವಾಣಿ ಅನುರಣಿಸಬಹುದು. ವಿಶ್ವದಲ್ಲಿ ಮಾನವ ಏಕಾಂಗಿಯಲ್ಲ ಎಂಬ ಊಹೆಯನ್ನು ಸ್ಥಿರೀಕರಿಸಬಹುದು. ವಿಶ್ವಬಾಂಧವ್ಯವನ್ನು ಬೆಸೆಯಬಹುದು.

ಸ್ವಾತಂತ್ರ್ಯಗಳಿಸುವಷ್ಟೆ ಕಷ್ಟಕರವಾದುದು ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು. ಐಕ್ಯತೆಯಿಂದ ಮಾತ್ರ ಇದು ಸಾಧ್ಯ.

—ನೆಹರೂಜೀ

ಸಾವಯವ ಕೃಷಿಯಲ್ಲಿ ಕಳೆ ಮತ್ತು ಕೀಟ ನಿಯಂತ್ರಣ

ಎ. ಪಿ. ಚಂದ್ರಶೇಖರ

ನಿರವಯವ ಅಥವಾ ರಾಸಾಯನಿಕ ಕೃಷಿಯನ್ನು ಸ್ವಂತ ಜಮೀನಿನಲ್ಲಿ ಪೂರ್ಣ ನಿಷ್ಠೆಯಿಂದ ಮಾಡಿ ಈ ಕೃತಕವಿಧಾನದ ಅಥವಾ ಪರಿಸರ-ಮಾನವ-ಸ್ನೇಹಿಯಲ್ಲದ ವ್ಯವಸಾಯದ ಮೂಲ ದೋಷವನ್ನು ಕಂಡುಕೊಂಡು ಸಾವಯವ ಕೃಷಿಗೆ ಮರಳಿದ, ಮರಳಿ ಅಲ್ಲಿ ನೂತನ ಅನುಭವಗಳಿಸಿದ ಈ ಎಂಜಿನಿಯರಿಂಗ್ ಪದವೀಧರ ಲೇಖಕನ ಪ್ರಯೋಗಲಭ್ಯ ಅನುಭವದ ಸಾರ ಈ ಲೇಖನ.

ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ
ವಿಕೃತಿಗೊಳಿಸುವನವನು ಮಾಕೆಯಂಗಗಳ
ಭೂಕೃಷಿಕ ರಸತಂತ್ರಿ ಶಿಲ್ಪಿ ವಾಹನಯಂತ್ರಿ
ವ್ಯಾಕೃತಿ ಸರೇನವಳ? ಮಂಕುತಿಮ್ಮ

ಸರ್ವಹಿತಸಾಧನೆ, ಸಾರ್ವಕಾಲಿಕ ಚಿಂತನೆ, ಸುಸಂಬದ್ಧ ಆವರ್ತನೆ, ಸ್ವಾವಲಂಬನೆ ಮೊದಲಾದ ಘನ ಆದರ್ಶಗಳ ಹಿನ್ನೆಲೆಯಲ್ಲಿ ಸಾವಯವ ಕೃಷಿ ಇದೆ. ಇದು ಅಟ್ಟ ಏರಿದ ಏಣಿಯನ್ನು ತಳ್ಳುವ, ಮೊಟ್ಟೆ ಇಡುವ ಕೋಳಿಯನ್ನೇ ಕೊಯ್ಯುವ ಆರ್ಥಿಕ ಚಿಂತನೆಯಲ್ಲ. "ಕೆರೆಯ ನೀರನು ಕೆರೆಗೆ ಚೆಲ್ಲಿ" ಎಂಬ ದಾಸೋಕ್ತಿಯ ವೇದಾಂತ ಇಲ್ಲಿದೆ. "ಶಕ್ತಿಯ ಸೃಷ್ಟಿಯೂ ಸಾಧ್ಯವಿಲ್ಲ, ಲಯವೂ ಸಾಧ್ಯವಿಲ್ಲ, ಪರಿವರ್ತನೆ ಮಾತ್ರ ಸಾಧ್ಯ" ಎಂಬ ವೈಜ್ಞಾನಿಕತೆ ಇಲ್ಲಿದೆ. "ನಾನು ಹೊಡೆದರೆ ಅವನೂ ಹೊಡೆಯುತ್ತಾನೆ. ಆದ್ದರಿಂದ ಹೊಡೆಯುವ ಮೊದಲು ಯೋಚಿಸಬೇಕು" ಎಂಬ ವ್ಯಾವಹಾರಿಕತೆಯೂ ಇಲ್ಲಿದೆ.

ಜಲಜನಕ ಮತ್ತು ಇಂಗಾಲಗಳನ್ನು ಮುಖ್ಯವಾಗಿ ಹೊಂದಿದ್ದು ನಿರ್ದಿಷ್ಟವಾದ ಕೆಲಸ ಮಾಡುವ ಅವಯವಗಳನ್ನುಳ್ಳದ್ದು ಸಾವಯವ—ಯಾವುದೇ ಕೀಟ, ಪ್ರಾಣಿ, ಪಕ್ಷಿ, ಗಿಡ, ಮರ, ಬಳ್ಳಿಗಳು ಈ ವ್ಯಾಪ್ತಿಗೆ ಬರುತ್ತವೆ. ಜೀವ ಲೇಪವಿಲ್ಲದ ಎಲ್ಲ ರಾಸಾಯನಿಕಗಳೂ ನಿರವಯವಗಳು. ಎಲ್ಲ ಸಾವಯವಗಳಲ್ಲೂ ಈ ನಿರವಯವಗಳಿವೆ. ಆದರೆ ಜೀವ ಸ್ಪಂದನೆಯಾಗುವ ಕನಿಷ್ಠ ಪ್ರಮಾಣದಲ್ಲಿವೆ. ಈ ಕನಿಷ್ಠ ರಾಸಾಯನಿಕಗಳನ್ನುಳ್ಳ ಸಸ್ಯ ಮತ್ತು ಪ್ರಾಣಿ ತ್ಯಾಜ್ಯಗಳನ್ನು (ಹಸುರೆಲೆ, ತರಗೆಲೆ, ಹಿಂಡಿ, ಹಿಕ್ಕೆ, ಸಗಣಿ ಇತ್ಯಾದಿ) ಉಪಯೋಗಿಸಿ ಮಾಡುವ ಕೃಷಿಗೆ, ಪರಂಪರಾಗತವಾದ ಕೃಷಿಗೆ, ಪರಸ್ಪರ ಅನುಲೋಮವಾದ ಕೃಷಿಗೆ,

ಸಾವಯುವ ಕೃಷಿ ಎನ್ನುವರು. ಜೀವ ನಾಶವಮಾಡುವ ಗರಿಷ್ಠ ಪ್ರಮಾಣದ ರಾಸಾಯನಿಕಗಳನ್ನು ತಾಂತ್ರಿಕವಾಗಿ ಉತ್ಪಾದಿಸಿ ವಿಲೋಮತೆಯನ್ನು ಅನಿವಾರ್ಯ ವೆಂದು ಪ್ರತಿಪಾದಿಸಿ ಮಾಡುವ ಆಧುನಿಕ ಕೃಷಿಗೆ, ನಿರವಯುವ ಕೃಷಿ ಎನ್ನುತ್ತೇವೆ. ಪ್ರೀತಿಯಿಂದಲೇ ಆದರೂ ಕತ್ತಿ ಬೀಸಿದರೆ ಕತ್ತರಿಸುವುದು ಖಂಡಿತ. ಆಧುನಿಕ ಕೃಷಿಯ ಈ ದೋಷ ವಿಚಾರ ಉಳ್ಳ ಎಲ್ಲರಿಗೂ ಇಂದು ವಿದಿತ.

ಈ ಮೊದಲು ಸಾವಯುವ ಕೃಷಿಯ ಗುಣ, ನಿರವಯುವ ಕೃಷಿಯ ದೋಷಗಳ ಬಗ್ಗೆ ಸ್ಥೂಲವಾಗಿ ಹೇಳಿರುವಂಥಾದ್ದು ಶಬ್ದಾಡಂಬರವಲ್ಲ ಎಂಬುದನ್ನು ಅನುಭವದ ಮೇಲೆ (ಅನುಕಂಪದಿಂದಲ್ಲ) ಒಪ್ಪುವುದಾದರೆ, ಸಾವಯುವ ರೀತಿಯಲ್ಲಿ ಕಳೆ ನಿಯಂತ್ರಣ, ಕೀಟ ನಿಯಂತ್ರಣ ಸಾಧ್ಯವಾಗದೇ ಹೋದರೂ ಗಾಬರಿ ಪಡುವ ಪ್ರಮೇಯವಿಲ್ಲ. ನಿವ್ವಳ ಲಾಭ ಜಾಸ್ತಿ ಇರುವ ಲೆಕ್ಕಚಾರ ಎಂದೂ ಅತಾರ್ಕಿಕವಲ್ಲ.

ಇದು ಜಾರುವ ಉತ್ತರ, ನಮಗೆ ಕಳೆ, ಕೀಟ ನಿಯಂತ್ರಣವಾಗಲೇಬೇಕು ಎಂದು ನೀವು ವಾದಿಸುವುದಾದರೆ, ಮೊದಲು ಕಳೆ ಎಂದರೇನು ? ಎಂಬುದನ್ನು ವಿಚಾರಮಾಡಬೇಕು. ನಮ್ಮ ಉದ್ದೇಶಿತ ಬೆಳೆಯ ಮಧ್ಯ ಬರುವ ಅನುದ್ದೇಶಿತ ಎಲ್ಲಾ ಹುಲ್ಲು, ಹಸುರುಗಳೂ ನಮಗೆ ಕಳೆ. ಅವು ನಮ್ಮ ವೈರಿ, ಆದರೆ ನಾವು ಭ್ರಮಿಸಿದಂತೆ ಅವು ನಮ್ಮ ಶತ್ರು ಅಲ್ಲ, ಮಿತ್ರ. "ಕಳೆ" ಶಬ್ದಕ್ಕೆ ಸಾಹಿತ್ಯಿಕವಾಗಿ ಶಾಂತಿ, ವರ್ಚಸ್ಸು ಎಂಬ ಅರ್ಥಗಳುಂಟು ಕಳೆಯ ಈ ಅರ್ಥ ನಮಗೆ ಗ್ರಾಹ್ಯವಾದಾಗ, ನಮ್ಮಲ್ಲಿನ ಮಿಥ್ಯೆ ಕಳೆದುಹೋದಾಗ ಕಳೆ ನಿಯಂತ್ರಣ ನಮ್ಮ ತಲೆ ಕೆಡಿಸುವುದಿಲ್ಲ. "ವೈರಿ ಹೊರಗಿಲ್ಲ. ನಮ್ಮಲ್ಲೇ ಇದ್ದಾನೆ."

ನಮ್ಮ ಭೂಮಿಯಲ್ಲಿ ವಿಪರೀತವಾಗಿ ಕಳೆ ಬರುತ್ತದೆಂದರೆ ಒಂದು ದೃಷ್ಟಿಯಲ್ಲಿ ನಾವು ಹೆಮ್ಮೆ ಪಡಬೇಕು. ಭೂಮಿ ಫಲಹೀನವಾಗಿದ್ದಲ್ಲಿ ಅಷ್ಟಾಗಿ ಕಳೆ ಬರುವುದಿಲ್ಲ. ಹಾಗಾಗಿ ಕಳೆಗಳು ನಮ್ಮ ಭೂಮಿಯ ಫಲವತ್ತತೆಯ ಮಾನದಂಡಗಳಾಗಿವೆ. ಕಳೆ ನಿಯಂತ್ರಣಕ್ಕಾಗಿ ನಾವು ಭೂಮಿಯನ್ನು ಅಗತೆ ಮಾಡುತ್ತೇವೆ. ಉಳುಮೆ ಮಾಡುತ್ತೇವೆ. ಕೈಯಲ್ಲಿ ಕೀಳುತ್ತೇವೆ. (ಇವೆಲ್ಲ ಕಳೆ ನಿಯಂತ್ರಣದ ಸಾವಯುವ ವಿಧಾನಗಳೆ ಆಗಿವೆ. ರಾಸಾಯನಿಕ ಕಳೆ ನಾಶಕಗಳಿಗಿಂತ ಸಾವಿರಪಾಲು ಉತ್ತಮ ವಿಧಾನಗಳಿವು) ಕಳೆ ನಿಯಂತ್ರಣವೊಂದೇ ಅಗತೆ, ಉಳುಮೆಯ ಉದ್ದೇಶಗಳಲ್ಲ. ಇದರಿಂದ ಭೂಮಿ ನುಸುಲಾಗುತ್ತದೆ, ನಾವು ನೆಟ್ಟ ಗಿಡಗಳ ಬೇರುಗಳು ಹುಲುಸಾಗುತ್ತವೆ. ಭೂಮಿಯಲ್ಲಿ ನೀರು ಮತ್ತು ಗಾಳಿ ಸಂಚಾರ ಮಾಡುವಂತಾಗಿ ಸತ್ತ ಭೂಮಿಗೆ ಜೀವ ಬರುತ್ತದೆ ಎಂಬುದು ನಮ್ಮ ನಿರೀಕ್ಷಣೆಗಳು. ಇವು ಹೌದು. ಆದರೆ ಉಳುಮೆಮಾಡುವ ಈ ಎಲ್ಲಾ ಕೆಲಸಗಳನ್ನು ನಮ್ಮ 'ವೈರಿ' ಕಳೆಗಳು ಮಾಡುತ್ತವೆ. ಉದಾಹರಣೆಗೆ ನಮ್ಮ ಅಳಿದುಳಿದ ಕಾಡುಗಳನ್ನು ನೋಡಿ. ಕಳೆಗಳು ತಮ್ಮ ಜೀವನ ಚಕ್ರದಲ್ಲಿ ಮೂರೋ ಆರೋ ತಿಂಗಳಿಗೆ ಹುಟ್ಟಿ ಸಾಯುತ್ತವೆ. ಮತ್ತೆ ಹುಟ್ಟುತ್ತವೆ. ಈ ಪ್ರಕ್ರಿಯೆಯೊಳಗೆ ಸತ್ತ ಕಳೆಗಳ ಬೇರುಗಳು ಭೂಮಿಯೊಳಗೆ ನಾವು ಅಪೇಕ್ಷಿಸುವ ಗಾಳಿ ಮತ್ತು ನೀರು ಕೊಳವೆಗಳಾಗುತ್ತವೆ. ಒಳ

ಗೊಳಗೇ ಗೊಬ್ಬರವೂ ಆಗುತ್ತವೆ. ರೈತನ ಮಿತ್ರನೆಂದು ನೆಗಳ್ತಿವೆತ್ತ ಎರೆಹುಳಗಳಿಗೆ ಸತ್ತ ಎಲ್ಲ ಕಳೆಗಳೂ ಆಹಾರವಾಗುತ್ತವೆ. ಆಹಾರ ಹೆಚ್ಚಾಗಿ ಸಿಕ್ಕಿದಷ್ಟೂ ಎರೆಹುಳಗಳು ಹೆಚ್ಚಿ ಭೂಮಿಯ ತುಂಬೆಲ್ಲಾ ರಂಧ್ರ ಕೊರೆದು ಮಾಡುವ ಸ್ವಾಭಾವಿಕ ಉಳುಮೆಯನ್ನು ತಪ್ಪಿಸಿ ನಿರಂತರವಾಗಿ ನಾವು ನೇಗಿಲು ಹಿಡಿಯುವ ನೇಪಥ್ಯ ನಿರ್ದೇಶನದ ಭಾರ ನಮಗ್ಯಾಕೆ? (ಪ್ರಕೃತಿಯ ಉಳುಮೆಯಲ್ಲಿ ಗೆಡ್ಡೆಗಿಡಗಳು ಹೆಚ್ಚಿನ ಪಾತ್ರ ವಹಿಸುತ್ತವೆ ಹಾಗಾಗಿ ನಿಮ್ಮ ತೋಟದ ತುಂಬೆಲ್ಲಾ ಮೂಂಡಿ, ಕೇನೆ, ಕ್ಯಾನ, ಕೆಸುವು, ಬಾಳೆ ಇತ್ಯಾದಿಗಳನ್ನು ತುಂಬಿಸಿ)

ಕಳೆಗಳು ನಾವು ಕೊಡುವ ಗೊಬ್ಬರವನ್ನು ತಿನ್ನುತ್ತವೆ ಎಂಬುದು ತೀವ್ರ ಅಪವಾದ. ನಮ್ಮ ಗೊಬ್ಬರ ತಿಂದ ಕಳೆಗಳು ನೇರ ಸ್ವರ್ಗ ಸೇರುತ್ತವೆಂದು ನಾವು ತಿಳಿದಂತಿದೆ. ಅವು ತಿಂದ ಗೊಬ್ಬರಕ್ಕಿಂತ ಜಾಸ್ತಿಯಾಗಿ ಮತ್ತೆ ಭೂಮಿಗೆ ಮರಳಿಸುತ್ತವೆಂಬ ಸತ್ಯ ಗೋಚರವಾದಾಗ ಕಳೆ ನಿಯಂತ್ರಣ ಖಂಡಿತಾ ನಮ್ಮ ಆದ್ಯತೆಯಾಗಲಾರದು. ಸಾವಯವ ಕೃಷಿಯ ಜೀವಾಳವೇ ಸಸ್ಯ, ಪ್ರಾಣಿ ತ್ಯಾಜ್ಯಗಳನ್ನು ಉತ್ಪಾದಿಸುವುದರಲ್ಲಿದೆ—ಎಂದ ಮೇಲೆ ಒಂದೊಂದು ಕಳೆಯೂ ನಮಗೆ ಪರಮ ಮಿತ್ರನೆನಿಸುತ್ತದೆ.

ನಮ್ಮ ತರಕಾರಿ, ನಮ್ಮ ಹಣ್ಣಿನಗಿಡ ಹೇಗೆ ಬೆಳೆಯುತ್ತದೆ, ಹೇಗೆ ಫಸಲು ಕೊಡುತ್ತದೆ. ಆ ಸತ್ವ ಎಲ್ಲಿಂದ ಬಂತು ಎಂದು ನೀವೇನಾದರೂ ಯೋಚಿಸಿದ್ದೀರಾ? ಯಾವುದೇ ಗಿಡ ಅದು ಭೂಮಿಯಿಂದ ಹೀರುವುದಕ್ಕಿಂತ ಹೆಚ್ಚಾಗಿ ವಾತಾವರಣದಿಂದ ಹೀರುತ್ತದೆ. ಗಾಳಿಯಲ್ಲಿರುವ ಅಂಗಾರಾಮ್ಲ ಮತ್ತು ಸೂರ್ಯ ಶಾಖವನ್ನು ಉಪಯೋಗಿಸಿ ಎಲೆಗಳಲ್ಲಿರುವ ಹಸುರಿನಲ್ಲಿ (ಹರಿತ್ತು) ಅಡುಗೆಮಾಡಿ ನಮ್ಮ ಗಿಡ ಉಣ್ಣುತ್ತದೆ. ತನ್ನ ಹಣ್ಣುಗಳಲ್ಲಿ ತುಂಬಿ ನಮಗೆ ಉಣಬಡಿಸುತ್ತದೆ. ಇಂಥದೇ ಅಡುಗೆ ಕೆಲಸ ನಮ್ಮ ಕಳೆಗಿಡಗಳಲ್ಲೂ ನಡೆಯುತ್ತದೆಂಬುದನ್ನು ನಿಮ್ಮ ವಿವೇಕ ಒಪ್ಪುವುದಿಲ್ಲವೇ? ನಿಮ್ಮ ತೆಂಗಿನ ತೋಟವನ್ನು ಓರಣವಾಗಿ ಉಳುಮೆ ಮಾಡಿದಾಗ, ಅಲ್ಲಿ ಒಂದೇ ಒಂದು ಕಳೆ ಇಲ್ಲದಾಗ ನೀವು ಎಷ್ಟೊಂದು ಅಡುಗೆ ಮನೆಗಳನ್ನು ಒಡೆದು ಸ್ಮಶಾನ ನಿರ್ಮಿಸಿದ್ದೀರೆಂಬುವನ್ನು ಸ್ವಲ್ಪ ಊಹಿಸಿ. ಕಳೆ, ಬೆಳೆ ಇಲ್ಲದ ಭೂಮಿಯ ಮೇಲೆ ಬೀಳುವ ಅಷ್ಟೊಂದು ಸೂರ್ಯರಶ್ಮಿ, ಗಾಳಿ ಎಲ್ಲವೂ ಫಲಾನುಭವಿಗಳಾದ ಕಳೆಗಳಿಲ್ಲದೆ ನಷ್ಟವಾಗುವುದು ಒಂದು ಕಡೆ. ಹಸುರಿಲ್ಲದ ಆ ಬರಿ ನೆಲದ ಸೂರ್ಯಶಾಖದಿಂದ ಭೂಮಿಯ ಶಾಖ ಹೆಚ್ಚಿ ನಮ್ಮ ಫಸಲಿಗೇ ಕೇಡಾಗುವುದು ಇನ್ನೊಂದು ಕಡೆ. ನೀರಿನ ಅಗತ್ಯತೆ ಹೆಚ್ಚಾಗುವುದು ಮತ್ತೊಂದು ಕಡೆ.

ಇಷ್ಟೆಲ್ಲಾ ವಾದಗಳು, ತೋಟದ ಬೆಳೆಗಳಿಗೆ, ದೊಡ್ಡ ಗಿಡಗಳಿಗೆ ಪೂರ್ಣ ಸರಿ. ಕಳೆ ಪರಿಪೂರ್ಣ ಮಿತ್ರ. ಆದರೆ ಕಳೆಗಳಿಗಿಂತ ಸಣ್ಣದಾಗಿರುವ ತರಕಾರಿ ಬೆಳೆಗಳಿಗೆ ಕಳೆಗಳು ದೋಷಕಾರಕಗಳಾಗುತ್ತವೆ. ಇಂಥ ಸಂದರ್ಭದಲ್ಲಿ ಕಳೆಗಳನ್ನು ನಮ್ಮ ಹಿತಶತ್ರುಗಳೆಂದು ಕಂಡು ನಮ್ಮ ಗಿಡ ಮೇಲೇಳುವವರೆಗೆ ಸ್ವಲ್ಪ ಸವರೋಣ ಹಾಗೂ ಈ ಸಂದರ್ಭ ನಮ್ಮ ಉಪಯೋಗಕ್ಕೆ ಬರಬೇಕಾದ ಧ್ಯೇಯ ವಾಕ್ಯ "ಕಳೆಗಳಿಂದಲೇ ಕಳೆ

ನಿಯಂತ್ರಣ”. ಒಂದಷ್ಟು ಜಾಗದ ಕಳೆಗಳನ್ನು ತರಿದು ಇನ್ನೊಂದಷ್ಟು ಜಾಗದ ಕಳೆಗಳ ಮೇಲೆ ಗುಡ್ಡ ಹಾಕಿ ವಾರದ ನಂತರ ನೋಡಿ ಚಮತ್ಕಾರ. ಎರಡೂ ಕಳೆಗಳೂ ಕೊಳೆತು ಅಡಿಯಲ್ಲಿ ಹ್ಯೂಮಸ್ ತಯಾರಾಗಲು ಪ್ರಾರಂಭವಾಗಿರುತ್ತದೆ. ನೀವು ನೆಟ್ಟ ಸಣ್ಣ ಗಿಡಗಳ ಸುತ್ತ, ತರಕಾರಿ ಸಾಲಿನ ನೇರ ತೆಂಗಿನಗರಿ, ಬಾಳೆ ದರಗು, ಯಾವುದೇ ಸೊಪ್ಪು ತರಗೆಲೆಗಳನ್ನು ದಪ್ಪವಾಗಿ ಹಾಕಿ ಮತ್ತೆ ನಿಮ್ಮ ತಲೆಯನ್ನು ಬೇರೆಲ್ಲಾದರೂ ಹಾಕಿ. ಅಂಥಲ್ಲಿ ಕಳೆ ನಿಯಂತ್ರಣವಾಗಿರುತ್ತದೆ. ತೇವಾಂಶ ಹಿಡಿದಿರುತ್ತದೆ. ಗೊಬ್ಬರ ತಯಾರಾಗುತ್ತದೆ. ಗಿಡದ ಹಿಗ್ಗು ಖಂಡಿತವಾಗಿ ನಾಚಿಕೆಯಿಂದ ನಿಮ್ಮ ತಲೆತಗ್ಗುವಂತೆ ಮಾಡುತ್ತದೆ. ನಾವು ಹತ್ತಾರು ಎಕ್ರೆ ಜಾಗದಲ್ಲಿ ಒಂದೇ ಒಂದು ಬೇರೆ ಗಿಡ, ಮರ ಬೆಳೆಸದೆ ಹಲವು ರೀತಿಗಳಲ್ಲಿ ಭೂಮಿಯನ್ನು ಸಾಯಿಸಿದ್ದೇವೆ. ಆದರೂ ನಮ್ಮ ಎಲ್ಲ ಅಪರಾಧಗಳನ್ನೂ ಮನ್ನಿಸಿ, ಮುನಿಸಿಲ್ಲದೆ ಬರುವ ಕಳೆಗಳನ್ನು ಸಾಯಿಸಲು ಸಾವಯವದಲ್ಲೇನು ದಾರಿ ಎಂದು ಪಂಥಾಹ್ವಾನ ಕೊಡುವ ನಮ್ಮನ್ನು “ಕ್ಷಮಯಾಧರಿತ್ರೀ” ಎಂಬ ಅಭಿದಾನವುಳ್ಳ ಭೂಮಿ-ಇನ್ನೆಷ್ಟು ದಿನ ಸಹಿಸಿಯಾಳೋ?

ದ್ವೇಷದಿಂದ ಗೆಲ್ಲುವುದಕ್ಕಿಂತ ಪ್ರೀತಿಯಿಂದ ಗೆಲ್ಲುವುದು ಸದಾ, ಸರ್ವಥಾ ಸುಲಭ. ಇದು ಕಳೆಗಳಿಗೂ ಹೌದು. ಕೀಟಗಳಿಗೂ ಹೌದು. ಭೂಮಿಯ ಮೇಲೆ ನಮಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಕೀಟಗಳಿಗೂ ಇದೆ ಎಂಬುದನ್ನು ಮೊದಲು ತಿಳಿದು ಆ ಮೇಲೆ ನಮ್ಮ ಸ್ವಾರ್ಥಕ್ಕಾಗಿ ಕೀಟ ನಿಯಂತ್ರಣದ ಖಾತೆಗೆ ಬರಬೇಕು. ಕೊಟ್ಟು ತಿನ್ನುವುದು ಸರ್ವಥಾ ಯೋಗ್ಯ. ಒಂದಷ್ಟು ಇತರೆ ಪ್ರಾಣಿ, ಪಕ್ಷಿ, ಕೀಟಗಳಿಗೆ ಹೋಗಲಿ. ಪ್ರಕೃತಿಯ ಜೀವದ ಕೊಂಡಿಗಳು ಎಲ್ಲಿ ಕ್ರಮ ತಪ್ಪಿದರೂ ಸರಪಳಿ ಕಳಚಿಬೀಳುತ್ತದೆ. ನಮಗಿಂದು ಆಲಬೇಡ, ಅತ್ತಿಬೇಡ, ನೂರಾರು ಕಾಡು ಹಣ್ಣುಗಳು ಬೇಡ. ಈ ಮರಗಳಲ್ಲಿ ಆಶ್ರಯ ಪಡೆಯುವ ಸಾವಿರಾರು ಹಕ್ಕಿಗಳು ಎಷ್ಟೊಂದು ರೋಗಕಾರಕ ಕೀಟಗಳನ್ನು ಹದ್ದುಬಸ್ತಿನಲ್ಲಿಡಬಲ್ಲವಾಗಿದ್ದವು. ಮರದಿಂದ ಮರಕ್ಕೆ ಬಲೆ ಹೆಣೆಯುವ ನೇಕಾರ ಜೇಡ ಮಾಡುವ ಕೀಟ ನಿಯಂತ್ರಣ ಕಾಣಲಾರದ ಮೌಢ್ಯತೆ ನಮಗೆ. ಅಷ್ಟಕ್ಕೂ ಮರಗಳೇ ಇಲ್ಲದ ಬೋಳು ಜಾಗದಲ್ಲಿ ಜೇಡನಿಗೇನು ಕೆಲಸ. ಏಕಕಾಲದಲ್ಲಿ ಕೀಟಗಳನ್ನು, ಬ್ಯಾಕ್ಟೀರಿಯಾಗಳನ್ನೂ, ಎರೆಹುಳಗಳನ್ನೂ, ಕಪ್ಪೆಗಳನ್ನೂ, ಕೊಕ್ಕರೆಗಳನ್ನೂ, ಜೇಡಗಳನ್ನೂ ಸ್ವಲ್ಪ ಸ್ವಲ್ಪವಾಗಿ ಮನುಷ್ಯನನ್ನೂ ನಿಷ್ಪಕ್ಷಪಾತವಾಗಿ ನಾಶ ಮಾಡುವ ಕೀಟನಾಶಕಗಳು ಇಂದು ನಮ್ಮ ಶತ್ರು ಕೀಟಗಳಿಗೆ ಅಜೀರ್ಣವಲ್ಲ. ಈ ಸತ್ಯ ನಮಗೆ ಜೀರ್ಣವಾಗಬೇಕು ಅಷ್ಟೆ ಎಂದರೆ ಧಾರಾಳವಾಗಿ ಕಾಡು ಬೆಳೆಸುವುದು ಸಸ್ಯ, ಪ್ರಾಣಿ ವೈವಿಧ್ಯ ತುಂಬುವುದು, ಶತ್ರು ಮತ್ತು ಮಿತ್ರ ಕೀಟಗಳ ಸಮತೋಲನ ತರುವುದು ಒಂದು ಹಂತ.

ಈಗಿನ ‘ವೈಜ್ಞಾನಿಕ’ವೆನ್ನುವ ಕೃಷಿಯಲ್ಲಿ ಮುಖ್ಯವಾಗಿ ಮೂರು ಅಂಶಗಳನ್ನು ಗುರುತಿಸಬಹುದು ೧. ಸಂಕರ ಬೀಜ, ೨. ರಾಸಾಯನಿಕ ಗೊಬ್ಬರ, ೩. ಕೀಟನಾಶಕ. ಇವು ಮೂರನ್ನೂ ಕೈಬಿಟ್ಟಾಗಲೇ ಈಗ ಕೈಕೊಡುತ್ತಿರುವ ಬೆಳೆ

ಗಳು ಕೈ ಕುಲುಕಲು ಪ್ರಾರಂಭ ಮಾಡುತ್ತವೆ. ಇದು ಇನ್ನೊಂದು ಹಂತ ಪ್ರಕೃತಿಗೆ ಸಹಜವಲ್ಲದ ಬೀಜ, ಸಹಜವಲ್ಲದ ಗೊಬ್ಬರ ಹಾಕಿದಾಗ ಸಹಜವಾದ ಗಿಡ ಬರುತ್ತದೆಂದು ನಾವು ಕಲ್ಪಿಸಿದ್ದೇ ತಪ್ಪು. ಅಸಹಜ ಪರಿಕರಗಳಿಂದ ಪೋಷಿತವಾದ ಸಸ್ಯಗಳು ಸಹಜವಾಗಿ ಅತಿ ಬಿಂಬಿತವಾಗುತ್ತವೆ. ಅವಲಂಬಿತವಾಗುತ್ತವೆ. ರೋಗ ಗ್ರಾಹ್ಯವಾಗುತ್ತವೆ. ಇದನ್ನು ದೃಢೀಕರಿಸುವ ಬೇಕಾದಷ್ಟು ಅನುಭವಗಳು, ಉದಾಹರಣೆಗಳು ಇವೆ. ಅರಸಿನ, ಲಿಂಬೆ, ಬಾಳೆ, ಭತ್ತ ಹೀಗೆ ಯಾವುದೇ ಬೆಳೆ ರಾಸಾಯಕನಿಕದಲ್ಲಿ ರೋಗಿಯೂ ಸಾವಯುವದಲ್ಲಿ ನಿರೋಗಿಯೂ ಆಗಿರುವುದನ್ನು ಯಾರು ಬೇಕಾದರೂ ಪ್ರಯೋಗ ಮಾಡಿ ನೋಡಬಹುದು. ಎಂದೂ ಇಲ್ಲದಿದ್ದ ರೋಗ, ರಾಗಿ ಜೋಳಗಳವರೆಗೂ ಬಂದದ್ದು, ಹತ್ತಾರು ರೋಗಗಳಿಂದ ಕಬ್ಬು ಸೋತದ್ದು, ಏನೇನು ಲಾಗ ಹಾಕಿದರೂ ತೆಂಗಿನ ರೋಗ ದೇಶವ್ಯಾಪಿಯಾದದ್ದು, ಯಾವ ಕಟು ವಿಷಕ್ಕೂ ಬಗ್ಗದೆ ಅವರೆ, ತೊಗರಿಗಳು ಸೊಪ್ಪು ಮಾತ್ರ ಕೊಡಬಲ್ಲ ಹಂತಕ್ಕೆ ತಲುಪಿದ್ದು ನಮ್ಮನ್ನು ಚಿಂತನೆಗೆ ಒಡ್ಡಬೇಕು. ಹೊಸ ಕೀಟನಾಶಕಗಳ ಬಗ್ಗೆ ಚಿಂತೆ ಮಾಡುವ ಬದಲು ನಾವು ಕಳಕೊಂಡುದನ್ನು ಪುನಃ ಸ್ಥಾಪಿಸಲು ಪ್ರಯತ್ನಿಸಬೇಕು. ದೇಶೀ ತಳಿಗಳನ್ನುಪಯೋಗಿಸಿ, ಸಾವಯುವ ಗೊಬ್ಬರ ಬಳಸಿ ಕೃಷಿ ಮಾಡಿದಾಗ ೭೦ ಭಾಗ ರೋಗ ತಾನಾಗಿ ಇಲ್ಲವಾಗುತ್ತದೆ. ಇನ್ನು ೩೦ಭಾಗ? ರಾಸಾಯನಿಕಗಳಿಂದಲೇ ನಿಯಂತ್ರಣವಾಗಲಿಲ್ಲವಂತೆ. ಚಿಂತೆ ಮಾಡುವ ಪ್ರಮೇಯವೇನೂ ಇಲ್ಲ. ಅದೇ ತಾನೆ ಕೊಟ್ಟು ತಿನ್ನುವ ಸಹಕಾರ ತತ್ವವಾಗಬೇಕು ಎಂದಾದರೆ ಸಾವಯುವ ಕೀಟನಾಶಕಗಳು ಬೇಕಾದಷ್ಟಿವೆ. ಇದು ಮೂರನೇ ಹಂತ. ದನದ ಗಂಜಲ, ಆಲ, ಬೇವು, ಹೊಂಗೆ, ಅರಸಿನ, ಸಾಸಿವೆ, ಎಕ್ಕೆ, ಲಕ್ಕೆ, ವಿಷಪರಾಜಿ, ಪಾರ್ಥೇನಿಯಂ, ಭೂತಾಳೆ....ಹೀಗೆ ಯಾವುದೇ ಸೊಪ್ಪಿನ ಕಷಾಯ ಪರಿಣಾಮಕಾರಿ ಹಾಗೂ ಪರಿಸರ ಪ್ರೇಮಿ ಕೀಟನಾಶಕಗಳಾಗಿವೆ. ಯಾವುದೇ ಗಂಧ, ಸುಗಂಧ ಸಸ್ಯಗಳನ್ನು ನಮ್ಮ ಪರಿಸರದಲ್ಲಿ ಬೆಳೆಸುವುದರಿಂದ ದೇಶ, ಕಾಲಕ್ಕೆ ಹೊಂದುವ ಬೆಳೆ ತೆಗೆಯುವುದರಿಂದ ಕೀಟ ಬಾಧೆ ಬಹಳಷ್ಟು ಕಮ್ಮಿಯಾಗುತ್ತದೆ, ವರ್ಷಪೂರ್ತಿ ಆ್ಯಪಲ್ ತಿನ್ನುವ, ಕೋಸು ತಿನ್ನುವ ಹಂಬಲ ನಮ್ಮದಾದಾಗ, ನಮಗಿರುವ ಚಪಲದ ಒಂದಂಶ ಕೀಟಗಳಿಗೂ ಬಂದರೆ ತಪ್ಪೇ? ಯಾವುದೇ ರೋಗವಿಲ್ಲದೆ ಎಷ್ಟೊಂದು ಹಣ್ಣುಗಳು, ಕಾಯಿಗಳು, ಸೊಪ್ಪುಗಳು, ಗೆಡ್ಡೆಗಳು ಇನ್ನೂ ನಮ್ಮಲ್ಲಿವೆ. ಅವನ್ನು ತಿನ್ನಲು ಕಲಿಯುವುದು ಕೀಟನಾಶ ಮಾಡಿದಷ್ಟು ಖಂಡಿತಾ ಕಷ್ಟದ, ನಷ್ಟದ ಕೆಲಸವಲ್ಲ ಕೀಟ ನಿವಾರಣೆಯಲ್ಲಿ ಇದು ನಾಲ್ಕನೇ ಹಂತ ಏನಂತೀರೀ?

ಮೂರ್ಖನ ಹೃದಯ ಅವನ ನಾಲಿಗೆಯಲ್ಲಿರುತ್ತದೆ. ಜಾಣನ ನಾಲಿಗೆ ಅವನ ಹೃದಯದಲ್ಲಿರುತ್ತದೆ.

—ಕಾರ್ಲೈಸ್

ಪಂಜರ

ಪಿ. ಶಿವಕುಮಾರಿ

ಕುಂತಲನು ಮೊಣಕಾಲಿನ ಮೇಲೆ ಕುಳಿತು ಒಂದು ಪತಂಗವನ್ನು ಹಿಡಿಯುವ ಪ್ರಯತ್ನದಲ್ಲಿದ್ದನು. ಆಗ ಅವನು, ನೀಲಿ ರೆಕ್ಕೆಗಳಲ್ಲಿ ಬಿಳಿಗೆರೆಗಳು ಮಖಮಲ್ಲಿನಂತೆ ಹೊಳೆಯುವ ಪತಂಗವೊಂದನ್ನು ನೋಡಿದನು. ಕುಂತಲನು ಕೂಡಲೇ ಎದ್ದುನಿಂತು ಪತಂಗಕ್ಕೆ ಕಾಣಿಸದಂತೆ ಗೋಡೆಗಾತುಕೊಂಡು ಬೆಕ್ಕಿನಂತೆ ಹೆಜ್ಜೆಯಿರಿಸುತ್ತಾ ಮುನ್ನಡೆದನು. ಪತಂಗದಿಂದ ಸ್ವಲ್ಪ ದೂರದಲ್ಲಿ ಅವನು ರೋಮಾಂಚಿತನಾಗಿ ಒಂದು ಕ್ಷಣ ನಿಂತನು. ಆಮೇಲೆ ತುಂಬು ತನ್ಮಯತೆಯಿಂದ ಪತಂಗದ ಮೇಲೆರಗಿದನು. ಕುಂತಲನಿಗೆ ಪತಂಗದ ಮೃದುವಾದ ಮಖಮಲ್ಲಿನ ರೆಕ್ಕೆಗಳನ್ನು ಸ್ಪರ್ಶಿಸಿದಂತಾಯಿತು. ಆದರೆ ಪತಂಗವು ಪುರ್ರನೆ ಹಾರಿತ್ತು. ಹತಾಶನಾದ ಕುಂತಲನು ಪತಂಗವು ಹಾರುತ್ತಾ ದೂರ ಹೋಗುವುದನ್ನು ನೋಡುತ್ತಾ ನಿಂತನು.

"ನೀರಾ, ನೋಡಿಲ್ಲಿ ಕುಂತಲನು ತನ್ನ ಬಟ್ಟೆಗಳನ್ನು ಹೇಗೆ ಕೊಳೆ ಮಾಡಿರುವನೆಂದು." ತಂದೆ ಯಾವಾಗ ಬಂದು ವ್ಹರಾಂಡದಲ್ಲಿ ನಿಂತಿರುವರೆಂದು ಕುಂತಲನಿಗೆ ತಿಳಿಯಲಿಲ್ಲ. ಅವನು ತಂದೆಯ ಸಿಟ್ಟಿನ ಧ್ವನಿಯನ್ನು ಕೇಳಿ ತನ್ನ ಬಟ್ಟೆಯ ಕಡೆಗೆ ನೋಡಿಕೊಳ್ಳುತ್ತಾನೆ. ಆದರೆ ಅವನ ಬಟ್ಟೆಯು ಮೊದಲಿನಂತೆಯೇ ಶುಭ್ರವಾಗಿತ್ತು. ಅವನು ಆಶ್ಚರ್ಯದಿಂದ ತಂದೆಯ ಕಡೆಗೆ ನೋಡಿದನು. ಆದರೆ ಯಾವ ಮಾತನ್ನೂ ಆಡಲಿಲ್ಲ.

"ಏನಾಯ್ತೀಗ?" ಅಮ್ಮನೂ ಹೊರಗೆ ಬಂದಳು.

ಪತಂಗವನ್ನು ಹಿಡಿಯಲು ಕುಂತಲನು ಗೋಡೆಗಾತುಕೊಂಡು ಹೋಗಿದ್ದನು. ಇದರಿಂದಾಗಿ ಅವನ ಕೆಂಪು ಬಣ್ಣದ ಟೀ ಶರ್ಟ್ ಗೋಡೆಯ ಸುಣ್ಣದ ಬಿಳಿ ಬಣ್ಣ ಪಡೆದಿತ್ತು.

"ಛೆ! ನಿನಗೆ ಯಾವಾಗ ತಿಳುವಳಿಕೆ ಬರುವುದೋ! ಇಂದು ನಿನಗೆ ಪರೀಕ್ಷೆ ಇದೆ. ನೀನಿಲ್ಲಿ ತುಂಟತನ ಮಾಡುತ್ತಾ ಇದ್ದೀಯೆ." ತಾಯಿಯು ಕುಂತಲನನ್ನು ನೋಡಿ ಸಿಟ್ಟುಗೊಳ್ಳುವಳು. ಅವಳು ಅವನ ಟೀಶರ್ಟ್‌ನಲ್ಲಿರುವ ಸುಣ್ಣವನ್ನು ಝಾಡಿಸುವಳು. ಸುಣ್ಣ ಹೋದರೂ ಬಿಳಿ ಕಲೆಗಳು ಹಾಗೇ ಉಳಿದುಕೊಳ್ಳುವವು.

'ಧರ್ಮಯುಗ'—ಡಿಸೆಂಬರ್ (೧೬–೩೧) ಹಿಂದಿ ಪಾಕ್ಷಿಕದಲ್ಲಿ ಪ್ರಕಟವಾದ ಶ್ರೀ ಜಿತೇನ್ ಠಾಕೂರ್ ಅವರ ಕಥೆಯ ಅನುವಾದ.

"ಅವನ ಅಂಗಿಯನ್ನೇ ಬದಲಾಯಿಸು" ತಂದೆಯು ಸಿಟ್ಟಿನಿಂದ ಹೇಳಿದಾಗ, ತಾಯಿಯು ಗಡಬಡಿಸಿ ಒಳಗೋಡಿ ಬೇರೆ ಬೇರೆ ಅಂಗಿಯನ್ನು ತರುವಳು.

ಕುಂತಲನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಡುತ್ತಾ ಮೌನವಾಗಿ ನಿಲ್ಲುವನು.

ಕುಂತಲನ ತಂದೆಯು ಸಮಯದ ಸದುಪಯೋಗವಾಗಬೇಕೆಂದು ಬಯಸು ವವರು. ಅಂತೆಯೇ ತಾಯಿಯು ಅಂಗಿ ತೊಡಿಸುವಾಗ ಕುಂತಲನನ್ನು ಕೇಳುವರು— "ಈಗ ಹೇಳು ವಿಚ್ ಈಸ್ ದ ಲೆಫ್ಟ್ ಫೂಟ್ ?" (ಎಡ ಕಾಲು ಯಾವುದು ?)

ಕುಂತಲನು ತನ್ನ ಎಡಗಾಲನ್ನು ಮುಂದಿಡುವನು.

"ವೆರಿ ಗುಡ್." ತಂದೆಯು ಪ್ರೀತಿಯಿಂದ ಅವನ ಗಲ್ಲ ಸವರುವರು.

"ಒಳ್ಳೆಯದು, ಈ ಲೆಫ್ಟ್ ಹೇಂಡ್ (ಎಡ ಕೈ) ಹೇಳು."

ಕುಂತಲನು ಏನು ಯೋಚಿಸಿದನೋ, ತನ್ನ ಬಲಗೈಯನ್ನು ಮುಂದೆ ತರುವನು. ತಂದೆಯು ಕ್ರೋಧದಿಂದ ಮಗನಿಗೆ ಏಟು ಕೊಡಲು ಮುಂದಾಗುವರು. ಆದರೆ ಸಿಟ್ಟನ್ನು ಅಡಗಿಸಿಕೊಂಡರು. ಯಾಕೆಂದರೆ ಹೊಡೆದು ಅವನು ಅಳಲು ಪ್ರಾರಂಭಿಸಿದರೆ ಇಂದಿನ ಟೆಸ್ಟ್ ಕೊಡಲು ಕಷ್ಟವಾಗಬಹು ದೆಂದು. ಅಂತೆಯೇ ಸಮಾಧಾನವಾಗಿ ಅವನಿಗೆ ತಿಳಿಸಿ ಹೇಳುವರು—ಲೆಫ್ಟ್‌ಫೂಟ್ (ಎಡಗಾಲು)ನ ಮೇಲೆ ಇರುವುದೇ ಲೆಫ್ಟ್ ಹೇಂಡ್ (ಎಡ ಕೈ).

ಇದೊಂದು ಶಾಂತವಾದ ಮನೆ. ಆದರೆ ಕಳೆದ ಕೆಲವು ದಿನಗಳಿಂದ ಆ ಮನೆಯಲ್ಲಿ ಅಶಾಂತತೆ ಮನೆ ಮಾಡಿತ್ತು. ಇದಕ್ಕೆ ಕಾರಣ ಕುಂತಲನಿಗೆ ನಿಶ್ಚಿತವಾಗಿ ದಾಖ ಲಾತಿ ಯಾವ ಶಾಲೆಯಲ್ಲೂ ದೊರಕಿರಲಿಲ್ಲ. ದೊಡ್ಡ ಶಾಲೆಗಳೆಂದು ಕರೆಯಲ್ಪಡುವ ಮೂರು ಶಾಲೆಗಳಲ್ಲಿ ಅವನ ಇಂಟರ್‌ವ್ಯೂ (ಸಂದರ್ಶನ) ನಡೆದಿತ್ತು. ಆದರೆ ಪ್ರವೇಶ ಸಿಕ್ಕಿರಲಿಲ್ಲ. ಪಟ್ಟಣದ ಒಳ್ಳೆಯ ಶಾಲೆಗಳಲ್ಲಿ ಇದೊಂದು ಸ್ಕೂಲ್ ಬಾಕಿ ಇತ್ತು. ಆದುದ ರಿಂದ ಅವನ ತಂದೆ ಯಾವುದೇ ಕಾರಣಕ್ಕೂ ಈ ಸ್ಕೂಲನ್ನು ಬಿಡಲು ತಯಾರಿಲ್ಲ. ಇದ ಕ್ಕಾಗಿ ತನ್ನ ಎಲ್ಲಾ ಅನುಭವಗಳ ಲಾಭ ಪಡೆಯಲು ಯೋಚಿಸುತ್ತಿದ್ದರು ಮತ್ತು ಹಿಂದಿನ ಶಾಲೆಗಳಲ್ಲಿ ಕುಂತಲನಿಗೆ ಯಾವ ಯಾವ ಪ್ರಶ್ನೆಗಳನ್ನು ಕೇಳಿದ್ದರೋ ಅದನ್ನೆಲ್ಲ ಹಲವು ಬಾರಿ ಹೇಳಿಸಿದ್ದರು.

ಕುಂತಲನನ್ನು ಕೆ. ಜಿ. ಕ್ಲಾಸಿಗೆ ಸೇರಿಸು ವರಿದ್ದರು. ಇದಕ್ಕಾಗಿ ಯಾವುದೇ ನಿಶ್ಚಿತ ಪಠ್ಯ ಪುಸ್ತಕಗಳಿಲ್ಲ. ನಿಶ್ಚಿತ ಪಠ್ಯ ಪುಸ್ತಕ ವಿಲ್ಲದುದರಿಂದ ಪ್ರಶ್ನೆಯ ಕ್ಷೇತ್ರವು ಅತ್ಯಧಿಕ ವಾಗಿತ್ತು. ತಂದೆ-ತಾಯಿ ಹಗಲೂ ರಾತ್ರಿ ಪರಿಶ್ರಮದಿಂದ "ವಾಟೀಸ್ ಯುವರ್ ನೇಮ್ ?" (ನಿನ್ನ ಹೆಸರೇನು ?) ಮತ್ತು "ವಾಟೀಸ್ ಯುವರ್ ಫಾದಸ್ ನೇಮ್ ?" (ನಿನ್ನ ತಂದೆಯ ಹೆಸರೇನು ?) ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಬಾಯಿಪಾಠ ಮಾಡಿಸಿದ್ದರು. ಆದರೆ ಸ್ಕೂಲಲ್ಲಿ ಲೆಫ್ಟ್ ಹೇಂಡ್ (ಎಡ ಕೈ), ರೈಟ್ ಫೂಟ್ (ಬಲ ಕಾಲು) ಕೇಳಿದ್ದರು. ಮುಂದಿನ ಸ್ಕೂಲಿನ ತಯಾರಿಗೆ ಕುಂತಲ ನಿಗೆ ಇಂಗ್ಲೀಷಿನ ಎಡ-ಬಲ, ಕಾಲು-ಕೈ ಬಾಯಿಪಾಠ ಮಾಡಿಸಿದ್ದರು. ಆದರೆ ಈ ಸಲ ಸೀತಾಫಲದ ರೇಖಾಚಿತ್ರಕ್ಕೆ ಬಣ್ಣ ತುಂಬಲು ಹೇಳಿದ್ದರು. ಕುಂತಲನು ಸೀತಾ

ಫಲವನ್ನು ನೋಡಿಯೇ ಇರಲಿಲ್ಲ. ಬಣ್ಣವನ್ನು ಹೇಗೆ ತುಂಬಬಲ್ಲನು? ಅವನು ದ್ರಾಕ್ಷಿಗೊಂಚಲೆಂದು ತಿಳಿದು ಬಣ್ಣ ತುಂಬಿದ್ದನು.

ಹಿಂತಿರುಗುವಾಗ ಅವನ ತಂದೆಯು ಸೀತಾಫಲವನ್ನೇನೂ ಖರೀದಿಸಲಿಲ್ಲ, ಬದಲಾಗಿ ಹಣ್ಣುಗಳ ಚಾರ್ಟ್‌ನ್ನು ಖರೀದಿಸಿ ಕುಂತಲನಿಗೆ ಹೊಸ ಪಠ್ಯಕ್ರಮ ಪ್ರಾರಂಭಿಸಿದರು.

ಮೂರನೆಯ ಸ್ಕೂಲಿನಲ್ಲಿ ಕುಂತಲನ ಪರಿಶ್ರಮವು ಪುನಃ ನಿಷ್ಪ್ರಯೋಜಕವಾಯಿತು. ಪ್ರಿನ್ಸಿಪಲ್ ತನ್ನ ಎದುರು ಒಂದು ಸುಂದರ ಬಣ್ಣ ಬಣ್ಣದ ಪುಸ್ತಕವನ್ನಿಟ್ಟುಕೊಂಡು ಅದರಲ್ಲಿ ಟೈಗರ್ (ಹುಲಿ) ಮತ್ತು ಪೈಂಥರ್ (ಹೆಬ್ಬಾವು)ನ ಚಿತ್ರವನ್ನು ತೋರಿಸಿ ಹೆಸರಿಸಲು ಹೇಳಿದರು. ಕುಂತಲನಿಗೆ ಒಂದೇ ಒಂದು ಹೆಸರು ತಿಳಿದಿತ್ತು—'ಲಯನ್' (ಸಿಂಹ). ಆದರೆ ಸಿಂಹ ಅಲ್ಲಿ ಇರಲೇ ಇಲ್ಲ.

ಹಿಂತಿರುಗುವಾಗ ತಂದೆಯು ಕಾಡು ಪ್ರಾಣಿಗಳ ಮತ್ತು ಪಕ್ಷಿಗಳ ಚಾರ್ಟನ್ನು ಖರೀದಿಸಿ ತಂದರು ಮತ್ತು ಕುಂತಲನ ಆಟಗಳಿಗೆ ಕಡಿವಾಣ ಬಿತ್ತು.

ಪ್ರಿನ್ಸಿಪಲ್‌ಗೆ ಯಾವ ವಿಷಯದಲ್ಲಿ ಆಸಕ್ತಿ ಇದೆಯೋ ಅದೇ ವಿಷಯದಲ್ಲಿ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳುವರೆಂದು ಕುಂತಲನ ತಂದೆ ಸಾಕಷ್ಟು ಪರಿಶ್ರಮದ ನಂತರ ತಿಳಿದುಕೊಂಡರು. ಮೊದಲನೆಯ ಪ್ರಿನ್ಸಿಪಲ್ ಸೇನೆಯ ನಿವೃತ್ತ ಅಧಿಕಾರಿಯಾಗಿದ್ದರಿಂದ, ಲೆಫ್ಟ್-ರೈಟ್ (ಎಡ-ಬಲ) ಬಗ್ಗೆ ಪ್ರಶ್ನೆಗಳು. ಎರಡನೇ ಸ್ಕೂಲಿನ ಹೆಡ್‌ಮಾಸ್ಟರ್ ಮಧ್ಯಾಹ್ನದ ಊಟಕ್ಕೆ ಬದಲಾಗಿ ಹಣ್ಣುಗಳನ್ನು ತಿನ್ನುತ್ತಿದ್ದರು. ಬಹುಷಃ ಸೀತಾಫಲ ಅವರಿಗೆ ಪ್ರಿಯವಾದ ಹಣ್ಣಾಗಿದ್ದಿರಬಹುದು. ಮೂರನೇ ಪ್ರಿನ್ಸಿಪಲ್ ಕಾಡುಪ್ರಾಣಿಗಳಲ್ಲಿ ಆಸಕ್ತಿ ಇರುವವರು. ಈಗ ನಾಲ್ಕನೇ ಸ್ಕೂಲಿನ ಪ್ರಿನ್ಸಿಪಲ್ ಬಗ್ಗೆಯೂ ಸಾಕಷ್ಟು ತಿಳಿದುಕೊಂಡಿದ್ದರು. ಅದಕ್ಕನುಸಾರವಾಗಿ ಕುಂತಲನಿಗೆ ಶಿಕ್ಷಣವನ್ನು ಕೊಟ್ಟಿದ್ದರು. ಆದರೆ ಇಂದಿನ ಅನುಭವಗಳನ್ನು ಅವರು ಮರೆಯಲು ಸಾಧ್ಯವಿಲ್ಲ.

ಆದರೆ ಕುಂತಲನಿಗೇನು? ಮನಸ್ಸಿಲ್ಲವೆಂದಾದರೆ ಸರಿಯಾಗಿ ತಿಳಿದುದನ್ನು ತಪ್ಪಾಗಿ ಹೇಳಬಹುದು. ಅಂತೆಯೇ ಅಂಗಿ ಬದಲಿಸಿ ಕರೆದೊಯ್ಯುವಾಗ ತಂದೆ ಅವನಿಗೆ ಆಸೆ ತೋರಿಸುವರು—

"ಮಗೂ; ಇಂದು ನೀನು ಕೇಳಿದ ಪ್ರಶ್ನೆಗಳಿಗೆಲ್ಲಾ ಸರಿಯಾಗಿ ಉತ್ತರಿಸಬೇಕು. ಆಮೇಲೆ ನಿನಗೆ ಚಾಕೊಲೇಟ್ ಕೊಡಿಸುವೆನು."

"ಚಾಕೊಲೇಟ್ ಅಲ್ಲ 'ಐಸ್ ಕ್ರೀಂ' ಅಪ್ಪ." ಕುಂತಲನು ಉತ್ಸಾಹಿತನಾಗುವನು.

"ಓ.ಕೆ. (O.K.) ಮಗೂ, 'ಐಸ್ ಕ್ರೀಮನ್ನೇ ಕೊಡಿಸುವೆನು. ಆದರೆ, ಎಲ್ಲಿ ಒಂದು ಸಲ ಹೇಳು ನೋಡೋಣ........" ನಡೆಯುತ್ತಾ ನಡೆಯುತ್ತಾ ಪುನಃ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸಿದರು.

ಒಂದನೆಯ ಸ್ಕೂಲಿನಿಂದ ನಾಲ್ಕನೆಯ ಸ್ಕೂಲಿನವರೆಗೆ ಪ್ರವೇಶ ಪರೀಕ್ಷೆಯನ್ನು ಎದುರಿಸುತ್ತಾ ಎದುರಿಸುತ್ತಾ ಕುಂತಲನಿಗೆ ಶಾಲೆಗೆ ಹೋಗುವ ಉತ್ಸಾಹವು ಬತ್ತುತ್ತಾ ಇತ್ತು. ಅವನ ಸುಪ್ತ ಮನಸ್ಸು ದೊಡ್ಡ

ಸ್ಕೂಲಿನಲ್ಲಿ ಪ್ರವೇಶ ಸಿಗದಿರಲಿ ಎಂದು ಆಶಿಸುತ್ತಿತ್ತು. ಮೊದಲು ಅವನು ತನ್ನ ಸೋದರಿಯ ಪುಸ್ತಕಗಳಲ್ಲಿನ ಸುಂದರ ಚಿತ್ರಗಳನ್ನು ನೋಡುತ್ತಿದ್ದನು ಮತ್ತು ಬೆದರಿಕೆ ಹಾಕಿದರೂ ಅವುಗಳನ್ನು ಮುಟ್ಟುವ ಆಸೆಯಿಂದ ಹಿಂಜರಿಯುತ್ತಿರಲಿಲ್ಲ. ತನ್ನ ಅಕ್ಕನು ಸ್ಕೂಲಿಗೆ ಹೊರಡುವಾಗ ತಾನೂ ಹೋಗುವೆನೆಂದು ಹಠ ಮಾಡುತ್ತಿದ್ದನು. ಮನೆಯಲ್ಲಿರುವ ಪುಸ್ತಕ, ಪತ್ರಿಕೆಗಳನ್ನೆಲ್ಲಾ ಒಂದು ಚೀಲದಲ್ಲಿ ತುಂಬಿ ಶಾಲೆಗೆ ಹೋಗುವ ನಾಟಕವಾಡುತ್ತಿದ್ದನು. ಅಲ್ಲೇ ಹತ್ತಿರದ ಒಂದು 'ನರ್ಸರಿ' ಸ್ಕೂಲಿಗೆ ಹೋಗುತ್ತಿದ್ದುದರಿಂದ ಸ್ಕೂಲ್ ಮತ್ತು ಟೀಚರ್ ಎಂದರೇನೆಂದು ತಿಳಿದಿದ್ದ ಮತ್ತು ಅವರ ಅನುಕರಣೆ ಮಾಡುತ್ತಿದ್ದ. ತನ್ನ ಸ್ಕೂಲ್ ಬ್ಯಾಗ್ ಕೂಡಾ ಅಕ್ಕನ ಬ್ಯಾಗ್‌ನಷ್ಟೇ ದೊಡ್ಡದಿರಬೇಕು, ಮತ್ತು ಅವಳ ಪುಸ್ತಕದಂತೆ ರಂಗು ರಂಗಿನ ಪುಸ್ತಕ ತನಗೂ ಬೇಕು, ಮತ್ತು ತಾನೂ ಬ್ಯಾಗ್ ಹೊತ್ತುಕೊಂಡು ಎಲ್ಲಾ ಮಕ್ಕಳೊಂದಿಗೆ ತುಂಬಿದ ಬಸ್ಸಿನಲ್ಲಿ ಓಡಾಡಬೇಕು ಎಂದೆಲ್ಲಾ ಕುಂತಲನು ಆಲೋಚಿಸುತ್ತಿದ್ದ. ಆದರೆ ಅವನ ಎಲ್ಲಾ ಸ್ವಾತಂತ್ರ್ಯಕ್ಕೂ ಕಡಿವಾಣ ಹಾಕಲಾಗಿತ್ತು. ಆದುದರಿಂದ ಬಣ್ಣದ ಚಿತ್ರಗಳ ಪುಸ್ತಕ, ಬಣ್ಣ ಬಣ್ಣದ ಪಕ್ಷಿಗಳು ಪ್ರಾಣಿಗಳು ಯಾವುವೂ ಅವನನ್ನು ಆಕರ್ಷಿಸುತ್ತಿರಲಿಲ್ಲ. ಅವನು ಎಲ್ಲಾ ಕಡೆಯೂ ಓಡಾಡಬೇಕು, ಕೇರಿಯ ಮಕ್ಕಳೊಂದಿಗೆ ಮರಳಿನಲ್ಲಿ ಆಟವಾಡಬೇಕು, ಮಣ್ಣಲ್ಲಿ ಹೊರಳಾಡಬೇಕು, ಎಲೆಗಳ ಮೇಲೆ ಇರುವೆಗಳನ್ನು ಕುಳ್ಳಿರಿಸಿ ಮಳೆಯ ನೀರಿನಲ್ಲಿ ತೇಲಿಬಿಡಬೇಕು ಎಂದೆಲ್ಲಾ ಇಚ್ಛಿಸುತ್ತಿದ್ದ. ಆದರೆ ಅವನಿಗೆ ಇದಕ್ಕೆಲ್ಲಾ ಬಿಡುವೇ ಇರುತ್ತಿರಲಿಲ್ಲ. ಸದಾ ಓದು....ಓದು... ಓದು; ಇದರಿಂದಾಗಿ ಅವನ ಮನಸ್ಸು ಸದಾ ಅತೃಪ್ತಿಯಲ್ಲಿ ತೇಲಾಡುತ್ತಿತ್ತು. ಈ ಅತೃಪ್ತಿಯನ್ನು ದೂರ ಮಾಡಲು ಅವನು ಕೇಳುವನು—

"ಅಪ್ಪ, ನಾವು ಯಾವ ಸ್ಕೂಲಿಗೆ ಹೋಗುತ್ತಿರುವುದು?" ಈ ಪ್ರಶ್ನೆ ಕೇಳುತ್ತಿದ್ದಂತೆ ಕುಂತಲನ ಮುಗ್ಧ ಮನಸ್ಸಿನಲ್ಲಿ ದೊಡ್ಡ ಸ್ಕೂಲಿನ ದೊಡ್ಡ ಗ್ರೌಂಡಿನ ಚಿತ್ರಣ ಮೂಡುವುದು.

ಸ್ಕೂಲ್ ಪರಿಸರಕ್ಕೆ ಬಂದಾಗ ಕುಂತಲನನ್ನು ಅತ್ಯಧಿಕವಾಗಿ ಆಕರ್ಷಿಸಿದ ವಸ್ತುವೆಂದರೆ ಒಂದು ಉಯ್ಯಾಲೆಗ್ರೌಂಡ್. ಅವನಂತಹ ಎಷ್ಟೋ ಮಕ್ಕಳಿಂದ ತುಂಬಿದ್ದರೂ ಕೂಡಾ ಆ ಸಮಯದಲ್ಲಿ ಉಯ್ಯಾಲೆ ಖಾಲಿಯಾಗಿತ್ತು.

"ಅಪ್ಪಾ ನಾವು ಉಯ್ಯಾಲೆ ಆಡೋಣ." ಕುಂತಲ ಬಂದ ಕಾರ್ಯವನ್ನೇ ಮರೆತು ಹೇಳುವನು.

"ಈಗಲ್ಲ ಟೆಸ್ಟ್‌ನ ನಂತರ."

"ಅಪ್ಪಾ, ಪ್ಲೀಸ್," ಕುಂತಲನು ಪ್ರಾರ್ಥಿಸುವನು.

"ಸುಮ್ಮನಿರು" ಅವನ ತಂದೆ ಸಿಟ್ಟಿನಿಂದ ಹೇಳುವರು. ಯಾಕೆಂದರೆ ಅವರು ಆಗ ಟೆಸ್ಟ್‌ನ ಮೊದಲು ಇನ್ನೊಮ್ಮೆ ಕುಂತಲನಿಂದ ಎಲ್ಲ ಪ್ರಶ್ನೆಗಳಿಗೆ ಉತ್ತರ ಹೇಳಿಸಬೇಕೆಂದು ಆಲೋಚಿಸುತ್ತಿದ್ದರು. ಆದರೆ ಕುಂತಲನನ್ನು ನರ್ವಸ್ ಮಾಡಲು ಇಚ್ಛಿಸಲಿಲ್ಲ, ಆದರಿಂದಾಗಿ ಪುನಃ ಅವನನ್ನು ಪ್ರೋತ್ಸಾಹಿಸುತ್ತಾ ಹೇಳುವರು—

"ಮಗೂ! ಟೆಸ್ಟ್‌ನ ನಂತರ ಉಯ್ಯಾಲೆಯಾಡೋಣ. ಒಳ್ಳೆಯದು, ಈಗ ಎಲ್ಲಿ ಹೇಳು ನೋಡೋಣ...."

ಅದೇ ಸಮಯಕ್ಕೆ ಬಣ್ಣ ಬಣ್ಣದ ಪತಂಗವೊಂದು ಕುಂತಲನ ಹತ್ತಿರದಿಂದ ಹಾರುತ್ತಾ ಹೋಗುವುದು. ಈ ಸ್ಕೂಲಿನ ಪ್ರಿನ್ಸಿಪಲ್ ಆಟಗಳನ್ನು ಬಹಳಷ್ಟು ಇಷ್ಟಪಡುವರೆಂದು ಕುಂತಲನ ತಂದೆ ತಿಳಿದಿದ್ದರು. ಅವಕ್ಕಾಗಿ ಕಪಿಲ್‌ವೇವ್ ಮತ್ತು ಪಿ. ಟಿ. ಉಷಾರ ಚಿತ್ರಗಳನ್ನು ತೋರಿಸಿ ತೋರಿಸಿ ಕುಂತಲನಿಗೆ ಸಾಕಷ್ಟು ತಿಳುವಳಿಕೆ ನೀಡಿದ್ದರು. ಆದರೆ ಕೆಲವೊಮ್ಮೆ ಪಿ. ಟಿ. ಉಷಾಳ ಹೆಸರನ್ನು ಮರೆತು ಬಿಡುತ್ತಿದ್ದ. ಆದರೆ ಇಲ್ಲಿ ಚಿತ್ರಗಳಿರಲಿಲ್ಲ. ಅವರ ಬದಲಾಗಿ ಚಿತ್ರಗಳ ವಿವರಣೆಯಿಂದ ಕುಂತಲನಿಗೆ ಎಲ್ಲವನ್ನೂ ನೆನಪಿಸುತ್ತಿದ್ದರು.

"ನೀನು ಚಿತ್ರದಲ್ಲಿ ನೋಡಿರುವೆಯಲ್ಲಾ ಸ್ವಲ್ಪ ಕಪ್ಪು ಹುಡುಗಿ. ಬಹಳ ವೇಗವಾಗಿ ಓಡುವ ಹುಡುಗಿಯ ಹೆಸರೇನು?"

ಕುಂತಲ ಕಳ್ಳನೋಟದಿಂದ ಪತಂಗವು ಎಲ್ಲಿ ಕುಳಿತುಕೊಳ್ಳುವುದೆಂದು ನೋಡುತ್ತಿದ್ದ. ಅವನು ಹೂವಿನ ಮೇಲೆ ಕುಳಿತ ಪತಂಗವನ್ನು ಹಿಡಿಯುವುದರಲ್ಲಿ ನಿಸ್ಸೀಮನಾಗಿದ್ದ. ತಂದೆಯು ಕುಂತಲನ ಅನ್ಯಮನಸ್ಕತೆಯನ್ನು ಗಮನಿಸಿ ಅವನ ಮುಖವನ್ನು ತನ್ನೆಡೆಗೆ ತಿರುಗಿಸಿ—

"ಹೇಳು ಮಗೂ? ಯಾರ ಫೋಟೋ ಅದು. ವೇಗವಾಗಿ ಓಡುವ—ಕಪ್ಪು ಹುಡುಗಿ."

"ಕಪಿಲ್‌ದೇವ್...." ಕುಂತಲನು ಜೋರಾಗಿ ಅರಚಿ ಜಿಂಕೆಯಂತೆ ಹಾರುತ್ತಾ ಪತಂಗದ ಕಡೆಗೆ ಓಡುವನು. ಅವನ ಕಣ್ಣಿಗೆ ಆ ಗ್ರೌಂಡ್‌ನಲ್ಲಿರುವ ಎಲ್ಲಾ ಹುಡುಗರೂ ಓಡುತ್ತಿರುವಂತೆ ಅನಿಸಿತು. ಅವನು ಇನ್ನೂ ಜೋರಾಗಿ ಓಡಲು ಪ್ರಾರಂಭಿಸಿದನು. ಆದರೆ ಆಗಲೇ ಅವನು ಹಿಡಿಯಲ್ಪಟ್ಟನು. ಅವನು ನೋಡುತ್ತಾನೆ–ಗ್ರೌಂಡಿನ ಎಲ್ಲಾ ಹುಡುಗರೂ ಹಿಡಿಯಲ್ಪಟ್ಟಿದ್ದರು, ಮತ್ತು ಅವರೆಲ್ಲರನ್ನೂ ಒಂದು ಕೋಣೆಯ ಕಡೆಗೆ ಕರೆದೊಯ್ಯಲಾಗುತ್ತಿತ್ತು.

ಕುಂತಲನು ನಡೆಯುತ್ತಾ ನಡೆಯುತ್ತಾ ಹಿಂತಿರುಗಿ ನೋಡುತ್ತಾನೆ. ಪತಂಗವು ಮಕ್ಕಳ ಹಿಂದೆ ಹಿಂದೆ ಹಾರುತ್ತಿತ್ತು, ಬೆರಗಾಗಿ–ಕಷ್ಟದಿಂದ.

ಅಭ್ಯಾಸಬಲದಿಂದ ನಾವು ಏನನ್ನೂ ಸಾಧಿಸಬಹುದು. ಅಭ್ಯಾಸದಿಂದ ವಿಷವನ್ನು ಅಮೃತದಂತೆ ಕುಡಿಯಬಹುದು. ಅಪ್ರಿಯ ವಸ್ತುಗಳನ್ನು ಪ್ರಿಯದಾಗಿ ಕಾಣಬಹುದು.

—ಈಸೋಪ

ಬೆಡಗಿನ ಮಹಾರಾಣಿ ಕ್ಲಿಯೋಪಾತ್ರ

ಡಾ|| ಲಕ್ಷ್ಮೀನಾರಾಯಣ ಅರೋರಾ

ಕ್ಲಿಯೋಪಾತ್ರ !!!

ವಿಶ್ವಾದ್ಯಂತ ಸೌಂದರ್ಯೋಪಾಸಕರ ಮನಸ್ಸಿನಲ್ಲಿ ಮೃದುವಾದ ಮತ್ತು ಮೋಹಕವಾದ ಅಲೆಗಳನ್ನೆಬ್ಬಿಸುವ ಅದ್ಭುತವಾದ ಹೆಸರು. ಸೊಬಗಿನ ರಮಣಿಯ ಮೋಹಜಾಲದ ಬಗ್ಗೆ ಮಧುರವಾದ ಭಾವನೆಗಳನ್ನು ಉಕ್ಕಿಸುವ, ಕುಶಾಗ್ರಮತಿ ಹೆಣ್ಣಿನ ಮಹಾಚಾತುರ್ಯದ ಬಲೆಯಲ್ಲಿ ಸಿಲುಕಿಸಿ ಅಪಾಯಕ್ಕೆಡೆಮಾಡುವ, ನಿಶಿತ ರಾಜಕಾರಣಿ ಮಹಿಳೆಯ ವಿಲಕ್ಷಣ ಮುತ್ಸದ್ದಿತನವನ್ನು ಕಂಡು ಬೆರಗಾಗುವಂತೆ ಮಾಡುವ ಮೋಡಿಯ ಹೆಸರು—ಕ್ರಿಯೋಪಾತ್ರ !

ಈಜಿಪ್ಟಿನ ಮಹಾರಾಣಿ ಕ್ಲಿಯೋಪಾತ್ರ ವಿಶ್ವದ ಅತ್ಯಂತ ಸೊಗಸುಗಾತಿಯರಲ್ಲಿ ಒಬ್ಬಳೆಂಬುದು ಜನಜನಿತವಾದ ಸಂಗತಿ. ಸಾವಿರಾರು ಹಡಗುಗಳಲ್ಲಿ ದಂಡೆತ್ತಿಹೋಗಿ ಟ್ರಾಯ್‌ಮಹಾನಗರದ ತುದಿಗಾಣದ ಸೌಧಗಳು ಧೂಳೀಪಟವಾಗುವುದಕ್ಕೆ ಮೂಲ ಕಾರಣಳಾದ ಅಪೂರ್ವ ಲಾವಣ್ಯ ರಾಶಿ ಹೆಲನ್ ವಾಸ್ತವವಾಗಿ ಇದ್ದಳೋ ಇಲ್ಲವೊ ತಿಳಿಯದು. ಆದರೆ ಹೋಮರನ ಹೆಲನಳ ಹುಚ್ಚೆಬ್ಬಿಸುವ ಸೌಂದರ್ಯದ ಎಲ್ಲ ಪ್ರಶಂಸೆಗಳನ್ನೂ ತನ್ನಲ್ಲಿ ಮೈಗೂಡಿಸಿಕೊಂಡಿದ್ದ ಕ್ಲಿಯೋಪಾತ್ರ (ಕ್ರಿ.ಪೂ. ೬೯–೩೦) ಒಬ್ಬ ಐತಿಹಾಸಿಕ ವ್ಯಕ್ತಿ. ಜೂಲಿಯಸ್ ಸೀಸರ್, ಮಾರ್ಕ್ ಆಂಟೋನಿ ಇಂಥ ನಿಸ್ಸೀಮ ವೀರರನ್ನು ತನ್ನ ಮೋಹ ಜಾಲದಲ್ಲಿ ಸಿಲುಕಿಸಿಕೊಂಡು ಈಜಿಪ್ಟ್ ಮತ್ತು ರೋಮ್ ಸಾಮ್ರಾಜ್ಯಗಳ ಮೇಲೆ ತನ್ನ ಪ್ರಭೆಯನ್ನು ಮೆರೆದ ಮಹಾ ಚಾಣಾಕ್ಷೆ ಆಕೆ.

ಕ್ಲಿಯೋಪಾತ್ರಳ ಬದುಕಿನ ಪುಟಗಳು ರೋಮಾಂಚಕಾರಿಯಾಗಿವೆ. ಸೌಂದರ್ಯ, ಮೇಧಾವಿತನ ಮತ್ತು ಪಾಂಡಿತ್ಯಗಳ ಅಪೂರ್ವಸಂಗಮವನ್ನು ನಾವು ಆಕೆಯಲ್ಲಿ ಕಾಣುತ್ತೇವೆ. ಮಹತ್ವಾಕಾಂಕ್ಷಿಯಾದ ಹೆಣ್ಣೊಬ್ಬಳು ತನ್ನ ಚಾತುರ್ಯ ಚಾಣಾಕ್ಷತನಗಳನ್ನು ಬಳಸಿಕೊಂಡು ಕಾರ್ಯಸಾಧನೆಯನ್ನು ಮಾಡಿಕೊಳ್ಳುವ ಪರಿ ಯಾರನ್ನೇ ಆಗಲಿ ದಿಙ್ಮೂಢವಾಗಿಸುತ್ತದೆ.

* * *

ಈಜಿಪ್ಟಿನ ಅಲೆಕ್ಸಾಂಡ್ರಿಯಾ ನಗರದಲ್ಲಿ ಫ್ಯಾರೋ ದೊರೆಗಳ ಅರಮನೆ. ರೋಮನರ ಮಹಾದಂಡನಾಯಕ ಜೂಲಿಯಸ್ ಸೀಸರ್ ತನ್ನ ದಳಪತಿಗಳೊಡನೆ ಗಂಭೀರವಾದ ಚರ್ಚೆಯಲ್ಲಿ ಮಗ್ನನಾಗಿದ್ದಾನೆ. ಅವನ ಮುಂದಿರುವ ಸಮಸ್ಯೆ ಎಂದರೆ—ಈಜಿಪ್ಟಿನ ಇಪ್ಪತ್ತೊಂದು ವರ್ಷಗಳ ರಾಜಕುಮಾರಿ

ಕ್ಲಿಯೋಪಾತ್ರ ಹಾಗೂ ಹದಿಮೂರು ವರ್ಷದ ಆಕೆಯ ತಮ್ಮ ಹದಿನಾಲ್ಕನೇ ಟಾಲೆಮಿ ಇಬ್ಬರ ನಡುವೆ ಸಿಂಹಾಸನಕ್ಕಾಗಿ ಪೈಪೋಟಿ ನಡೆದಿದೆ. ಕ್ಲಿಯೋಪಾತ್ರಳಿಗೆ ಹದಿನೇಳು ವರ್ಷ ವಯಸ್ಸಾಗಿದ್ದಾಗಲೇ ಆಕೆ ತಮ್ಮ ಟಾಲೆಮಿಯ ಜೊತೆಗೂಡಿ ರಾಜ್ಯದ ಆಡಳಿತ ನೋಡಿಕೊಳ್ಳಲಾರಂಭಿಸಿದಳು. ಆದರೆ ಕೆಲವೇ ವರ್ಷಗಳಲ್ಲಿ ತಲೆದೋರಿದ ಭಿನ್ನಾಭಿಪ್ರಾಯ ಅವರಿಬ್ಬರ ನಡುವೆ ಅಂತಃಕಲಹವನ್ನು ಉಂಟುಮಾಡಿತು ನಾಡಿನಿಂದ ಹೊರನೂಡಲ್ಪಟ್ಟ ಕ್ಲಿಯೋಪಾತ್ರ ಸಿರಿಯಾಕ್ಕೆ ಹೋಗಿ ಸೈನ್ಯವನ್ನು ಜೊತೆಗೂಡಿಸಿಕೊಂಡು ತಮ್ಮನ ಮೇಲೆ ದಂಡೆತ್ತಿಬಂದು ಈಜಿಪ್ಟಿನ ಗಡಿಯಲ್ಲಿ ಬಂದಿಳಿದಿದ್ದಳು, ಸೀಸರ್ ಆಗಷ್ಟೆ ಮಹಾಬಲಶಾಲಿ. ಪಾಂಪೆಯುನ್ನು ಗೆದ್ದು ತನ್ನ ನಾಡಿಗೆ ಹಿಂದಿರುಗುವ ಹಾದಿಯಲ್ಲಿ ಅಲೆಕ್ಸಾಂಡ್ರಿಯಾಕ್ಕೆ ಬಂದು ಕೆಲವು ದಿನಗಳ ಕಾಲ ತಂಗಿದ್ದ. ಯಾವುದೇ ಕ್ಷಣದಲ್ಲಿ ಸಂಭವಿಸಬಹುದಾಗಿದ್ದ ಯಾದವೀಕದನದಲ್ಲಿ ರೋಮನ್ ಸೈನ್ಯ ನೆರವು ನೀಡಬೇಕೆಂದು ಟಾಲೆಮಿ ಬಣದ ಮುತ್ಸದ್ದಿಗಳು ಸೀಸರ್‌ನನ್ನು ಕೋರಿದ್ದರು.

ರತ್ನಗಂಬಳಿಯಿಂದೆದ್ದು ಬಂದ ರಾಗಿಣಿ

ಸಭೆ ಇನ್ನೇನು ಮುಕ್ತಾಯವಾಗುವುದರಲ್ಲಿತ್ತು. ಟಾಲೆಮಿಗೆ ನೆರವು ನೀಡುವ ವಿಚಾರದಲ್ಲಿ ಒಮ್ಮತದ ತೀರ್ಮಾನವಾಗುವುದರಲ್ಲಿತ್ತು. ಅಷ್ಟರಲ್ಲಿ ಒಬ್ಬ ಗ್ರೀಕ್ ವರ್ತಕ ದಂಡನಾಯಕನಿಗಾಗಿ ಹಾಸುಗಂಬಳಿಗಳನ್ನು ಬಳುವಳಿಯಾಗಿ ತಂದಿದ್ದಾನೆಂಬ ಸುದ್ದಿ ಬಂತು. ಸೀಸರ್ ಕುತೂಹಲದಿಂದ ಬಳುವಳಿ ಏನೆಂದು ನೋಡಲು ಹೋದಾಗ ಅವನ ಅನುಚರರು ಗುಂಡಗೆ ಸುತ್ತಿದ್ದ ಆ ಬೆಲೆ ಬಾಳುವ ಕಂಬಳಿಯನ್ನು ಬಿಚ್ಚಿದರು. ಎಲ್ಲರಿಗೂ ಆಶ್ಚರ್ಯ ಕಾದಿತ್ತು! ಕ್ಷಣಕಾಲ ಎಲ್ಲರೂ ಸ್ತಂಭೀಭೂತರಾದರು. ಕಂಬಳಿಯ ನಡುವೆ ಅಡಗಿದ್ದ ಬಳ್ಳಿಯಂತಹ ಮೈನ ಹರಯದ ಸುಂದರ ಹೆಣ್ಣು ನಗುನಗುತ್ತಾ ಎದ್ದು ನಿಂತಳು. ಮೋಹಕವಾದ ಮೈಕಟ್ಟು, ಉದ್ದನೆಯ ಮೂಗು ಯಾರನ್ನೇ ಆಗಲಿ ಆಕರ್ಷಿಸುವಂತಿದ್ದವು. ಅವಳೇ ಈಜಿಪ್ಟಿನ ಅರಸುಕುಮಾರಿ ಕ್ಲಿಯೋಪಾತ್ರ. ಅಂದಿನಿಂದ ಇಂದಿನವರೆಗೂ ಎರಡು ಸಾವಿರ ವರ್ಷಗಳು ಸಂದರೂ ತನ್ನ ಹೆಸರಿನಿಂದಲೇ ಜನರನ್ನು ಮೋಹಜಾಲದಲ್ಲಿ ಸಿಲುಕಿಸಿ ಮೋಡಿಮಾಡುವವಳೆಂಬ ಅಗ್ಗಳಿಕೆಯನ್ನು ಎಡೆಬಿಡದೆ ಉಳಿಸಿಕೊಂಡು ಬಂದಿರುವ ಎಣೆಯರಿಯದ ಸುಂದರಿ ಆಕೆ.

ಬೆಳಗಾಗುವುದರಲ್ಲಿ ಬದಲಾದ ಬೆಂಬಲ

ಯುದ್ಧದ ನಿತ್ಯ ಜಂಜಾಟದಿಂದ ಬಸವಳಿದು ಬೇಸತ್ತಿದ್ದ ಸೀಸರನ ಪಾಲಿಗೆ ಅಂತಹ ಅಪೂರ್ವ ಅದ್ಭುತ ಸೌಂದರ್ಯರಾಶಿ ಕಣ್ಣೆದುರಿಗೆ ಕೋರೈಸಿದಂತಾಯಿತು. ಶತ್ರುಗಳ ಪಾಳಯಕ್ಕೆ ಎಂಥ ದಿಟ್ಟತನದಿಂದ, ಚಾಣಾಕ್ಷತನದಿಂದ ಆ ಲಾವಣ್ಯವತಿ ಬಂದಿಳಿದಳೆಂಬುದನ್ನು ನೆನೆದೇ ಅವಳ ಜಾಣತನಕ್ಕೆ ಅವನು ಬೆರಗಾಗಿ ತಲೆದೂಗಿದ. ಅವಳ ಸೌಂದರ್ಯಸಿರಿಗೆ, ಮಧುರವಾದ ದನಿಗೆ ಮಾರುಹೋದ ಸೀಸರ್ ಬೆಳಗಾಗುವುದರಲ್ಲಿ ತನ್ನ ತೀರ್ಮಾನವನ್ನು ಬದಲಾಯಿಸಿದ್ದ

ರಿಂದ ಟಾಲೆಮಿ ತಾನು ನಿರೀಕ್ಷಿಸಿದ್ದ ಬೆಂಬಲವನ್ನು ಕಳೆದುಕೊಂಡಿದ್ದ.

ಕನಸುಗಾತಿ ಕ್ಲಿಯೋಪಾತ್ರ

ಅಂದು ಈಜಿಪ್ಟ್ ಅತ್ಯಂತ ಸಿರಿವಂತ ದೇಶಗಳಲ್ಲಿ ಒಂದೆನಿಸಿತ್ತು. ಆ ನಾಡಿನ ಸಂಸ್ಕೃತಿ ಮತ್ತು ಹಿರಿಮೆಗರಿಮೆಗಳು ವಿಶ್ವವಿಖ್ಯಾತವಾಗಿದ್ದವು. ಅಂಥ ದೇಶದ ಆಳರಸಿಯೊಬ್ಬಳ ಸಖ್ಯ, ಸಾಮೀಪ್ಯ ಜೂಲಿಯಸ್ ಸೀಸರನಿಗೆ ಮಹದಾನಂದವನ್ನು ಉಂಟುಮಾಡಿತ್ತು. ರೋಮಿನ ಅಜೇಯ ಮಹಾದಂಡನಾಯಕ ಕ್ಲಿಯೋಪಾತ್ರಳ ಮಾದಕ ನಗೆಗೆ ಮರುಳಾದ. ಕ್ಲಿಯೋಪಾತ್ರ ಸಹ ತನ್ನ ಮಹತ್ವಾಕಾಂಕ್ಷೆಯ ಕನಸುಗಳನ್ನು ನನಸು ಮಾಡಬಲ್ಲ ಶಕ್ತವ್ಯಕ್ತಿ. ಸೀಸರ್ ಎಂಬ ವಾಸ್ತವಾಂಶವನ್ನು ಮನಗಂಡು ಅವನೊಡನೆ ಪ್ರೇಮಸಂಬಂಧವನ್ನು ಇಟ್ಟುಕೊಳ್ಳಲು ತಡಮಾಡದೆ ಸಮ್ಮತಿ ಸೂಚಿಸಿದಳು. ಆಗ ಅವಳಿಗೆ ಇಪ್ಪತ್ತೊಂದು ವರ್ಷ ವಯಸ್ಸು; ಸೀಸರನ ವಯಸ್ಸು ಐವತ್ತೆರಡು.

ವಿಶ್ವಸಾಮ್ರಾಜ್ಞಿಯಾಗಬೇಕೆಂಬ ಕನಸು ಕ್ಲಿಯೋಪಾತ್ರಳದು. ಆಕೆ ತುಂಬ ಆತ್ಮಸ್ಥೈರ್ಯವುಳ್ಳ, ಬುದ್ಧಿವಂತಳಾದ, ಚತುರಳಾದ ಹೆಣ್ಣು. ಸೀಸರನಂಥ ಸರದಾರನ ಸಖ್ಯಬೆಂಬಲಗಳು ದೊರೆತರೆ ಪೌರ್ವಾತ್ಯ ಪ್ರಪಂಚದ ಎಲ್ಲ ಸಿರಿಸಂಪನ್ಮೂಲಗಳು ತನ್ನ ವಶವಾಗುತ್ತವೆಂಬ ದೃಢನಂಬಿಕೆ ಅವಳಿಗೆ. ಸೀಸರ್ ಸಹ ಬೇರೆ ಬೇರೆ ಹೆಣ್ಣುಗಳಲ್ಲಿ ಏನೇನು ಮಹತ್ವದ ಸಂಗತಿಗಳನ್ನು ಕಂಡಿದ್ದನೋ, ಅಂತಹ ಸೌಂದರ್ಯ-ಚಾತುರ್ಯ-ಬುದ್ಧಿಶಕ್ತಿ-ಸಮಯಪ್ರಜ್ಞೆ-ಸಾಹಸ ಎಲ್ಲವೂ ಒಂದೇ ಹೆಣ್ಣಿನಲ್ಲಿ ಅದ್ಭುತವಾಗಿ ಮೇಳವಿಸಿದ್ದವು. ಮೇಲಾಗಿ ಸೀಸರ್ ಉದಾರ ಮನಸ್ಸಿನ ರೋಮನ್ ಸಜ್ಜನ. ತನ್ನ ಸಂಸ್ಕೃತಿಗಿಂತ ಹಿರಿದಾದ ಹಳೆಯದೆನಿಸಿದ ಸಂಸ್ಕೃತಿಯ ಹಿನ್ನೆಲೆಯನ್ನು ಪಡೆದುಕೊಂಡಿದ್ದ ಕ್ಲಿಯೋಪಾತ್ರಳ ಬಗ್ಗೆ ಅವನಲ್ಲಿ ಪ್ರೇಮದ ಜೊತೆಗೆ ಗೌರವಾದರಗಳು ಸಹ ಹುಟ್ಟಿದವು. ಟಾಲೆಮಿ ವಂಶಸ್ಥರಲ್ಲಿ ಮೊದಲಿಗೆ ಪ್ರಖ್ಯಾತನೆನಿಸಿದ ಟಾಲೆಮಿಲಾಗೋಸ್ ಎಂಬಾತ ಮಹಾದಂಡನಾಯಕ ಅಲೆಕ್ಸಾಂಡರನ ಸಹಚರನಾಗಿದ್ದನೆಂಬ ಖ್ಯಾತಿಯನ್ನು ಪಡೆದಿದ್ದವನು. ಆ ವಂಶದಲ್ಲಿ ಹುಟ್ಟಿದ ಕ್ಲಿಯೋಪಾತ್ರ ತನ್ನೆಲ್ಲ ಪೂರ್ವಜರಿಗಿಂತ ಕಲೆ, ಸಾಹಿತ್ಯ, ವಿದ್ಯೆ, ವೈಭವ ಎಲ್ಲದರಲ್ಲೂ ಮಿಗಿಲಾಗಿದ್ದವಳು. ಆಕೆ ಲ್ಯಾಟಿನ್, ಹಿಬ್ರೂ, ಸಿರಿಯಾಕ್ ಭಾಷೆಗಳೂ ಸೇರಿದಂತೆ ಕನಿಷ್ಠ ಹತ್ತು ಭಾಷೆಗಳನ್ನು ಬಲ್ಲವಳಾಗಿದ್ದಳು ಎಂದು ಹೇಳಲಾಗುತ್ತದೆ. ಇಂಥ ಹೆಣ್ಣು ತನಗೆ ಜೊತೆಗಾತಿಯಾಗಿ ದೊರೆತದ್ದು ತನ್ನ ಅದೃಷ್ಟವೆಂದೇ ಸೀಸರ್ ಭಾವಿಸಿದ.

ಕಿಂವದಂತಿಗಳು

ಕ್ಲಿಯೋಪಾತ್ರಳ ಬಗೆಗೆ ಅನೇಕ ಕಿಂವದಂತಿಗಳು ಪರಂಪರಾನುಗತವಾಗಿ ಜಾರಿಯಲ್ಲಿವೆ. ಆಕೆ ಅದಮ್ಯ ಸುಖಲೋಲುಪಳೆಂದೊ, ಐಶಾರಾಮದಿಂದ ಯಾವಾಗಲೂ ಜೀವನ ನಡೆಸುತ್ತಿದ್ದವಳೆಂದೂ ಹೇಳುವುದುಂಟು. ಕೆಲವರು ಆಕೆ ನಡತೆಗೆಟ್ಟವಳೆಂದು ಸಹ ಆರೋಪಿಸುತ್ತಾರೆ. ಆದರೆ ವಾಸ್ತವವಾದ ಸಂಗತಿಯೆಂದರೆ ಇವೆಲ್ಲ ಮೇಲುನೋಟಕ್ಕೆ ಕಾಣುತ್ತಿದ್ದ ಆಕೆಯ

ನಡೆವಳಿಕೆಯ ಕೆಲವು ಮುಖಗಳಷ್ಟೆ. ಇವೆಲ್ಲವುಗಳ ಹಿಂದೆ ಕುಶಾಗ್ರಮತಿ ಹೆಣ್ಣೊಬ್ಬಳು ನಡೆಸುತ್ತಿದ್ದ ರಾಜಕಾರಣದ ಕಾರ್ಯಾಚರಣೆಗಳ ಇನ್ನೊಂದು ಒಳಮುಖ ಉಂಟು. ತನ್ನ ರಾಜಕೀಯ ಉತ್ಕರ್ಷಕ್ಕಾಗಿ ಸೀಸರನನ್ನು ಮದುವೆಯಾದ ಕ್ಲಿಯೋಪಾತ್ರ ಅವನನ್ನು ನಿಷ್ಠೆಯಿಂದ ಆರಾಧಿಸಿದಳು. ಒಬ್ಬ ಪ್ರೀತಿಪಾತ್ರಳಾದ ಹೆಂಡತಿಯಾಗಿ ಗಂಡ ಸೀಸರನನ್ನು ಗೌರವಾದರಗಳಿಂದ ನೋಡಿಕೊಂಡಳು. ಶಿಷ್ಯೆಗೆ ಗುರುವಿನ ಮೇಲಿರುವ ಭಕ್ತಿ ಶ್ರದ್ಧೆಗಳಂತೆ ಗಂಡನ ಬಗ್ಗೆ ಅವಳಲ್ಲಿ ಆದರ ಕಂಡು ಬರುತ್ತಿತ್ತು.

ಸಾಮ್ರಾಜ್ಞಿಯ ಪಟ್ಟ

ಈಜಿಪ್ಟಿನಲ್ಲಿ ತಾತ್ಕಾಲಿಕವಾಗಿ ನೆಲೆನಿಂತ ಸೀಸರ್ ಕೆಲವಾರು ತಿಂಗಳುಗಳ ಕಾಲ ಯುದ್ಧ ಹೂಡಿ ಟಾಲೆಮಿಯ ಸೈನ್ಯವನ್ನು ಮಟ್ಟಹಾಕಿ ಕ್ಲಿಯೋಪಾತ್ರಳಿಗೆ ಜಯ ದೊರಕಿಸಿಕೊಟ್ಟ. ಈಜಿಪ್ಟಿನ ಸಾಮ್ರಾಜ್ಞಿಯಾಗಿ ಕ್ಲಿಯೋಪಾತ್ರ ಅವಿರೋಧವಾಗಿ ಸಿಂಹಾಸನವನ್ನಲಂಕರಿಸಿದಳು. ಸೀಸರ್ ಹಾಗೂ ಕ್ಲಿಯೋಪಾತ್ರಳ ಮಧುರ ದಾಂಪತ್ಯದ ಕುರುಹಾಗಿ ಒಂದು ಗಂಡು ಮಗುವಿನ ಜನನವಾಯಿತು. ಎರಡು ಮಹಾನ್ ರಾಜಕುಟುಂಬಗಳ ಪ್ರತಿಷ್ಠೆಯ ಸಂತಾನವೆನಿಸಿದ ಆ ಮಗುವಿಗೆ ಸಿಸೇರಿಯನ್ ಟಾಲೆಮಿ ಎಂದು ನಾಮಕರಣ ಮಾಡಿದರು. ಮಗು ಹುಟ್ಟಿದ ಕೆಲವು ಗಂಟೆಗಳ ಅನಂತರದಲ್ಲೇ ಜೂಲಿಯಸ್ ಸೀಸರ್ ಸೈನ್ಯ ಸಮೇತನಾಗಿ ಮಡದಿಗೆ ವಿದಾಯ ಹೇಳಿ ತನ್ನ ರಾಜ್ಯದ ಕಡೆಗೆ ಹಡಗು ಹತ್ತಿ ಪ್ರಯಾಣ ಬೆಳೆಸಿದ. ಹೊಸ ಹೊಸ ಪ್ರದೇಶಗಳನ್ನು ಗೆದ್ದು ತನ್ನ ರಾಜ್ಯವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆ ಅವನನ್ನು ನಿರಂತರವಾಗಿ ಕೈಬೀಸಿ ಕರೆಯುತ್ತಿತ್ತು.

ರೋಮಿನತ್ತ ಕ್ಲಿಯೋಪಾತ್ರ

ಪತಿ ಸೀಸರನ ದಂಡಯಾತ್ರೆಗಳಿಂದ ಕ್ಲಿಯೋಪಾತ್ರ ತುಂಬ ಹೆಮ್ಮೆ ಪಡುತ್ತಿದ್ದಳು. ಅವನ ವಿಜಯದ ವಾರ್ತೆಗಳು ಆಗಾಗ್ಗೆ ಅವಳ ಕಿವಿಯ ಮೇಲೆ ಬೀಳುತ್ತಲೇ ಇದ್ದವು. ಏಷ್ಯ ಹಾಗೂ ಉತ್ತರ ಆಫ್ರಿಕಗಳಲ್ಲಿ ವಿಜಯಯಾತ್ರೆ ಮುಗಿಸಿದ ಸೀಸರ್ ಒಂದು ವರ್ಷದ ಅನಂತರ ಮಡದಿ ಮಗನನ್ನು ರೋಮಿಗೆ ಕರೆಸಿಕೊಂಡ. ಕ್ಲಿಯೋಪಾತ್ರಳಿಗೆ ಅದ್ಭುತ ಸ್ವಾಗತ ದೊರೆಯುತ್ತಿರುವಂತೆಯೆ ರೋಮನ್ ಯುದ್ಧ ಸಂಪ್ರದಾಯಕ್ಕನುಗುಣವಾಗಿ ಕ್ಲಿಯೋಪಾತ್ರಳ ವಿರುದ್ಧ ಬಂಡೆದ್ದು ಸೋತು ಸೆರೆ ಸಿಕ್ಕಿದ. ಅವಳ ಸಹೋದರಿ ಆರ್ಸಿನೋಯಿ ಎಂಬಾಕೆಯನ್ನು ಸರಪಳಿಗಳಿಂದ ಬಂಧಿಸಿ ಮೆರವಣಿಗೆಯ ಹಿಂಭಾಗದಲ್ಲಿ ಕರೆದೊಯ್ಯುತ್ತಿದ್ದರು. ಈಜಿಪ್ಟಿನಿಂದ ಐಶ್ವರ್ಯ ಹೊತ್ತುತಂದ ಕ್ಲಿಯೋಪಾತ್ರಳ ವೈಭವದ ಮೆರವಣಿಗೆ ರೋಮಿನ ಪ್ರಜೆಗಳ ಕಣ್ಣುಗಳನ್ನು ಸೂರೆಗೊಳ್ಳುವಷ್ಟು ಅಭೂತಪೂರ್ವವಾಗಿತ್ತು. ಈ ಹೆಣ್ಣಿನ ದೆಸೆಯಿಂದ ತಮ್ಮ ಮಹಾದಂಡನಾಯಕನ ಮಹತ್ವಾಕಾಂಕ್ಷೆ ಮಿತಿಮೀರಿ ಹೆಚ್ಚಿ ಎಲ್ಲಿ ತಮ್ಮ ನಾಡಿನ ಹಿತಕ್ಕೆ ಧಕ್ಕೆಯುಂಟುಮಾಡುವುದೊ ಎಂಬ ಆತಂಕ ರೋಮಿನ ಪ್ರಜೆಗಳಿಗೆ ಉಂಟಾಗದಿರಲಿಲ್ಲ.

ರೋಮಿನಲ್ಲಿ ನೆಲೆಸಿದ್ದಷ್ಟು ಕಾಲ ಕ್ಲಿಯೋಪಾತ್ರ ಅಲ್ಲಿಯ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲಿಲ್ಲ. ಕೇವಲ ಸೀಸರನ ಪ್ರೀತಿಯ ಹೆಣ್ಣಾಗಿ ಟೈಬರ್ ನದಿಯ ದಡದ ಮೇಲಿದ್ದ ಅವನ ಅರಮನೆಯೊಂದರಲ್ಲಿ ವಾಸಮಾಡುತ್ತಾ ಅವನ ಅಭ್ಯುದಯವನ್ನು ಕಂಡು ಸಂತಸಪಡುತ್ತಿದ್ದಳು. ಆದರೆ ರಾಜಕಾರಣದ ಬದುಕು ಕತ್ತಿಯ ಅಲಗಿದ್ದಂತೆ. ಸೀಸರನಿಗೆ ಆಪ್ತ ಮಿತ್ರರಿದ್ದಂತೆ ಗುಪ್ತಶತ್ರುಗಳೂ ಇದ್ದರು. ಇದ್ದಕ್ಕಿದ್ದಂತೆ ಒಂದು ದಿನ ಸೀಸರ್ ತನ್ನ ಅನುಯಾಯಿಗಳಿಂದಲೇ ಭೀಕರ ಕೊಲೆಗೀಡಾದ ಕೆಟ್ಟವಾರ್ತೆ ಕ್ಲಿಯೋಪಾತ್ರಳಿಗೆ ತಲುಪಿ ಅವಳನ್ನು ಅಧೀರಳನ್ನಾಗಿ ಮಾಡಿತು.

ಮರಳಿ ಈಜಿಪ್ಟಿಗೆ

ಸೀಸರನ ಅನಂತರ ತಾನು ರೋಮಿನಲ್ಲಿ ಉಳಿಯುವುದು ಅನಪೇಕ್ಷಣೀಯ ಮಾತ್ರವಲ್ಲ, ಅಪಾಯಕಾರಿಯೂ ಹೌದು ಎಂಬುದನ್ನು ಮನಗಂಡ ಕ್ಲಿಯೋಪಾತ್ರ ಮರಳಿ ತನ್ನ ತಾಯ್ನಾಡಿಗೆ ಹಿಂದಿರುಗಿದಳು. ಅವಳ ಪಿತೂರಿಯ ಮೇರೆಗೆ ಆ ಹೊತ್ತಿಗೆ ಅಲ್ಲಿಯ ರಾಜ್ಯಭಾರವನ್ನು ವಹಿಸಿಕೊಂಡಿದ್ದ ಹದಿನೈದನೇ ಟಾಲೆಮಿಯನ್ನು ಅವಳ ಬೆಂಬಲಿಗರು ವಿಷವಿಕ್ಕಿ ಕೊಂದಿದ್ದರು. ಕ್ಲಿಯೋಪಾತ್ರ ತನ್ನನ್ನೂ ತನ್ನ ಎಳೆಯ ಮಗ ಸಿಸೇರಿಯನ್ನನನ್ನೂ ಈಜಿಪ್ಟಿನ ಆಡಳಿತಗಾರರೆಂದು ಘೋಷಿಸಿಕೊಂಡರು. ಮಹತ್ವಾಕಾಂಕ್ಷಿಯ ಅವಳ ವ್ಯಕ್ತಿತ್ವ ಹೊಸ ಆಸರೆಗಾಗಿ ಕಾದುನೋಡುತ್ತಿತ್ತು.

ಮಾರ್ಕ್ ಆಂಟನಿ ಹೊಸ ಆಶಾಕಿರಣವಾಗಿ

ರೋಮಿನಲ್ಲಿ ನಡೆಯುತ್ತಿದ್ದ ಅಂತಃಕಲಹಗಳ ಬಗ್ಗೆ ಕ್ಲಿಯೋಪಾತ್ರ ದೂರದಿಂದಲೇ ಗಮನಿಸುತ್ತಿದ್ದಳು. ಸುಮಾರು ಮೂರು ವರ್ಷಗಳು ಹೀಗೆಯೇ ಉರುಳಿದವು. ಸೀಸರನ ಅನುಯಾಯಿಯಾಗಿದ್ದ ಮಾರ್ಕ್ ಆಂಟನಿ ಪ್ರವರ್ಧಮಾನಕ್ಕೆ ಬರುತ್ತಿದ್ದ. ಒಂದು ದಿನ ಆಂಟನಿ ಟಾರ್ಟಸ್ ಎಂಬಲ್ಲಿಗೆ ಬಂದು ತನ್ನನ್ನು ಭೇಟಿ ಮಾಡತಕ್ಕದ್ದೆಂದು ರಾಣಿ ಕ್ಲಿಯೋಪಾತ್ರಳಿಗೆ ಹೇಳಿ ಕಳುಹಿಸಿದ. ರೋಮನ್ ಸಾಮ್ರಾಜ್ಯದ ಮಿತ್ರಳೆನಿಸಿದರೂ ಅವಳು ಕೆಲವಾರು ಸಂದರ್ಭಗಳಲ್ಲಿ ನೆರವು ನೀಡಲು ಯಾಕೆ ಮುಂದೆ ಬರಲಿಲ್ಲ ಎಂಬ ವಿಷಯವಾಗಿ ಅವನು ಮುಖಾಮುಖಿ ವಿಚಾರಣೆ ನಡೆಸುವ ಉದ್ದೇಶ ಇಟ್ಟುಕೊಂಡಿದ್ದ.

ಆದರೆ ಕ್ಲಿಯೋಪಾತ್ರ ಚಾಣಾಕ್ಷೆ. ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಈ ಹೊಸ ಮಹಾವೀರ ನೆರವು ನೀಡಬಲ್ಲನೆ ಹೇಗೆ ಎಂಬುದನ್ನು ಅಧ್ಯಯನ ಮಾಡಿ ತೀರ್ಮಾನಕ್ಕೆ ಬರುವವರೆಗೆ ಆಕೆ ಅವನತ್ತ ಸ್ನೇಹದ ಹಸ್ತ ಬೀಸಲು ಸಿದ್ಧಳಾಗಿರಲಿಲ್ಲ. ಇಂಥದೊಂದು ಸಂದರ್ಭ ಬರಲೆಂದು ಅವಳು ಕಾತುರಳಾಗಿ ಎದುರು ನೋಡುತ್ತಿದ್ದಳು.

ಮೋಹಜಾಲದಲ್ಲಿ ಮಾರ್ಕ್ ಆಂಟನಿ

ಆಂಟನಿ ಮಹಾವೀರ, ದಿಟ್ಟ ಸಿಪಾಯಿ, ಆದರೆ ಮಗುವಿನಂತ ಹೃದಯವಿದ್ದವನು. ಸೀಸರನ ಬಲಗೈಯೆನಿಸಿದ್ದವನು, ತನ್ನ

ಜಾಣ್ಮೆಯಿಂದ ಮತ್ತು ವಾಕ್ಚಾತುರ್ಯ ದಿಂದ ರೋಮನ್ ಪ್ರಜೆಗಳ ಮನಸ್ಸನ್ನು ಗೆದ್ದಿದ್ದವನು. ಕ್ಲಿಯೋಪಾತ್ರ ತನ್ನ ಅಪಾರ ಸಿರಿತನ ಮತ್ತು ವೈಭವಗಳಿಂದ ಆಂಟನಿ ಯನ್ನು ಕಟ್ಟಿಹಾಕಿ ಗೆಲ್ಲಲು ಯೋಜಿಸಿದಳು. ಆಂಟನಿ ಊರ ಮಧ್ಯೆ ವಿಚಾರಣೆಗಾಗಿ ವೇದಿಕೆ ಸಿದ್ಧಪಡಿಸಿ ಕಾಯುತ್ತಿದ್ದರೆ ಕ್ಲಿಯೋಪಾತ್ರ ಅವನನ್ನೇ ತನ್ನ ಹಡಗಿಗೆ ಬಂದು ತನ್ನ ಔತಣಕೂಟದಲ್ಲಿ ಅತಿಥಿಯಾಗಿ ಭಾಗವಹಿಸುವಂತೆ ಕರೆಕಳುಹಿಸಿದಳು. ಸ್ತ್ರೀಯರ ಬಗ್ಗೆ ಗೌರವಹೊಂದಿದ್ದ ಆಂಟನಿ ಮರುಮಾತನಾಡದೆ ಅವಳ ಆಹ್ವಾನವನ್ನು ಒಪ್ಪಿ ಪರಿವಾರಸಮೇತನಾಗಿ ಅವಳ ಹಡಗಿನತ್ತ ಹೊರಟ.

ಅದೊಂದು ಮನೋಹರದೃಶ್ಯ! ಅಂಥ ಮೋಹಕವಾದ ನೋಟವನ್ನು ಆಂಟನಿ ಯಾಗಲಿ ಅವನ ಸಂಗಾತಿಗಳಾಗಲಿ ಎಲ್ಲೂ ಕಂಡರಿಯರು, ಕೇಳರಿಯರು. ಹಡಗಿನ ಮುಂಭಾಗವನ್ನು ಚಿನ್ನದ ತಗಡಿನಿಂದ ಆಚ್ಛಾದಿಸಲಾಗಿತ್ತು. ಬೆಲೆಬಾಳುವ ಹಾಯಿ ಪಟಗಳು, ಬೆಳ್ಳಿಯ ಹುಟ್ಟುಗಳು. ಅಮೋಘವಾಗಿ ಸಿಂಗರಿಸಿಕೊಂಡ ಚೆಲುವೆಯರ ನಡುವೆ ಶುಕ್ರತಾರೆಯಂತೆ ಕಂಗೊಳಿಸುತ್ತಿರುವ ಅಭೂತಪೂರ್ವ ಸುಂದರಿ ಸಾಮ್ರಾಜ್ಞಿ ಕ್ಲಿಯೋಪಾತ್ರ! ಮಧುರವಾಗಿ ಹೊಮ್ಮು ತ್ತಿದ್ದ ಇಂಪಾದ ಸಂಗೀತ, ಹುಚ್ಚೆಬ್ಬಿಸುವ ಸುಗಂಧದ್ರವ್ಯಗಳ ಪರಿಮಳದ ನಡುವೆ ಕೋಗಿಲೆಯಂತಹ ಮನಮೋಹಕ ಹೆಣ್ಣಿನ ಕೋರಿಕೆಯ ದನಿ. ಸೀಸರನನ್ನು ಸೆರೆ ಹಿಡಿದಿದ್ದ ಆ ಕಂಠ, ಆ ಸೌಂದರ್ಯ ಆಂಟನಿ ಯನ್ನು ಉನ್ಮತ್ತನನ್ನಾಗಿ ಮಾಡಿದವು. ವಿಚಾರಣೆಗಾಗಿ ಬಂದಿದ್ದ ಅವನು ಎಲ್ಲವನ್ನೂ ಮರೆತು ಅವಳ ಆರಾಧಕನಾದ. ಕ್ಲಿಯೋಪಾತ್ರಳ ಪಾಲಿಗೆ ತಕ್ಕ ಮಹಾವೀರ ಮತ್ತೆ ಲಭ್ಯನಾಗಿದ್ದ.

ಅದ್ಭುತ ಮೋಜವಾನಿ

ಕ್ಲಿಯೋಪಾತ್ರ ಮಹಾರಾಣಿಯ ಎಣೆ ಯಿಲ್ಲದ ವೈಭವಕ್ಕೆ ಆಂಟನಿ ಪೂರ್ತಿ ಮನಸೋತ. ಆತಿಥ್ಯದಲ್ಲಿ ನಿಸ್ಸೀಮನೆಂದು ಹೆಸರು ಪಡೆದಿದ್ದ ಅವನು ಸಹ ಅವಳ 'ಅತಿಥಿ ಸತ್ಕಾರ'ದ ಎದುರು ಸೋಲೊಪ್ಪಿಕೊಳ್ಳು ವುದರಲ್ಲೇ ಸಮಾಧಾನ ಕಂಡ. ಅವರಿಬ್ಬರೂ ಒಬ್ಬರು ಇನ್ನೊಬ್ಬರಿಗಾಗಿ ವ್ಯವಸ್ಥೆ ಮಾಡಿದ ಕೂಟಗಳ ವೈಭವ ಇಂದು ಆ ಪ್ರದೇಶಗಳಲ್ಲಿ ನಾಣ್ಣುಡಿಯಾಗಿ ಹೋಗಿದೆ. ಸಾಧಾರಣ ಪಂದ್ಯವೊಂದನ್ನು ಗೆಲ್ಲುವುದ ಕ್ಕಾಗಿ ಕ್ಲಿಯೋಪಾತ್ರ ಕೋಟ್ಯಂತರ ರೂಪಾಯಿ ಬೆಲೆಬಾಳುವ ಮುತ್ತನ್ನು ಮದ್ಯದಲ್ಲಿ ಹಾಕಿ, ಅದು ಕರಗಿಹೋದ ಮೇಲೆ ಅವನ ಕಣ್ಣೆದುರಿಗೇ ಹೊರಗೆ ಚೆಲ್ಲಿದ ಳಂತೆ. ಕ್ಲಿಯೋಪಾತ್ರಳ ದುಂದಿಗೆ ಸಂಬಂಧ ಪಟ್ಟಂತೆ ಈ ನಿದರ್ಶನವನ್ನು ಕೆಲವರು ಮುಂದಿಡುತ್ತಾರೆ. ಆದರೆ ಪ್ರಾಯಃ ಆಂಟನಿ ಯಂಥ ವೀರನ ಮೇಲೆ ತನ್ನ ಅಪಾರ ಐಶ್ವರ್ಯದ, ವೈಭವದ ಪ್ರಭಾವವನ್ನು ಬೀರಲು ಅವಳು ಹಾಗೆ ಮಾಡಿದ್ದಿರಬೇಕೆನಿಸುತ್ತದೆ.

ಆಂಟನಿ ಮತ್ತು ಕ್ಲಿಯೋಪಾತ್ರರ ನಡುವೆ ಸಾಹಚರ್ಯ ಹೆಚ್ಚುತ್ತಿದ್ದಂತೆಯೆ ಅವಳ ಸೌಂದರ್ಯ-ವೈಭವಗಳಿಗೆ ಆಂಟನಿ ಮರುಳಾದ. ಅಂತೆಯೆ ತನ್ನ ದೂರಭವಿಷ್ಯದ ಮೇಲೆ ಕಣ್ಣು ನೆಟ್ಟಿದ್ದರೂ ಕ್ಲಿಯೋಪಾತ್ರ

ಳಿಗೆ ಆಂಟನಿಯ ಮುಗ್ಧ ಪ್ರೇಮಪಾಶದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಕ್ಲಿಯೋಪಾತ್ರಳ ರಾಜಕಾರಣ

ಒಲವಿನ ಬಂಧ ಆಂಟನಿ ಮತ್ತು ಕ್ಲಿಯೋಪಾತ್ರರ ನಡುವೆ ಹೆಚ್ಚುತ್ತಿದ್ದಂತೆಯೆ, ಕ್ಲಿಯೋಪಾತ್ರ ಎಚ್ಚೆತ್ತು ಕಾರ್ಯೋನ್ಮುಖಳಾದಳು. ಈ ಹಿಂದೆ ಬಂಡೆದ್ದು ಸೀಸರನ ಕಾಲದಲ್ಲಿ ಮುಖಭಂಗ ಮಾಡಿಸಿಕೊಂಡಿದ್ದ ಅವಳ ಸೋದರಿ ಆರ್ಸಿನೋಯಿ ಹಾಗೂ ಗತಿಸಿದನೆಂದು ಭಾವಿಸಲಾಗಿದ್ದ ಟಾಲೆಮಿ ಅವಳ ವಿರುದ್ಧ ಪಿತೂರಿ ನಡೆಸುತ್ತಿದ್ದರು. ಕ್ಲಿಯೋಪಾತ್ರ ಅವರನ್ನು ಹೇಳಹೆಸರಿಲ್ಲದಂತೆ ಮಾಡಲು ಆಂಟನಿಯ ನೆರವನ್ನು ಪಡೆದುಕೊಂಡಳು.

ಪ್ರೇಮೋನ್ಮತ್ತನಾದ ಆಂಟನಿ ಕ್ಲಿಯೋಪಾತ್ರಳೊಡನೆ ಅಲೆಗ್ಸಾಂಡ್ರಿಯಾಕ್ಕೆ ಬಂದು ಕೆಲವಾರು ತಿಂಗಳುಗಳು ಅಲ್ಲಿಯೆ ನೆಲೆ ನಿಂತ. ಅವರ ವೈಭವದ, ದುಂದುಗಾರಿಕೆಯ ಬದುಕು ಎಲ್ಲರಿಗೂ ಅಚ್ಚರಿ ಉಂಟುಮಾಡುತ್ತಿತ್ತು. ಕಲೆ, ಸಂಗೀತ, ಪ್ರೇಮಾರಾಧನೆಗಳಲ್ಲೇ ಎಷ್ಟೋ ದಿನಗಳು ಉರುಳಿಹೋಗುತ್ತಿದ್ದವು. ಆದರೆ ಈ ಬಗೆಯ ಜೀವನ ಎಲ್ಲಿಯವರೆಗೆ ನಡೆದೀತು ?

ಭೋಗವೈಭವಗಳಲ್ಲಿ ಮತ್ತನಾಗಿದ್ದ ಆಂಟನಿಯ ಮೇಲೆ ರೋಮಿನ ರಾಜಕಾರಣದ ಒತ್ತಡ ಬಿದ್ದಾಗ ಅವನು ಎಚ್ಚೆತ್ತ. ಅವನ ಸಂಗಾತಿ ಆಕ್ಟೇವಿಯಸ್ ಜೊತೆಯಲ್ಲಿ ರಾಜಕೀಯ ಒಪ್ಪಂದ ಮಾಡಿಕೊಂಡ. ಆ ಪ್ರಕಾರ ಆಂಟನಿ ಪೂರ್ವದೇಶಗಳನ್ನು ಜಯಿಸಲು ಹೋಗತಕ್ಕದ್ದೆಂದೂ ಆಕ್ಟೇವಿಯಸ್ ರೋಮ್ ಮತ್ತು ಪಾಶ್ಚಾತ್ಯ ದೇಶಗಳ ಆಡಳಿತವನ್ನು ನಿರ್ವಹಿಸತಕ್ಕದ್ದೆಂದೂ ತೀರ್ಮಾನವಾಯಿತು. ಈ ಬಂಧ ಬಿಗಿಯಾಗಿರಬೇಕೆಂಬ ಉದ್ದೇಶದಿಂದ ಆಕ್ಟೇವಿಯನ್ನನ ಸಹೋದರಿ ಆಕ್ಟೇವಿಯಳನ್ನು ಆಂಟನಿಗೆ ಕೊಟ್ಟು ಮದುವೆ ಮಾಡಲಾಯಿತು.

ಪೌರ್ವಾತ್ಯ ದೇಶಗಳತ್ತ ಹೊರಟ ಆಂಟನಿ ಸ್ವಲ್ಪ ಕಾಲದಲ್ಲೇ ಮತ್ತೆ ಸಿರಿಯಾಕ್ಕೆ ಬಂದ, ಇನ್ನೊಮ್ಮೆ ಕ್ಲಿಯೋಪಾತ್ರಳ ತೆಕ್ಕೆಯಲ್ಲಿ ಸೇರಿದ. ಅನಂತರ ಪಾರ್ಥಿಯನ್ ಅರಸರನ್ನು ಸೋಲಿಸಿದ ಅವನು ಕ್ಲಿಯೋಪಾತ್ರಳೊಡನೆ ಸೇರಿ ಮಹಾ ಚಕ್ರಾಧಿಪತ್ಯವೊಂದನ್ನು ಕಟ್ಟುವ ಕನಸುಕಂಡ. ಆ ಹೊತ್ತಿಗೆ ಕ್ಲಿಯೋಪಾತ್ರ ತನ್ನ ನಾಲ್ಕನೆಯ ಮಗುವಿಗೆ ಜನ್ಮ ಕೊಟ್ಟಿದ್ದಳು. ಆಂಟನಿಗೆ ಸೋಲು ಸಂಭವಿಸುವ ಸುದ್ದಿ ಬಂದಾಗ ಅವಳು ಅವನ ನೆರವಿಗೆ ಕೂಡಲೇ ಹಡಗು ಹತ್ತಿ ಹೊರಟಳು. ತನ್ನ ಸೈನ್ಯ ನುಚ್ಚುನೂರಾದಾಗ ಆಂಟನಿ ಹತಾಶನಾಗಿ ಮದ್ಯಪಾನವನ್ನು ಆಶ್ರಯಿಸಿ ಖಿನ್ನನಾಗಿದ್ದ. ಕ್ಲಿಯೋಪಾತ್ರಳ ಉತ್ತೇಜನದಿಂದ ಅವನು ಮತ್ತೆ ಧೈರ್ಯವನ್ನು ಮೈಗೂಡಿಸಿಕೊಂಡು ಅರ್ಮೇನಿಯನ್ನರ ಮೇಲೆ ಹೋರಾಡಿ ಜಯಶೀಲನಾದ.

ಅವನತಿಯ ಹಾದಿಯಲ್ಲಿ ಆಂಟನಿ

ಕ್ಲಿಯೋಪಾತ್ರಳ ಮೇಲೆ ಆಂಟನಿಗೆ ವ್ಯಾಮೋಹ ಹೆಚ್ಚಾಗುತ್ತಲೆ ಇತ್ತು. ಇದರಿಂದಾಗಿ ಅವನಿಗೂ ಅವನ ಮಡದಿ ಆಕ್ಟೇವಿಯಳಿಗೂ ವಿರಸ ಪ್ರಾರಂಭವಾಯಿತು. ಇದರಿಂದ ಆಕ್ಟೇವಿಯಸ್ ಕ್ಷುದ್ರನಾದ. ಇದು ಸಾಲದು ಎಂಬಂತೆ

ಅರ್ಮೇನಿಯರನ್ನು ಗೆದ್ದ ಆಂಟನಿ ತನ್ನ ವಿಜಯದ ಸಮಾರಂಭವನ್ನು ರೋಮಿನಲ್ಲಿ ಆಚರಿಸುವುದಕ್ಕೆ ಬದಲಾಗಿ ಅಲೆಕ್ಸಾಂಡ್ರಿಯಾದಲ್ಲಿ ಆಚರಿಸಿದ. ರೋಮಿಗೆ ನ್ಯಾಯಬದ್ಧವಾಗಿ ಸೇರಬೇಕಾಗಿದ್ದ ಪ್ರದೇಶಗಳನ್ನು ಅವನು ಕ್ಲಿಯೋಪಾತ್ರಳಿಗೂ ತನ್ನಿಂದ ಅವಳಲ್ಲಿ ಹುಟ್ಟಿದ ಮಕ್ಕಳಿಗೂ ನೀಡಿ ಆ ಬಗ್ಗೆ ಘೋಷಣೆ ಮಾಡಿದ. ರೋಮನರ ಸ್ವಾಭಿಮಾನಕ್ಕೆ ಇದರಿಂದ ತುಂಬ ದೊಡ್ಡ ಪೆಟ್ಟು ಬಿತ್ತು. ರೋಮನರು ಆಂಟನಿಗೆ ನೀಡಿದ್ದ ಬಿರುದು ಬಾವಲಿಗಳನ್ನು ಹಿಂತೆಗೆದುಕೊಂಡು ಕ್ರಿ. ಪೂ. ೩೨ರಲ್ಲಿ ಅವನ ಮೇಲೆ ಯುದ್ಧ ಹೂಡಿದರು.

ಸಂಶಯದ ಸುಳಿಯಲ್ಲಿ ಕ್ಲಿಯೋಪಾತ್ರ

ಆಂಟನಿಯ ಬೇಜವಾಬ್ದಾರಿ ನಡವಳಿಕೆ, ಅತಿ ಮದ್ಯಪಾನಾಸಕ್ತಿ ಕ್ಲಿಯೋಪಾತ್ರಳಲ್ಲಿ ಅವನ ಬಗ್ಗೆ ಸಂಶಯ ಮೂಡಿಸಿದವು. ಅವನಲ್ಲಿ ಅವಳಿಗೆ ನಂಬಿಕೆ ಗೌರವಾದರಗಳು ಕಡಮೆಯಾದವು. ಅವನ ಯುದ್ಧ ಸಾಮರ್ಥ್ಯ ಇಳಿಮುಖವಾಗುತ್ತಿದ್ದಂತೆಯೆ, ಕ್ಲಿಯೋಪಾತ್ರಳ ಪಾಲಿಗೆ ಅವನು ಅಸಹ್ಯದ ವ್ಯಕ್ತಿಯಾಗುತ್ತಾ ಹೋದ. ಈ ವೈಪರೀತ್ಯದ ಕಾರಣ ಕಲೆತು ಹೋರಾಡಿದರೂ ಅವರಲ್ಲಿ ಒಮ್ಮತವಿರಲಿಲ್ಲ. ಸೋಲು ಅನಿವಾರ್ಯವೆನಿಸಿತು. ಕ್ರಿ. ಪೂ. ೩೧ರಲ್ಲಿ ಆಕ್ಟಿಯಮ್ ಎಂಬಲ್ಲಿ ನಡೆದ ಘೋರಯುದ್ಧದಲ್ಲಿ ಆಂಟನಿ ತುಂಬ ಹೀನಾಯವಾದ ಸೋಲನ್ನು ಕಂಡ. ಆಶ್ಚರ್ಯವೆಂದರೆ ಈ ಯುದ್ಧದಲ್ಲಿ ಸೋಲು ಎದುರಾಗುವ ಸಂಭವ ಕಂಡುಬಂದಾಗ ಕ್ಲಿಯೋಪಾತ್ರ ಆಂಟನಿಯೊಡನೆ ಸಮಾಲೋಚನೆಯನ್ನೂ ನಡೆಸದೆ, ತನ್ನ ಅರುವತ್ತು ಹಡಗುಗಳೊಡನೆ ರಣಭೂಮಿಯಿಂದ ಹಿಮ್ಮೆಟ್ಟಿದಳಂತೆ. ಅವಳಂಥ ಧೈರ್ಯಶಾಲಿಯಾದ, ಚಾಣಾಕ್ಷೆಯಾದ ಹೆಣ್ಣು ಹೀಗೆ ಮಾಡಿದ್ದು ನಿಜವಾಗಿದ್ದರೆ, ಈ ಬಗೆಯ ಹೇಡಿತನಕ್ಕೆ ಕಾರಣ ಏನು ಎಂಬುದು ಇತಿಹಾಸಕಾರರ ಪಾಲಿಗೆ ಇವತ್ತಿಗೂ ಕಗ್ಗಂಟಾಗಿದೆ. ಯುದ್ಧದಲ್ಲಿ ಜಯಶೀಲನಾದ ಆಕ್ಟೇವಿಯನ್ ಆಗಸ್ಟಸ್ ಸೀಸರ್ ಎಂಬ ಹೆಸರಿನಿಂದ ರೋಮಿನ ಮೊದಲ ಚಕ್ರವರ್ತಿಯಾದ.

ಅಂತಿಮ ದಿನಗಳು

ಹಿಮ್ಮೆಟ್ಟಿದ ಕ್ಲಿಯೋಪಾತ್ರ ಅಲೆಕ್ಸಾಂಡ್ರಿಯಾಕ್ಕೆ ಓಡಿಬಂದಳು. ಲಿಬಿಯಾಕ್ಕೆ ಓಡಿಹೋದ ಆಂಟನಿ ಅಲ್ಲೂ ತನ್ನ ನೆಚ್ಚಿನ ಸೈನ್ಯವನ್ನು ಕಟ್ಟಲು ಅಸಾಧ್ಯ ಎಂಬುದನ್ನು ಮನಗಂಡು ಸಾವಿನಲ್ಲಾದರೂ ಜೊತೆಗೂಡೋಣವೆಂದು ಅಲೆಕ್ಸಾಂಡ್ರಿಯಾಕ್ಕೇ ಮರಳಿಬಂದ. ವೈಭವವಾಗಿ ಬದುಕಿಯೆ ಸಾವನ್ನು ಎದುರು ನೋಡೋಣವೆಂದು ಆಂಟನಿ ಮತ್ತು ಕ್ಲಿಯೋಪಾತ್ರ ಒಟ್ಟಿಗೆ ತೀರ್ಮಾನಿಸಿದರು.

ಕ್ಲಿಯೋಪಾತ್ರ ತನ್ನ ವೈಭವ ಅಂತಸ್ತುಗಳಿಗೆ ತಕ್ಕಂತೆ ಸಮಾಧಿಭವನವನ್ನು ಅದ್ದೂರಿಯಿಂದಲೇ ಕಟ್ಟಿಸಿಕೊಂಡಳು. ತನ್ನೆಲ್ಲ ಒಡವೆವಸ್ತುಗಳನ್ನೂ ಅಲ್ಲಿಗೆ ಸಾಗಿಸಿದಳು. ತನ್ನ ಬದುಕಿನಂತೆಯೆ ಸಾವು ಕೂಡ ಅಸಾಮಾನ್ಯವಾಗಿರಬೇಕೇಬುದು ಅವಳ ಮಹದಾಸೆ.

ಆಕ್ಟೇವಿಯನ್ ಆ ವೇಳೆಗೆ ಅಲೆಕ್ಸಾಂಡ್ರಿಯಾದ ಹೆಬ್ಬಾಗಿಲಿನ ಬಳಿ ಬಂದು ನಿಂತಿದ್ದ.

ಅಳಿದುಳಿದ ಶಕ್ತಿಯನ್ನು ಮೈಗೂಡಿಸಿಕೊಂಡು ಆಂಟನಿ ಅಕ್ಟೇವಿಯಸ್ ಸೈನ್ಯದ ಮೇಲೆ ಆಕ್ರಮಣ ಮಾಡಿ ಸ್ವಲ್ಪಮಟ್ಟಿಗೆ ಜಯ ಗಳಿಸಿದ. ಆದರೆ ಅವನ ಅನುಯಾಯಿಗಳು ಓಡಿಹೋಗಿದ್ದರಿಂದ ಒಬ್ಬಂಟಿಗನಾದ. ಖಿನ್ನನಾಗಿ ಅರಮನೆಗೆ ಹಿಂದಿರುಗಿದ ಅವನಿಗೆ ಯಾರೋ ಆಂಟನಿಯ ಸಾವಿನ ಸುದ್ದಿ ಕೇಳಿ ಕ್ಲಿಯೋಪಾತ್ರ ಆತ್ಮಹತ್ಯೆ ಮಾಡಿಕೊಂಡಳೆಂಬ ತಪ್ಪುಸಮಾಚಾರ ಮುಟ್ಟಿಸಿದರು. ಮನದನ್ನೆ ಕ್ಲಿಯೋಪಾತ್ರಳಿಲ್ಲದ ಬದುಕು ನಿರರ್ಥಕ ಎಂದು ಆಂಟನಿ ವೀರರೋಮನರಂತೆ ತನ್ನ ಖಡ್ಗದ ಮೇಲೆ ತಾನೇ ಬಿದ್ದು ಪ್ರಾಣತೆರಲು ಹವಣಿಸಿದ. ಆದರೆ ತೀವ್ರವಾಗಿ ಗಾಯಗೊಂಡರೂ ತಕ್ಷಣ ಅವನ ಪ್ರಾಣ ಹೋಗಲಿಲ್ಲ. ಅಷ್ಟರಲ್ಲಿ ಕ್ಲಿಯೋಪಾತ್ರ ಬದುಕಿರುವ ಸುದ್ದಿಯನ್ನು ಮತ್ತೆ ಯಾರೋ ಅವನಿಗೆ ಮುಟ್ಟಿಸಿದರು. ಏನೇ ವಿರಸವಿರಲಿ, ತನ್ನನ್ನು ಅವಳಲ್ಲಿಗೆ ಕರೆದೊಯ್ಯುವಂತೆ ಹಿಂಬಾಲಕರಿಗೆ ಹೇಳಿ ಆಂಟನಿ ಕ್ಲಿಯೋಪಾತ್ರಳನ್ನು ಸೇರಿದ. ತುಂಬ ಪ್ರೀತಿಯಿಂದ, ತುಂಬ ಸಂಕಟದಿಂದ ಅವಳ ಮಡಿಲಲ್ಲಿ ತಲೆ ಹುದುಗಿಸಿ ಪ್ರಾಣ ಬಿಟ್ಟ.

ಕ್ಲಿಯೋಪಾತ್ರಳ ವಿಲಕ್ಷಣ ಸಾವು

ಬಾಳಸಂಗಾತಿ, ಮಹಾಪ್ರೇಮಿ ಆಂಟನಿಯೂ ಹೊರಟುಹೋದ. ರಾಜ್ಯ ಹೋಯಿತು, ಆಸೆ ಆಕಾಂಕ್ಷೆಗಳು ಮಣ್ಣುಪಾಲಾದವು. ಇನ್ನು ಬದುಕುವುದಾದರೂ ಏತಕ್ಕೆ? ಬದುಕಿದರೂ ಕ್ರೂರ ಅಕ್ಟೇವಿಯಾನ ಬಂಧಿಯಾಗಿ ಮೈಕೈಗಳನ್ನು ಸರಪಳಿಗಳಿಂದ ಬಿಗಿಸಿಕೊಂಡು ರೋಮ್ ನಗರದ ರಸ್ತೆಗಳಲ್ಲಿ ಅಪಮಾನಿತಳಾಗಿ ಮೆರವಣಿಗೆ ಹೋಗಬೇಕು. ಕ್ಲಿಯೋಪಾತ್ರಳಂಥ ಧೀರ ರಮಣಿಯ ಪಾಲಿಗೆ ಅದು ಎಂದಿಗೂ ಅಸಾಧ್ಯ. ಅವಳು ತಾನೇ ಸಾವನ್ನು ಬರಮಾಡಿಕೊಳ್ಳಲು ನಿಶ್ಚಯಿಸಿದಳು.

ಕ್ಲಿಯೋಪಾತ್ರಳ ವ್ಯಕ್ತಿತ್ವ ಸ್ವಭಾವಗಳನ್ನು ಅರಿತಿದ್ದ ಅಕ್ಟೇವಿಯಸ್ ಅವಳು ಎಲ್ಲಿ ಆತ್ಮಹತ್ಯೆ ಮಾಡಿಕೊಂಡು ರೋಮಿನ ಬೀದಿಗಳಲ್ಲಿ ಅವಳನ್ನು ಮೆರವಣಿಗೆ ಮಾಡಿದೆನೆಂದು ತನಗೆ ಬರುವ ಕೀರ್ತಿಗೆ ಧಕ್ಕೆ ತರುತ್ತಾಳೋ ಎಂಬ ಸಂದೇಹದಿಂದ ಅವಳನ್ನು ಮನ್ನಿಸುವ ಹಾಗೂ ಅವಳ ಮತ್ತು ಅವಳ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಭರವಸೆ ನೀಡಿದ.

ಆದರೆ ಹೇಗೋ ಏನೋ ಚಾರರಿಂದ ಕ್ಲಿಯೋಪಾತ್ರಳಿಗೆ ಅಕ್ಟೇವಿಯನನ ಅಂತರ್ಯ ಏನೆಂದು ಅರಿವಾಗಿಹೋಯಿತು. ಅವಳು ತನ್ನ ಅಂತಿಮಯಾತ್ರೆಗಾಗಿ ಸಿದ್ಧಳಾದಳು. ಒಂದು ಕ್ಷಣ ಅವಳ ಮನಸ್ಸಿನಲ್ಲಿ ಅಕ್ಟೇವಿಯನನ್ನು ತನ್ನ ಸೌಂದರ್ಯ-ವೈಭವಗಳಿಂದ ಮರುಳು ಮಾಡುವುದು ಸಾಧ್ಯವೆ ಎಂಬ ಭಾವನೆ ತಲೆದೋರದೆ ಹೋಗಲಿಲ್ಲ. ಆದರೆ ಅವನು ನೀರಸ ಸ್ವಭಾವದ ವ್ಯಕ್ತಿ, ಸೀಸರ್ ಮತ್ತು ಆಂಟನಿ ಅವರಂತೆ ಅಲ್ಲ. ಆ ಆಸೆಯನ್ನು ಅಲ್ಲಿಗೇ ಬಿಟ್ಟಳು.


ಆಂಟನಿಯ ಶವಪೆಟ್ಟಿಗೆಯ ಬಳಿ ಸಾರಿ ಕ್ಲಿಯೋಪಾತ್ರ ಅದನ್ನು ಪ್ರೀತಿಯಿಂದ ಸವರಿ, ಹೂಗಳನ್ನಿಟ್ಟಳು, ಮೃದುವಾಗಿ ಪ್ರೇಮದ ಮಾತುಗಳನ್ನಾಡಿದಳು. ಅಲ್ಲಿಂದ ಹಿಂದಿರುಗಿ ಬಂದು ತನ್ನ ಅರಮನೆಯ ಸ್ನಾನಾಗಾರದಲ್ಲಿ ಅತ್ಯಂತ ಬೆಲೆಬಾಳುವ ಪರಿಮಳ ದ್ರವ್ಯಗಳನ್ನು ಬೆರೆಸಿದ ನೀರಿನಲ್ಲಿ

ಮನಸ್ಸಿಗೆ ತೃಪ್ತಿಯಾಗುವಷ್ಟು ಸ್ನಾನ ಮಾಡಿದಳು. ಅನಂತರ ಮಹಾಸಾಮ್ರಾಜ್ಞಿಗೆ ಯೋಗ್ಯವಾದ ಅಮೂಲ್ಯವಾದ ವೈಭವೋಪೇತವಾದ ಉಡುಪುಗಳನ್ನು ತೊಟ್ಟು ಅಲಂಕರಿಸಿಕೊಂಡಳು. ಆಮೇಲೆ ಕೊನೆಯ ಬಾರಿಗೆ ಉತ್ಕೃಷ್ಟವಾದ ಭೋಜನವನ್ನು ಒಂಟಿಯಾಗಿ ಕುಳಿತು ಮಾಡಿದಳು.

ಆ ಹೊತ್ತಿಗೆ ಅವಳ ನೆಚ್ಚಿನ ಗುಲಾಮನೊಬ್ಬ ಅಂಜೂರದ ಹಣ್ಣಿನ ಬುಟ್ಟಿಯನ್ನು ಅವಳಿಗಾಗಿ ಹೊತ್ತುತಂದ. ಅವನ್ನು ನೋಡಿ ಕ್ಲಿಯೋಪಾತ್ರ 'ಅಹಾ, ಬಂದಿತಲ್ಲ!' ಎಂದು ವಿಲಕ್ಷಣವಾಗಿ ಮುಗುಳ್ನಕ್ಕಳು. ಆ ಅಂಜೂರದ ಎಲೆಗಳ ನಡುವೆ ಅವಳ ಅಣತಿಯಂತೆ ಅತ್ಯಂತ ವಿಷಯುಕ್ತವೆನಿಸಿದ ಮಿಡಿನಾಗರವೊಂದನ್ನು ಹುದುಗಿಸಿಡಲಾಗಿತ್ತು....ಇನ್ನು ಯಾವ ಅವಮಾನವೂ ಇಲ್ಲ, ಸರಪಳಿಯ ಮೆರವಣಿಗೆಯೂ ಇಲ್ಲ, ದಾರುಣವಾದ ಮರಣದಂಡನೆಯೂ ಇಲ್ಲ; ರಾಣಿಯಂತೆ ಬಾಳಿದ ಕ್ಲಿಯೋಪಾತ್ರ ರಾಣಿಯಂತೆಯೆ ವೈಭವದಿಂದ ಸಾವನ್ನು ಆಹ್ವಾನಿಸುತ್ತಾಳೆ.

ಕ್ಲಿಯೋಪಾತ್ರ ಬುಟ್ಟಿಯಲ್ಲಿ ಕೈಹಾಕಿ ಬಾಗುವ ಬಳುಕುವ ಆ ಮಿಡಿನಾಗರವನ್ನು ತೆಗೆದುಕೊಂಡು ಪ್ರೀತಿಯಿಂದ ಧೈರ್ಯದಿಂದ ಎದೆಗಪ್ಪಿಕೊಂಡಳು. ಒಂದು ಸಣ್ಣ ಕಡಿತ.... ಮೈಯೆಲ್ಲಾ ಭುಗಿಲು. ಆ ಭುಗಿಲಿನಲ್ಲಿ ಏನೋ ಸಮಾಧಾನ.

ಕೆಲವು ಕ್ಷಣಗಳಲ್ಲೇ ವೀರರಮಣಿ ಕ್ಲಿಯೋಪಾತ್ರಳ ಪ್ರಾಣ ಗಾಳಿಯಲ್ಲಿ ಲೀನವಾಯಿತು. ಪ್ರಪಂಚದ ಅತ್ಯಂತ ಎದೆಗಾತಿ, ದಿಟ್ಟ ಹೆಣ್ಣೊಬ್ಬಳು ತನ್ನ ಚರಿತ್ರೆಯನ್ನು, ಪ್ರೇಮದ ಹಾಗೂ ವೈಭವದ ಬದುಕನ್ನು ಅಚ್ಚಳಿಯದಂತೆ ವಿಲಕ್ಷಣವಾಗಿ ದಾಖಲಿಸಿ ಅಮರಳಾದಳು.



ಮನಸ್ಸಿನ ಚಿಂತಾಭ್ರಾಂತಿಗಳಿಗೆಲ್ಲ ಅಹಂಕಾರವೇ ಕಾರಣವಾಗಿದೆ. ಅಹಂಕಾರದಿಂದ ದೂರಿರುವುದರಿಂದಲೇ ಮನಸ್ಸಿಗೆ ಶಾಂತಿ ನೆಮ್ಮದಿಗಳು ಲಭಿಸುತ್ತವೆ.

—ಮಹಾವೀರ

ಯಶಸ್ವಿ ಜನ ಮಾಡದ ತಪ್ಪುಗಳು

ಎಸ್. ಶ್ರೀಧರಮೂರ್ತಿ

ಜೀವನ ಎನ್ನುವುದು ದೀರ್ಘವಾದೊಂದು ಉತ್ತೇಜಿತ ಪ್ರವಾಸ. ಈ ಪಯಣದಲ್ಲಿ ನಾನು ಕಂಡ ಘಟ್ಟಗಳು ಹಲವಾರು. ನನಗೆ ಕಾನೂನು ಕಾಲೇಜಿನ ಅನುಭವವಿದೆ, ಅಧ್ಯಕ್ಷರ ಶ್ವೇತಭವನದಲ್ಲಿ ಭಾಷಣ ಬರೆಯುವ ಕೆಲಸ ಮಾಡಿದ್ದೇನೆ, ವಾಣಿಜ್ಯ ಕೇಂದ್ರ ವಾಲ್‌ಸ್ಟ್ರೀಟ್‌ನಲ್ಲಿ ಷೇರು ಬಂಡವಾಳ ವಿವರಣಾ ಪತ್ರಗಳನ್ನು ಸಿದ್ಧಗೊಳಿಸಿದ್ದೇನೆ. ಕಳೆದ ೧೮ ವರ್ಷಗಳಿಂದ ಹಾಲಿವುಡ್‌ನ ಚಿತ್ರರಂಗದಲ್ಲಿ ಸಾಹಿತ್ಯ ಸೃಷ್ಟಿ ಹಾಗೂ ನಟನಾ ವೃತ್ತಿಯಲ್ಲಿ ತೊಡಗಿದ್ದೇನೆ.

ಈ ಎಲ್ಲ ಸಂದರ್ಭಗಳಲ್ಲಿಯೂ ಯಶಸ್ಸು ಗಳಿಸಿದ ಜನ ಕಾರ್ಯ ನಿರ್ವಹಿಸುವ ರೀತಿಯನ್ನು ಗಮನಿಸಿದ್ದೇನೆ. ಕೋಟ್ಯಾಧೀಶ ಉದ್ಯಮಿ ರಾನ್ ಪೆರ್ಲಮನ್‌ನಂತಹ ಬಲಿಷ್ಠರು, ಅಮೆರಿಕ ದೂರದರ್ಶನದ ಸುಪ್ರಖ್ಯಾತ ನಿರ್ಮಾಪಕ ನಾರ್ಮನ್ ಲಿಯರ್, ನಿಕೊಲಸ್ ಪೇಜ್‌ನಂತಹ ನಟರು ಮೇಲುಸ್ತರಕ್ಕೆ ಶ್ರಮದಿಂದ ಏರಿದ ರೀತಿಗಳನ್ನು ಕಂಡಿದ್ದೇನೆ.

ಇದೇ ರೀತಿಯಲ್ಲಿ ಉನ್ನತಮಟ್ಟಕ್ಕೆ ಏರಲಾರದೆ ಹೋದವರನ್ನು ಕಂಡಿದ್ದೇನೆ. ನನ್ನ ಕಾಲೇಜು ದಿನಗಳಲ್ಲಿ ಮೇಧಾವಿಗಳಾಗಿ ಮಿಂಚುತ್ತಿದ್ದವರು ಇಂದು ಅಂಗಡಿಗಳಲ್ಲಿ ಸರಕುಮಾರಾಟಗಾರರಾಗಿದ್ದಾರೆ; ಗಣಕಯಂತ್ರ ನಿಪುಣರಾಗಿದ್ದವರು ಇಂದು ಐಸ್‌ಕ್ರೀ ಮಾರುತ್ತಿದ್ದಾರೆ; ಗಣಿತದಲ್ಲಿ ಪ್ರತಿಭಾವಂತರಾಗಿದ್ದವರು ಹಳೆಯ ಬಂಗಲೆಗಳ ಸೋರುವ ಪೈಪುಗಳನ್ನು ರಿಪೇರಿ ಮಾಡುತ್ತಿದ್ದಾರೆ. ಅಂದರೆ ಇವರು ಯಾರೂ ಜೀವನದಲ್ಲಿ ಮುಂದುವರಿಯಲೇ ಇಲ್ಲ.

ಇವರ ತರಹವೆ ಅನೇಕ ಮಂದಿಗೆ ಯಶಗಳಿಸುವ ಪ್ರತಿಭೆ ಇದ್ದರೂ ಪ್ರಗತಿ ಸಾಧಿಸದೆ ಹೋಗಿದ್ದಾರೆ. ಕೆಲವರು ಮಾತ್ರ ಹಣ ಗಳಿಸಿ ಗಂಟು ಮಾಡುತ್ತಿದ್ದರೆ, ಹಲವರು ಹಣ ಸಾಲದೆ ಪರದಾಡುವುದೇಕೆ? ಅದೃಷ್ಟವೂ ಒಂದು ಕಾರಣ ಎನ್ನುವುದು ನಿಜ. ಆದರೆ ಸಾಮಾನ್ಯವಾಗಿ ಜನ ಆತ್ಮವಿಶ್ವಾಸದ ಕೊರತೆಯ ಧೋರಣೆ ಮತ್ತು ಅನುಚಿತ ವರ್ತನೆಗಳಲ್ಲಿ ಸಿಲುಕಿಕೊಂಡು ತಮ್ಮ ದುರದೃಷ್ಟವನ್ನು ಸೃಷ್ಟಿಸಿಕೊಳ್ಳುತ್ತಾರೆ.

ಜನವರಿ ೧೯೯೫ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಬೆಂಜಮಿನ್ ಸ್ಟೈನ್‌ನ ಲೇಖನ "ಮಿಸ್ಟೇಕ್ಸ್ ವಿನ್ನರ್ಸ್ ಡೋಂಟ್ ಮೇಕ್" ಲೇಖನದ ಅನುವಾದ.

ಇಲ್ಲಿ ಕೆಲವು ಪರಮ ಸೋಲುಕಾರಕ ಧೋರಣೆಗಳನ್ನು ವಿವರಿಸಿದ್ದೇನೆ. ನಿಜ ವಾಗಿಯೂ ಅಯಶಸ್ವಿಗಳಾದ ಜನರ ಎಂಟು ರೂಢಿಗಳಿವು ಎನ್ನಬಹುದು.

೧ ಭ್ರಮಾತ್ಮಕ ಚಿಂತನೆ

ಅಯಶಸ್ವಿಗಳಾದ ಜನ ತಮ್ಮ ಸ್ವಂತ ಜೀವನದ ಬಗ್ಗೆ ತಪ್ಪು ಕಲ್ಪನೆಯನ್ನು ನಿರಂತರವಾಗಿ ಇಟ್ಟುಕೊಂಡಿರುತ್ತಾರೆ. ತಮ್ಮ ವಾಸ್ತವ ವ್ಯಕ್ತಿತ್ವವನ್ನು ಸುಳ್ಳಾಗಿ ಭ್ರಮಿಸಿರುತ್ತಾರೆ. ಅಪ್ರಾಮಾಣಿಕವಾದ ಜನ ಜೀವನದಲ್ಲಿ ಯಶಗಳಿಸುವುದಿಲ್ಲ ಎಂಬ ಭಾವನೆ ನನಗೂ ಇತ್ತು. ವಿಷಾದದ ವಿಷಯ ವೆಂದರೆ ಇತರರ ಹಾಗೆ ಅಪ್ರಾಮಾಣಿಕ ವಾಗಿರುವ ಜನ ಕೊನೆಯ ಪಕ್ಷ ಆರ್ಥಿಕ ವಾಗಿಯಾದರೂ ಮುಂದುವರಿಯಲು ಸಾಧ್ಯ. ಆದರೆ ತಮಗೆ ತಾವೇ ಅಪ್ರಾಮಾ ಣಿಕರಾಗಿರುವ ಜನರಿಗೆ, ಅಂದರೆ ಜೀವನದಲ್ಲಿ ತಾವು ಎಲ್ಲಿದ್ದೇವೆ, ತಮ್ಮ ಗುರಿ ಸಾಧಿಸಲು ಮಾಡಬೇಕಾದ್ದು ಏನು, ಯಾವುದರಲ್ಲಿ ತಮಗೆ ಕೊರತೆ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲದ ಜನರಿಗೆ ಮುಂದುವರಿಯಲು ಸಾಧ್ಯವೇ ಇಲ್ಲ.

ನಮ್ಮ ನೆರೆಮನೆಯವನೊಬ್ಬ ಪುರಸೊತ್ತು ಅವಧಿಯಲ್ಲಿ ಚಿತ್ರಕಲೆಯನ್ನು ಬೋಧಿಸುತ್ತಿದ್ದ. ಹವ್ಯಾಸವಾದರೆ ಅದು ಒಳ್ಳೆಯದೆ. ಆದರೆ ಅವನು ಜೀವನವನ್ನು ವಿಲಾಸದಲ್ಲಿ ಬದುಕಲು ಅಗತ್ಯ ಹಣ ಅದರಿಂದ ದೊರೆಯುತ್ತಿರಲಿಲ್ಲ. ಅದಕ್ಕಾಗಿ ಎಷ್ಟು ಕಷ್ಟಪಡುತ್ತಿದ್ದೇನೆ ಎಂದು ಅವನು ಹೇಳಿಕೊಂಡಾಗಲೆಲ್ಲ, ಒಪ್ಪತ್ತು ಕಲಿಸುವ ಈ ವೃತ್ತಿಯಿಂದ ಅಪಾರ ಹಣ ಬರಲಾರದು ಎಂದು ಅವನಿಗೆ ಅರಿವೇ ಆಗುತ್ತಿರಲಿಲ್ಲ.

೨ ಅನುತ್ಪಾದಕತೆ

ವಾಸ್ತವವಾಗಿ ಅಪಾರ ಹಣ ತರುವಂಥ ಉಪಯುಕ್ತ ಕುಶಲತೆಯನ್ನು ಗಳಿಸಿ ಕೊಳ್ಳದೆ ಸಂಪಾದನೆ ಇಲ್ಲ ಎಂದು ಕೊರ ಗುವ ಸಾವಿರಾರು ಮಂದಿಯನ್ನು ನಾನು ಕಂಡಿದ್ದೇನೆ. ಏನಾದರೂ ಮಾಡಿದರೆ ಮಾತ್ರ ಮನುಷ್ಯರಿಗೆ ಹಣ ದೊರೆಯು ತ್ತದೆ ಎಂಬ ಮೂಲಭೂತ ಸತ್ಯವೂ ಇವರಿಗೆ ತಿಳಿಯುವುದಿಲ್ಲ. ಇನ್ನೊಂದು ಸತ್ಯವೂ ಇವರಿಗೆ ಅರ್ಥವಾಗುವುದಿಲ್ಲ. ಏನಾದರೂ ಮಾಡಿದಾಗ ಅದು ಅತ್ಯಂತ ಮೌಲಿಕ ವಾಗಿದ್ದಾಗ ಮಾಡಿದವರಿಗೆ ಅಪಾರ ಹಣ ದೊರೆಯುತ್ತದೆ. ವೈದ್ಯ, ಕಾನೂನು, ಚಿತ್ರ ರಚನೆ, ಆರ್ಥಿಕ ವ್ಯವಹಾರ ಇತ್ಯಾದಿ ಗಳನ್ನು ಮೌಲಿಕವಾಗಿ ದೊಡ್ಡ ಪ್ರಮಾಣ ದಲ್ಲಿ ಮಾಡಬೇಕು. ಆರ್ಥಿಕ ಯಶಸ್ಸೇ ನಿಮ್ಮ ಧ್ಯೇಯವಾದರೆ ಇತರರು ಬಯಸು ವಂಥದ್ದನ್ನು ಉತ್ಪಾದಿಸಬೇಕು, ಇಲ್ಲವೇ ಸೃಷ್ಟಿಸಬೇಕು. ಅದನ್ನು ವಾಸ್ತವ ಜಗತ್ತಿ ನಲ್ಲಿ ಮಾಡಬೇಕು, ಹಗಲು ಗನಸು ಕಟ್ಟಬಾರದು.

ಆರ್ಥಿಕ ತಜ್ಞರಾಗಿದ್ದ ನಮ್ಮ ತಂದೆ ನನಗೆ ಹೇಳಿಕೊಟ್ಟದ್ದೇನೆಂದರೆ ಜೀವನದಲ್ಲಿ ಲಭಿಸುವ ಎಲ್ಲ ಫಲಗಳೂ ಆರ್ಥಿಕ ಬಂಡ ವಾಳದಿಂದ ಇಲ್ಲವೆ ಮಾನವಶಕ್ತಿ ಬಂಡ ವಾಳದಿಂದ ಮಾತ್ರ ದೊರೆಯುತ್ತದೆ. ಆರ್ಥಿಕ ಬಂಡವಾಳ ಎನ್ನುವುದು ಸಾಮಾನ್ಯ ವಾಗಿ ಪಿತ್ರಾರ್ಜಿತ. ಅದು ಅದೃಷ್ಟ ಇದ್ದ ವರಿಗೆ ಮಾತ್ರ ಲಭ್ಯ. ಮಾನವಬಂಡವಾಳ ಎನ್ನುವ ಮಾರುಕಟ್ಟೆಗೊಳಿಸಬಹುದಾದ ಕುಶಲತೆಯನ್ನು ತೀವ್ರ ಯತ್ನ ಹಾಗೂ ತರಬೇತಿಯಿಂದ ಮಾತ್ರ ಗಳಿಸಬಹುದು.

೩ ಸ್ನೇಹತ್ವಕ್ಕೆ ಎರವಾಗುವುದು

ಆಯಶಸ್ವಿಯುಗಳಾದ ಜನ ಸಾಮಾನ್ಯವಾಗಿ ತಮಗೆ ಸಹಾಯ ಮಾಡಿದವರೊಂದಿಗೆ ಸ್ನೇಹ ಹಾಗೂ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ, ತಮಗೆ ಸಹಾನುಭೂತಿ ತೋರುವವರ ಜೊತೆಗೆ ನಿರ್ಲಕ್ಷ್ಯ ಹಾಗೂ ಕೃತಜ್ಞತೆಯನ್ನು ತೋರುವುದು ವಾಡಿಕೆಯಾಗಿದೆ. ನಿತ್ಯ ಜೀವನದಲ್ಲಿ ಈ ಬಗೆಯ ಜನರನ್ನು ಕಂಡೂ ಕಂಡೂ ಆಶ್ಚರ್ಯಚಕಿತನಾಗಿದ್ದೇನೆ. ನನ್ನ ಹತ್ತಿರದ ಗೆಳೆಯನೊಬ್ಬ ಚಿತ್ರರಂಗದಲ್ಲಿ ಅನೇಕ ಅವಕಾಶಗಳನ್ನು ಒಂದಾದ ಮೇಲೊಂದರಂತೆ ಪಡೆದ ಎರಡು ಭಿನ್ನ ಸಂಸ್ಥೆಗಳ ಪ್ರಭಾವೀ ವ್ಯಕ್ತಿಗಳು ಅವನನ್ನು ಯಶಸ್ಸಿನ ಹಾದಿಯಲ್ಲಿ ಬಹಳ ಹಿಂದೆಯೇ ನಡೆಸಿದರು. ನಂತರ ಸುಮಾರು ೨೦ ವರ್ಷಗಳ ಕಾಲ ಆತ ಅವರ ಸಹವಾಸವನ್ನು ನಿರ್ಲಕ್ಷಿಸಿದ. ಅಷ್ಟೇ ಅಲ್ಲ ತನ್ನನ್ನು ನಿಕೃಷ್ಟವಾಗಿ ಕಾಣುವ ಇತರ ಪ್ರಭಾವೀ ವ್ಯಕ್ತಿಗಳ ಬೆನ್ನು ಹತ್ತಿ ಹಳೆಯ ಸ್ನೇಹಿತರಿಗೆ ಇರಿಸುಮುರಿಸು ಮಾಡಿದ. ಅಂದಮೇಲೆ ಈಗ ಆತ ತನ್ನ ೪೭ ನೆಯ ವಯಸ್ಸಿನಲ್ಲಿ ಯಾವ ಉದ್ಯೋಗವೂ ಇಲ್ಲದೆ ಸಾಲಗಾರನಾಗಿ ಉಳಿದಿರುವುದರಲ್ಲಿ ಆಶ್ಚರ್ಯವೇನಿದೆ?

ಆಯಶಸ್ವಿಗಳು ಸಾಮಾನ್ಯವಾಗಿ ಸ್ನೇಹಿತರನ್ನು ಗೌಣವಾಗಿ ಕಾಣುತ್ತಾರೆ. ಇದೇ ಅವರ ಪತನಕ್ಕೆ ಮೂಲವಾಗುತ್ತದೆ. ಅತ್ಯಂತ ವಿಶಿಷ್ಟವಾದ ಪ್ರತಿಭೆ ಇರುವ ಕಲಾವಿದ ಅಥವಾ ಕ್ರೀಡಾಪಟು ಆದಾಗ ಮಾತ್ರ ಯಶಸ್ಸನ್ನು ಏಕಾಂಗಿಯಾಗಿ ಸಾಧಿಸಬಹುದು. ಇಲ್ಲವಾದರೆ ಸ್ನೇಹಿತರ ಮತ್ತು ಬೆಂಬಲಿಗರ ಒಂದು ವೃತ್ತ ಇಲ್ಲದೆ ಯಶಸ್ಸು ಎಂಬ ಪದವೇ ಇಲ್ಲ. ನಾನು ಕಂಡಂಥ ಎಲ್ಲರ ವೈಫಲ್ಯಗಳ ಹಿಂದೆ, ಆ ವ್ಯಕ್ತಿಗಳಿಗೆ ಸ್ನೇಹಿತರನ್ನು ಮಾಡಿಕೊಳ್ಳುವ ಅಥವಾ ಸ್ನೇಹಿತರನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಇಲ್ಲದಿರುವಿಕೆಯೆ ಕಾರಣವಾಗಿದೆ.

೪ ಕೆಟ್ಟ ವರ್ತನೆ

ಆಯಶಸ್ವಿಯಾದ ಜನ ಸಾಮಾನ್ಯವಾಗಿ ಒರಟಾಗಿ ವರ್ತಿಸುತ್ತಾರೆ. ಸರಿಯಾದ ವೇಳೆಗೆ ಬರುವುದಿಲ್ಲ, ಉಡುಗೊರೆ ನೀಡಿದವರಿಗೆ ಧನ್ಯವಾದ ಹೇಳುವುದಿಲ್ಲ. ಮಾಡಿದ ತಪ್ಪು ಮತ್ತು ಆಭಾಸಗಳಿಗೆ ಕ್ಷಮೆ ಕೋರುವುದಿಲ್ಲ.

ಮನೆಗೆ ಊಟಕ್ಕೆ ಕರೆದಾಗ ಅತಿಥಿಗಳು ಎಷ್ಟು ತಡವಾಗಿ ಬರುತ್ತಾರೆಂಬುದನ್ನು ನಾನು ಯಶಸ್ಸು/ತಡ ಅಳತೆ ಗೋಲಿನಿಂದ ಲೆಕ್ಕಹಾಕುತ್ತೇನೆ. ಒಳ್ಳೆಯ ಹುದ್ದೆಯಿದ್ದು ಕೈತುಂಬ ಕೆಲಸವಿರುವ ಜವಾಬ್ದಾರಿಯುತ ವ್ಯಕ್ತಿ ಕಾಲಕ್ಕೆ ಸರಿಯಾಗಿ ಆಗಮಿಸುತ್ತಾನೆ. ದಿನವಿಡೀ ಕೆಲಸವಿಲ್ಲದ ವ್ಯಕ್ತಿ ಬಹಳ ತಡವಾಗಿ ಬರುತ್ತಾನೆ ಇಲ್ಲವೇ ಬರುವುದೇ ಇಲ್ಲ. ಕೆಳದರ್ಜೆಯ ಕೆಲಸದಲ್ಲಿರುವ ವ್ಯಕ್ತಿ ಸಾಮಾನ್ಯವಾಗಿ ೧೫ ನಿಮಿಷದಿಂದ ಒಂದು ಗಂಟೆ ತಡವಾಗಿ ಬರುತ್ತಾನೆ.

ಮನೆಗೆ ಬಂದು ಊಟ ಮಾಡಿದವರು ಭೋಜನದ ಬಗ್ಗೆ ಯಾವ ರೀತಿ ವರ್ತಿಸುತ್ತಾರೆ ಎನ್ನುವುದನ್ನು ಗಮನಿಸಿದ್ದೇನೆ. ಅತಿಥಿ ಆಯಶಸ್ವಿಯಾದವನಾದರೆ, ಬಂದು ಊಟ ಮಾಡಿದ್ದರಿಂದಲೇ ನನಗೆ ಅನುಗ್ರಹಿಸಿದ ಹಾಗೆ ವರ್ತಿಸುತ್ತಾನೆ. ಧನ್ಯವಾದಗಳನ್ನು ಹೇಳುವುದಿಲ್ಲ. ಯಶಸ್ವಿಯಾದವನಾದರೆ ಎಲ್ಲ ವಿಚಾರದಲ್ಲಿಯೂ ಸುಪ್ರೀತ

ನಾಗಿರುತ್ತಾನೆ. ಎಲ್ಲವನ್ನು ಮೆಚ್ಚಿಕೊಳ್ಳುತ್ತಾನೆ.

ನನ್ನ ಹತ್ತಿರದ ಗೆಳೆಯನೊಬ್ಬ ಚಿತ್ರ ನಿರ್ಮಾಪಕನಾಗಿದ್ದ. ಒಳ್ಳೆಯ ನಿರ್ಮಾತನಾಗುವ ಆಸೆ ಹುಟ್ಟಿಸಿದ್ದ. ಆದರೆ ಕಾಲ ಕಳೆದಂತೆ ಅವನ ಅದೃಷ್ಟ ಬಿಗಡಾಯಿಸತೊಡಗಿತು. ಅವನ ವಿನಾಶಕ್ಕೆ ಅವನ ಕೆಟ್ಟ ವರ್ತನೆಯೂ ನೆರವಾಗತೊಡಗಿತು. ನಾನು ಮಾಡಿದ ಸತ್ಕಾರಗಳಿಗೆ, ಒದಗಿಸಿದ ಅವಕಾಶಗಳಿಗೆ ಆತ ಎಂದೂ ಕೃತಜ್ಞತೆ ತೋರಲಿಲ್ಲ. ಕೊನೆಗೆ ನಾನು ಇತರರು ಹಿಂದೆಯೇ ಮಾಡಿದಂತೆ ಅವನಿಗೆ ನೆರವಾಗುವುವನ್ನು ನಿಲ್ಲಿಸಿದೆ. ಆಟಗಾರನೊಬ್ಬ ತನ್ನ ಒರಟುತನದಿಂದ ಎಲ್ಲರನ್ನು ದೂರವಿರಿಸಿಕೊಂಡರೆ ಅವನಿಗೆ ಆಡಲು ಸಾಧ್ಯವಾಗುವುದೇ ಇಲ್ಲ. ಕೋಟ್ಯಾಧಿಪತಿಗಳು ಒರಟಾದರೂ ನಡೆಯುತ್ತದೆ. ಉಳಿದವರು ಒರಟಾದರೆ ಯಶಸ್ಸು ಕನಸಿನ ಬುತ್ತಿಯಾಗುತ್ತದೆ.

೫ ವೈಫಲ್ಯದ ಉಡುಗೆ

ನನಗೆ ಪರಿಚಯವಿದ್ದ ಸುಂದರ ತರುಣಿಯೊಬ್ಬಳಿಗೆ ಉದ್ಯೋಗದ ಅವಶ್ಯಕತೆ ತೀವ್ರವಾಗಿತ್ತು. ಅವಳಿಗೆ ಕೆಲಸ ಕೊಡಿಸುವ ಉದ್ದೇಶದಿಂದ ಅವಳಿಗೊಂದು ಉದ್ಯೋಗ ಸಂದರ್ಶನದ ಅವಕಾಶ ಒದಗಿಸಿದೆ. ದೊಡ್ಡ ಉದ್ಯಮ ಸಂಸ್ಥೆಯ ಮುಖ್ಯನ ಜೊತೆ ಭೋಜನದ ಸಂದರ್ಭ ಅದು. ಈ ಸಂಸ್ಥೆ ಕೌಟುಂಬಿಕ ಮೌಲ್ಯಗಳಿಗೆ ಆದರ ನೀಡುವಂಥದು. ಭೋಜನ ಕೊಠಡಿಗೆ ಇವಳು ಪ್ರವೇಶಿಸಿದ್ದು ಹೇಗೆ ಗೊತ್ತೆ? ತುಂಡು ಚಡ್ಡಿ ಧರಿಸಿ ಫ್ಯಾಶನ್ ಷರ್ಟ್ ಹಾಕಿಕೊಂಡು ಎತ್ತರ ಹಿಮ್ಮಡಿ ಚಪ್ಪಲಿ ಹಾಕಿಕೊಂಡು ಬಂದಳು. ಅವಳು ಹೀಗೆ ಕಾಣಿಸಿಕೊಂಡ ಕ್ಷಣವೇ ಅವಳ ಉದ್ಯೋಗಾವಕಾಶ ಮಣ್ಣು ಪಾಲಾಯಿತು. ಅವಳನ್ನು ಪರಿಚಯಿಸ ಬಯಸಿದ ನಾನು ಮುಠ್ಠಾಳನಾದೆ.

ಅಯಶಸ್ವಿ ಜನ ಸಾಮಾನ್ಯವಾಗಿ ಸಂದರ್ಭೋಚಿತ ಉಡುಗೆಗಳನ್ನು ಧರಿಸುವುದಿಲ್ಲ. ಉದ್ಯೋಗ ಸಂದರ್ಶನಗಳಿಗೆ ಹೋಗುವ ಅಂತಹ ಜನ ಆಗ ಧರಿಸಬೇಕಾದಂತಹ ಉಡುಗೆಗಳನ್ನು ಮರೆಯುತ್ತಾರೆ. ಉನ್ನತ ಭೋಜನ ಕೂಟಗಳಿಗೆ ಎಲ್ಲರು ಚೊಕ್ಕ ಉಡುಗೆಗಳನ್ನು ಧರಿಸಿ ಬಂದರೆ ಇವರು ಆ ಸನ್ನಿವೇಶಕ್ಕೆ ಹೊಂದದ ಉಡುಗೆಗಳನ್ನು ಧರಿಸಿರುತ್ತಾರೆ. ಇಂಥ ಉಡುಗೆಗಳಿಂದ ನಾವು ಬೇರೆಯವರಿಗೆ ವಿಶಿಷ್ಟವಾಗಿ ಕಾಣಿಸುತ್ತೇವೆ ಎಂದು ಅವರು ಭಾವಿಸುತ್ತಾರೆ. ಆದರೆ ಬಂದಿರುವ ಸ್ಥಳಕ್ಕೆ ಹೊಂದಿಕೊಳ್ಳದ ವಿಚಿತ್ರ ವ್ಯಕ್ತಿಗಳಾಗಿ ಕಾಣುತ್ತಿದ್ದೇವೆ ಎಂದು ಅವರಿಗೆ ಅನ್ನಿಸುವುದಿಲ್ಲ. ಸಮಯ ಸಂದರ್ಭಕ್ಕೆ ಸೂಕ್ತವಾಗಿರಬೇಕೆಂಬ ಜನರಿಗೆ ಅವಮಾನ ಮಾಡುತ್ತಿದ್ದೇವೆ ಎಂದು ಅವರಿಗೆ ಹೊಳೆಯುವುದಿಲ್ಲ.

೬ ಕೆಟ್ಟ ಧೋರಣೆ

ಅಯಶಸ್ವಿ ಜನರಿಗೆ ಹುಟ್ಟುಗಿನ ನಿರಾಶಾವಾದಿ ಧೋರಣೆ ಇರುತ್ತದೆ. ತಮ್ಮ ಕೆಲಸ, ತಮ್ಮ ಜಗತ್ತು ಎಲ್ಲದರ ಬಗ್ಗೆ ಬೇಸರ. ತಮ್ಮ ಸುತ್ತಮುತ್ತಲಿನ ಜನರನ್ನು ಪ್ರಾಮಾಣಿಕರು ದಡ್ಡರು ಎಂದು ಪರಿಗಣಿಸುತ್ತಾರೆ. ಯಾವುದೇ ವಿಚಾರದಲ್ಲಾಗಲಿ ಮಂಕುಕವಿಸುತ್ತಾರೆ. ಅವರ ಸ್ವಂತ ಹತಾಶೆ ಹಾಗೂ ಅಸಹಾಯಕತೆಯಿಂದ

ಸುತ್ತಲಿನ ಜನರ ಮೇಲೂ ಹೀನ ಪರಿಣಾಮ ಉಂಟುಮಾಡುತ್ತಾರೆ. ತಮ್ಮ ಬಗ್ಗೆಯೇ ಅವರಿಗೆ ಧೃಢ ವಿಶ್ವಾಸ ಇರುವುದಿಲ್ಲ.ತಮಗೆ ಬಹಳಷ್ಟು ಮಾಡಲು ಸಾಧ್ಯವಿಲ್ಲ. ಚೆನ್ನಾಗಿ ಮಾಡಲು ಸಾಧ್ಯವಿಲ್ಲ ಎಂದುಕೊಂಡೇ ಬಿಡುತ್ತಾರೆ. ಅವರ ಜೊತೆ ಸಹನೆಯಿಂದ ಮಾತು ಕೇಳುವ ಎಲ್ಲರಿಗೂ ಇದನ್ನೇ ಹೇಳುತ್ತಿರುತ್ತಾರೆ. ತಾವು ಸೋತವರು ಎಂದು ಪ್ರಚಾರ ಮಾಡಿಕೊಳ್ಳುತ್ತಿದ್ದೇವೆ ಎಂದು ಅವರಿಗೆ ಅರ್ಥವಾಗುವುದೇ ಇಲ್ಲ.

ನನ್ನ ಗೆಳೆಯನೊಬ್ಬ ಕಚೇರಿಯಲ್ಲಿ ಆಯಾ ದಿನದ ಕೆಲಸವನ್ನು ಸಮರ್ಥವಾಗಿ ಮುಗಿಸಬಲ್ಲವನಾಗಿದ್ದ. ಆದರೆ ಯಾವುದೇ ಕಚೇರಿಯಲ್ಲಿ ಕೆಲಸ ಮಾಡಲಿ ಕೂರುವ ಸ್ಥಳ ಸರಿಯಿಲ್ಲ, ಫ್ಯಾನು ಸರಿಯಾಗಿ ತಿರುಗುವುದಿಲ್ಲ. ಇತ್ಯಾದಿ ದೂರುಗಳೇ ಅವನದು. ತನ್ನ ಉದ್ಯೋಗವನ್ನು ಮೇಲಧಿಕಾರಿಯನ್ನು ಹಳಿಯುವುದು ಅವನ ಚಾಳಿ. ತನ್ನ ಸಹೋದ್ಯೋಗಿಗಳೊಂದಿಗೆ ತಾವು ಮಾಡುವ ಕೆಲಸ ವ್ಯರ್ಥ ಎಂದು ಬೇರೆ ಹೇಳುವುದು. ಎರಡು ವರ್ಷಗಳಲ್ಲಿ ಐದು ಕಚೇರಿಗಳಿಂದ ಆತ ಉದ್ಯೋಗ ಕಳೆದುಕೊಂಡ. ಯಾವ ಅಧಿಕಾರಿಯಿಂದಲೂ ಅವನು ಒಳ್ಳೆಯ ಶಿಫಾರಸು ಪತ್ರ ಪಡೆಯಲಾಗಲಿಲ್ಲ. ನಿತ್ಯ ದೂರುವವರಿಗೆ ಸತ್ಯವಾಗಿ ಕಟ್ಟಿಟ್ಟ ಬುತ್ತಿ ಇದು.

೭ ಅನಗತ್ಯವಾಗಿ ವಾದಿಸುವುದು

ಅಯಶಸ್ವಿ ವ್ಯಕ್ತಿಗಳು ಸುಮ್ಮನೆ ವಾದದ ಮಜಕ್ಕಾಗಿ ವಾದ ಮಾಡುತ್ತಾರೆ. ಜಗಳಗಳನ್ನು ಆರಂಭಿಸುವ ವ್ಯಕ್ತಿಗಳಿಗೆ ತಾವು ಬುದ್ಧಿವಂತರೆಂದು ತಮ್ಮ ಗೆಳೆಯರು, ಸಹೋದ್ಯೋಗಿಗಳು ಭಾವಿಸುತ್ತಾರೆ ಎಂಬ ಭ್ರಮೆ ಇರುತ್ತದೆ. ಇದು ಖಂಡಿತವಾದ ತಪ್ಪು ಗ್ರಹಿಕೆ.

ಒಬ್ಬ ಪ್ರಸಿದ್ಧ ರಾಜಕಾರಣಿ ಹೇಳುವ ಮಾತೆಂದರೆ "ನೀನು ಬಹುದೂರ ಸಾಗಬೇಕೆಂದಿದ್ದರೆ ಜೊತೆಜೊತೆಗೆ ನಡೆ" ಇತರರು ಹೇಳಿದ್ದೆಲ್ಲವನ್ನು ಒಪ್ಪಿಕೊಳ್ಳಬೇಕೆಂಬುದು ಅವನ ಅರ್ಥವಲ್ಲ. ಅವನ ಮಾತಿನ ವಾಸ್ತವ ಅರ್ಥವೆಂದರೆ ಇತರ ವ್ಯಕ್ತಿಗಳನ್ನು ನಿರಂತರವಾಗಿ ರೇಗಿಸಿ ನಂತರ ಅವರಿಂದ ನೆರವನ್ನು ನಿರೀಕ್ಷಿಸಲಾಗುವುದಿಲ್ಲ ಎಂದು.

ಕೆಲಸ ಕಾರ್ಯಗಳನ್ನು ಸುಗಮವಾಗಿ ಮಾಡಿಕೊಳ್ಳುವ ವ್ಯಕ್ತಿಗಳು ವೃಥಾ ಅನಗತ್ಯ ವಾದಗಳಲ್ಲಿ ಕಾಲ ವ್ಯರ್ಥ ಮಾಡಲು ಬಯಸುವುದಿಲ್ಲ. ವಾದ ಜಗಳಗಳನ್ನು ಮಾಡುವ ವ್ಯಕ್ತಿಗಳ ಸುತ್ತ ಕೇವಲ ವಾದ ಜಗಳ ಮಾಡುವ ಅಯಶಸ್ವಿ ವ್ಯಕ್ತಿಗಳು ಮಾತ್ರ ಉಳಿಯುತ್ತಾರೆ. ಇದು ವಿಫಲತೆಯತ್ತಣ ಖಂಡಿತ ಮಾರ್ಗ.


೮ ಆದ್ಯತೆಗಳ ಏರುಪೇರು

ಅಯಶಸ್ವಿ ವ್ಯಕ್ತಿಗಳಿಗೆ ಯಾವುದಕ್ಕೆ ಆದ್ಯತೆ ಕೊಡಬೇಕು ಯಾವುದಕ್ಕೆ ಕೊಡಬಾರದು ಎನ್ನುವುದು ಗೊತ್ತಾಗುವುದಿಲ್ಲ. ನನ್ನ ಸಹಪಾಠಿಯೊಬ್ಬನಿದ್ದ. ಬುದ್ಧಿವಂತ, ದೃಢಕಾಯ. ಆತನ ತಂದೆ ಜೀವನದಲ್ಲಿ ಯಶಸ್ವಿಯಾದವರು ಆದರೆ ನನ್ನ ಸಹಪಾಠಿ ಮಾತ್ರ ಅತ್ಯಂತ ಗೌಣ ಉದ್ಯೋಗದಲ್ಲಿ ಕೊಳೆಯತೊಡಗಿದ. ನಾನು ಅವನಿಗೆ ಇನ್ನಷ್ಟು ಅಧ್ಯಯನ, ತರಬೇತಿ ಪಡೆದು ಉತ್ತಮ ಉದ್ಯೋಗಕ್ಕೆ

ಹೋಗು ಎಂದು ಸಲಹೆ ಮಾಡಿದರೆ ನನಗೆ ಪುರುಸೊತ್ತೇ ಇಲ್ಲ, ನನ್ನ ಹವ್ಯಾಸಗಳಿಗೇ ನನಗೆ ವೇಳೆ ಸಾಕಾಗುವುದಿಲ್ಲ ಎನ್ನುತ್ತಿದ್ದ. ಕಳೆದ ೩೦ ವರ್ಷಗಳಿಂದ ಇದೇ ಮಾತು ಹೇಳುತ್ತಿದ್ದಾನೆ.

ಸತ್ಯವೇನೆಂದರೆ, ಎಲ್ಲವನ್ನು ಮಾಡಲು ಯಾರಿಗೂ ಸಾಕಷ್ಟು ಕಾಲಾವಕಾಶ ವಿರುವುದಿಲ್ಲ. ಅತ್ಯಂತ ಪ್ರಮುಖ ಅಗತ್ಯದವುಗಳನ್ನು ಮಾಡಲು ಸಮಯ ಸಾಕಾಗವು. ಆದರೂ ಅಯಶಸ್ವಿ ಜನರಿಗೆ ಆದ್ಯತೆಗಳನ್ನು ಗುರುತಿಸಿಕೊಳ್ಳುವುದು ಖಡಾಖಂಡಿತ ಅಗತ್ಯ ಎನ್ನುವುದು ಮನಗಾಣುವುದಿಲ್ಲ. ಹೆಚ್ಚು ಪ್ರಾಮುಖ್ಯದ ಅಂಶಗಳನ್ನು ಆಯ್ದುಕೊಂಡು ಗೌಣವಾದವುಗಳನ್ನು ಕೈ ಬಿಡುವುದು ತ್ಯಾಗದ ಮಾತಲ್ಲ; ನಿಜ ಹೇಳಬೇಕೆಂದರೆ ಲಾಭದ ಮಾತು.

ಈ ಬುದ್ಧಿವಾದವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ನಿಮಗೂ ಇಂಥ ಕೆಲವು ಚಾಳಿಗಳಿರಬಹುದು. ಯಶಸ್ವಿಯಾಗಬಲ್ಲ ದಕ್ಷತೆ ಇರುವವರಿಗೆ ಈ ಚಾಳಿಗಳನ್ನು ಬದಲಿಸಿಕೊಳ್ಳಲು ಗೊತ್ತು ಎಂಬುದನ್ನು ನೆನಪಿಡಿ. ಅಂದ ಮೇಲೆ, ನಿಮಗೂ ಗೊತ್ತು. ಅಲ್ಲವೆ?



ಬುದ್ಧಿಯ ಅಪರಾಧಗಳಿಗೆ ಈ ಲೋಕದಲ್ಲಿ ಶಿಕ್ಷೆ ದೊರೆತರೆ, ಹೃದಯದ ಅಪರಾಧಗಳಿಗೆ ಪರಲೋಕದಲ್ಲಿ ಶಿಕ್ಷೆ ದೊರೆಯುತ್ತದೆ. ಆದರೆ ಅನೇಕ ಅಪರಾಧಗಳಿಗೆ ಬುದ್ಧಿ ಹೃದಯಗಳೆರಡೂ ಕೆಲಮಟ್ಟಿಗೆ ಹೊಣೆಯಾಗಿರುವುದರಿಂದ ಶಿಕ್ಷೆಯು ಇಲ್ಲಿ ಹಾಗೂ ಅಲ್ಲಿ ಕೂಡಿಯೇ ದೊರೆಯುವದು.

—ಕಾಲ್ಟನ್

ಅನ್ಯಾಯ ಮಾಡುವವನು ಅದನ್ನು ಅನುಭವಿಸುವವನಿಗಿಂತಲೂ ಹೆಚ್ಚು ದುಃಖಿಯಾಗುತ್ತಾನೆ.

—ಪ್ಲೇಟೋ

ಜಾಗೀರ್ದಾರ್ ಮತ್ತು ಅವನ ನಾಯಿ

ಬಿ. ಜಿ. ಕನಕೇಶಮೂರ್ತಿ

ಇಂಗ್ಲೆಂಡಿನಿಂದ ಹಿಂತಿರುಗಿದ ಬಳಿಕ ಜಾಗೀರ್ದಾರನು ಅದೇ ಮೊದಲಸಲ ನಮ್ಮ ಹಳ್ಳಿಗೆ ಭೇಟಿಕೊಡುತ್ತಿದ್ದನು. ಊರಿನ ಎಲ್ಲ ಜನರೂ ಅವನ ಬರುವಿಕೆಯನ್ನೇ ಎದುರು ನೋಡುತ್ತಿದ್ದರು.

ಗ್ರಾಮಸೇವಕನು ಸುಮಾರು ಒಂದು ವಾರದಿಂದಲೂ ಹಾಲಿನ ಪಾತ್ರೆ (ಗಡಿಗೆ) ಯನ್ನು ಸಿದ್ಧಮಾಡುವುದರಲ್ಲಿ ತೊಡಗಿದ್ದನು. 'ಬಾಪು' ಯಾವ ಕ್ಷಣದಲ್ಲಿ ಬರುತ್ತಾರೆಂದು ಹೇಳಲು ಯಾರಿಗೆತಾನೆ ಸಾಧ್ಯ? ಚಾರಪಾಯಿ, ಮೆತ್ತನೆಯ ಹಾಸುಗಳು ಬಂದವು. ಪಟೇಲ ಊರನ್ನು ಬಿಟ್ಟು ಎಲ್ಲಿಗೂ ಹೋಗದಂತೆಯೂ, ಹಜಾಮ, ಮೋಚಿ, ನೀರು ತರುವವರು ಯಾವಾಗಲೂ ಸಿದ್ಧರಾಗಿರುವಂತೆಯೂ ಆದೇಶಿಸಲ್ಪಟ್ಟಿದ್ದರು. ಕೆಲವು ಪೋಲೀಸರು ದಿನದ ಇಪ್ಪತ್ತನಾಲ್ಕುಗಂಟೆಯೂ ಗಸ್ತಿನಲ್ಲಿದ್ದರು; ಅವರು ಮನೆಗೆ ಊಟಕ್ಕೆಂದು ಹೋಗುವಾಗಲೂ ತಮ್ಮ ಬದಲಿಗೆ ಬೇರೆಯವರನ್ನು ನೇಮಿಸಿ ಹೋಗುತ್ತಿದ್ದರು.

ಇವತ್ತು ಬಾಪುವಿನ ಅಡುಗೆಭಟ್ಟ, ಮನೆಗೆಲಸದವರು ಮತ್ತು ಅಂಗರಕ್ಷಕರು ಬೆಳಗ್ಗೆಯೇ ಊರಿಗೆ ಬಂದಿಳಿದಿದ್ದು, ಊರಿನಲ್ಲಿ ಒಂದು ರೀತಿಯ ಕುತೂಹಲದ ವಾತಾವರಣ ಉಂಟಾಗಿತ್ತು.

ಅಡುಗೆಭಟ್ಟ ತನ್ನ ಸಹಾಯಕ್ಕಾಗಿ ಊರಿನ ನಾಲ್ಕು ಜನರನ್ನು ಸೇರಿಸಿಕೊಂಡು ಅಡುಗೆಯ ಕೆಲಸಕ್ಕೆ ತೊಡಗಿದ. ಪಟೇಲನು ಜಾಗೀರ್ದಾರನ ಸಮಸ್ತ ಪರಿವಾರದ ನೆರವಿಗಾಗಿ ಸದಾಕಾಲ ನಿರತನಾಗಿದ್ದ. ಪೋಲೀಸರು ಅಡುಗೆ ಪಾತ್ರೆಗಳು, ಹಾಲು, ಮೊಸರು ಇವನ್ನು ಸಂಗ್ರಹಿಸಲು ಊರಿನೊಳಗೆ ಹೋಗಿದ್ದರು; ಉಳಿದ ಅಡುಗೆ ಸಾಮಾನುಗಳನ್ನು ಬನಿಯನ ಅಂಗಡಿಯಿಂದ ಖರೀದಿಸಿ ತಂದರು—ಈ ಸಂಬಂಧದ ಒಟ್ಟು ಖರ್ಚಿನ ಹೊರೆಯನ್ನು ಇಡೀ ಊರೇ ಹೊರಬೇಕಾಗಿತ್ತು—ಜಾಗೀರ್ದಾರನ ಸೇವಕರು ಎಲ್ಲ ಏರ್ಪಾಡುಗಳನ್ನು ಮಾಡತೊಡಗಿದ್ದರಿಂದ ಪ್ರತಿಯೊಂದೂ ಅಚ್ಚುಕಟ್ಟಾಗಿತ್ತು.

ಗ್ರಾಮಸೇವಕನು ಅದೇ ಊರಿನ ಟೈಲರ್ ದಾಲಾನು ಸುಮಾರು ಐದು ವರ್ಷಗಳ ಹಿಂದೆಯೇ ಹೊಲೆದುಕೊಟ್ಟ ಷರಾಯಿ, ಕೋಟನ್ನು ತೊಟ್ಟು, ತಲೆಗೆ ನಸುಗೆಂಪು ಬಣ್ಣದ ರುಮಾಲನ್ನು ಸುತ್ತಿ

ಗುಜರಾತಿ ಮೂಲ: ಪನ್ನಾಲಾಲ್ ಪಟೇಲ್, ಇಂಗ್ಲಿಷ್ ಅನುವಾದ: ಧನಂಜಯ್ ದೇಸಾಯಿ. ಕನ್ನಡಕ್ಕೆ: ಬಿ. ಜಿ. ಕನಕೇಶಮೂರ್ತಿ

ಕೊಂಡು, ರಸ್ತೆಯ ಕಡೆಗೊಂದು ಕಣ್ಣಿಟ್ಟು ಕೊಂಡು ಒಂದೇ ಸಮನೆ ಅತ್ತಿಂದಿತ್ತ ಅಡ್ಡಾಡುತ್ತಿದ್ದನು.

ತಕ್ಷಣ ಯಾರೋ "ಕಾರು ಬರ್‍ತಾ ಇದೆ ಅನ್ಸುತ್ತೆ" ಎಂದರು. ಆ ಕೂಡಲೇ ಎಲ್ಲರೂ ಕಾರು ಬರುವ ಸದ್ದನ್ನು ಆಲಿಸಲು ಚುರುಕಾದರು. ಕಿರುವಿನಲ್ಲಿ ದೊಡ್ಡ ಗುಂಪೇ ಸೇರಿತು. "ಅಲ್ಲಿ ಬರ್‍ತಾ ಇದೆ....ನೋಡಿ, ಧೂಳು ಏಳ್ತಾ ಇದೆ....ಇನ್ನೇನು ಕಾಣ್ಸೇ ಬಿಡುತ್ತೆ...."

ಪೋಲೀಸನೊಬ್ಬ ಗುಂಪಿನ ಮುಂದೆ ನುಗ್ಗಿದ. "ಮೂರ್ಖರಾ ದಾರೀಲಿ ನಿಲ್ಲಬೇಡ್ರಿ! ಸಾಲಾಗಿ ನಿಲ್ರಿ. ಪಿಶಾಚಿಗಳಾ ಗಲಾಟೆ ಮಾಡಬೇಡ್ರಿ, ಬಾಯಿ ಮುಚ್ಕೊಳ್ರಿ. ಬಾಯಿ ಮುಚ್ಕೊಳ್ರಿ. ಬಾಪೂ ಬರ್‍ತಿದ್ದ ಹಾಗೆ—ಕೇಳ್ತಾದೀರಾ, ಹೆಡ್ಡರಾ—ಅವರ ಕಾಲಿಗೆ ಬಿದ್ದು ನಮಸ್ಕಾರ ಮಾಡ್ರಿ."

ಹಳ್ಳಿಗರ ಬಾಗಿದ ತಲೆಗಳ ಮೇಲೆ ಧೂಳು ತುಂಬುತ್ತಾ ಬಾಪುವಿನ ಕಾರು ಬಂದು ಸಾರ್ವಜನಿಕ ಚೌಕದ ಹತ್ತಿರ ನಿಂತಿತು.

ಕಾರಿನ ಬಾಗಿಲು ತೆರೆಯಿತು. ಬಾಪು ಅದರಿಂದ ಇಳಿದರು. ಅವರ ಹಿಂದೆಯೇ ನೀಳವಾದ ಕಿವಿಗಳು, ಪುಟ್ಟಪುಟ್ಟ ಕಾಲುಗಳು ಮೈತುಂಬ ಜೂಲಿರುವ ಮಂಜಿನಂಥ ಬಿಳಿಯ ಬಣ್ಣದ ಪ್ರಾಣಿಯೊಂದು ಇಳಿಯಿತು. ಹಿಂಬದಿಯ ಸೀಟಿನಿಂದ ಬಾಪುವಿನ ಕಾರ್ಯದರ್ಶಿ ಇಳಿದ.

ಜಾಗೀರ್ದಾರ್ ಸುಮಾರು ಇಪ್ಪತ್ತೆಂಟರ ಹರೆಯದ ಯುವಕ. ಅವನ ಮುಖ ಅಷ್ಟು ಸುಂದರವಾಗಿರವಿದ್ದರೂ, ದೇಹ ಕಟ್ಟುಮಸ್ತಾಗಿತ್ತು. ಪ್ಯಾಂಟು, ಕೋಟು, ಟೈ, ಕಾಲುಚೀಲ ಮತ್ತು ಬೂಟು, ಬೆರಳಿಗೆ ಉಂಗುರ, ಕೈಯಲ್ಲಿ ವಾಚು, ಕಣ್ಣಿಗೆ ತಂಪು ಕನ್ನಡಕ ಹಾಕಿಕೊಂಡು ಸೊಗಸಾದ ರೀತಿಯಲ್ಲಿ ಅಲಂಕರಿಸಿಕೊಂಡಿದ್ದ. ಒಂದು ಕೈಯಲ್ಲಿ ಬೆತ್ತವನ್ನೂ ಮತ್ತೊಂದು ಕೈಯಲ್ಲಿ ಚೈನಿನಂಥ ವಸ್ತುವನ್ನು ಹಿಡಿದಿದ್ದ. ಅವನು ಇದೀಗತಾನೇ ನೇರವಾಗಿ ಸ್ಟೀಮರ್‌ನಿಂದ ಬಂದಂತೆ ತೋರುತ್ತಿತ್ತು.

ಆದರೆ ಯಾರೂ ಅವನ ಕಡೆ ಗಮನವನ್ನೇ ಹರಿಸಲಿಲ್ಲ. ಅವನಿಗೆ ನಮಸ್ಕರಿಸುವಾಗಲೂ ಸಹ ಅವನ ಕಾಲ ಬಳಿಯೇ ಇದ್ದ ಅಪರೂಪದ ಪ್ರಾಣಿಯನ್ನೇ ಕುತೂಹಲದಿಂದ ನೋಡುತ್ತಿದ್ದರು.

ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುವಾಗಲೂ ಕೂಡ ಆ ಪ್ರಾಣಿಯ ಬಗ್ಗೆ ಮಾತನಾಡುತ್ತಿದ್ದರೇ ವಿನಃ ಇಂಗ್ಲೆಂಡಿನಿಂದ ವಾಪಸಾದ ಮೇಲೆ ಜಾಗೀರ್ದಾರನಲ್ಲಾಗಿರುವ ಬದಲಾವಣೆಗಳ ಬಗೆಗಲ್ಲ. ಕೆಲವರು ಅದನ್ನು ಇಂಗ್ಲೆಂಡಿನ ಮೊಲವೆಂದರೆ ಮತ್ತೆ ಕೆಲವರು ಅದು ನಾಯಿಯಿರಬೇಕೆಂದು ಊಹಿಸಿದರು. ಇನ್ನು ಕೆಲವರು ಅದು ಇಂಗ್ಲೆಂಡಿನ ಚಿರತೆ ಜಾತಿಯ ಪ್ರಾಣಿಯಾಗಿದ್ದರೆ, ಎಂದು ಆಶ್ಚರ್ಯಪಟ್ಟರು. ಕೆಲವರು ಅದು ನಾಯಿಯೂ ಅಲ್ಲ, ಬೆಕ್ಕೂ ಅಲ್ಲ ಮೊಲವೂ ಅಲ್ಲವೆಂದು ಹೇಳುತ್ತ ಆ ವಿಚಿತ್ರ ಪ್ರಾಣಿ ಯಾವುದಿರಬೇಕೆಂದು ಊಹಿಸುವಲ್ಲಿ ವಿಫಲರಾದರು. ಪ್ರತಿಕ್ಷಣವೂ ಇದರ ಕುರಿತ ಚರ್ಚೆ ತಾರಕಕ್ಕೆ ಹೋಗುತ್ತಿತ್ತು. ಕೆಲವರಂತೂ ಅದರ ಬಗ್ಗೆ ಪಣವನ್ನೇ ಕಟ್ಟುವ ಸ್ಥಿತಿಗೆ ಹೋಗಿದ್ದರು. ಇದರ ಸುದ್ದಿ ಹಬ್ಬುತ್ತಿದ್ದಂತೆ ಜನಸಂದಣಿ ದಟ್ಟವಾಗತೊಡಗಿತ್ತು; ಬಂದವರೆಲ್ಲರೂ "ಇದೆಂಥ ವಿಚಿತ್ರ

ಪ್ರಾಣಿ?” ಎಂದು ವಿಚಾರಿಸತೊಡಗಿದರು. ಕೆಲವರು “ಬಾಪೂ ಆ ಪ್ರಾಣೀನಾ ಚೈನಿಂದ ಕಟ್ಟಿಹಾಕಿದರೆ ಸಾಕು, ಇಲ್ಲಾಂದ್ರೆ ಅದು ಯಾರನ್ನಾದ್ರೂ ಕೊಂದುಬಿಡುತ್ತೆ” ಎಂದು ನಿಜವಾಗಿಯೂ ಭೀತರಾದರು.

ಈ ನಡುವೆ ಕೆಲವು ಯುವಕರು ಅದು ಖಚಿತವಾಗಿ ನಾಯಿಯೆಂಬ ವರ್ತಮಾನವನ್ನು ತಂದರು. ಅವರು ಅದರ ಹೆಸರನ್ನೂ ಕೇಳಿದ್ದರು, ಆದರೆ ಗೊಂದಲಕ್ಕೊಳಗಾದರು. ಅವರಲ್ಲೊಬ್ಬ ಅದು ‘ಶಿವ್ಲರ್’ ಎಂದು ಎರಡನೆಯವ “ಅದು ಶಿವ್ಲೊ” ಎಂದು ಹೇಳಿದರೆ ಮೂರನೆಯವ “ಅದು ಶಿಲೂ ಅಥವಾ ಫಿಲ್ಲೂ ಇಲ್ಲಾಂದ್ರೆ ಅಂಥದ್ದೇ ಯಾವುದೋ ಇರಬೇಕು” ಎಂದು ಹೇಳಿದ. ಕೆಲವರು ಅದರ ಹೆಸರಿನ ಕಡೆಗೆ ಗಮನವನ್ನೇ ಹರಿಸಲಿಲ್ಲ, ಬದಲಾಗಿ ನಾಯಿಯನ್ನು “ಎಂಥ ಸುಂದರವಾದ ನಾಯಿ! ಅದರ ಕಿವಿಗಳು ಇನ್ನೇನು ನೆಲವನ್ನು ಮುಟ್ಟೋಹಾಗೆ ಎಷ್ಟೊಂದು ಉದ್ದವಾಗಿವೆ. ಇಷ್ಟಿಷ್ಟೇ ಕಾಲುಗಳು, ಓ ದೇವರೇ! ಏನು ಜೂಲು! ಸನ್ಯಾಸಿಯ ಜಡೆಗಟ್ಟಿದ ಕೂದಲ ತರಹ ದಪ್ಪನಾಗಿ! ಎಷ್ಟೊಂದು ಬೆಳ್ಳಗೆ!” ಎಂದು ವರ್ಣಿಸತೊಡಗಿದರು. ಕೆಲವರು “ನಾಯಿ ಬೆಳ್ಳಿಕೂದಲನ್ನು ಹೊಂದಿದೆ ಅಂದ್ರೆ ನನಗೆ ತುಂಬಾ ಆಶ್ಚರ್ಯವಾಗ್ತದೆ. ಅವತ್ತು ಸೇಠ್ ಹೇಳ್ತಾ ಇದ್ದ: ಇಂಗ್ಲೆಂಡಿನ ಹೆಂಗಸರಿಗೆ ಚಿನ್ನದ ಕೂದಲು ಇವೆ ಎಂದು; ಆದ್ದರಿಂದ ಈ ನಾಯಿಗೆ ಬೆಳ್ಳಿ ಕೂದಲು ಇರಬಹುದು. ನೀವೇನೂ ಹೋಳೋಕಾಗಲ್ಲ. ಇಂಗ್ಲೆಂಡಿನಂಥ ದೇಶದಲ್ಲಿ ಏನುಬೇಕಾದರೂ ಆಗಬಹುದು” ಎಂಬ ತೀರ್ಮಾನಕ್ಕೆ ಬಂದರು.

ಅದನ್ನು ನೋಡಿ ಎಲ್ಲರೂ ನಕ್ಕರು. ಆದರೆ ಅದೇ ಸಮಯದಲ್ಲಿ ತಮ್ಮತಮ್ಮಲ್ಲಿ “ಏನೇ ಆದ್ರೂ ಬಾಪು, ಸಾಮಾನ್ಯದ ನಾಯಿಯನ್ನು ತರೋ ಅಂಥ ಮನುಷ್ಯ ಅಲ್ಲ” ಅಂದುಕೊಂಡರು.

ಇಡೀ ಹಳ್ಳಿಯೇ ನಾಯಿಯ ಬಗ್ಗೆ ಮಾತನಾಡಿಕೊಳ್ಳತೊಡಗಿತು. ಚೌಕದ ಆ ಬದಿಗೆ ನಿಂತಿದ್ದ ಹೆಂಗಸರೂ ಕೂಡ ಅದರ ಬಗ್ಗೆ ತಮಾಷೆಯ ಮಾತುಗಳನ್ನಾಡಿಕೊಳ್ಳುತ್ತಿದ್ದರು. ಪಟೇಲನು ಬಂದು ಅವರಿಗೆ “ಬಾಪೂ ಸಾಹೇಬ್ರ ನಾಯಿಯ ಬಗ್ಗೆ ಏನೂ ಕೆಟ್ಟದಾಗಿ ಮಾತನಾಡಬೇಡಿರಿ. ಅವರಿಗೆ ನಾಯಿ ಅಂದರೆ ಮಗನಿಗಿಂತಲೂ ಪ್ರಾಣ” ಎಂದು ಎಚ್ಚರಿಸಿದ. ಯುವಕನೊಬ್ಬ “ಜಾನುಮಿಯಾ ಕೂಡ ಅದನ್ನೇ ಹೇಳುತ್ತಿದ್ದ” ಎಂದು ಪಟೇಲನ ಮಾತನ್ನು ಸಮರ್ಥಿಸಿದ.

ಬಾಪೂವಿನ ಸ್ವಭಾವವನ್ನು ಚೆನ್ನಾಗಿ ಬಲ್ಲ ಕೆಲವರು “ಅದನ್ನು ಬರೀ ನಾಯಿ ಅಂತ ಕರೀಬೇಡಿ; ಅದು ಬಾಪೂ ನಾಯಿ ಅನ್ನೋದನ್ನು ಮರೀಬೇಡಿ” ಎಂದರು.

ನೂರಾರು ಕಣ್ಣುಗಳು ಬಾಪೂವಿನ ಹಿಂದೆ ಹೋಗುವ ನಾಯಿಯನ್ನೇ ಅನುಸರಿಸಿದವು.

ಬಾಪೂ ಮಂಚದ ಮೇಲೆ ಕುಳಿತುಕೊಳ್ಳುತ್ತಿದ್ದಂತೆಯೇ ಅವನ ಹಿಂದೆಯೇ ನಾಯಿಯೂ ಹತ್ತಿತು. ಬಾಪೂ “ಸಿಡೌನ್” (ಕುಳಿತುಕೊ) ಎಂಬಂಥ ಮಾತನ್ನು ಹೇಳುತ್ತಿದ್ದಂತೆ ಅದೂ ಮಂಚದ ಮೇಲೆ ಕುಳಿತುಕೊಂಡಿತು.

ಜನಗಳೂ ನಿಜಕ್ಕೂ ಬೆಕ್ಕಸಬೆರಗಾದರು. ಕೆಲವರು ‘ಸಿಡೌನ್’ ಎಂಬುದು ನಾಯಿಯ

ಹೆಸರಿರಬೇಕೆಂದುಕೊಂಡರೆ, ಉಳಿದವರು ಅದು ಕುಳಿತುಕೊಳ್ಳಲು ಹೇಳಿದ ಮಾತು ಎಂದುಕೊಂಡರು.

ಏನೇ ಆದರೂ, ಈಗ ಅವರೆಲ್ಲರೂ ಜಾಗೀರ್ದಾರನ ಸೆಕ್ರೆಟರಿಗಿಂತಲೂ, ಅವನ ಮಗನಿಗಿಂತಲೂ ಹೆಚ್ಚಿನ ಗೌರವವನ್ನು ಈ ನಾಯಿಗೆ ತೋರಿಸಬೇಕೆಂದು ಅರಿತುಕೊಂಡರು. ಮೂರು ವರ್ಷದ ಹಿಂದೆ ಜಾಗೀರ್ದಾರನು ಇಲ್ಲಿಗೆ ಬಂದಿದ್ದಾಗ ಅವನ ಮಗನೂ ಕೂಡ ಹೀಗೆ ಸ್ವೇಚ್ಛೆಯಾಗಿ ಮಂಚದ ಮೇಲೆ ಕುಣಿದಾಡಿರಲಿಲ್ಲ.

ಅದರ ಹೆಸರು ಸಿಲೂ–ಸಿಲ್ವರ್‌ನ ಸಂಕ್ಷಿಪ್ತರೂಪ–ಹಳ್ಳಿಗರು ಅದನ್ನು ಸಿಲೂ ಭಾಯಿ ಎಂದು ಕರೆಯತೊಡಗಿದರು. ಆ ನಾಯಿ ಐದುನೂರು ರೂಪಾಯಿ ಬೆಲೆ ಬಾಳುತ್ತೆ ಎಂಬ ಮಾತನ್ನು ಕೇಳಿದಾಗ ಅವರು ಆಶ್ಚರ್ಯಗೊಂಡರು. ಈ ಹಣದಿಂದ ಇಪ್ಪತ್ತು ಎತ್ತುಗಳನ್ನೋ ಅಥವಾ ಐದು ಕುದುರೆಗಳನ್ನೋ ಕೊಂಡುಕೊಳ್ಳಬಹುದೆಂದು ವಾದಿಸಿದರು ; ಕೆಲವರು ಅದು ಆನೆಗಿಂತಲೂ ತುಂಬಾ ದುಬಾರಿ! ಎಂದು ಮಾತು ಮುಗಿಸಿದರು. "ಅದರ ತೂಕದಷ್ಟೇ ಬೆಳ್ಳಿಯನ್ನು ಬೆಲೆ ಬಾಳ್ತದೆ—ಊಹಿಸಿಕೊಳ್ಳಿ!" ಎಂದರು ಕೆಲವರು.

ಆದರೆ ಹಳ್ಳಿಯ ನಾಯಿಗಳು ಅಷ್ಟೇನೂ ದಾಕ್ಷಿಣ್ಯಪರವಾಗಿರಲಿಲ್ಲ. ಅವು ಸಿಲೂವನ್ನು ನೋಡುತ್ತಿದ್ದಂತೆ ತಮ್ಮಿಂದ ದೂರದಲ್ಲಿ ಇರುವ ಇತರ ನಾಯಿಗಳೂ ಗಮನಿಸಲೆಂದು ಬೊಗಳಲು ಶುರುಮಾಡಿದವು. ಸಿಲೂ ಕೂಡ ಜೋರಾಗಿ ಬೊಗಳುವುದರೊಂದಿಗೆ ತನ್ನ ಪ್ರತಿಕ್ರಿಯೆಯನ್ನು ತೋರಿಸಿತು. ಎಲ್ಲರೂ ಭಯದಿಂದ ನಡುಗಲಾರಂಭಿಸಿದರು.

'ಅಯ್ಯೋ ದೇವರೇ ಹೇಗೆ ಬೊಗಳುತ್ತಾ ಇದೆ? ಹುಲಿಯ ಗರ್ಜನೆ ತರಾ ಇದೆಯಲ್ಲ!'

"ಅಂಥ ಕ್ಷುಲ್ಲಕ ವಿಷಯ ಮಾತನಾಡಬೇಡಿ" ಎಂದು ಯುವಕ ವಿರೋಧಿಸಿದ. "ಬೇಕಾದರೆ ಅದು ನಮ್ಮ ಹಳ್ಳಿ ನಾಯಿಗಳ ಜೊತೆ ಫೈಟಿಂಗ್ ಆಡಲಿ, ಒಂದೇ ಕ್ಷಣದಲ್ಲಿ ಅದು ಸೋತು ಹೋಗ್ತದೆ ಅಂತ ನಾನು ಪಂಥ ಕಟ್ತೇನಿ. ಅದರ ರೂಪ ನೋಡಿ ಮೋಸ ಹೋಗಬೇಡಿ. ನಮ್ಮ ಕಂತ್ರಿ ನಾಯಿಗಳೂ ಕೂಡ ಇದಕ್ಕಿಂತ ಎಷ್ಟೋ ಮೇಲು!" ಎಂದ.

ಆದರೆ ಹಳ್ಳಿಗರಾರೂ ಅವನ ವಾದದಿಂದ ಸಮಾಧಾನಗೊಳ್ಳಲಿಲ್ಲ. ಪ್ರತಿಯಾಗಿ ಅವರು 'ಬಾಪೂ ನಾಯಿಯನ್ನು ಬಿಚ್ಚಿಬಿಡಲಿ, ಆಗ ಅದು ಹಳ್ಳಿಯ ಪುಕ್ಕಲು ನಾಯಿಗಳಿಗೆ ತನ್ನ ಶಕ್ತಿಯನ್ನು ತೋರಿಸುತ್ತದೆ' ಎಂದುಕೊಂಡರು. ಕೆಲವರು ಜಾನುಮಿಯಾನ ಹತ್ತಿರ ಹೋಗಿ, "ಜಾನುಭಾಯಿ, ನೀವೇಕೆ ಸಿಲೂ ಭಾಯಿಯನ್ನೂ ಹೊರಗೆ ಬಿಡಬಾರದು? ಒಂದು ಸಾರಿಯಾದರೂ ಬಿಡಿ. ಬಿಡ್ತಿದ್ದ ಹಾಗೆ ಈ ನಾಯಿಗಳೆಲ್ಲ ತಮ್ಮ ಕಾಲಿಗೆ ಬುದ್ಧಿ ಹೇಳ್ತವೆ. ತುಂಬಾ ತಮಾಷೆಯಾಗಿರ್ತದೆ" ಎಂದರು.

ಜಾಗೀರ್ದಾರ್ ಅಬ್ಬರಿಸಿದ: "ದಡ್ಡಶಿಖಾಮಣಿಗಳಾ, ಏನು ನೋಡ್ತಾ ಇದೀರಿ ಅಲ್ಲಿ? ಈ ಹಾಳು ನಾಯಿಗಳನ್ನು ಓಡ್ಸಿ." ಕೂಡಲೇ ಎಲ್ಲರೂ ಕಲ್ಲುಬೀಸುತ್ತ ನಾಯಿಗಳನ್ನು ಅಟ್ಟಿಸಿಕೊಂಡು ಹೋಗತೊಡಗಿದರು.

ನಾಯಿಗಳು ಓಡಿಹೋದವು. ಆದರೂ ಅವುಗಳ ಬೊಗಳುವಿಕೆ ನಿಲ್ಲಲಿಲ್ಲ. ಪಕ್ಕದ ಬೀದಿಗಳಿಂದ ಅದರ ಪ್ರತಿಧ್ವನಿ ಕೇಳುತ್ತಿತ್ತು.

....ಮನುಷ್ಯರಿಗಾದ ನಿರಾಸೆಗಿಂತಲೂ ಅತಿಯಾದ ನಿರಾಸೆಯಿಂದ ನಾಯಿಗಳು ತಮ್ಮ ತಮ್ಮ ಮನೆಗಳಲ್ಲಿ ಸೇರಿಕೊಂಡವು. ಹಳ್ಳಿಗರು ವಾಪಸು ಬರುವುದೇ ತಡ, ನಾಯಿಗಳು ಮತ್ತೆ ಕಾಣಿಸಿಕೊಂಡವು. ಈ ಸಲ ಬೇರೆ ಬೀದಿಗಳ ನಾಯಿಗಳೂ ಸೇರಿಕೊಂಡಿದ್ದವು.

ಹತ್ತೇ ನಿಮಿಷಗಳಲ್ಲಿ ಪರಿಸ್ಥಿತಿ ಮತ್ತೆ ಬಿಗಡಾಯಿಸಿತು. ಪಟೇಲ ಜಾಗೀರ್ದಾರನ ಹತ್ತಿರ ಹೋಗಿ ಅಲ್ಲಿ ನೆರೆದಿರುವ ಜನರ ಮನದಿಂಗಿತವನ್ನು ವಿವರಿಸಿದ "ಬಾಪೂ, ಒಂದೇ ಒಂದು ಸಲ ಸಿಲೂಭಾಯಿಯನ್ನು ಯಾಕೆ ಬಿಚ್ಚಿ ಬಿಡಬಾರದು? ಆಗ ಈ ನಾಯಿಗಳಿಗೆ ಇಲ್ಲಿಲ್ಲೂ ನಿಲ್ಲೋದಕ್ಕೆ ಧೈರ್ಯವೇ ಬರೊಲ್ಲ."

"ಒಹ್ ಬೇಡ, ಒಂದು ಸಲ ಏನಾದ್ರೂ ಇದು ಉದ್ರೇಕ ಆದ್ರೆ, ಅವನ್ನು ಕಂಟ್ರೋಲ್ ಮಾಡೋಕೇ ಆಗೊಲ್ಲ. ಇಲ್ಲಿ ನನ್ನ ಕಂಟ್ರೋಲಿನಲ್ಲಿ ಸುಮ್ಮನಿದೆ ಅಷ್ಟೆ." ಎಂದು ತನ್ನ ಮೀಸೆಯನ್ನು ತಿರುವುತ್ತ ಹೇಳಿದ.

"ಹೌದು, ಖಂಡಿತ ನಿಜ—ಇದು ತುಂಬಾ ಸಂಭಾವಿತ ನಾಯಿ." ಪಟೇಲ ಹೇಳಿದ. ಮುದುಕನೊಬ್ಬ ಹುಸಿ ನಗುತ್ತ "ಬಾಪೂ, ಈ ನಾಯಿ ಹುಲಿಯ ಜೊತೆ ಫೈಟಿಂಗ್ ಮಾಡುತ್ತೆ ಅಂತ ನಿಮಗೆ ಅನಿಸುತ್ತಾ?" ಎಂದು ಕೇಳಿದ.

ಮತ್ತೊಬ್ಬ ಅವನ ಕೊಂಕು ಮಾತನ್ನು ತಿದ್ದಲು ಪ್ರಯತ್ನಿಸಿದ. "ಸಿಲೂಭಾಯಿ ಕುರಿತು ಹೇಳ್ತಿದಿಯೇನು? ಇದನ್ನು ನೋಡ್ತಿದ್ದ ಹಾಗೆ ಸಾಮಾನ್ಯವಾದ ಚಿರತೆ ಕೂಡ ಹಳ್ಳಕ್ಕೆ ಹಾರಿಬಿಡ್ತದೆ."

ಆದರೆ ಆ ಮುದುಕ ಸುಲಭವಾಗಿ ಒಪ್ಪದೆ "ಬಾಪೂ, ಹೌದೇ?" ಎಂದ.

"ಚಿರತೆಯನ್ನು ಕರ್ಕೊಂಡು ಬಂದು ನೋಡು." ಎಚ್ಚರಿಕೆಯ ನಗೆಯೊಂದಿಗೆ ಹೇಳಿದ ಬಾಪು. ಮತ್ತೆ ಅವನ ಗಮನ ಬೊಗಳುವ ನಾಯಿಗಳ ಕಡೆಗೆ ಹರಿಯಿತು.

ತನ್ನ ಪರಾಕ್ರಮವನ್ನು ಪ್ರದರ್ಶಿಸುವುದಕ್ಕಾಗಿ ಸಿಲೂಭಾಯಿ ತವಕಗೊಳ್ಳುತ್ತಿತ್ತು. ಆದರೆ ಅದು ತಾನೆ ಏನು ಮಾಡಿತು? ಬಾಪೂವಿಗಾದರೂ ತನ್ನ ಗೌರವವನ್ನು ತೋರಿಸಬೇಕಾಗಿತ್ತು.

ಪಟೇಲ ಟೀ ಕಪ್ಪಿನೊಂದಿಗೆ ಬಂದಾಗ ಬಾಪು ಅದರ ಕೊರಳ ಸುತ್ತ ಚೈನನ್ನು ಸುತ್ತಿ ಕಟ್ಟಿ ಇನ್ನೇನು ಮೇಲೇಳಲಿದ್ದ. ಟೀ ಕಪ್ಪನ್ನು ತೆಗೆದುಕೊಳ್ಳಲು ತನ್ನ ಕೈ ನೀಡಿದ. ಆದರೆ ತಕ್ಷಣ ತನ್ನ ಮನಸ್ಸನ್ನು ಬದಲಿಸಿ ಕೈಗಳನ್ನು ಹಿಂದಕ್ಕೆ ಎಳೆದುಕೊಂಡ. "ಟೇಬಲ್ಲಿನಂಥದ್ದು ಏನಾದ್ರೂ ಇಲ್ವಾ?" ಎಂದು ಕೇಳಿದ.

ಪಟೇಲ ಗಲಿಬಿಲಿಗೊಂಡ; ಅಂಥ ಅಭೂತಪೂರ್ವವಾದ ಟೇಬಲ್ ಅಂದರೆ ಯಾವುದು ಎಂದು ತಿಳಿಯಲಾಗಲಿಲ್ಲ. ಕೂಡಲೇ ತಾನು ಜಾಗೀರ್ದಾರನ ರಾಜಧಾನಿಗೆ ಹೋಗಿದ್ದಾಗ ನೋಡಿದ್ದ, ಹೋಟೆಲನ್ನು ನೆನಪಿಸಿಕೊಂಡ. ನಡುಗುತ್ತಲೇ "ಅಂದರೆ ಕುರ್ಚಿ ಅಲ್ವಾ? ಆಯ್ತು...." ಎಂದ.

"ಏ ಮೂರ್ಖ, ಕುರ್ಚಿ ತಗೊಂಡು ಏನು ಮಾಡೋದು? ಈ ಕಪ್ಪನ್ನು ಇಡಬೇಕು...."

ಹಳ್ಳಿಗರು ಗೊಂದಲಗೊಂಡು ನಿಂತಿದ್ದಾರೆ. ಆದರೆ ತಕ್ಷಣ ಏನೋ ಅವರಿಗೆ ಹೊಳೆದು ಎಲ್ಲರೂ ಟೇಬಲ್ಲನ್ನು ಹುಡುಕುವ

ಸಲುವಾಗಿ ಎಲ್ಲ ದಿಕ್ಕುಗಳಿಗೂ ಓಡಿದರು. ಆದರೆ ಅವರು ಏನನ್ನು ತರಲು ಸಾಧ್ಯ? ಬುಟ್ಟಿಯೊಂದನ್ನು ತಳವೇಲಾಗಿ ಇಡಬಲ್ಲರು. ಆದರೆ ಅದು ತುಂಬಾ ಚಿಕ್ಕದು. ಅದಕ್ಕೆ ಸರಿಹೊಂದುವ ಎತ್ತರದ ಕಲ್ಲಾದರೂ ಅವರಿಗೆ ಸಿಗಲಿಲ್ಲ. ಸಿಕ್ಕಿದ್ದರೆ ಜಾಗೀರ್ದಾರನಿಗೋಸ್ಕರ ಹೇಗಾದರೂ ಮಾಡಿ ತರುತ್ತಿದ್ದರು.

ತಕ್ಷಣ ಆ ಮುದುಕ ಬುದ್ಧಿವಂತಿಕೆಯ ಸಲಹೆಯೊಂದಿಗೆ ಬಂದು "ಎಲ್ಲಿಂದಲಾದರೂ ಒಂದು ಡ್ರಮ್ಮನ್ನು ಯಾಕೆ ತರಬಾರದು ನೀವು?" ಎಂದು ಹೇಳಿದ.

ಮುದುಕನ ಜಾಣತನದಿಂದ ಪಟೇಲ ಅಸೂಯೆಯಿಂದ ಬೆಂದುಹೋದ. ತನಗೆ ತಾನೇ "ನನ್ನ ಮೂಗಿನ ನೇರದಲ್ಲೇ ಡ್ರಮ್ಮು ತೂಗಾಡುತ್ತಿದ್ದರೂ ಇಂಥ ಸರಳವಾದ ವಿಷಯ ತನ್ನ ತಲೆಗೆ ಯಾಕೆ ಹೊಳೆಯಲಿಲ್ಲ?" ಅಂದುಕೊಂಡ. ಒಬ್ಬನೇ ಒಂದೇ ನಿಮಿಷದಲ್ಲಿ ಡ್ರಮ್ಮನ್ನು ತರಬಹುದಾಗಿತ್ತು. ಆದರೆ ಮೂರು ಜನ ಆ ಕೆಲಸಕ್ಕೆ ಹೋಗಿದ್ದರಿಂದ ಹೆಚ್ಚು ಸಮಯ ತೆಗೆದುಕೊಂಡರು.

"ಪಟೇಲನು ಕಪ್ಪನ್ನು ಇನ್ನೇನು ಡ್ರಮ್ಮಿನ ಮೇಲೆ ಇಡಬೇಕು, ಅಷ್ಟರಲ್ಲಿ ಜಾಗೀರ್ದಾರ್ ಕಿರುಚಿದ, "ನೀವೆಲ್ಲಾ ದಡ್ಡರೋ ಏನು? ಇದರ ಧೂಳನ್ನಾದರೂ ಒರೆಸಿ."

ಕೆಲವು ಹಳ್ಳಿಗರು ಮೇಲೆದ್ದು ಉತ್ಸಾಹದಿಂದ ಒರೆಸತೊಡಗಿದರು. ಅವರಲ್ಲೊಬ್ಬ ಯುವಕ ತನ್ನ ಹೆಗಲ ಮೇಲಿನ ಬಟ್ಟೆಯಿಂದ ಧೂಳನ್ನು ಒರೆಸತೊಡಗಿದ. ಆ ಧೂಳು ನಾಯಿಯ ಮೇಲೆ ಬಿದ್ದು ಜಾಗೀರ್ದಾರನಿಗೆ ರೇಗಿತು. ಮುದುಕ, "ಸಿಲೂಭಾಯಿಯ ಮೇಲೆ ಧೂಳು ಬೀಳದಹಾಗೆ ನೋಡಿಕೊಳ್ಳಿ" ಎಂದು ಹೇಳಿದ.

ಬಾಪು ಕೂಡ "ಮೂರ್ಖ!" ಎಂದ.

"ಸಿಲೂಭಾಯಿಯನ್ನು ನಾನು ಒರೆಸಲೇ?" ಎಂದು ಯುವಕನೊಬ್ಬ ಕೇಳಿದ.

ಜಾಗೀರ್ದಾರ್ ವ್ಯಂಗ್ಯದ ನಗೆ ನಕ್ಕು "ಯಾಕೆ? ನಿನ್ನ ಟವಲನ್ನು ಕ್ಲೀನ್‌ಮಾಡಿಕೊಳ್ಳೋದಕ್ಕಾ?" ಎಂದ.

ಜನರು ಒಂದು ಕ್ಷಣ ಗೊಂದಲಕ್ಕೊಳಗಾದರು, ಆದರೆ ಮುದುಕ ಅವರ ರಕ್ಷಣೆಗೆ ಬಂದು "ಸಿಲೂಭಾಯಿ ನಿನ್ನ ಬಟ್ಟೆಗಿಂತ ಬಿಳುಪಾಗಿದೆ" ಎಂದ. ಎಲ್ಲರೂ ಜೋರಾಗಿ ನಕ್ಕರು. ಆದರೆ ಯುವಕನಿಗೆ ಅವಮಾನವಾದಂತಾಗಿ ರೇಗಿತು, ಮಂಜಿಗಿಂತ ಬೆಳ್ಳಗಿರಬಹುದು. ಆದರೂ ನಾಯಿನೇ ಬೇರೇನೂ ಅಲ್ಲ" ಎಂದ.

"ಸಿಲೂಭಾಯಿಯ ಟೀ ಬಗ್ಗೆ ಏನು ಮಾಡಲಿ?" ಪಟೇಲ ಅಸಹಾಯಕನಾಗಿ ಕೇಳಿದ.

"ಯಾಕೆ? ಹೆಚ್ಚಾಗಿ ಇಲ್ವಾ?" ಬಾಪೂವಿನ ಧ್ವನಿ ನಿರ್ದಾಕ್ಷಿಣ್ಯದಿಂದ ಕೂಡಿತ್ತು.

"ಬಾಪೂ, ಟೀ ಸಿದ್ಧವಾಗಿದೆ."

ಎಲ್ಲರೂ ಆ ಬಿಳಿಮನುಷ್ಯನ ನಾಯಿ ಟೀಯನ್ನು ಹೇಗೆ ಕುಡಿಯಬಹುದೆಂದು ನೋಡಲು ತುಂಬಾ ಕುತೂಹಲಿಗಳಾಗಿದ್ದರು.

"ಕಪ್ಪನ್ನು ನನ್ನ ಕೈಯಲ್ಲಿ ಹಿಡಿದುಕೊಂಡಿರ್ತೀನಿ, ಯಾರಾದ್ರೂ ಹೋಗಿ ಇನ್ನೊಂದು ಡ್ರಮ್ ತರಲಿ."

ಬಾಪೂ ಮತ್ತೆ ಕಿರುಚಿದ, "ಕತ್ತೆ, ಯಾತಕ್ಕೆ ನಿನಗೆ ಡ್ರಮ್ಮು? ಅದೇನೂ

ಕಪ್ಪುಸಾಸರಿನಲ್ಲಿ ಟೀ ಕುಡಿಯೊಲ್ಲ. ಎಲ್ಲಿ ನನ್ನ ಪಿಶಾಚಿ ಆಳುಗಳು?"

ಒಳಗಡೆ ಆವಿಯಾಡುವ ಬಿಸಿಬಿಸಿ ಟೀಯನ್ನು ಕುಡಿಯುತ್ತಿದ್ದ ಆಳುಗಳು ಮತ್ತು ಪೊಲೀಸರು ಗಾಬರಿಗೊಂಡರು. ಆದರೆ ಅವರು ಹೊರಗೆ ಬರುವಷ್ಟರಲ್ಲಿ ಎಲ್ಲವೂ ಸಿದ್ಧವಾಗಿತ್ತು.

ಸಿಲೂಭಾಯಿಗಾಗಿ ನೆಲದ ಮೇಲೆ ಹಾಸುಗೆಯೊಂದನ್ನು ಹಾಸಿ ಹಿತ್ತಾಳೆಯ ತಟ್ಟೆಯಲ್ಲಿ ಟೀಯನ್ನು ಇಡಲಾಯಿತು.

ಹಳ್ಳಿಗರು ಸಿಲೂಭಾಯಿಯ ಬಗೆಗಿನ ಕುತೂಹಲವನ್ನೇ ಕಳೆದುಕೊಂಡರು. "ನಮ್ಮ ನಾಯಿಗಳೂ ಕೂಡ ಹೀಗೇಯೇ ಕುಡಿಯುತ್ತವೆ" ಎಂದು ಹೇಳಿದರು.

ಊರ ನಾಯಿಗಳು ಮತ್ತೆ ಉದ್ರೇಕಗೊಂಡವು. ಸಿಲೂಭಾಯಿ ಟೀ ಕುಡಿಯುವುದನ್ನೇ ಗಮನಿಸುತ್ತಿದ್ದ ಕಾವಲುಗಾರನ ಅವಕಾಶವನ್ನು ಬಳಸಿಕೊಂಡು ಅದರ ಹತ್ತಿರ ಹೋಗುವ ಸಾಹಸದ ಕಾರ್ಯಕ್ಕೂ ಕೈಹಾಕಿದವು. ಜಾಗೀರ್ದಾರ್ ಹೇಳಿದ, "ಕೂತುಕೊ ಅಲ್ಲಿ, ಮೊದಲು ನಿನ್ನ ಟೀಯನ್ನು ಕುಡಿದು ಮುಗಿಸು. ಆಮೇಲೆ ನಿನಗೆ ಏನುಬೇಕೋ ಅದನ್ನು ಮಾಡುವಿಯಂತೆ."

ಹಳ್ಳಿಗಳು ಮತ್ತೆ ಕುತೂಹಲಿಗಳಾದರು. ಅವರು ಊರನಾಯಿಗಳು ಮತ್ತು ಸಿಲೂಭಾಯಿಯ ನಡುವೆ ನಡೆಯುವ ಫೈಟಿಂಗನ್ನು ನೋಡುವ ಆಸೆಯಲ್ಲಿ, ತಮ್ಮ ಬಳಿ ನಿಂತಿದ್ದ ನಾಯಿಗಳನ್ನು ದೂರ ತಳ್ಳಲೂ ಲೆಕ್ಕಿಸಲಿಲ್ಲ. ಕಡೆಗೆ ಬಾಪೂ ತನ್ನ ನಾಯಿಯೊಂದಿಗೆ ಬಯಲಿಗೆ ಬಂದ. ಕೆಲವೇ ನಿಮಿಷಗಳಲ್ಲಿ ಊರಿನ ಎಲ್ಲ ಮೂಲೆಗಳಿಂದ ಜನರು ಗುಂಪು ಗುಂಪಾಗಿ ಬಂದು ಬಾಪುವಿನ ಹತ್ತಿರ ನೆರೆದರು. ಆದರ ಕುತ್ತಿಗೆಯ ಸುತ್ತಲಿದ್ದ ಚೈನು ಸೂರ್ಯನ ಬಿಸಿಲಿನಲ್ಲಿ ಬೆಳ್ಳಿಯಂತೆ ಹೊಳೆಯುತ್ತಿತ್ತು.

ಬಾಪೂ ನಾಯಿಗಳಿಗೆ ಅಡ್ಡವಾಗಿ ನಿಂತಿರುವ ಹಳ್ಳಿಗರತ್ತ ಕಿರುಚಿದ: "ಮೂರ್ಖರಾ, ದಾರೀಲಿ ನಿಲ್ಲಬೇಡಿರಿ. ಸಿಲೂ ನುಗ್ಗ ಮುಂದೆ!"

ಗುರ್ರೆನ್ನುತ್ತ ಪಟ್ಟಿನಾಯಿಯತ್ತ ನುಗ್ಗಿತು. ಆದರೆ ಪಟ್ಟಿನಾಯಿ ಕೆಲವು ಹೆಜ್ಜೆಗಳನ್ನು ಹಿಂದಕ್ಕೆ ಹಾಕಿತು. "ಯಾಕೆ ಓಡಿ ಹೋಗ್ತೀಯಾ? ಬಾ ಮುಂದೆ."

ಅದೇ ಕ್ಷಣದಲ್ಲಿ ಪಟ್ಟಿನಾಯಿ ಹತ್ತಿರ ಬರುತ್ತಿರುವುದನ್ನು, ಸಿಲೂ ಆ ದಿಕ್ಕಿಗೆ ತಿರುಗುತ್ತಿರುವುದನ್ನು ಜಾಗೀದಾರ್ ಗಮನಿಸಿದನು. ಆದರೆ ಪಟ್ಟಿನಾಯಿ ಇಕ್ಕಟ್ಟಿನ ಸಂದರ್ಭಕ್ಕೆ ಸಿಕ್ಕಿಹಾಕಿಕೊಳ್ಳದೆ ಜಾಗ್ರತೆ-ಬುದ್ಧಿವಂತಿಕೆಯನ್ನು ವಹಿಸಿತ್ತು. ಸಿಲೂ ಗುರ್ರೆನಲು ಶುರುಮಾಡಿತು. ಆದರೆ ಪಟ್ಟಿನಾಯಿ ಅದಕ್ಕೇನೂ ಹೆದರಲಿಲ್ಲ. ಕೂಡಲೇ ಯಾರೋ "ಬಾಪೂ ಎಚ್ಚರ ವಹಿಸಿ" ಎಂದು ಕಿರುಚಿದರು.

ಆದರೆ ಆಗಲೇ ಕರಿನಾಯಿ ಬಾಪುವಿನ ಕಾಲನ್ನು ಕಚ್ಚಿ ಓಡಿಹೋಗಿತ್ತು. ಉಂಟಾದ ಗದ್ದಲದ ನಡುವೆ ಸಿಲೂ ಕೂಡ ಬಾಪುವಿನ ಕೈಯಿಂದ ಕಳಚಿಕೊಂಡಿತು. ಎಲ್ಲರೂ ದಿಗ್ಭ್ರಾಂತರಾದರು. ಕೆಲವರು ಎಲ್ಲ ಕಡೆಯಿಂದಲೂ ಊರನಾಯಿಗಳಿಂದ ಆಕ್ರಮಣಕ್ಕೊಳಗಾಗಿರುವ ಸಿಲೂನ ರಕ್ಷಣೆಗಾಗಿ ಓಡಿದರೆ ಮತ್ತೆ ಕೆಲವರು ಬಾಪೂವಿನ ಕಾಲನ್ನು ಪರೀಕ್ಷಿಸುವುದರಲ್ಲಿ ತೊಡಗಿದರು. ಅವರು ಅದರ ಕರುಣಾಜನಕ ಕೂಗನ್ನು ಕೇಳಿದರೂ ಅದನ್ನು ಎಲ್ಲಿಯೂ ಕಾಣಲು

ಸಾಧ್ಯವಾಗಲಿಲ್ಲ. ನಾಯಿಗಳ ಮೇಲೆ ಕಲ್ಲುಗಳನ್ನು ಎಸೆದರು, ದೊಣ್ಣೆಗಳಿಂದ ಬಡಿದರು; ಕೆಲವು ನಾಯಿಗಳು ತೀವ್ರವಾಗಿ ಗಾಯಗೊಂಡವು, ಮತ್ತೆ ಕೆಲವು ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಜೋರಾಗಿ ಓಡಿ ಹೋದವು. ಆದರೆ ಅವರೆಲ್ಲಿಯೂ ಸಿಲೂವನ್ನು ಮಾತ್ರ ಹುಡುಕಲಾಗಲಿಲ್ಲ, ಬಾಪೂ ಜೋರಾಗಿ "ನನ್ನ ಬಂದೂಕು ತನ್ನಿ ಮೂರ್ಖರಾ!" ಎಂದು ಕಿರುಚಿದ.

ಜನರೆಲ್ಲ ಗಾಬರಿಗೊಂಡರು. ಯಾರೋ ಬಂದೂಕನ್ನು ತಂದ "ಮೂರ್ಖ ಇದಲ್ಲ, ಇನ್ನೊಂದು ಬಂದೂಕು ತಗೊಂಬಾ."

ಬಂದೂಕನ್ನು ತರುವಷ್ಟರಲ್ಲಿ ಹಳ್ಳಿಗರು ಕೆಲವು ನಾಯಿಗಳನ್ನು ಕೊಚ್ಚಿ ನೆಲದ ಮೇಲೆ ಕೆಡವಿದ್ದರು.

ಬಾಪು ನಿರಾಶನಾಗಿ ದೃಶ್ಯವನ್ನು ನಿಟ್ಟಿಸಿದ. ಸಿಲೂ ನೋವಿನೊಂದಿಗೆ ರಕ್ತದ ಮಡುವಿನಲ್ಲಿ ಒದ್ದಾಡುತ್ತಿತ್ತು. ಉಳಿದೆಲ್ಲ ನಾಯಿಗಳೂ ಓಡಿ ಹೋಗಿದ್ದವು. ಅದರ ನೀಲಿಗಣ್ಣುಗಳು ಬಾಪೂವಿನ ಬಂದೂಕಿಗಿಂತಲೂ ಭಯಂಕರವಾಗಿದ್ದವು. ಅದಕ್ಕಿಂತಲೂ ಅಲ್ಲಿನ ಭಯಾನಕ ಮೌನ ಮತ್ತು ಸಾಯುವ ನಾಯಿಗಳ ನೋವಿನ ಆಕ್ರಂದನ ದಿಗಿಲು ಹುಟ್ಟಿಸುತ್ತಿತ್ತು ಆ ಭೀಕರ ದೃಶ್ಯವನ್ನು ನೋಡಲಾಗದ ಹಲವರು ತಮ್ಮ ಮನೆಗಳಿಗೆ ಹೋಗತೊಡಗಿದರು. ಬಾಪೂವಿನ ಹತ್ತಿರ ನಿಂತಿದ್ದ ಕೆಲಜನರೂ ಕೂಡ ಅಲ್ಲಿಂದ ಮಾಯವಾಗಿಬಿಡುತ್ತಿದ್ದರೇನೋ, ಆದರೆ ಬಾಪೂವಿನ ಭಯಕ್ಕೆ ಅಲ್ಲಿಂದ ಕಾಲುಕೀಳಲು ಹಿಂಜರಿದಿದ್ದರು.

ಬಾಪೂ ಮತ್ತೆ ಅರಚಿದ: ಮೂರ್ಖರಾ, ಅಲ್ಲಿ ಯಾಕೆ ನಿಂತಿದ್ದೀರಿ? ಹೋಗಿ ಎಲ್ಲಾ ನಾಯಿಗಳನ್ನು ಆ ಓಣಿ ಹತ್ತಿರ ಕರ್ಕೊಂಡು ಬನ್ನಿ. ಆದರೆ ಅಲ್ಲಿಗೆ ನೀವು ಯಾರೂ ಬರಬಾರದು. ನನ್ನ ಮಾತಿಗೆ ವಿರುದ್ಧ ಯಾರಾದರೂ ಬಂದ್ರಿ ಅಂದ್ರೆ, ಯಾರಾದರೂ ಸತ್ತರೆ ಅದಕ್ಕೆ ನಾನು ಜವಾಬ್ದಾರನಲ್ಲ."

ಎಲ್ಲರೂ ಅಲ್ಲಿಂದ ಹೋಗುವುದೇ ಕ್ಷೇಮವೆಂದರಿತರು. ಕೆಲವೇ ನಿಮಿಷಗಳಲ್ಲಿ ಆ ಜಾಗ ಜಾಗೀದಾರನೊಬ್ಬನನ್ನುಳಿದು ನಿರ್ಜನವಾಗಿತ್ತು.

ಬಹಳಷ್ಟು ಜನ ತಮ್ಮ ಮನೆಗಳಲ್ಲಿಯೇ ಉಳಿದರು. ಜಾಗೀರ್ದಾರನ ಸೇವಕರು ಮತ್ತು ಪೋಲೀಸರ ಕೈಗಳಿಂದ ತಪ್ಪಿಸಿಕೊಳ್ಳಲಾರದವರೂ ಸಹ ಕೆಲವು ನೆಪವೊಡ್ಡಿ ತಮ್ಮ ನಾಯಿಗಳನ್ನು ಪೋಲೀಸರ ಕೈಗೆ ಒಪ್ಪಿಸದಿರಲು ತಮ್ಮಿಂದ ಸಾಧ್ಯವಾಗಬಹುದಾದ ಪ್ರಯತ್ನಗಳನ್ನೆಲ್ಲ ಮಾಡಿದರು. ವಾಸ್ತವವಾಗಿ, ಜಾಗೀರ್ದಾರನ ಸೇವಕರಿಗೂ ಆ ಕೆಲಸವನ್ನು ಮಾಡಲು ಇಷ್ಟವಿರಲಿಲ್ಲ. ಆದರೆ ಜಾಗೀರ್ದಾರನನ್ನು ಸಮಾಧಾನಪಡಿಸಲು ಅನ್ಯಮಾರ್ಗವಿಲ್ಲವೆಂಬುದು ಅವರಿಗೆ ತಿಳಿದಿತ್ತು. "ಒಂದೆರಡು ನಾಯಿಗಳನ್ನು ಹಿಡಿದುಕೊಡಿ. ಅದು ಇಡೀ ಹಳ್ಳಿಯನ್ನು ತೊಂದರೆಯಿಂದ ಕಾಪಾಡುತ್ತೆ" ಎಂದು ಹಳ್ಳಿಗರನ್ನು ಒತ್ತಾಯಪೂರ್ವಕವಾಗಿ ಒಪ್ಪಿಸಲು ಪ್ರಯತ್ನಿಸಿದರು.

ಸುಮಾರು ಹತ್ತು ನಾಯಿಗಳನ್ನು ಕೂಡಿಹಾಕಿದರು. ಆದರೆ ಬಾಪೂ ತನ್ನ ಬಂದೂಕಿನಿಂದ ಕೊಲ್ಲಲು ಕಾಯುತ್ತಿದ್ದ ಓಣಿಯ ಹತ್ತಿರಕ್ಕೆ ಅವುಗಳಲ್ಲಿ ಅರ್ಧದಷ್ಟನ್ನು ಮಾತ್ರ ಹಿಡಿದುಕೊಂಡು ಹೋಗಲು ಸಾಧ್ಯವಾಯ್ತು. ಅವನು ಆ ಐದೂ ನಾಯಿಗಳನ್ನು ತನ್ನ ಬಂದೂಕಿನಿಂದ ಕೆಲವೇ ಕ್ಷಣ

ಗಳಲ್ಲಿ ಕೊಂದು ಕೂಗಿದ: "ಎಲ್ಲಿ ಉಳಿದ ನಾಯಿಗಳು ?"

ಯಾರಿಗೂ ಉತ್ತರಿಸಲು ಧೈರ್ಯವಿಲ್ಲ. ಜನುವಿಯಾನ್ ತನ್ನೆಲ್ಲ ಧೈರ್ಯವನ್ನು ಒಟ್ಟುಗೂಡಿಸಿಕೊಂಡು ಹೇಳಿದ: "ಇವಕ್ಕಿಂತ ಹೆಚ್ಚು ನಾವೆಲ್ಲೂ ನೋಡಲಿಲ್ಲ, ಅವೆಲ್ಲೊ ಊರು ಬಿಟ್ಟು ಹೋಗಿರಬೇಕು."

"ನಾನ್‌ಸೆನ್ಸ್! ಈ ಮೂರ್ಖರು ಅವನ್ನೆಲ್ಲೊ ತಮ್ಮ ಮನೆಗಳಲ್ಲಿ ಬಚ್ಚಿಟ್ಟುಕೊಂಡಿರಬೇಕು. ಹೋಗಿ, ಅವನ್ನೆಲ್ಲಾ ಹುಡುಕಿ, ನಿಮಗೇನಾದರೂ ಸಿಕ್ಕರೆ ಆ ಮನೆಯ ಯಜಮಾನವನ್ನು ನಾಯಿಜೊತೆ ಎಳೆದುಕೊಂಡು ಬನ್ನಿ." ಸೇವಕರು ಈ ವರ್ತಮಾನದೊಂದಿಗೆ ಮತ್ತೆ ಹೊರಟರು. ಜಾಗೀರ್ದಾರ್ ಮೇಲೆದ್ದು ಮತ್ತೆ ಹೇಳಿದ, "ಬಿಡು, ಜನೂ. ನೀವೆಲ್ಲಾ ಯಾವ ಕೆಲಸಕ್ಕೂ ಬಾರದವರು. ಹೋಗಿ ಸಿಲೂವನ್ನು ಬಟ್ಟೆಯ ತುಂಡಿನಿಂದ ಸುತ್ತಿ ಕಾರಿನಲ್ಲಿ ಇಡಿ."

ಜನೂವಿಯಾನನಿಗೆ ಆ ಯುವಕ ಒಂದು ಗಂಟೆಯ ಹಿಂದೆ ಜೀವಂತ ಸಿಲೂವನ್ನು ಒರೆಸಲು ಹೋದ ತುಂಬಾ ಕೊಳೆಯಾದ ವಸ್ತ್ರವೊಂದನ್ನು ಬಿಟ್ಟರೆ ಬೇರಾರಿಂದಲೂ ಬಟ್ಟೆಯ ತುಂಡು ಸಿಗಲಿಲ್ಲ!

ಯುವಕ ಅಂದುಕೊಂಡ, "ಓ ದೇವರೇ! ನಾನು ಎಂಥ ತಪ್ಪು ಮಾಡಿಬಿಟ್ಟೆ ಈ ವಸ್ತ್ರವಿದ್ದರೂ ಕೂಡ ನನ್ನನ್ನು ನೀನು ಬೆತ್ತಲಾಗಿ ಮಾಡಿಬಿಟ್ಟೆಯಲ್ಲಾ ?" ಕಾರು ಭರ್ರನೆ ಹಳ್ಳಿಯಿಂದ ಹೋದಾಗಲೂ, ಅವನು ಅದೇ ಪ್ರಶ್ನೆಯನ್ನು ಕೇಳಿಕೊಳ್ಳುತ್ತಿದ್ದ. ಹಳ್ಳಿಯ ಪ್ರತಿಯೊಬ್ಬರೂ ಜಾಗೀರ್ದಾರನಿಗೆ ನಾಯಿಯ ಬೆಲೆಯನ್ನು ಕಟ್ಟಲು ಅವನ ಪಾಲನ್ನೂ ಕೊಡಬೇಕೆಂದುಕೊಂಡಿದ್ದರು. ಆದರೆ ಆ ಕ್ಷಣದಲ್ಲಿ ಒತ್ತಡದಿಂದ ಮುಕ್ತರಾದವರಂತೆ ಭಾವಿಸಿದರು. ಆದರೂ ಜಾಗೀರ್ದಾರನು ಹೋದ ನಂತರವೇ ಅವರ ಕಳೆಗುಂದಿದ ಮುಖಗಳು ಮತ್ತೆ ಕಳೆಯೇರಿದವು. ಅವರ ಹೃದಯ ಎಂದಿನಂತೆ ಬಡಿಯತೊಡಗಿದವು! ಅರ್ಧಗಂಟೆಯ ತರುವಾಯ ಜಾಗೀರ್ದಾರನ ಪರಿವಾರವೂ ಹಳ್ಳಿಯನ್ನು ಬಿಟ್ಟಿತು.

ಬೀದಿ ನಿರ್ಜನವಾಗಿ, ಸತ್ತು ನಜ್ಜುಗುಜ್ಜಾದ ನಾಯಿಗಳ ದೇಹಗಳು ಭೀಕರವಾಗಿ ಕಾಣುತ್ತಿದ್ದವು. ಎಲ್ಲ ಕಡೆಯೂ ಕಾಗೆಗಳ ರೆಕ್ಕೆ ಬಡಿತದ ಶಬ್ದ ಮತ್ತು ಪ್ರಾಣ ಬಿಡುತ್ತಿರುವ ನಾಯಿಗಳ ಗೋಳು ದನಿ ಬಿಟ್ಟರೆ ಉಳಿದಂತೆ ಮೌನ ಆವರಿಸಿತ್ತು. ಹಳ್ಳಿಯಲ್ಲಿ ಇದ್ದ ಆ ಮೌನ ಒಂದು ರೀತಿಯಲ್ಲಿ ಅಪರಿಚಿತವಾದ, ಭಯಹುಟ್ಟಿಸುವ, ದಬ್ಬಾಳಿಕೆಯ ಸೂಚಕವಾಗಿ ತನ್ನೊಂದು ಸ್ಪರ್ಶದಲ್ಲಿ ಎಲ್ಲವನ್ನೂ ನಾಶಮಾಡಿಬಿಡುವ ಸಾವಿನ ಮೌನವಾಗಿತ್ತು.

ಹಳ್ಳಿಯ ಜಾಡಮಾಲಿ ಬಂದು, ಶ್ಮಶಾನದಲ್ಲಿ ಸುತ್ತುವ ಪಿಶಾಚಿಯಂತೆ ಹೊಗೆ ಬತ್ತಿಯನ್ನು ಸೇದುವ ಬದಲು ನಾಯಿಗಳು ಸಾಯುವುದನ್ನೇ ಎಮರು ನೋಡುತ್ತ ಅಲೆದಾಡಿದ.

ಮುಸುಕಿನ ಮರೆ

ಮಾಧವರಾವ್ ಮುಧೋಳ್

"ನಾನು ಸ್ತ್ರೀಯಾದುದರಿಂದ ನಿನ್ನ ಹೃದಯದಲ್ಲಿ ಆಗಬಹುದಾದ ತುಮುಲವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲೆ. ಅತ್ತಿಗೆ! ನಾವು ಭಾರತೀಯ ಸ್ತ್ರೀಯರು. ಭಾರತೀಯ ಮಹಿಳೆಗೆ ಅವಳ ಗಂಡನೇ ಸರ್ವಸ್ವ. ಅವನೊಡನೆ ಆ ಜೀವ ಹೊಂದಿ ನಡೆದುಕೊಳ್ಳುವುದೇ ನಮ್ಮ ಮೊದಲ ಕರ್ತವ್ಯ. ಇದೇ ನಮ್ಮ ಜೀವನದ ಗುರಿ. ಇದೇ ನಮ್ಮ ಮೂಲ ಉದ್ದೇಶ. ಆದರೆ ಯಾರನ್ನು ನಾವು ನಮ್ಮ ಸರ್ವಸ್ವವೆಂದು ತಿಳಿದಿರುತ್ತೇವೆಯೋ ಅವರೇ ಎರಡನೆಯವರ ಸೊತ್ತಾದರೆ ನಮಗೆ ಅತ್ಯಂತ ದುಃಖವಾಗುವುದು ಅಲ್ವೆ? ನಾನು ಅಣ್ಣನಿಗೆ ಎಷ್ಟೋ ಸಲ ತಿಳಿಸಿ ಹೇಳಿದೆ. ಅತ್ತಿಗೆ! ಎಷ್ಟೋ ಸಲ ಬೇಡಿಕೊಂಡೆ. ಅದೆಷ್ಟೋ ಸಲ ಸಿಡುಕಿನಿಂದಲೂ ಹೇಳಿದೆ. ಆದರೂ ಆತ ಮನಸ್ಸಿಗೆ ಸ್ವಲ್ಪವೂ ತೆಗೆದುಕೊಳ್ಳಲಿಲ್ಲ. ಪ್ರತಿಯಾಗಿ ನನ್ನನ್ನು ಕಾಡಿಸುವುದಕ್ಕೆಂದೇ ಯಾವಾಗಲೂ ಆ ಮುಸುಕಿನವಳ ವಿಷಯವನ್ನೇ ಹೇಳುತ್ತಿರುವ ಮೊನ್ನೆಯಂತೂ ತೀರ ಅಸಹನೀಯವಾಯಿತು. ಊಟಕ್ಕೆ ತಟ್ಟೆ ಇಟ್ಟಿರುವುದಾಗಿ ಅಣ್ಣನಿಗೆ ಹೇಳಲು ನಿಮ್ಮ ರೂಮಿಗೆ ಹೋದೆ. ಅವಳು ನಿಮ್ಮ ಮಂಚದ ಮೇಲೆ ಕುಳಿತು ನಗುತ್ತಿದ್ದಳು. ಅಣ್ಣ ಎದುರಿನ ಕುರ್ಚಿ ಮೇಲೆ ಕುಳಿತು. ಆ ಚಿತ್ರ ಸಂಗ್ರಹದಲ್ಲಿಯ ತನ್ನ ಬಾಲ್ಯದಲ್ಲಿ ತೆಗೆಸಿದ ಚಿತ್ರಗಳನ್ನೆಲ್ಲಾ ಒಂದೊಂದಾಗಿ ತೋರಿಸುತ್ತಿದ್ದ. ಜೊತೆಗೆ ನಗುನಗುತ್ತ ಮಾತೂ ಸಾಗಿತ್ತು. ಅವನ್ನು ಕಂಡು ನನ್ನ ಕಾಲು ಬಾಗಿಲನಲ್ಲಿಯೇ ತಡೆದವು. ಒಳಗೆ ಹೋಗಲು ಸ್ವಲ್ಪ ಹಿಂಜರಿದೆ. ನನ್ನನ್ನು ನೋಡಿ ಅಣ್ಣಾ, "ಇಲ್ಲಿ ನೋಡು ಸುಧಾ! ಇವತ್ತು ಇನ್ನೊಂದು ತಟ್ಟೇನೂ ಇಡು ಊಟಕ್ಕೆ! ಬಾ ಇಲ್ಲಿ! ಇವರ ಪರಿಚಯ ಮಾಡಿಕೊ" ಅಂದನು.

"ನಿಜವಾಗಲು ಅತ್ತಿಗೆ! ನನಗೆ ಮೈಯೆಲ್ಲ ಉರಿದು ಹೋಯಿತು. ನಿನಗೆ ನಾಚಿಕೆಯಾಗುವುದಿಲ್ಲವೆ? ಅಣ್ಣಾ! ಎಂದು ತಡೆಯಲಾರದೆ ಸಿಟ್ಟನಿಂದ ಹೇಳಿಯೇ ಬಿಟ್ಟೆ. ಕೋಪದ ಭರದಲ್ಲಿ ಏನೆಲ್ಲಾ ಹೇಳಿದೆ. ಆದರೆ ಅಣ್ಣ ಸಿಟ್ಟು ತುಂಬಿದ್ದರೂ ನಗೆ ನಟಿಸಿ. "ನನ್ನ ಸಂತೋಷದಿಂದ ನಿನಗೆ ಏನೂ ಸಂತೋಷವಾಗುವುದಿಲ್ಲವೆ? ಸುಧಾ?" ಎಂದ. "ಛೀ! ಸಂತೋಷವಂತೆ ಸಂತೋಷ!! ನನಗಂತೂ ಅಸಮಾಧಾನವಾಗುತ್ತದೆ ಅಣ್ಣಾ! ಇನ್ನೂ ಏನೇನು ಹೇಳಿದೆನೊ?

ಉರ್ದು ಮೂಲ: ರಜಾ-ವು-ಜಬ್ಬಾರ "ಬುರಖಾವಾಲಿ" ಕಥೆಯ ಅನುವಾದ.

ಕೋಪದಿಂದ ಮತ್ತಳಾಗಿ ನನ್ನನ್ನು ನಾನೇ ಮರೆತಿದ್ದೆ. ಅಣ್ಣನಿಂದ ಈ ಸಲ ಕೇಳಿ ಸುಮ್ಮನಿರಲಾಗಲಿಲ್ಲ. ಆ ಚಿತ್ರ ಸಂಗ್ರಹ ದಿಂದ ನನ್ನ ಚಿತ್ರಗಳನ್ನೆಲ್ಲಾ ಕಿತ್ತು ಎಸೆದ ಕೋಪದಿಂದ ಕಿಡಿಕಿಡಿಯಾಗಿ, "ತಲೆಹರಟೆ ಸಾಕು ಸುಧಾ! ನನ್ನ ಪಾಡಿಗೆ ನನ್ನನ್ನು ಬಿಟ್ಟು ಬಿಡು. ಅಣ್ಣಾ ಅನ್ನುವಂತಿದ್ದರೆ, ಅಣ್ಣನ ಸಂತೋಷದ ಕಡೆಗೂ ಲಕ್ಷ್ಯವಿಡು ವುದನ್ನು ಕಲಿತುಕೊ. ತಟ್ಟೆ ನಾನೇ ಹಾಕಿ ಕೊಳ್ಳುವೆ. ನಿನಗೇತಕ್ಕೆ ಶ್ರಮ, ಹೊರಟು ಹೋಗು" ಎಂದು ಬಿಟ್ಟ. ನೋಡಿದಿಯಾ ಅತ್ತಿಗೆ! ಎಂಥ ಕೆಟ್ಟಕಾಲ ಬಂತು. ದೇವರು ಕಣ್ಣು ಮುಚ್ಚಿಕೊಂಡಿರಬಹುದೆ? ನನಗೆ ಎಷ್ಟು ದುಃಖವಾಯಿತು. ಅದರ ಕಲ್ಪನೆ ಕೂಡ ನಿನಗೆ ಆಗಲಿಕ್ಕಿಲ್ಲ. ಮನಸ್ಸು ದಣಿಯುವವರೆಗೆ ಅತ್ತುಬಿಟ್ಟೆ. ಇನ್ನು ಮೇಲೆ ಮರೆತೂ ನಿಮ್ಮ ರೂಮಿನೊಳಗೆ ಕಾಲಿಡಬಾರದೆಂದು ನಿರ್ಧರಿಸಿದ್ದೇನೆ ಅವತ್ತಿ ನಿಂದ ನನ್ನ ಪಾಲಿಗೆ ಅಣ್ಣನೇ ಇಲ್ಲವೆಂದು ತಿಳಿದುಕೊಂಡಿದ್ದೇನೆ. ನೀರು ಕತ್ತಿನವರೆಗೆ ಬಂದಿದೆಯಾದರೂ ಸಧ್ಯ ಮುಳುಗು ವಷ್ಟೇನು ಇಲ್ಲ. ಆದರೂ ಅತ್ತಿಗೆ ನನ್ನ ಒಂದು ಮಾತು ನೀನು ನಡಿಸಲೇಬೇಕು. ಈ ಕಾಗದ ಕಂಡಕೂಡಲೆ ಬರುವ ಏರ್ಪಾಡು ಮಾಡಿಕೊಳ್ಳಬೇಕು. ದಾರಿ ತಪ್ಪುತ್ತಿರುವ ಸಂಸಾರ ನೌಕೆ ನೀನು ಬಂದರೇನೆ ಸರಿ ಯಾಗಿ ಸಾಗಿಸಬಹುದು. ಅವಳ ಮುಖ ವಾದರು ಕಂಡರೆ, ಅವರ ಮನೆಯಲ್ಲಾದರು ಹೇಳಬಹುದು. ಯಾವಾಗಲೂ ಮಾರುದ್ದ ಮುಸುಕು ಬೇರೆ ಮುಖಕ್ಕೆ. ಇವಳನ್ನು ಓಡಿಸುವುದಕ್ಕೆ ನನ್ನೊಬ್ಬಳಿಂದ ಸಾಧ್ಯವಿಲ್ಲ. ಈ ಎಲ್ಲ ವಿಷಯವನ್ನು ನಿನ್ನ ಮನೆ ಯಲ್ಲಿಯೂ ನೀನು ಹೇಳುವುದು ಅಷ್ಟು ಸರಿಯಲ್ಲ. ಇದಕ್ಕೋಸ್ಕರವೇ ಈ ಕಾಗದ ವನ್ನು ನಿನ್ನ ಕೈಗೇ ಸೇರಲೆಂದು, ಬೇರೆ ಯವರು ನೋಡಬಾರದೆಂದು ರಜಿಸ್ಟ್ರುಮಾಡಿ ಕಳುಹಿಸಿರುವೆ. ನನ್ನ ಅಣ್ಣನ ಸ್ವಭಾವವು ನಿನಗೆ ಚೆನ್ನಾಗಿಗೊತ್ತು. ಈ ಹಟವಾದಿಗಳ ಜೊತೆಗೆ ಸ್ವಲ್ಪ ಸೂಕ್ಷ್ಮವಾಗಿಯೇ ನಡೆದು ಕೊಳ್ಳಬೇಕು. ದಾರಿ ಪೂರ್ತಿ ತಪ್ಪಿದರೆ ನಾನಾಗಲಿ ಮತ್ತೆ ಯಾರಿಂದಾಗಲಿ ಏನು ಮಾಡುವುದಾದೀತು? ಈ ಕಾಗದ ನಿನಗೆ ಶನಿವಾರ ಬೆಳಿಗ್ಗೆ ಅಥವಾ ಮಧ್ಯಾಹ್ನ ಸೇರುವುದು. ಅವತ್ತೇ ಸಂಜೆಗೆ ಒಂದು ರೈಲು ಇದೆ. ಅದರಿಂದ ಹೊರಟರೆ ಮರು ದಿವಸವೇ ಇಲ್ಲಿಗೆ ತಲುಪುವಿ. ಇನ್ನೆರಡು ಮೂರು ದಿವಸಗಳಲ್ಲಿ ಅವರಿಬ್ಬರೂ ಯಾವುದೋ ಪ್ರವಾಸಕ್ಕೆ ಹೊರಡುವರೆಂದು ಕೇಳಿರುವೆ...."

ಸುಧಾನ ಕಾಗದದ ಮೇಲಿನ ವಾಕ್ಯ ಗಳನ್ನು ಲಲಿತಾ ಮತ್ತೆ ಮತ್ತೆ ಓದಿದಳು. ದುಃಖ ಉಕ್ಕಿ ಬಂದು ಬಿಕ್ಕಿಬಿಕ್ಕಿ ಅತ್ತಳು. ಯೋಚಿಸಿ ಬೆಂಡಾದಳು. ಪುರುಷರನ್ನು ನಂಬುವುದೇ ಕಷ್ಟವೆನಿಸಿತು ಅವಳಿಗೆ. ಮಡದಿ ಎದುರಿಗಿರುವಾಗ ಪ್ರೇಮದ ನಾಟಕ. ಇಲ್ಲದ ಸರಸ ಸಲ್ಲಾಪ ಬೇಕಾದರೆ, ಭೂಮಿಗೇ ಸ್ವರ್ಗವನ್ನು ಇಳಿಸಿಯಾರು. ಪತ್ನಿಯೇ ಸರ್ವಸ್ವ. ಅವಳೇ ತಮ್ಮ ಜೀವ, ಕಣ್ಣು ಎಂದಾರು. ಸ್ವಲ್ಪ ಮರೆಯಾದಳೊ, ಕರಗಿತು ಅವರ ಪ್ರೇಮ ಮುಂಜಾವಿನ ಮಂಜಿನಹಾಗೆ. ಕಟ್ಟಿದ ಕನಸು ಬಯಸಿದ ಆಶೋತ್ತರಗಳೆಲ್ಲ ಒಡೆದು ಚೂರಾಗುವುವು. ಎಷ್ಟು ಸ್ವಾರ್ಥಿಗಳು ಈ ಪುರುಷರು! ಎಷ್ಟು ಕಠೋರ ಹೃದಯಿಗಳು ಇವರು!! ಅವಳು

ಮತ್ತೊಮ್ಮೆ ಕಾಗದವನ್ನು ಪೂರ್ತಿ ಓದಿದಳು. ದುಃಖದ ಉಮ್ಮಳ ಜ್ವಾಲೆಯಾಗಿ ಬಂದಿತು. ತಾಪವನ್ನು ಹತ್ತಿಕ್ಕುತ್ತ ಲಗುಬಗೆಯಿಂದ ತಾಯಿಯ ಬಳಿಗೆ ಬಂದು, "ಅಮ್ಮಾ! ನಾನು, ಇವತ್ತೇ ಊರಿಗೆ ಹೊರಡಬೇಕು" ಎಂದಳು. "ಹಾಂ! ಇದೇನೆ ಇವತ್ತೇ ಹೊರಡೋದು? ನಾಲ್ಕಾರು ದಿವಸ ತಾಳು, ನಿನ್ನನ್ನು ಕಳಿಸಲಿಕ್ಕಾದರೂ ಜೊತೆಗೆ ಇವರು ಬರಬಾರದೇನೆ? ಇನ್ನೆರಡು ದಿವಸದಲ್ಲಿ ಅವರೂ ಬರುತ್ತಾರೆ. ಸ್ವಲ್ಪ ಏನಾದರು ತಿಂಡಿಮಾಡಿ ಕಟ್ಟುತ್ತೇನೆ", ಅಂದರು ಅವಳ ತಾಯಿ. "ನೀನೂ ಏನೂ ಚಿಂತೆಮಾಡಬೇಡಮ್ಮ. ಅವರು ತಕ್ಷಣ ಹೊರಟು ಬರಲು ಬರೆದಿದ್ದಾರೆ. ಒಂದು ಮಹತ್ವದ ಕೆಲಸದ ಮೇಲೆ ಟ್ಯೂರ್ ಹೋಗುತ್ತಾರಂತೆ. ನಾನು ಇದೀಗ, ಇಂದೇ ಹೊರಡುವೆನೆಂದು ತಂತಿ ಕಳಿಸಿರುವೆ. ನಾನು ಒಬ್ಬಳೇ ಹೋಗುವೆ. ಅವರು ಕರೆದುಕೊಂಡು ಹೋಗಲು ಸ್ಟೇಷನ್ನಿಗೆ ಬರುವರು. ನೀನು ಏನೂ ಭಯಪಡಬೇಕಾದದ್ದಿಲ್ಲ."

ತಾಯಿಗೆ ನಂಬಿಕೆ ಬರಲೆಂದು ತಂತಿ ಕಳಿಸಿರುವುದಾಗಿ ಹೇಳಿದ್ದಳು. ಸಂಜೆಯ ರೈಲಿಗೆ ಟಿಕೆಟ್ ತೆಗೆದು ಫಸ್ಟ್‌ಕ್ಲಾಸಿನಲ್ಲಿ ಕುಳಿತಳು. ಒಬ್ಬಳೇ ಪ್ರವಾಸಮಾಡುತ್ತಿದ್ದುದು ಇದೇ ಮೊದಲು ಸಲ. ಆದರೂ ಅವಳಿಗೆ ಆ ರಾತ್ರಿ ಭಯವೇನೂ ಅನಿಸಲಿಲ್ಲ. ಏಕೆಂದರೆ ಕಾಗದದ ಚಿಂತೆ ಅವಳನ್ನು ಎಡೆಬಿಡದೆ ಕಾಡಿತ್ತು. ವೇಗವಾಗಿ ಚಲಿಸುತ್ತಿರುವ ರೈಲಿನಿಂದ ಇಣಿಕಿ ನೋಡಿದಾಗ, ಹೊರಗಿನ ಇರುಳೇ ಆ ಮುಸುಕಿನ ಮಾಯಾವಿನಿಯೆಂದು ಭಯವಾಯಿತು, ಅವಳಿಗೆ. ಅವಳ ಕಪ್ಪು ಸೆರಗಿನ ಅಡಿಯಲ್ಲಿ ಮುಖ ಸೆರೆಸಿಕ್ಕು ನರಳುವಂತೆನಿಸಿತು. ಪೃಥ್ವಿಯ ಬೆಳಕನ್ನೇ ತಿಂದು ತೇಗಿದ ಕರಾಳಛಾಯೆ ಅದು ಎಂದು ಅತ್ಯಂತ. ಭಯಕಂಪಿತಳಾಗಿ ಕಿಟಕಿಯನ್ನು ಧಡಿಲ್‌ನೆ ಮುಚ್ಚಿದಳು. ಮುಖ ತಿರುವಿದಾಗ, ಎದುರಿನ ಸೀಟಿನಲ್ಲಿ ದೊಡ್ಡ ಮುಸಕನ್ನೆಳೆದು ಕೊಂಡು ಕುಳಿತಿರುವ ಸ್ತ್ರೀಯೊಬ್ಬಳನ್ನು ಕಂಡಳು. ಅವಳು ಹಿಂದಿನ ಸ್ಟೇಷನ್ನಿನಲ್ಲಿ ಹತ್ತಿರಬೇಕು. ಭೂತವನ್ನು ನೋಡಿದವಳಂತೆ ಬೆಚ್ಚಿಬಿದ್ದಳು ಲಲಿತೆ. ಭಯದಿಂದಲೇ ಹೇಳಿದಳು, "ನೋಡಿ ಅಮ್ಮಾ! ಈ ಮುಸುಕು ತೆಗೆದುಬಿಡಿ. ನನಗೇಕೋ ಭಯವಾಗುತ್ತಿದೆ."

ಸ್ತ್ರೀ ನಗುತ್ತ ಮುಸುಕನ್ನು ತೆರೆದಳು. ಲಲಿತೆ ಉಸಿರೆಳೆದು ಪೃಥ್ವಿಯಲ್ಲಿರುವ ಮುಸುಕಿನ ಮರೆಯಲ್ಲಿರುವ ಎಲ್ಲಸ್ತ್ರೀಯರು ಹೀಗೆ ಇರಬಾರದೆ? ಆ ನನ್ನ ಮನೆ ಸೇರಿದ ಮುಸುಕಿನವಳೂ ಹೀಗೆಯೇ ಒಳ್ಳೆಯವಳು ಇರಲಿ ದೇವರೇ!" ಎಂದು ನೆನೆದಳು.

ತಾನು ತೌರಿಗೆ ಈಗ ಬರಬಾರದಾಗಿತ್ತು. ಆದರೆ ಬಾರದೇ ಬಹಳ ದಿವಸವಾಗಿತ್ತು. ಅವರನ್ನೂ ಜೊತೆಗೆ ಬರಲು ಕರೆದೆ. ರಜೆ ಸಿಕ್ಕದಿದ್ದುದಕ್ಕೆ ಅವರಿಗೆ ಬರಲಾಗಲಿಲ್ಲ. ಅದಕ್ಕೆ ನನ್ನೊಬ್ಬಳನ್ನೇ ಕಳಿಸಿದರು. ನಾನು ಹೆಚ್ಚು ದಿವಸ ತೌರೂರಲ್ಲಿ ಇರಲಿಲ್ಲ. ಎಲ್ಲರನ್ನೂ ಭೆಟ್ಟಿಯಾಗಿ ಬಹಳ ದಿವಸಗಳಾಗಿದ್ದವು. ಜೊತೆಗೆ ಮನೆಯಲ್ಲಿ ತಂಗಿಯ ಲಗ್ನವೂ ಸಮೀಪಿಸಿತು. ಅಂತಿಯೇ ಅನಿವಾರ್ಯವಾಗಿ ಬರಬೇಕಾಯಿತು. ಅಲ್ಲ! ಆ ಲಗ್ನದ ಸಮಯದಲ್ಲಿ ಎಲ್ಲರೂ ನಮ್ಮ ಮನೆಯವರನ್ನು ಎಷ್ಟು ಸಲ ಕರೆದರು? ನಾನೂ ಅದೆಷ್ಟು ಕಾಗದ ಬರೆದೆ? ಆದರೂ

ಅವರು ಬರಲೇ ಇಲ್ಲ. ಬರಿಯ ಶುಭಾಶಯದ ಕಾಗದ ಮಾತ್ರ ಕಳಿಸಿದರು. ಹಾಂ! ಹೌದು !! ಅದೇ ದಿವಸದಿಂದ ಅವರು ಪತ್ರ ಬರೆಯುವುದನ್ನು ಕಡೆಮೆಮಾಡಿದ್ದಾರೆ. ಬರೆದರೂ ಯಾವಾಗಾದರೊಮ್ಮೆ ಹರಕು ಮುರುಕು ನಾಲ್ಕು ವಾಕ್ಯಗಳನ್ನು. ಈಗ ಗೊತ್ತಾಯಿತು. ಇದೆಲ್ಲಾ ಆ ಮುಸುಕಿನ ಮಾಯಾಂಗನೆಯ ಪ್ರಭಾವವೆಂದು ನನಗೆ ಕಂಟಕವಾಗಿ ಈ ರಾಕ್ಷಸಿ ಎಲ್ಲಿಂದ ಬಂದಳೊ? ಪಾಪ! ಸುಧಾಗೇನುಗೊತ್ತು, ನೀರು ಮುಳುಗುವಷ್ಟು ಇನ್ನೂ ಬಂದಿಲ್ಲ ಎಂದು ಬರೆದಿದ್ದಾಳೆ. ನನ್ನ ಮಂಚದ ಮೇಲೆ ಕುಳಿತು ಖಿ....ಖಿ....ಖಿ....ಎಂದು ನಗಬೇಕಾದರೆ, ಇನ್ನೇನು ಉಳಿಯಿತು ಮುಳುಗುವುದಕ್ಕೆ?" ಎಂದೆಲ್ಲಾ ಚಿಂತಿಸಿದಳು.

ಅದೆಷ್ಟು ಹೊತ್ತಿನವರೆಗೆ ಚಿಂತಿಸುತ್ತಿದಳೋ ಕಾಣೆ. ಅದರಲ್ಲಿಯೇ ರಾತ್ರಿಯ ಬಹುಭಾಗ ಕಳೆದಿತ್ತು. ನಿದ್ರೆಯ ಜೊಂಪು ಬಂದಾಗ ವಿಚಾರಗಳೆಲ್ಲಾ ಕನಸಿನ ರೂಪು ತಳೆದವು. ತನ್ನ ಮನೆಯಂಗಳದಲ್ಲಿ ಲಲಿತೆ ನಿಂತಂತಿತ್ತು. ನೋಡುತ್ತಿದ್ದಂತಿಯೇ ಹಿಂಬದಿಯ ಬಾಗಿಲಿನಿಂದ ಯಾವುದೋ ಕಪ್ಪು ಛಾಯೆ ಒಳಗೆ ಬಂದು ಮುಸುಕುಧರಿಸಿದ ಸ್ತ್ರೀ ರೂಪವಾಗಿ, ತನ್ನ ಭಯಾನಕ ಕರಗಳಿಂದ ಕತ್ತು ಹಿಸುಕಿದಂತಾಯಿತು, ಅವಳಿಗೆ. ಭಯದಿಂದ ಚೀರಿದಳು ಲಲಿತೆ. ಆ ಡಬ್ಬಿಯಲ್ಲಿ ಕುಳಿತ ಸ್ತ್ರೀಯರೆಲ್ಲ ಚಕಿತರಾದರು. ಎದುರಿಗೆ ಕುಳಿತ ವಯಸ್ಸಾದ ಹೆಂಗಸು, "ಏಕೆ ಮಗು ಮೈಯಲ್ಲಿ ಹುಷಾರಿಲ್ಲವೆ?" "ಹಾಗೇನಿಲ್ಲ ಅಮ್ಮಾ! ಒಂದು ಭಯಾನಕ ಕನಸನ್ನು ಕಂಡೆ. ಈಗಲು ಹೃದಯ ಕಂಪಿಸುತ್ತಿದೆ." ಎಂದು ನಾಚುತ್ತ ಹೇಳಿದಳು ಲಲಿತಾ. ಅವಳು ಲಲಿತೆಯ ಪಕ್ಕಕ್ಕೆ ಸರಿದು, ತನ್ನ ಸೆರಗಿನಲ್ಲಿ ಕಟ್ಟಿದ ಯಂತ್ರ ಒಂದನ್ನು ತೆಗೆದು, "ನೀನು ಬಹಳ ಭಯಪಟ್ಟುಕೊಂಡವಳಂತೆ ಕಾಣುತ್ತೀಯೆ. ಇಕೋ ಇದನ್ನು ತೆಗೆದುಕೋ. ದೊಡ್ಡವರು ಕೊಟ್ಟದ್ದು. ಬಲಗೈ ತೋಳಿಗೆ ಕಟ್ಟಿಕೊ. ದೇವರನ್ನು ಧ್ಯಾನಮಾಡು. ಭಯದೂರವಾಗುತ್ತದೆ. ಏನೂ ಚಿಂತಿಸಬೇಡ" ಎಂದಳು. ಯಂತ್ರವನ್ನು ಕೈಯಲ್ಲಿ ತೆಗೆದುಕೊಂಡಿದ್ದರೂ ಭಯಭರಿತ ಲಲಿತೆ ದೇವರ ನಾಮವನ್ನು ಬಿಟ್ಟು, "ಹಾ! ಮುಸುಕಿನ ಮರೆಯ ರಾಕ್ಷಸಿ!! ನನ್ನನ್ನು ಹಾಳುಮಾಡಿದೆ. ನಿನ್ನ ಮನೆ ಹಾಳಾಗ! ಪಿಶಾಚಿ!!" ಎಂದು ಒಟಗುಟ್ಟಿದಳು.

ಲಲಿತೆ ಇಳಿಯುವ ಸ್ಟೇಷನ್ ಬಂದಿತು. ರೈಲು ಇಳಿಯುವ ಮುನ್ನ ತನಗೆ ಸಹಾನುಭೂತಿಯನ್ನು ತೋರಿದ ಸಂಗಾತಿಯನ್ನು ಇನ್ನೆಂದೂ ಕಾಣುವುದೇ ಇಲ್ಲ ಎಂಬ ದೃಷ್ಟಿಯಿಂದ ನೋಡಿದಳು. ಲಲಿತೆಯನ್ನು ಕಂಡು ಅನುಕಂಪಿತಳಾದ ಅವಳ ಜೊತೆಗಾರ್ತಿ ಆವಾಗಲೂ ಇನ್ನೆಷ್ಟೋ ಧೈರ್ಯದ ಮಾತುಗಳನ್ನು ಹೇಳಿದಳು. ಲಲಿತೆಗೆ ಅದರಿಂದಾಗಿ ಸ್ವಲ್ಪ ಧೈರ್ಯ ಬಂದಂತಾಯಿತು.

ನಿಂತಲ್ಲಿಯೇ ಅವಳು ಮನೆಯಲ್ಲಿ ಕಾಲಿಡುತ್ತಲೂ ಯಾವ ಮಂತ್ರವನ್ನು ಜಪಿಸಬೇಕು, ಯಾವ ದೇವರನ್ನು ನೆನೆಯಬೇಕು ಎಂಬುದನ್ನು ಯೋಚಿಸಿಕೊಂಡಳು. ಗೇಟು ಕಾಣುತ್ತಲೂ ಮೊದಲು ದೇವರ ಹೆಸರು ಜಪಿಸುವುದು. ಒಳಗೆ ಕಾಲಿಡುತ್ತಲೂ ನಾಲ್ಕನೇ ಸಲ, ಹೀಗೆ ದೇವರ ಸ್ಮರಣೆ ಮಾಡುವುದರಿಂದಲೂ, ತನ್ನ

ಕೈಯಲ್ಲಿರುವ ತಾಯುತಯಂತ್ರ ಬಲ ದಿಂದಲೂ, ಆ ಮುಸುಕಿನ ಮರೆಯ ರಾಕ್ಷಸಿ ಯನ್ನು ತನ್ನ ಹಿಡಿತದಲ್ಲಿ ತೆಗೆದುಕೊಂಡು, ಚೆನ್ನಾಗಿ ಜಡೆಹಿಡಿದು ಥಳಿಸಿ, ಕತ್ತು ಹಿಡಿದು ಹೊರಗೆ ನೂಕಬಹುದೆಂದು ಎಣಿಸಿ ದಳು. ಲಲಿತೆ ವಿಚಾರಮಗ್ನಳಾಗಿರುವು ದನ್ನು ಕಂಡು, ಎದುರಿನವಳು, "ನಿಮ್ಮೂ ರಲ್ಲಿ ನನ್ನ ಮಗಳೂ ಇದ್ದಾಳೆ. ಮೊನ್ನೆ ಅವಳ ಮದುವೆಯಾಗಿದೆ. ನಾನು ತಿರುಗಿ ಊರಿಗೆ ಹೋಗುವಾಗ ಅವಳನ್ನು ಕಾಣಲು ಬರುವೆ. ಆಗ ನಿನ್ನನ್ನೂ ಬಂದು ನೋಡುವೆ" ಎಂದಳು.

ಲಲಿತೆಯ ಮೈ ಒಮ್ಮೆಲೆ ಜುಮ್ಮೆಂದಿತು ಒಂದು ಕ್ಷಣ ಇಳಿಯುವುದನ್ನು ಮರೆತು ತನ್ನ ಪೆಟ್ಟಿಗೆಯ ಬಳಿ ಕುಳಿತು, "ಆ ನಿಮ್ಮ ಮಗಳು ಶ್ರೀರಾಮಪುರದಲ್ಲಿ ಇರುವುದಿಲ್ಲ ತಾನೆ?" ಎಂದು ಕೇಳಿದಳು.

"ಮೊದಲು ಕೃಷ್ಣಮೂರ್ತಿಪುರಂದಲ್ಲಿ ಇರುತ್ತಿದ್ದರು. ಈಗ ಮನೆ ಬದಲಾಯಿಸಿ ದ್ದಾರೆ. ಯಾವ ಓಣಿಯಲ್ಲಿರುತ್ತಾರೊ? ಅದು ನನ್ನ ಮಗನಿಗೆ ಗೊತ್ತು."

"ನಿಮ್ಮ ಅಳಿಯ ಯಾವ ಆಫೀಸಿನಲ್ಲಿ ಕೆಲಸಮಾಡುತ್ತಾರೆ ಅಮ್ಮಾ?"

"ಅದು ಯಾವುದೋ ಫರಂಗಿ ಹೆಸರಿದೆ, ಅವರ ಆಫೀಸಿಗೆ—ಅದನ್ನು ಅನ್ನೋದಕ್ಕೆ ನಾಲಿಗೆ ಕೂಡ ಹೊರಳುವುದಿಲ್ಲ. ಇನ್ನೇನು ನನಗೂ ವಯಸ್ಸಾಯಿತು. ಇನ್ನೆಲ್ಲಿ ಈ ಟಿಸ್ ಪಿಸ್ ಹೆಸರು ಘಟ್ಟಮಾಡುತ್ತ ಕೂಡಲಿ! ಒಳ್ಳೇದು ಮಗು! ನೀನು ಇನ್ನು ಇಳಿದು ಬಿಡು. ರೈಲು ಹೊರಟರೆ ಕಷ್ಟ.... ಅದ್ಯಾಕೆ ನಿನ್ನನ್ನು ಕರೆದುಕೊಂಡು ಹೋಗಲು ಯಾರೂ ಬಂದಿಲ್ಲಾ? ಇನ್ನೂ?"

ಲಲಿತೆ ತನ್ನ ವಿಳಾಸ ಅವಳಿಗೆ ಹೇಳಿ ರೈಲಿ ನಿಂದ ಇಳಿದಳು. ಪ್ಲಾಟ್‌ಫಾರ್ಮಿನ ಮೇಲೆ ಎಲ್ಲರೂ ಅಪರಿಚಿತರೇ ಅವಳಿಗೆ. ಅತ್ತಿತ್ತ ಒಂದು ಕ್ಷಣ ನೋಡಿದಳು. ಸಾಮಾನು ಗಳನ್ನು ಕೂಲಿಯವನ ಕೈಗಿತ್ತು, ಹಿಂಬಾಲಿ ಸಿದಳು.

ಮನೆಯ ಬಾಗಿಲಿಗೆ ತಲುಪುತ್ತಲೇ ಮತ್ತೊಮ್ಮೆ ಅವಳ ಹೃದಯ ಕಂಪಿಸಿತು. ಭಯ ಆವರಿಸಿದ್ದರ ಪರಿಣಾಮವಾಗಿ ಮಾಡಿದ್ದ ಯೋಜನೆ ಹಿಂದೆಯೇ ಉಳಿ ಯಿತು. ಬಾಯಲ್ಲಿ ದೇವರ ನಾಮದ ಉಚ್ಚಾರಣೆಯೂ ಬರಲಿಲ್ಲ. ಬಾಗಿಲು ತೆರೆಯುತ್ತಲೂ ಗಹಗಹಿಸಿ ನಗುವ ನಗೆ ಕೇಳಿ ಬಂತು. 'ಇದು ಅವಶ್ಯ ಆ ಪಿಶಾಚಿಯ ನಗುವೆ ಆಗಿರಬೇಕು. ಎಂದು ಅಂದು ಕೊಂಡಳು. ಲಲಿತೆ ಒಳಗೆ ಕಾಲಿಡುತ್ತಲೂ ಅವಳಗಂಡ ಆಶ್ಚರ್ಯಭರಿತನಾಗಿ. "ಓಹೊ! ಏನು? ಲಲಿತಾ, ಬರುವ ವಿಷಯವನ್ನಾ ದರು ಕಳಿಸಿದ್ದರೆ ಆಗುತಿತ್ತು....ಏನು ಒಬ್ಬಳೇ ಬಂದೆಯಾ?"

ಲಲಿತೆ-ಉತ್ತರವನ್ನೇ ಕೊಡಲಿಲ್ಲ. ಅವಳ ದೃಷ್ಟಿ ಮಂಚದ ಮೇಲೆ ಕುಳಿತಿರುವವಳ ಮೇಲೆಯೆ ಇತ್ತು. ಅವಳು ಲಲಿತೆಯನ್ನು ಕಂಡೊಡನೆ ಮುಸುಕನ್ನು ಇನ್ನೂ ಹೆಚ್ಚು ಎಳೆದುಕೊಂಡು, ಸೀರೆಯನ್ನು ಇನ್ನೂ ಮುದುಡಿಕೊಂಡು ಮಂಚದ ತುದಿಯಲ್ಲಿ ಕುಳಿತಳು. ಆದರೂ ಅವಳುಟ್ಟಿದ್ದ ಸೀರೆ ಸ್ಪಷ್ಟವಾಗಿ ಲಲಿತೆಗೆ ಕಾಣುತ್ತಿತ್ತು. ತನ್ನ ಸೀರೆಯೇ ಅದು ಎಂದು ಅವಳಿಗೆ ತಿಳಿದು ಕೊಳ್ಳಲು ಹೆಚ್ಚು ಸಮಯ ಹಿಡಿಯಲಿಲ್ಲ. ಅದನ್ನು ಹಬ್ಬದ ಉಡುಗೊರೆಯೆಂದು ಅವಳ ತಾಯಿ ಲಲಿತೆಗೆ ಪ್ರೀತಿಯಿಂದ

ಕೊಡಿಸಿದ್ದರು. ಅದಕ್ಕೇ ಅವಳು ಕಿಡಿಕಿಡಿಯಾದಳು. ಅವಳ ಗಂಡ ಮುಗುಳುನಗುತ್ತ, "ಲಲಿತಾ! ನಿನ್ನ ಮೈಯಲ್ಲಿ ಹುಷಾರಿಲ್ಲವೆ? ಏಕೆ ಡಾಕ್ಟರರನ್ನು ಕರೆಸಲಾ?"

"ಬೇಡಿ. ಸಧ್ಯ ವಿಷ ತಂದು ಕೊಡಿ. ಕುಡಿದು ಪ್ರಾಣಬಿಡುತ್ತೇನೆ", ಅಕ್ಕಸದಿಂದ ನುಡಿದಳು ಲಲಿತೆ. "ನಾಲ್ಕು ದಿವಸ ಊರಿಗೆ ಹೋದರೆ ಇಷ್ಟು ಅನಾಹುತ-ಮಾಡಿ ಬಿಡುವುದೆ? ನನಗೆ ಸುಧಾ ಎಲ್ಲಾ ತಿಳಿಸಿದ್ದಾಳೆ." "ಏನು? ಏನು? ಏನು ಅಂತಿರುವಿ ಲಲಿತಾ?" ಗಂಭೀರವಾಗುತ್ತ ಎದ್ದು ಅವಳ ಗಂಡ ತಿರುಗಿ ಮಂಚದ ಮೇಲೆ ಕುಳಿತವಳ ಕಡೆ ತೋರಿಸುತ್ತ, "ಓಹೋ! ನಿನ್ನ ಲಕ್ಷ್ಯ ಇವಳ ಕಡೆಗೆ ಇದ್ದಂತಿದೆ, ತಾಳು, ಪರಸ್ಪರ ಪರಿಚಯ ಪರಿಚಯ ಮಾಡಿಸಿ ಕೊಡುತ್ತೇನೆ" ಎಂದವನು, ಮುಸುಕು ಎಳೆದು ಕುಳಿತವಳಿಗೆ, "ಅರೇ ನೀನೇನೆ ಇಷ್ಟು ದೊಡ್ಡದು ಮುಸುಕು ಎಳೆದುಕೊಂಡಿರುವಿ. ಮುಖದ ಮೇಲೆ? ಲಲಿತೆಯನ್ನು ಬೇರೆಗಂಡಸರೆಂದು ತಿಳಿದುಕೊಂಡಿರುವಿಯೋ ಹೇಗೆ? ಹಾಂ! ನೋಡು ಈಗ ನಾನು ಹೇಳಿರಲಿಲ್ಲವೆ ನಿನಗೆ? ಜೀವನ ನನ್ನ ಪಾಲಿಗೆ ನಗುವ ನಂದನವನ, ಲಲಿತೆ ಅದರಲ್ಲಿ ವಿಹರಿಸುವ ಜೊತೆಗಾತಿ. ಈಗ ನೀನೇ ಹೇಳು. ಯಾರಿಗೆ ಇಂಥ ಸಂಗಾತಿ ಸಿಗುವಳೋ ಅವನ ಜೀವನ ಭವ್ಯವಾಗದೆ ಇನ್ನೇನು?" ಎಂದನು. ಲಲಿತೆಯ ಕಡೆಗೆ ತಿರುಗಿ, "ಇಗೊ ಲಲಿತಾ! ಇವಳು ನನ್ನನ್ನು ಮೊದಲಿನಿಂದ ಬಲ್ಲವಳು. ಚಿಕ್ಕಂದಿನಿಂದಲೂ ಕೂಡಿ ಆಡಿದವಳು. ಇವಳಲ್ಲಿ ಮುಖ್ಯಗುಣವೆಂದರೆ ಹೊತ್ತು ಗೊತ್ತುಗಳಿಲ್ಲದೆ ನಗುತ್ತ ಒಳಗೇ ಬಂದುಬಿಡುವುದು"

"ಹೌದು! ಈ ರಾಕ್ಷಸಿಯು ನಗುವೇ ನಿಮ್ಮನ್ನು ಅಡ್ಡದಾರಿ ಕೆಡವಿದ್ದು." ಎಂದು ಅಕ್ಕಸದಿಂದ ಮುಸುಕಿನವಳನ್ನು ದುರುಗುಟ್ಟಿದಳು.

ಮಂಚದ ಮೇಲೆ ಕುಳಿತವಳ ಮುಖ ಕಾಣದಿದ್ದರೂ ಅವಳ ದೇಹದಾದ್ಯಂತ ನಗೆಯ ಅಲೆಗಳು ಏಳುತ್ತಿರುವುದನ್ನು ಯಾರೂ ಗುರುತಿಸ ಬಹುದಿತ್ತು ಮತ್ತು ನಗೆಯನ್ನು ಒತ್ತಾಯದಿಂದ ತಡೆಯುತ್ತಿರುವಳೆಂಬುದೂ ಚೆನ್ನಾಗಿಗೊತ್ತಾಗುತಿತ್ತು. ಮುಸುಕಿನ ಮರೆಯಲ್ಲಿರುವವಳ ದೇಹದ ಮಾಟವನ್ನು ಕಂಡು ಲಲಿತೆಗೆ ಅವಳು ತನ್ನ ಸಮವಯಸ್ಸಿನವಳೆಂದು ದೃಢವಾಯಿತು.

ಅವಳ ಗಂಡ ಉತ್ತರವನ್ನೇ ಕೊಡಲಿಲ್ಲ. ಇದರಿಂದಾಗಿ ಲಲಿತೆ ಇನ್ನೂ ರೊಚ್ಚಿಗೆದ್ದಳು. ಮುಖವೆಲ್ಲ ಕೋಪದಿಂದ ಉರಿಯುವಂತಾಯಿತು. ಅವಳು, "ಪಿಶಾಚಿ! ರಾಕ್ಷಸಿ!! ನೀನು ಎಲ್ಲಿಂದ ಬಂದೆ?" ಎಂದವಳೇ ಆ ಮಂಚದೆಡೆಗೆ ಧಾವಿಸಿದಳು.

"ಅರೆ! ಅರೆ!! ಏನು ಮಾಡುತ್ತೀ ಲಲಿತಾ?" ಗಂಡ ಅವಳನ್ನು ತಡೆಯುತ್ತ ಹೇಳಿದ, "ಇದೀಗ ನೀನು ಎಷ್ಟು ಒಳ್ಳೆಯವಳೆಂದು ಬಾಯಿತುಂಬ ನಿನ್ನನ್ನು ಇವಳೆದುರು ಹೊಗಳಿರುವೆ. ಆದರೆ ನೀನು ನೋಡಿದರೆ, ಹೀಗೆ ಒರಟಾಗಿ ವರ್ತಿಸುತ್ತಿದ್ದೀಯೆ?"


"ಆಹಾ! ಬಹಳ ಬಂದರು ಹೊಗಳುವವರು. ಇದನ್ನೆಲ್ಲ ನನ್ನ ಕಣ್ಣು ನೋಡುವುದಕ್ಕೆ ಮೊದಲೇ ನನ್ನನ್ನು ಕೆರೆಗೋ ಬಾವಿಗೊ ತಳ್ಳಿದ್ದರೆ ಆಗುತಿತ್ತು" ಎನ್ನುತ್ತ ಗಂಡನ

ಹಿಡಿತದಿಂದ ಬಿಡಿಸಿಕೊಂಡು ಮಂಚದ ಮೇಲೆ ಕುಳಿತವಳೆಡೆಗೆ ಧಾವಿಸಿದಳು. ಈ ಸಲ ಲಲಿತೆಯ ಕೈ ಅವಳ ಮುಸುಕನ್ನು ಬಿಗಿಯಾಗಿ ಹಿಡಿದಿತ್ತು. ಶಕ್ತಿಯನ್ನೆಲ್ಲ ಹಾಕಿ ಮುಸುಕನ್ನು ಕಿತ್ತಳು. ಚರ್ ಎಂದು ಹರಿದುಹೋಯಿತು ಮುಸುಕು.

ನಗೆಯ ಹೊನಲೇ ಹರಿಯಿತು ಅಲ್ಲಿ. ಮುಸುಕಿನ ಮರೆಯಿಂದ ಹೊರ ಬಿದ್ದ ಸುಧಾ ಬಿದ್ದೂಬಿದ್ದು ನಗುತ್ತಾ ಕೂಗಿದಳು.

"ಏಪ್ರಿಲ್ ಫೂಲ್! ಅತ್ತಿಗೆ....
ಏಪ್ರಿಲ್ ಫೂಲ್"

ಸುಸ್ತು ಹೊಡೆದಳು ಲಲಿತೆ. ಬಳಲಿದವಳಂತೆ ಮಂಚದಮೇಲೆ ಕೂಡುತ್ತ ಎದುರಿಗಿರುವ ಕ್ಯಾಲೆಂಡರ ಕಡೆಗೆ ನೋಡಿ, "ಅರೆ! ಹೌದು!!....ಇವತ್ತು ಫಸ್ಟ್ ಏಪ್ರಿಲ್, ಅಲ್ವೆ!!!" ಎಂದಳು.



ಇಂದಿನ ನಿನ್ನ ಸಮಗ್ರ ಕೃತಿಗಳ ವಿಮರ್ಶೆ ಮುಗಿಯುವವರೆಗೆ ನಿದ್ದೆ ನಿನ್ನನ್ನು ಕಾಡದಿರಲಿ. ನಾನೇನು ಮಾಡಿದೆ? ನ್ಯಾಯಪಥದಿಂದ ನಾನೆಲ್ಲಿ ಜಾರಿದೆ? ಪೂರೈಸಲೇ ಬೇಕಾಗಿದ್ದ ಯಾವ ಕಾರ್ಯವನ್ನು ಪೂರೈಸಲಿಲ್ಲ? ದಿನದ ನಿನ್ನ ಪ್ರಥಮ ಕೃತಿಯಿಂದ ಕೊನೆಯ ಕಾರ್ಯದವರೆಗೂ ಈ ರೀತಿ ವಿಮರ್ಶೆ ನಡೆಯಲಿ. ಕೊನೆಗೆ ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಡಬೇಕು. ಅಂದರೆ ನೀನೆಸಗಿದ ಸತ್ಕಾರ್ಯಗಳ ಬಗ್ಗೆ ಸಂತೋಷ ಲಭಿಸುವದು.

—ಪೈಥಗೋರಸ್

ಕಷ್ಟನಷ್ಟ, ದ್ವೇಷ, ಈರ್ಷೆ, ಕಾಮ, ಕ್ರೋಧ, ಮೋಹ, ಮೊದಲಾದ ವಿಪರೀತ ಮನೋವಿಕಾರಗಳಿಂದ ಮುಕ್ತರಾದಾಗಲೇ ಜೀವನ ಪರಿಪಕ್ವವಾಗುವದು.

—ಸ್ವಾಮೀ ರಾಮದಾಸ

ಕಲ್ಲರಳಿ ಹೂವಾಯ್ತು : ಲೈಕೆನ್ ಹೇಳಿದ ಕತೆ

ಡಾ|| ಎಸ್. ಎನ್. ಲೀಲಾ

ಪರಿಪರಿಯ ರೂಪಿನಲಿ ಕಾಂತಿಯಲಿ ರಾಗದಲಿ
ನೆರೆಯಿಸುತ ಪರಿಪರಿಯ ರಸಗಳು ಪ್ರಕೃತಿ
ಕೆರಳಿಸುತ ಹಸಿವುಗಳ ಸವಿಗಳನು ಕಲಿಸುವಳು
ಗುರು ರುಚಿಗೆ ಸೃಷ್ಟಿಯಲ ಮಂಕುತಿಮ್ಮ

ಕೈಗಾರಿಕಾ ಕ್ರಾಂತಿಯ ವಿಷಫಲವಾಗಿ ಪರಿಸರಕ್ಕೆ ಗಾಸಿ ತಟ್ಟಿದಾಗ ನಿಸರ್ಗ ಹೇಗೆ ತನ್ನ ಪಾಟೀ ಸವಾಲು ಎಸೆದು ಮಾನವನಿಗೆ ಪರಿಸರ ವಿಜ್ಞಾನದ ಮೊದಲ ಪಾಠವನ್ನು ಶ್ರುತಪಡಿಸಿತೆನ್ನುವುದನ್ನು ಈ ಲೇಖನದಲ್ಲಿ ಓದಿ.

"ಎತ್ತಣ ಮಾಮರ, ಎತ್ತಣ ಕೋಗಿಲೆ, ಬೆಟ್ಟದ ನೆಲ್ಲಿಕಾಯಿ, ಸಮುದ್ರದ ಉಪ್ಪು, ಎತ್ತಣಿಂದೆತ್ತ ಸಂಬಂಧವಯ್ಯಾ" ಎಂದಿದ್ದಾರೆ ಅಲ್ಲಮಪ್ರಭು ತಮ್ಮ ವಚನದಲ್ಲಿ. 'ವಸಂತಕಾಲ' ಮತ್ತು 'ಉಪ್ಪಿನಕಾಯಿ'ಯ ಸಂಬಂಧವಲ್ಲದೇ ಮತ್ತೇನಯ್ಯ? ಎಂದು ಉತ್ತರಿಸಿಕೊಂಡರೆ ಮತ್ತೊಂದು ಇಂಥದೇ ಪ್ರಶ್ನೆ; "ಎತ್ತಣ್ಣ ಕೈಗಾರಿಕಾ ಕ್ರಾಂತಿ, ಎತ್ತಣ ಜೀವವಿಕಾಸ?" ಇದಕ್ಕೆ ಉತ್ತರವಾಗಿ "ಕಲ್ಲು ಹೂವಿನ ಸಂಬಂಧವಯ್ಯ" ಎನ್ನುತ್ತಾರೆ ಪರಿಸರ ವಿಜ್ಞಾನಿಗಳು.

'ಬಿಸ್ಟನ್ ಬೆಟ್ಯುಲೇರಿಯಾ' ಎಂಬ ಪತಂಗ, ಆಡುಭಾಷೆಯ ಪೆಪ್ಪರ್ಡ್ ಮಾತ್ (ಮೆಣಸಿನ ಪತಂಗ). ಇದು ತಿಳಿ ಬೂದು ಬಣ್ಣದ್ದಾಗಿದ್ದು ಮೆಣಸಿನಂತಹ ಕಪ್ಪು ಚುಕ್ಕೆಗಳನ್ನು ಹೊಂದಿವೆ. ೧೮೪೮ರಲ್ಲಿ ಕೈಗಾರಿಕಾ ನಗರವಾದ ಮ್ಯಾಂಚೆಸ್ಟರ್‌ನಲ್ಲಿ ಅಲ್ಲಿಂದಿಲ್ಲೊಂದು ಗಾಢ ಕಪ್ಪು ಛಾಯೆಯ ಪತಂಗಗಳನ್ನು ಗುರುತಿಸಲಾಯಿತು. ಇವನ್ನು ಬಿಸ್ಟನ್ ಬೆಟ್ಯುಲೇರಿಯಾ ಕಾರ್ಬೋನೇರಿಯಾ ಎಂದು ಹೆಸರಿಸಲಾಯಿತು. ೧೯ನೇ ಶತಮಾನದ ಮಧ್ಯದಲ್ಲಿ ಕಂಡ ಇಂಥ ಕಪ್ಪು ಪತಂಗಗಳು, ಆ ಶತಮಾನದ ಅಂಚಿಗೆ ಶೇಕಡ ೯೦ಕ್ಕೇರಿತು. ಈ ಏರಿಕೆಯ ರಹಸ್ಯವೇ ಕೈಗಾರಿಕಾ ಕ್ರಾಂತಿ.

ಮೆಣಸಿನ ಪತಂಗ ಒಂದು ನಿಶಾಚರ ಕೀಟ. ಇವು ಹಗಲು ಹೊತ್ತು ಮರಗಳ ಕಾಂಡಗಳ ಮೇಲೆ ವಿಶ್ರಮಿಸುತ್ತಿದ್ದು, ತಿಳಿ ಬಣ್ಣದ್ದಾಗಿದ್ದರಿಂದ ವಾತಾವರಣಕ್ಕೆ ಹೊಂದಿಕೊಳ್ಳಲು ಬಿಳಿಬಣ್ಣದ ಕಲ್ಲುಹೂಗಳು ಬೆಳೆದ ಮರಗಳನ್ನು ಆಶ್ರಯಿಸಿದ್ದವು. ಈ ಆಯ್ಕೆಯಿಂದ ಅವುಗಳನ್ನು ಕಬಳಿಸುವ

ಪಕ್ಷಿಗಳಿಂದ ಸುಲಭವಾಗಿ ರಕ್ಷಿಸಿಕೊಳ್ಳುತ್ತಿದ್ದವು. ಮ್ಯಾಂಚೆಸ್ಟರ್‌ನಲ್ಲಿ ಕೈಗಾರಿಕೆಗಳು ಬೆಳೆದಂತೆಲ್ಲಾ ಕಾರ್ಖಾನೆಗಳಿಂದ ಹೊರ ಹೊಮ್ಮಿದ ದಟ್ಟ ಹೊಗೆಗೆ ಕಲ್ಲು ಹೂಗಳು ಆಹುತಿಯಾಗಿ ಕಪ್ಪು ಹೊಗೆಯಿಂದ ಮರದ ಕಾಂಡವು ಬಣ್ಣ ಬದಲಿಸಿಕೊಂಡವು. ಕಲ್ಲು ಹೂ ವಾಯು ಮಾಲಿನ್ಯಕ್ಕೆ ಸ್ಪಂದಿಸಿ ನಾಶವಾದಾಗ ಮೆಣಸಿನ ಪತಂಗ ಮಂಗಮಾಯ, 'ಕಾರ್ಬೋನೇರಿಯಾ ಪದಾರ್ಪಣ (ಕಪ್ಪು ಮೆಣಸಿನ ಪತಂಗ). ಕಲ್ಲು ಹೂಗಳು ಯಾವುದೇ ಪ್ರದೇಶದಲ್ಲಿ ಬೆಳೆಯದಿದ್ದರೆ, ಅಲ್ಲಿಯ ವಾಯುಮಾಲಿನ್ಯದ ಪ್ರಮಾಣವನ್ನು ಸೂಚ್ಯವಾಗಿ ಪ್ರತಿಬಿಂಬಿಸುತ್ತದೆ. ೧೮೬೬ರಲ್ಲೇ ನ್ಯಾಲಾಂಡರ್ ಎಂಬ ವಿಜ್ಞಾನಿ ಪ್ಯಾರಿಸ್‌ನ ಜಾರ್ಡಿಯಸ್ ಡ ಲುಕ್ಸ್ ಮಾಬರ್ಗ್‌ನ ಸುತ್ತಮುತ್ತ ಕಲ್ಲುಹೂ ಬೆಳೆಯದಿರುವುದನ್ನು ಕಂಡು ಅದು ವಾಯುಮಾಲಿನ್ಯದ ಲಕ್ಷಣವೆಂದು ಪರಿಗಣಿಸಿದ್ದ. ಅನಂತರ ಈ ಮಾನದಂಡವನ್ನು ಬಳಸಿ ಕೆನಡಾದಲ್ಲಿರುವ ಮ್ಯಾಂಟ್ರಿಯಲ್, ನ್ಯೂಯಾರ್ಕ್, ಬ್ರಿಟನ್ನಿನ ಲಂಡನ್ ಮುಂತಾದ ದೊಡ್ಡ ನಗರಗಳಲ್ಲೂ ವಾಯು ಮಾಲಿನ್ಯದ ಹೆಚ್ಚಳಿಕೆ ಅರಿಯಲು ಕಲ್ಲು ಹೂವಿನ ಮರುಭೂಮಿ (ಲೈಚನ್ ಡೆಸರ್ಟ್) ಪ್ರದೇಶಗಳನ್ನು ಗುರುತಿಸಲಾಯಿತು. ಅತಿ ಮುಖ್ಯವಾಗಿ ವಾಯುವಿನಲ್ಲಿ ಗಂಧಕ ಡೈ ಆಕ್ಸೈಡ್ ದ್ಯುತಿಸಂಶ್ಲೇಷಣೆಗೆ ಅಡ್ಡಿಯಾಗುವುದರಿಂದ ಸಸ್ಯದಲ್ಲಿನ ಹರಿತ್ತು ನಾಶಗೊಂಡು ಸ್ವಯಂಪಾಕ ವಿಧಾನಕ್ಕೆ ಧಕ್ಕೆ ತರುವುದರಿಂದ ಪರಿಸರ ಮಾಲಿನ್ಯದ ಮಾನದಂಡವಾಗಿ ಬಳಸಬಹುದಾಗಿದೆ. ಪಶ್ಚಿಮ ಯಾರ್ಕ್ ಶೈರ್‌ನ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶುದ್ಧ ವಾತಾವರಣ ಕಲ್ಪಿಸುವ ಪಣತೊಟ್ಟಿರುವ ಕಾನೂನಿನ ವ್ಯವಸ್ಥೆಯಿಂದ ಅಳಿದು ಹೋದ ಹೈಪ್ರೋಜಿಮ್ನಿಯ ಫೈಸೋಡು ಎಂಬ ಕಲ್ಲು ಹೂ ಪುನರುಜ್ಜೀವನ ಹೊಂದುತ್ತಿರುವುದು ಸಂತೋಷದ ಸಂಗತಿ. ಕೈಗಾರಿಕಾ ಕ್ಷೇತ್ರಗಳಾದ ಗ್ಲಾಸ್ಗೊ, ಸ್ಕಾಟ್‌ಲೆಂಡಿನಲ್ಲಿ ಕಪ್ಪುಪತಂಗ ಜಾಸ್ತಿಯಾದರೆ ಪಶ್ಚಿಮ ಇಂಗ್ಲೆಂಡ್, ವೇಲ್ಸ್ ಮತ್ತು ಐರ್ಲೆಂಡ್‌ಗಳಲ್ಲಿ ಮರದ ತೊಗಟೆ ಇನ್ನೂ ಬಿಳಿಯಾಗಿ ಇರುವುದರಿಂದ ಶುದ್ಧ ವಾತಾವರಣವನ್ನು ಪ್ರತಿಬಿಂಬಿಸುವಂತಾಗಿದೆ.

ಹೀಗೆ ನಿಸರ್ಗದ ಆಯ್ಕೆಯಲ್ಲಿ ಕಲ್ಲು ಹೂವಿನ ಆತ್ಮಹತ್ಯೆಯಿಂದ ತಿಳಿಬಣ್ಣದ ಪತಂಗಗಳು ನಾಶದಂಚನ್ನು ಕಂಡು ಕಡು ಛಾಯೆಯವು ತಮ್ಮ ಸ್ಥಾನವನ್ನು ಗಟ್ಟಿಮಾಡಿಕೊಂಡಿರುವ ವಿಧಾನವೇ "ಇಂಡಸ್ಟ್ರಿಯಲ್ ಮೆಲಾನಿಸಂ" ೧೮೪೮ರಿಂದ ೧೯೫೦ರ ಒಂದು ಶತಕದಲ್ಲಿ ಜೀವ ವಿಕಾಸದಲ್ಲೇ ಒಂದು ಕ್ರಾಂತಿಕಾರಕ ಅರಿವು ಮೂಡಿಸಿದ ಕೀರ್ತಿ ಕಲ್ಲುಹೂವಿಗೆ.

ಮಣ್ಣಿಂದ ಕಾಯ ಮಣ್ಣಿಂದ
ಅನ್ನ, ಉದಕ, ಊಟವೀಯೋದು ಮಣ್ಣು,
ಉನ್ನತ ಪರ್ವತವೆಲ್ಲಾ ಮಣ್ಣು

ಎಂದಿದ್ದಾರೆ ಪುರಂದರದಾಸರು. ಈ ದಾಸೋಕ್ತಿಯಲ್ಲಿ ಮಣ್ಣಿನ ವೈಜ್ಞಾನಿಕ ಸತ್ಯ ಅಡಕವಾಗಿದೆ. ಮಣ್ಣು ಭೂಮಿಯ ಹೊರ ಮೈಯಲ್ಲಿ ಇರುವ ಮತ್ತು ಜೀವಕ್ಕೆ ಆಸರೆಯಾಗುವ ಪದರ. ಭೌತಿಕ, ರಾಸಾಯನಿಕ ಮತ್ತು ಜೈವಿಕ ಚಟುವಟಿಕೆಗಳಿಂದ 'ಶಿಲಾ ಶಿಥಿಲೀಕರಣದಿಂದ' ಶಿಲೆ ಮಣ್ಣಾಗು

ತ್ತದೆ. ಈ ಜೈವಿಕ ಚಟುವಟಿಕೆಯ ನಾಟಕಕ್ಕೆ ಮುಖ್ಯ ಪಾತ್ರಧಾರಿ ಕಲ್ಲುಹೂ. ಅತ್ಯಂತ ಗಡುಸಾದ ಶಿಲೆಯನ್ನು ಕೂಡ ಶಿಥಿಲೀಕರಣಗೊಳಿಸುವ ಸಾಮರ್ಥ್ಯ ಈ ಕಲ್ಲುಹೂವಿಗೆ.

ತೇವ, ಶಾಖಗಳಿರುವ ಪ್ರದೇಶಗಳಲ್ಲಿ ಗಾಳಿಯಲ್ಲಿರುವ ಆಮ್ಲಜನಕ, ಇಂಗಾಲ ಡೈಆಕ್ಸೈಡ್ ಮತ್ತು ನೀರಾವಿಗಳನ್ನು ಬಳಸಿ, ಖನಿಜ ಮತ್ತು ಶಿಲೆಗಳನ್ನು ಕರಗಿಸುವಲ್ಲಿ ಇವು ಸಹಾಯಮಾಡುತ್ತವೆ. ಈ ಸಸ್ಯಗಳು ಅನೇಕ ಆಮ್ಲಗಳನ್ನು ಮತ್ತು ಇಂಗಾಲ ಡೈ ಆಕ್ಸೈಡ್‌ನ್ನು ಹೊರಚೆಲ್ಲುವುದರಿಂದ ರಾಸಾಯನಿಕ ಶಿಥಿಲೀಕರಣವೂ ಆಗಿ ಫಲವತ್ತಾದ ಮಣ್ಣು ರೂಪುಗೊಳ್ಳುತ್ತದೆ.

ಕಲ್ಲುಹೂ ಲೈಚೆನ್ ಜಾತಿಯ ಒಂದು ಸಸ್ಯ. ಸಸ್ಯ ಸಾಮ್ರಾಜ್ಯದ ಅತಿ ಪ್ರಾಚೀನ ಸಸ್ಯಗಳ ಗುಂಪೇ ಥೆಲೋಫೈಟಾ. ಈ ಗುಂಪಿಗೆ ಸ್ವಯಂ ಆಹಾರ ಉತ್ಪಾದಿಸಬಲ್ಲ ಶೈವಲಗಳೂ, ಬಣ್ಣರಹಿತ ಪರಾವಲಂಬಿ ಶಿಲೀಂಧ್ರಗಳೂ ಸೇರಿವೆ. ಈ ಎರಡೂ ಉಪವರ್ಗಗಳ ಸಂಯೋಜನೆಯಿಂದ ಸಂಗಮಗೊಂಡ ಸಸ್ಯವೇ 'ಕಲ್ಲುಹೂ' ಅಥವಾ ಶಿಲಾವಲ್ಕ. 'ಲಿಕೆನ್ಸ್' ಪದ ಗ್ರೀಕ್ ಪದದಿಂದ ಬಂದಿದೆ, 'ನೆಕ್ಕುವುದು' ಎಂದು ಈ ಪದದರ್ಥ. ಒಂದಕ್ಕೊಂದು ಅತಿ ಹತ್ತಿರ ಸಂಬಂಧವಲ್ಲದ ೨ ಜೀವಿಗಳು ಅನ್ಯೋನ್ಯವಾಗಿ ಸಹಜೀವನ ನಡೆಸುವುದರಿಂದ ಈ ಹೆಸರು ಬಂದಿರಬಹುದು. ಸ್ವಯಂಪಾಕ ತಯಾರಿಸುವ ನೀಲಿ-ಹಸಿರು ಮತ್ತು ಹಸಿರು ಶೈವಲಗಳು ಬೆಸಿಡಿಯೋ ಮೈಸೆಟೀಸ್ (ಗದೆ ಯಾಕಾರದ ಶಿಲೀಂಧ್ರ) ಅಥವಾ ಅಸ್ಕೋಮೈಸಿಟೀಸ್ (ಚೀಲ ಶಿಲೀಂಧ್ರ) ಗಳೊಂದಿಗೆ ಕೂಡಿ ಜೀವಿಸುತ್ತವೆ. ಶಿಲೀಂಧ್ರ ಜೋಡಿಯ ಆಧಾರದ ಮೇಲೆ ಇವನ್ನು ಬೆಸಿಡಿಯೋ ಲೈಕೆನ್ಸ್ ಮತ್ತು ಅಸ್ಕೋಲೈಕೆನ್ಸ್ ಎಂದು ಗುರುತಿಸಬಹುದು. "ಒಪ್ಪತ್ತು ಭಿಕ್ಷವ ಬೇಡಿ, ತಾನೊಂದಿಷ್ಟು ನೀಡಿ" ನಡೆಸುವ ಇಂಥ ಜೀವನಕ್ಕೆ ಹೆಲಾಟಿಸಂ' ಎಂದರೆ ಪರಸ್ಪರ 'ದಾಸ್ಯ ಭಾವ' ಎನ್ನುವ ಕಾರಣವೇ ಲೈಕೆನ್ಸ್‌ನ ಪದ ಪ್ರಯೋಗವಾಗಿರಲಿಕ್ಕೂ ಸಾಕು. ಇವನ್ನು 'ಶೈಲೀಂದ್ರ' (ಶೈವಲ+ಶಿಲೀಂಧ್ರ) ಅಥವಾ 'ಶೈವಲೀಂದ್ರ' ಎಂದರೂ ತಪ್ಪಾಗದಿರಲಾರದು.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ, ಕಲ್ಲುಹೂ ಬೆಳೆಯದ ತಾಣವಿಲ್ಲ ಎನ್ನಬಹುದು. ಅವು ಕಲ್ಲುಗಳ ಮೇಲೂ ಬೆಳೆಯುವದರಿಂದಲೇ ಈ ಅಡ್ಡ ಹೆಸರು. ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ, ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಅವು ಯಾವುದೇ ಸ್ಥಿರ ಅಜೈವಿಕ ಅಥವಾ ಜೈವಿಕ ಪದಾರ್ಥಗಳ ಮೇಲೂ ಬೆಳೆಯಬಲ್ಲವು. ಬಂಡೆ, ಶಿಲೆ, ಮರದತೊಗಟೆ, ಮಣ್ಣು, ಬಟ್ಟೆ, ಕಾಗದ, ಗಾಜು, ಕಬ್ಬಿಣ, ಚರ್ಮ, ಮೂಳೆ ಒಂದೇ ಎರಡೇ ಯಾವುದೇ ಪದಾರ್ಥಕ್ಕು ಸೈ. ಕಲ್ಲಿನ ವಿಗ್ರಹಗಳು, ದೇವಸ್ಥಾನ (ಗುಡಿ, ಗೋಪುರಗಳು) ಪುರಾತನ ಕಟ್ಟಡಗಳ ಮೇಲೆ ಬೆಳೆದಾಗ ಅವನ್ನು ವಿಕೃತಿಗೊಳಿಸುವ ಸಾಧ್ಯತೆ ಇರುವುದರಿಂದ ಅವುಗಳು ಬೆಳೆಯುವುದನ್ನು ತಡೆಗಟ್ಟಬೇಕಾಗುವುದು.

ಸುಮಾರು ೧೬,೦೦೦ ದಿಂದ ೧೮,೦೦೦ ಅಡಿ ಎತ್ತರದವರೆಗೂ ವಿವಿಧ ಪ್ರಭೇದ

ಗಳನ್ನು ಗುರುತಿಸಲಾಗಿದೆ. ಕೆಲವು ಕಲ್ಲು ಹೂಗಳಿಗೆ ನಿರ್ದಿಷ್ಟ ಆಧಾರ ಬೇಕಾಗಿದ್ದರೆ ಮತ್ತೆ ಕೆಲವು ಯಾವುದೇ ಆಧಾರ ಇಲ್ಲದೇ ಪರಿಸರದಲ್ಲೂ ಬೆಳೆಯಬಲ್ಲುದು. ಅವುಗಳ ರಚನೆ, ಆಕಾರ ಮತ್ತು ಆಧಾರದ ಮೇಲೆ ಅವುಗಳನ್ನು ಸಣ್ಣ ಗುಂಪಾಗಿ ವಿಂಗಡಿಸ ಬಹುದು. ಅವೇ,

೧. ರೊಟ್ಟಿಯಂತೆ ಬೆಳೆಯುವ ಕ್ರಸ್ಟೋಸ್ ಕಲ್ಲುಹೂ
೨. ಎಲೆಯಂತಿರುವ ಫೋಲಿಯೋಸ್
೩. ತಂತು ಅಥವಾ ಬೇರಿನಂತಿರುವ ರೈಜೈನ್
೪. ಕಾಯಿಗಳಂತೆ ದುಂಡಾಗಿರುವ ಫ್ರುಟಿಕೋಸ್

ಈ ಮೇಲಿನ ವಿಧಗಳೆಲ್ಲವೂ ಆಸ್ಕೋ ಲೈಕನ್ಸ್‌ಗಳು. ಬೆಸಿಡಿಯೋ ಲೈಕೆನ್ಸ್‌ಗಳು ಹೆಚ್ಚಾಗಿ ಉಷ್ಣವಲಯದಲ್ಲಿ ಬೆಳೆಯುವುವು. ಇವು ಯಾವುದೇ ಸಸ್ಯಗಳೂ ಬೆಳೆಯದ ಸ್ಥಳಗಳಲ್ಲೂ ಬೆಳೆಯಬಲ್ಲವಾದ್ದರಿಂದ ಸರ್ವ ವ್ಯಾಪಿಯಾಗಿವೆ.

ಸ್ಕಾಂಡಿನೇವಿಯಾದಲ್ಲಿ ಕಲ್ಲುಹೂಗಳದೇ ರಾಜ್ಯ. ಆಲ್ಪ್ಸ್ ಪರ್ವತಶ್ರೇಣಿಯ ದಕ್ಷಿಣ ಭಾಗವನ್ನು ಬಿಟ್ಟರೆ ಉಳಿದೆಡೆ ಅನೇಕ ವಿಧದ ಕಲ್ಲುಹೂಗಳು ಹೆಚ್ಚು ಎತ್ತರ ಪ್ರದೇಶಗಳಲ್ಲೂ ಹರಡಿವೆ. ಹೆಚ್ಚಿನ ಎತ್ತರಕ್ಕೆ ಹೋದಂತೆ, ಕಡಿಮೆ ಪ್ರಕಾರಗಳು ದೊರೆಯುತ್ತವೆ. ೫೦೦೦ ಮೀಟರ್‌ಗಳ ಮೇಲಕ್ಕೆ ಇವು ಸಾಧಾರಣವಾಗಿ ವ್ಯಾಪಿಸ ಲಾರವು. ಹಿಮಾಲಯ ಪರ್ವತದ ೫೨೦೦ ಮೀಟರ್ ಎತ್ತರದಲ್ಲಿಯೂ ಕಲ್ಲುಹೂ ಗಳನ್ನು ಗುರುತಿಸಲಾಗಿದೆ.

ಉತ್ತರಧ್ರುವ ಹಿಮಾಚ್ಛಾದಿತ ಪ್ರದೇಶ ಗಳಾದ ಗ್ರೀನ್‌ಲ್ಯಾಂಡ್, ಐಸ್‌ಲ್ಯಾಂಡ್, ಅಲಾಸ್ಕ ಮತ್ತು ತಂಡ್ರಾಗಳಲ್ಲಿ ೧೫ ರಿಂದ ೩೦ ಸೆಂ.ಮೀ. ಉದ್ದದ ಕ್ಲಾಡೋನಿಯಾ ಎಂಬ ಕಲ್ಲುಹೂ (ಶೀತವಲಯಗಳಲ್ಲಿ ಮಾತ್ರ ಬೆಳೆಯುವಂತಹುದು) ಅಲ್ಲಿ ಜೀವಿಸುವ ಹಿಮಸಾರಂಗಗಳಿಗೆ ಮತ್ತು ಉತ್ತರ ಕೆನಡಾದ ಆರ್ಕ್‌ಟಿಕ್ ಪ್ರದೇಶದಲ್ಲಿ ವಾಸಿಸುವ ಕಾರಿಬೋ ಎಂಬ ಜಿಂಕೆಯ ಮುಖ್ಯ ಆಹಾರವೇ ಆಗಿದೆ. ದಕ್ಷಿಣಧ್ರುವ, ಅಂಟಾರ್ಟಿಕದಲ್ಲೂ ಬಹು ವಿಧದ ಕಲ್ಲುಹೂ ಗಳನ್ನು ಪತ್ತೆಹಚ್ಚಲಾಗಿದೆ.

ಮಂಗಳ ಗ್ರಹದಲ್ಲೂ ಕಲ್ಲುಹೂ ಇರಬಹುದೆಂಬ ಊಹೆಯೂ ಇದೆ. ಭೂಮಿಗಿಂತ ಮಿಗಿಲಾದ ಪ್ರತಿಕೂಲ ವಾತಾವರಣ ವಿದ್ದರೂ ನೀರಿನ ಮತ್ತು ಆಮ್ಲಜನಕದ ಕೊರತೆಯಾದಾಗಲೂ ಇವು ತಮಗೆ ಬೇಕಾದ ಚೈತನ್ಯವನ್ನು ಮತ್ತೊಂದು ರೀತಿ ಸೃಷ್ಟಿಸಿಕೊಳ್ಳಬಲ್ಲವು. ಶಿಲೀಂದ್ರ ಶೈವಲಕ್ಕೆ ಬೇಕಾದ ನೀರನ್ನು ವಾತಾವರಣ ದಿಂದ ಹೀರಿ, ಅದು ಬಾಡದಂತೆ ಕಾಪಾಡಿದರೆ, ಶೈವಲ ಆಹಾರವನ್ನು ಕೊಟ್ಟು ಶಿಲೀಂದ್ರ ವನ್ನು ಸಾಕುತ್ತದೆ. ಒಂದೇ ಸಾಕಣೆಯ ಮಾಧ್ಯಮದಲ್ಲಿ ಸ್ವತಂತ್ರ ಜೀವಿಗಳಾಗಿ ಜೀವಿಸಬಲ್ಲವಾದರೂ, ಆಹಾರದ ಕೊರತೆ ಇದ್ದಾಗ ಇವೆರಡೂ ಕೂಡಿಕೊಂಡು 'ಹಸಿದು ಬಂದವರಿಗೆ ಅಶನ ಮೀಯಲು ಬೇಕು, ಹಸನಾದ ಭೂಮಿಯನ್ನು ಧಾರೆ ಎರೆಯಲೇಬೇಕು' ಎಂದು ಧೃಡ ನಿರ್ಧಾರ ಮಾಡಿಕೊಂಡು ಕಲ್ಲನ್ನು ಕರಗಿಸುವ ಪಣ ತೊಟ್ಟಿರವುದೇ ಕಲ್ಲು ಹೂವಿನ ವಿಶೇಷ.

ಕಲ್ಲುಹೂಗಳಿಗೆ ತಮ್ಮ ಒಣತೂಕದ ಶೇಕಡ ೧೦೦ ರಿಂದ ೩೦೦ರವರೆವಿಗೂ ನೀರಿನ

ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ಮತ್ತು ಶೇಕಡ ೨ ರಿಂದ ೧೫ ರವರೆಗೂ ಇಳಿಸಿಕೊಳ್ಳುವ ಸ್ವಭಾವವಿರುವುದರಿಂದ ಅವು ಸುಲಭವಾಗಿ ಎಂತಹುದೇ ಪರಿಸರದಲ್ಲೂ ಬೆಳೆಯುವ ಸಾಮರ್ಥ್ಯಹೊಂದಿದೆ.

ಸಾಂಬಾರ ಪದಾರ್ಥವಾಗಿ ಕಲ್ಲುಹೂವಿನ ಬಳಕೆ ನಮ್ಮಲ್ಲಿ ಎಂದಿನಿಂದಲೋ ಬಂದಿದೆ. ೧೯೬೨ರಿಂದೀಚೆಗೆ ಜಪಾನಿನ ವಿಜ್ಞಾನಿಗಳು ಕಲ್ಲುಹೂವಿನ ಔಷಧೀಯ ಗುಣಗಳನ್ನು ಪರೀಕ್ಷಿಸುವ ಸಂಶೋಧನೆಗಳಲ್ಲಿ ತೊಡಗಿರುವುದಲ್ಲದೆ, ಅವುಗಳಿಂದ ಅನೇಕ ರಾಸಾಯನಿಕ ವಸ್ತುಗಳನ್ನು ಬೇರ್ಪಡಿಸುವತ್ತ ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸುತ್ತಿರುವುದು ವೈದ್ಯಕೀಯದಲ್ಲಿ ಇವುಗಳ ಸ್ಥಾನ ಭದ್ರವಾಗುತ್ತಿದೆ.

ಕ್ರಿ.ಪೂ. ೪ನೇ ಶತಮಾನದಲ್ಲೇ ವೈದ್ಯಪಿತಾಮಹನಾದ ಹಿಪೋಕ್ರೆಟಸ್, 'ಉಸ್ನಿಯಾ ಬಾರ್ಜಟಾ'ವನ್ನು ಮಹಿಳೆಯರ ಅನೇಕ ತೊಂದರೆಗಳಿಗೆ ಬಳಸಿದ ದಾಖಲೆ ಇದೆ. ಉಸ್ನಿಯಾ, 'ಮುದುಕನ ಗಡ್ಡ'ಎಂಬ ಅಡ್ಡ ಹೆಸರಿನಿಂದ ಫಿನ್‌ಲ್ಯಾಂಡ್‌ನಲ್ಲಿ ಅನೇಕ ಚರ್ಮದ ಕಾಯಿಲೆಗಳಿಗೂ ಬಳಸಲಾಗುತ್ತಿತ್ತು. ಇದೇ ಕಲ್ಲುಹೂ, ಚೀನಿಯರು ಸನ್‌ಲೋ ಎಂಬ ಹೆಸರಿನಿಂದ ಬಳಸಿದ್ದರೆ, ಮಂಚೂರಿಯಾದಲ್ಲಿ ಶಿಹೋ ಎಂದು ಬಳಸುತ್ತಿದ್ದ ದಾಖಲೆಗಳು ಸಿಗುತ್ತವೆ.

ಕ್ರಿ.ಶ. ೧೫ನೇ ಶತಮಾನದಲ್ಲಿ ಯೂರೋಪಿನ ಅನೇಕ ಕಡೆ ವಿವಿಧ ಕಲ್ಲುಹೂಗಳನ್ನು ಟಿ.ಬಿ., ವಿರೇಚಕ, ಜಾಂಡಿಸ್, ಮೂರ್ಛೆರೋಗ ನಿವಾರಕಗಳಾಗಿ ಉಪಯೋಗಿಸುತ್ತಿದ್ದರು. ಮಾನವನ ಬುರುಡೆಗಳ ಮೇಲೆ ಬೆಳೆಯುತ್ತಿದ್ದ 'ಮ್ಯುಕಸ್ ಕ್ರೇನ್ಯೈ ಹೋಮಿನಿ' ಎಂಬ ಕಲ್ಲುಹೂ ಚಿನ್ನದಷ್ಟೇ ಬೆಲೆಯುಳ್ಳದ್ದಾಗಿತ್ತು.

ಈಜಿಪ್ಟಿನ ಜಾನಪದಗಳಲ್ಲಿ, 'ಇವೆರ್ನಿಯಾ ಫರ್‌ಫುರೇಸಿಯಾ'ವನ್ನು ಆಂಟಿಬಯಾಟಿಕ್‌ಗಳಾಗಿ ಬಳಸುತ್ತಿದ್ದ ಮಾಹಿತಿಗಳಿವೆ.

ಹೀಗೆ ಅತಿ ಪ್ರಾಚೀನ ಕಲ್ಲುಹೂಗಳು ಇನ್ನೂ ಉಳಿದಿರುವುದಕ್ಕೆ, ಇವು ಎಂತಹುದೇ ಬರಗಾಲ ಎದುರಿಸಿ ನಿಲ್ಲುವ ಸಾಮರ್ಥ್ಯವೇ ಕಾರಣ.

ನಾಸ್ಟಾಕ್ ಎಂಬ ಶೈವಲದೊಂದಿಗೆ ಬೆಳೆಯುವ ಶಿಲಾವಲ್ಕ ವಾತಾವರಣದ ನೈಟ್ರೋಜನ್‌ನ್ನನ್ನು ಸೆರೆ ಹಿಡಿದಿಟ್ಟುಕೊಳ್ಳಬಲ್ಲುದು.

ಟಾನಿನ್, ಆಸ್ಮಿನ್, ಲಿಟ್ಮಸ್ ಮುಂತಾದ ಬಣ್ಣಗಳನ್ನು ತಯಾರುಮಾಡುವಲ್ಲಿ ಕಲ್ಲುಹೂ ನೆರವಾಗಿದೆ. 'ಲಿಟ್ಮಸ್' ರಸಾಯನ ಶಾಸ್ತ್ರ ಪ್ರಯೋಗಾಲಯದಲ್ಲಿ ಸಾಧಾರಣವಾಗಿ ಬಳಸುವ ಇಂಡಿಕೇಟರ್. ಇದು ಆಮ್ಲೀಯ ದ್ರಾವಣದಲ್ಲಿ ಕೆಂಪು ಮತ್ತು ಪ್ರತ್ಯಾಮ್ಲೀಯದಲ್ಲಿ ನೀಲಿ ಬಣ್ಣವಾಗಿ ಬದಲಾಗುತ್ತದೆ.

ಉಪಕಾರ ಮಾಡಿದರೂ ಅಪಕಾರ ವೆಸಗುವ ಈ ಕಾಲದಲ್ಲೂ, ಸರ್ವವಿಧದಲ್ಲೂ ಸುಭಿಕ್ಷಕಾಲ ಒದಗಿಸಬಲ್ಲ ಕಲ್ಲುಹೂವನ್ನು ಅರಳಿಸುವುದು ನಮ್ಮ ಕೈಯಲ್ಲೇ ಇದೆ. ಪರಿಸರ ನಮ್ಮ ಹತೋಟಿ ಮೀರಿ ಹೋಗದಂತೆ ಎಚ್ಚರಿಕೆ ನೀಡುವಲ್ಲಿ ಈ ಪುಟ್ಟ ಸಸ್ಯ ಮಹತ್ತರ ಪಾತ್ರ ವಹಿಸಿದೆ. "ಪರಿಸರವ ರಕ್ಷಿಸಲು ನೀನಾರು? ನಿನ್ನನ್ನು ನೀ ತಿಳಿದು ಪರಿಸರದ ಜೊತೆಗೆ ಸಹಕರಿಸಿದರೆ ಉಭಯ ರಕ್ಷಣೆಯಾಗುವುದು ಸಂದೇಹಬೇಡ!"

ಜೀವಗೋಳ

ಡಾ|| ಹಾ. ಬ. ದೇವರಾಜಸರ್ಕಾರ್

ವಿಶಾಲ ವಿಶ್ವದಲ್ಲಿ ಆಕಾಶ ಗಂಗೆ ಒಂದು ಪ್ರಮುಖ ನಕ್ಷತ್ರ ಪುಂಜ. ಈ ಆಕಾಶ ಗಂಗೆಯಲ್ಲಿ ಸೂರ್ಯ ಒಂದು ಸಣ್ಣ ನಕ್ಷತ್ರ. ಸೂರ್ಯ ಕೇಂದ್ರವಾಗಿ ಅವನ ಸುತ್ತ ಸುತ್ತುತ್ತಿರುವ ಬುಧ, ಶುಕ್ರ, ಭೂಮಿ, ಮಂಗಳ, ಗುರು, ರಾಹು, ಕೇತು, ಶನಿ ಎಂದು ಕರೆಯುವ ನವಗ್ರಹಗಳು ಸೇರಿ ಸೌರವ್ಯೂಹವಾಗಿದೆ. ಭೂಮಿಯು ಗಾತ್ರದಲ್ಲಿ ಬುಧ ಮತ್ತು ಶುಕ್ರಗ್ರಹಗಳಿಗಿಂತ ದೊಡ್ಡದಾಗಿದ್ದರೂ ಉಳಿದೆಲ್ಲ ಗ್ರಹಗಳಿಗಿಂತ ತುಂಬ ಸಣ್ಣದು. ಆದರೂ ಉಳಿದೆಲ್ಲ ಗ್ರಹಗಳಿಗೆ ಹೋಲಿಸಿದರೆ ಭೂಗ್ರಹ ವಿಶೇಷವಾದುದು. ಏಕೆಂದರೆ ಉಳಿದೆಲ್ಲ ಗ್ರಹಗಳಲ್ಲಿಯೂ ಇರದ ಜೀವಿಗಳು ಭೂಮಿಯ ಮೇಲೆ ಇವೆ. ಮಾನವ ನಿರ್ಮಿತ ಉಪಗ್ರಹಗಳ ಉಡಾವಣೆ, ಚಂದ್ರ ಉಪಗ್ರಹದ ಮೇಲೆ ಮಾನವನ ಪಾದಾರ್ಪಣೆ, ಮಾನವ ರಹಿತ ಆಕಾಶಯಾನ, ನೌಕೆಗಳು ಸೌರವ್ಯೂಹ ಪ್ರತಿಯೊಂದು ಗ್ರಹಕ್ಕೂ ಭೇಟಿ ನೀಡಿಕೆ ಮತ್ತು ಅವುಗಳ ಸಮೀಕ್ಷೆಯಿಂದ ಮತ್ತಾವ ಗ್ರಹದಲ್ಲಿಯೂ ಜೀವ ಇಲ್ಲ ಎಂಬ ವಿಷಯ ದೃಢಪಟ್ಟಿದೆ. ಈ ಎಲ್ಲವನ್ನು ಸಾಧಿಸಿದ ೨೦ ನೆಯ ಶತಮಾನ ನಿಜವಾಗಿ ತಂತ್ರವಿದ್ಯೆಯ ಏಳಿಗೆಯ ಯುಗ.

ಈ ಸಾಧನೆಗಳ ಹಿನ್ನೆಲೆಯಲ್ಲಿ ೨೧ ನೇ ಶತಮಾನವನ್ನು ಎದುರಿಸಲು ಸಿದ್ಧರಾಗುತ್ತಿದ್ದೇವೆ. ಮಾನವರಾದ ನಾವು. ಭೂಮಿಯ ಮೇಲೆ ವಾಸಿಸಿರುವ ಜೀವಿಗಳಲ್ಲಿ ಅತ್ಯಂತ ಆಧುನಿಕವೂ, ಜೀವವಿಕಾಸದ ಇತ್ತೀಚಿನ ಜೀವಿಯೂ, ಬುದ್ಧಿವಂತಿಕೆ, ವಿವೇಚನೆ ಎಂಬ ಶಕ್ತಿಯಿಂದ ಭೂಮಿಯನ್ನು, ಭೂಮಿಯ ಮೇಲಿನ ಚರ-ಚಿರ ವಸ್ತುಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಇತರ ಗ್ರಹಗಳು, ನಕ್ಷತ್ರಗಳು, ವಿಶ್ವಗಳತ್ತ ತನ್ನ ಗಮನ ಹರಿಸುತ್ತಿದ್ದಾನೆ ಮಾನವ ಎಂಬ ಜೀವಿ. ಭೂವಾಸಿಯಾದ ಮನುಷ್ಯ ಜಲಚರಗಳನ್ನು ಮೀರಿಸಿ ನೀರಿನಲ್ಲಿ ಓಡಾಡುವುದನ್ನು ಕಲಿತಿದ್ದಾನೆ. ಆಕಾಶದಲ್ಲಿ ಹಕ್ಕಿಗಳನ್ನು ಮೀರಿಸಿ ಹಾರಾಡುವುದನ್ನು ಕರಗತ ಮಾಡಿಕೊಂಡಿದ್ದಾನೆ. ಇವೆಲ್ಲವೂ ಮೆಚ್ಚುಗೆಯ ವಿಷಯಗಳಾದರೂ ಮನುಷ್ಯ ನೆಲದ ಮೇಲೆ ಜೀವಿಸುವುದನ್ನೇ ಕಲಿತಿಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. ಇದು ವಿಜ್ಞಾನ ಅಥವ ತಂತ್ರಜ್ಞಾನಗಳ ತಪ್ಪಲ್ಲ. ಇಂದು ಮನುಷ್ಯನ ಜೀವನ ಅವನತಿಯ ಹಾದಿ ಹಿಡಿದಿದೆ. ಪ್ರಗತಿ ಎಂಬ ಮಿಥ್ಯಸಾಧನೆಯ ನೆಪದಲ್ಲಿ ತಂತ್ರಜ್ಞಾನ, ವಿಜ್ಞಾನಗಳನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವ

ದುರಾಸೆಯ ರಾಜಕಾರಣ ಮತ್ತು ರಾಜಕಾರಣಿಗಳು ಕಾರಣ ಎಂದರೆ ತಪ್ಪಾಗಲಾರದು.

ಭೂಮಿ ಗುಂಡಾಗಿದೆ. ಭೂಮಿಯ ರಚನೆಯನ್ನು ಸ್ಥೂಲವಾಗಿ ಭೂಮಿಯ ಸುತ್ತ ವೃತ್ತಾಕಾರದ ಮೂರು ಪದರಗಳನ್ನಾಗಿ ವಿಂಗಡಿಸಬಹುದು. ಈ ಪದರಗಳು ಭೂಮಿಯ ಆಕಾರಕ್ಕೆ ಅನುಗುಣವಾಗಿ ಗೋಳಾಕಾರವಾಗಿವೆ. ಭೂಮಿಯ ಕೇಂದ್ರದಲ್ಲಿ ಶಿಲೆಗಳು, ಖನಿಜಗಳು ಮತ್ತು ರಾಸಾಯನಿಕ ವಸ್ತುಗಳನ್ನೊಳಗೊಂಡ ಶಿಲಾಗೋಳ ಒಳಗಿನ ಪದರ. ಭೂಮಿಯ ಸುತ್ತಲೂ ಕೆಲವಾರು ಸಾವಿರ ಅಡಿಗಳವರೆಗೆ ವ್ಯಾಪಿಸಿ ಅನಿಲಗಳನ್ನೊಳಗೊಂಡ ವಾಯುಗೋಳ ಹೊರಗಿನ ಪದರ. ಇವೆರಡರ ನಡುವೆ ಭೂಮಿಯ ಮೇಲ್ಪದರ ಮತ್ತು ಮೇಲ್ಮೈಗೆ ಸೀಮಿತವಾದಂತೆ ಭಿನ್ನ ವಿಭಿನ್ನ ರೀತಿಯ ಜೀವಿಗಳಿಂದ ವಿಜೃಂಭಿಸುತ್ತಿದೆ ಜೀವಗೋಳ. ಭೂಮಿಯ ಸುತ್ತ ಜೀವಗೋಳವು ಒಂದು ತೆಳುವಾದ ಪಟ್ಟಿಯಂತೆ ಹರಡಿದೆ. ಜೀವಗೋಳದಲ್ಲಿ ನೀರು ತುಂಬಿದ ಕಡಲುಗಳು ಮತ್ತು ಭೂಮಿಯ ಸುತ್ತ ಹರಡಿ ಜೀವಿಗಳಿಗೆ ಪ್ರಾಣಾಧಾರವಾದ ಆಕ್ಸಿಜನ್ (ಆಮ್ಲಜನಕ/ಪ್ರಾಣವಾಯು) ಒಳಗೊಂಡ ಗಾಳಿಯೂ ಇದೆ. ಜೀವಗೋಳವನ್ನು ಒಂದು ಬೃಹದ್ ಜೀವಮಂಡಲ ಎಂದು ಪರಿಗಣಿಸಬಹುದು. ಭೂಮಿಯ ಭೌತಿಕ ಪರಿಸರದೊಂದಿಗೆ ಅಂತರವರ್ತಿಸುವ ಜೀವಿಗಳೆಲ್ಲವೂ ಈ ಜೀವಮಂಡಲಕ್ಕೆ ಸೇರುತ್ತವೆ.

ಜೀವಮಂಡಲದಲ್ಲಿ ವಿಶಿಷ್ಟವಾದ ರಚನೆಗಳಿವೆ: ಜೀವಿಗಳು ಮತ್ತು ಜೀವಿಸಂಘಗಳು ವಾಸಿಸುವ ಭಾಗಗಳನ್ನು ವಸತಿ ಎನ್ನುತ್ತಾರೆ. ಜೀವಿಗಳು ಆಹಾರ ಗಳಿಸುವ ಕ್ರಮ ಮತ್ತು ಅವು ತಮ್ಮ ಸುತ್ತಲ ಪರಿಸರದೊಂದಿಗೆ ಪಡೆದಿರುವ ಬಾಂಧವ್ಯವನ್ನು ವಾಸ್ತವ್ಯ ಎನ್ನುತ್ತಾರೆ. ವಸತಿಗಳಲ್ಲಿ ಮೂರು ವಿಧ; ಜಲ, ನೆಲ ಮತ್ತು ಗಾಳಿ. ಇವುಗಳಲ್ಲಿ ಒಂದೊಂದರಲ್ಲಿಯೂ ಅನೇಕ ಸ್ತರಗಳಿವೆ. ಉದಾಹರಣೆಗೆ ಜಲವಸತಿಯಲ್ಲಿ ಉಪ್ಪು ನೀರಿನ ಕಡಲುಗಳು, ಸಮುದ್ರಗಳು ಮತ್ತು ಸಿಹಿನೀರಿನ ಕೆರೆ, ಕಟ್ಟೆ, ನದಿ, ಹಳ್ಳಕೊಳ್ಳಗಳು. ಈ ಜಲವಸತಿಯಲ್ಲಿ ಜೀವಿಗಳ ವಾಸಕ್ಕೆ ಸಂಬಂಧಿಸಿದಂತೆ ನೀರಿನ ಮೇಲೆ ತೇಲುವ, ನೀರಿನ ಮೇಲ್ಮೈನ ಕೆಳಗೆ ಈಜುವ, ತಳದಲ್ಲಿ ವಾಸಿಸುವ, ಹೀಗೆ ಮುಂತಾದ ಜೀವಿಗಳಿವೆ. ಇವು ತಾವು ಆರಿಸಿಕೊಂಡ ಜೀವ ವಿಧಾನಕ್ಕೆ, ವಸತಿಗೆ ಅನುಗುಣವಾಗಿ ಹೊಂದಿಕೊಂಡಿರುತ್ತವೆ. ನೆಲದ ಮೇಲೆ ಬೆಟ್ಟ, ತಪ್ಪಲು, ಮರುಭೂಮಿ, ಹುಲ್ಲುಗಾವಲು, ಕಾಡು, ಉಷ್ಣವಲಯ, ಸಮಶೀತೋಷ್ಣ ವಲಯ, ಶೀತವಲಯ ಮುಂತಾದ ಸ್ತರಗಳಿವೆ.

ಜೀವಿಗಳ ಜೀವನದ ರೀತಿ ನೀತಿಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅವು ವಾಸಿಸುವ ವಸತಿಯ ಭೌತಿಕ ಪರಿಸರವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಭೌತಿಕ ಪರಿಸರದ ಮುಖ್ಯ ಅಂಶ ಎಂದರೆ ವಿಕಿರಣತೆ. ವಿಕಿರಣತೆ ಎಂದರೆ ಸೂರ್ಯನಿಂದ ಭೂಮಿಯ ಕಡೆಗೆ ಪಸರಿಸುವ ವಿದ್ಯುತ್ ಕಾಂತ ಅಲೆಗಳು, ಪ್ರಕಾಶ ಅಥವ ಬಿಸಿಲು ಈ ವಿಕಿರಣತೆಯ ದೃಷ್ಟಿಗೋಚರ ರೂಪ. ಈ ವಿಕಿರಣತೆ ಭೂಮಿಯ ಮೇಲೆ ಬಿದ್ದು

ಕಿರುವ ಪ್ರತಿಯೊಂದು ಜೀವಿಯ ಚಟುವಟಿಕೆಗೆ ಅಗತ್ಯವಾದ ಶಕ್ತಿಯನ್ನು ಒದಗಿಸುತ್ತದೆ. ಭೂಮಿಯ ಮೇಲೆ ಜೀವಿಸಿರುವ ಸಸ್ಯಗಳು ಸೂರ್ಯನಿಂದ ಬರುವ ವಿಕಿರಣ ಶಕ್ತಿಯನ್ನು ಜೈವಿಕ ಶಕ್ತಿಯಾಗಿ ಪರಿವರ್ತಿಸುತ್ತವೆ. ಈ ಜೈವಿಕ ಶಕ್ತಿಯನ್ನು ಸಸ್ಯಗಳು ತಾವು ಉತ್ಪಾದಿಸುವ ಆಹಾರ ಪದಾರ್ಥಗಳಲ್ಲಿ ಕೂಡಿಡುತ್ತವೆ. ಸಸ್ಯಾಹಾರಿ ಜೀವಿಗಳು, ಅಂದರೆ ಸಸ್ಯಗಳನ್ನು ತಿಂದು ಬದುಕುವ ಪ್ರಾಣಿಗಳು ಸಸ್ಯ ಭಾಗಗಳಲ್ಲಿ ಸಂಗ್ರಹವಾಗಿರುವ ಜೈವಿಕ ಶಕ್ತಿಯನ್ನು ಬಳಸಿಕೊಂಡು ತಮ್ಮ ಜೀವಚಟುವಟಿಕೆಗಳನ್ನು ನಡೆಸುತ್ತವೆ.

ಸೌರಶಕ್ತಿಯ ಸ್ವಲ್ಪ ಭಾಗ ಮಾತ್ರ ಜೈವಿಕಶಕ್ತಿಯಾಗಿ ಪರಿವರ್ತನೆಗೊಂಡು ಜೀವಿಗಳಿಂದ ಬಳಕೆಯಾಗುತ್ತದೆ. ಸೌರ ಶಕ್ತಿಯ ಉಳಿದ ಬಹುಭಾಗ ಜೀವಗೋಳದಲ್ಲಿರುವ ಗಾಳಿ ಮತ್ತು ನೀರನ್ನು ಬಿಸಿ ಮಾಡಲು ಉಪಯೋಗವಾಗುತ್ತದೆ. ಜೀವಿಗಳ ಬದುಕಿಗೆ ಪರಿಸರದ ಶಾಖ ಅಗತ್ಯವಿದೆ. ಪರಿಸರ ಶಾಖದ ಒಂದು ಪರಿಮಿತಿಯಲ್ಲಿ ಮಾತ್ರ ಜೀವಿಗಳು ಬದುಕುವುದು, ತಮ್ಮ ಜೀವ ಚಟುವಟಿಕೆಗಳನ್ನು ನಡೆಸುವುದು ಸಾಧ್ಯ. ಪರಿಸರದ ಶಾಖ ಜೀವಿಗಳ ದೇಹಾಂತರ್ಗತ ಶಾಖವನ್ನು ಮತ್ತು ಜೀವಿಗಳ ಚಯಾಪಚಯ ಕ್ರಿಯೆಗಳನ್ನು ನಿಯಂತ್ರಿಸುತ್ತದೆ.

ಸೌರಶಾಖದಿಂದಾಗಿ ಭೂಮಿಯ ಮೇಲಿನ ವಿವಿಧ ಜಲಾಶಯಗಳಲ್ಲಿನ (ಕಡಲು, ಸಮುದ್ರ, ಕೆರೆ, ಸರೋವರ ಇತ್ಯಾದಿ) ನೀರು ಕಾದು ಆವಿಯಾಗಿ ವಾಯುಮಂಡಲವನ್ನು ಸೇರುತ್ತದೆ ಮತ್ತು ವಾಯುಮಂಡಲದ ತೇವಾಂಶವನ್ನು ಸಂರಕ್ಷಿಸುತ್ತದೆ. ವಾಯುಮಂಡಲದ ತೇವಾಂಶ ಜಲಚಕ್ರದ ಇನ್ನೊಂದು ರೂಪ. ವಾಯುಮಂಡಲವನ್ನು ತಲುಪಿದ ನೀರಿನ ಆವಿ ಘನೀಕರಣಗೊಂಡು ಮೋಡಗಳಾಗುತ್ತದೆ. ವಾಯುಮಂಡಲದ ಶಾಖದ ವೈಪರೀತ್ಯಗಳಿಂದಾಗಿ ಮೋಡ ಕರಗಿ ಮಳೆಯಾಗಿ ಪುನಃ ನೆಲದ ಮೇಲೆ ಬಿದ್ದು ನೆಲದ ಮೇಲಿನ ನೀರಿನ ಅಂಶವನ್ನು ಕಾಪಾಡಲು ನೆರವಾಗುತ್ತದೆ. ನೆಲದ ಮೇಲಿನ ನೀರು ಜಲಚರಗಳು ಮತ್ತು ನೆಲವಾಸಿ ಜೀವಿಗಳ ನೀರಿನ ಅಗತ್ಯವನ್ನು ಪೂರೈಸುತ್ತದೆ. ನೀರು ಜೀವಿಗಳ ಬದುಕಿನಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಅತಿವೃಷ್ಟಿಯ ಮಲೆನಾಡು ಬಯಲು ಸೀಮೆಗಳ ನಡುವೆ ಮತ್ತು ಅನಾವೃಷ್ಟಿಯ ಮರುಭೂಮಿ, ಇರುವ ವ್ಯತ್ಯಾಸಕ್ಕೆ ನೀರಿನ ಅಧಿಕ ಇರುವಿಕೆ ಮತ್ತು ಕಡಿಮೆ ಇರುವಿಕೆ ಅಥವ ಇಲ್ಲದಿರುವುದೆ ಕಾರಣ.

ಗಾಳಿ ಮತ್ತು ನೀರು ನಿಶ್ಚಲ ಅಂಶಗಳಲ್ಲ. ಸದಾ ಚಲಿಸುತ್ತಿರುತ್ತವೆ. ಗಾಳಿ ಮತ್ತು ನೀರಿನ ಚಲನೆ ಭೌತಿಕ ಪರಿಸರದ ಮತ್ತೊಂದು ಮುಖ್ಯ ಲಕ್ಷಣ. ಇವುಗಳ ಚಲನೆ ಪರಿಸರದಲ್ಲಿ ಶಾಖ ವಿತರಣೆಯನ್ನು ನಿಯಂತ್ರಿಸುತ್ತದೆ. ಮಳೆ ಬೀಳುವುದು ಗಾಳಿಯ ಚಲನೆಯಿಂದಾಗಿ. ಗಾಳಿ ಅಡ್ಡವಾಗಿಯೂ ಅಲ್ಲದೆ ನೇರವಾಗಿಯೂ ಚಲಿಸುತ್ತದೆ. ಈ ಎರಡೂ ಚಲನೆಗಳು ಮಳೆ ಬೀಳಲು ಕಾರಣ. ಗಾಳಿ ಮತ್ತು ನೀರುಗಳ ಚಲನೆ ಜೀವಿಗಳ ಬದುಕಿನಲ್ಲಿಯೂ ನಿರ್ಣಾಯಕ ಪಾತ್ರ ವಹಿಸುತ್ತದೆ. ಹುಲ್ಲು ಜಾತಿಗೆ ಸೇರಿದ ಸಸ್ಯಗಳಾದ ಗೋಧಿ,

ಜೋಳ, ಭತ್ತ, ರಾಗಿ ಮುಂತಾದ ಬೆಳಸು ಸಸ್ಯಗಳಲ್ಲಿ ಗಾಳಿ ಪರಾಗಾರ್ಪಣೆಯಲ್ಲಿ ನೆರವಾಗುತ್ತದೆ ಮತ್ತು ಬೀಜಗಳ ಪ್ರಸರಣದಲ್ಲಿ ಭಾಗವಹಿಸುತ್ತದೆ.

ನೀರು ಪರಿಸರದ ಒಂದು ಪ್ರಭಾವಿ ಘಟಕ. ಜೀವಿಗಳ ದೇಹದ ಮೂಲ ರಚನಾಂಶವಾದ ಜೀವಕೋಶದಲ್ಲಿ ಶೇಕಡ ೯೦ ರಷ್ಟು ನೀರಿದೆ. ಅಂದರೆ ಜೀವಿಗಳ ದೇಹ ರಚನೆಯಲ್ಲಿ ನೀರಿನ ಅಂಶವೇ ಹೆಚ್ಚಾಗಿದೆ. ಜೊತೆಗೆ ಜೀವಿಗಳ ಎಲ್ಲ ಚಟುವಟಿಕೆಗಳಿಗೂ ನೀರು ಬೇಕೇಬೇಕು. ಹಿಂದೆ ತಿಳಿಸಿದಂತೆ ನೆಲದ ಮೇಲಿನಿಂದ ಕಾದು ಆವಿಯಾಗಿ ವಾಯುಮಂಡಲವನ್ನು ಸೇರಿದ ನೀರು ಮಳೆಯ ಮೂಲಕ ಪುನಃ ಭೂಮಿಯನ್ನು ತಲುಪುತ್ತದೆ. ಈ ನೀರು ಜೀವಗೋಳದ ಆಹಾರ ಸರಪಳಿಯನ್ನು ಸೇರಿ ಅಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಸ್ಯಗಳು ದ್ಯುತಿಸಂಶ್ಲೇಷಣ ಕ್ರಿಯೆಯ ಕಾಲದಲ್ಲಿ ನೀರನ್ನು ಬಳಸಿಕೊಂಡು ಆಹಾರವನ್ನು ತಯಾರಿಸುತ್ತವೆ. ಈ ಆಹಾರವನ್ನು ಸಸ್ಯಗಳು ತಮ್ಮ ಚಟುವಟಿಕೆಗಳಿಗೆ ಬಳಸಿಕೊಂಡು ಉಳಿದುದನ್ನು ತಮ್ಮ ದೇಹಭಾಗಗಳಾದ ಎಲೆ, ಕಾಂಡ, ಬೇರು, ಹೂವು, ಹಣ್ಣುಗಳಲ್ಲಿ ಕೂಡಿಡುತ್ತವೆ. ಸಸ್ಯಾಹಾರಿ ಪ್ರಾಣಿಗಳು ಸಸ್ಯದೇಹದ ಈ ಭಾಗಗಳನ್ನು ತಿಂದು ತಮ್ಮ ಆಹಾರದ ಅಗತ್ಯವನ್ನು ಪೂರೈಸಿಕೊಳ್ಳುತ್ತವೆ. ಜೀವಿ ತಮ್ಮ ಚಟುವಟಿಕೆ ಎಂದರೆ ಚಲನೆ, ಸಂವೇದನೆ, ಅನ್ವೇಷಣೆ, ಪ್ರಜನನ (ಸಂತಾನೋತ್ಪತ್ತಿ), ರಕ್ಷಣೆ ಮತ್ತು ಬೆಳವಣಿಗೆ ಪ್ರಾಣಿಗಳು ಬೆಳೆದಾಗ ಅವುಗಳ ದೇಹದಲ್ಲಿ ಆಹಾರವು ಮತ್ತೊಂದು ರೂಪದಲ್ಲಿ ಸಂಗ್ರಹವಾಗುತ್ತವೆ. ಸಸ್ಯದಲ್ಲಿ ಪಿಷ್ಟ, ಪ್ರೋಟೀನು ಎಣ್ಣೆ ರೂಪದಲ್ಲಿ ಸಂಗ್ರಹವಾದರೆ ಪ್ರಾಣಿಗಳಲ್ಲಿ ಸ್ನಾಯುಗಳಲ್ಲಿ ಪಿಷ್ಟ, ಪ್ರೋಟೀನು ಮತ್ತು ಕೊಬ್ಬಿನ ರೂಪದಲ್ಲಿ ಸಂಗ್ರಹವಾಗುತ್ತದೆ, ಮಾಂಸಾಹಾರಿ ಪ್ರಾಣಿಗಳು. ಇತರ ದುರ್ಬಲ ಪ್ರಾಣಿಗಳನ್ನು ತಿಂದಾಗ ಆಹಾರ ಆ ಪ್ರಾಣಿಗಳನ್ನು ತಲುಪುತ್ತದೆ. ಈ ಪ್ರಾಣಿಗಳು ಮರಣಿಸಿ ಕೊಳೆತು ನಾಶವಾದಾಗ ಅವುಗಳ ದೇಹದ ಈ ಆಹಾರಾಂಶ ಮಣ್ಣನ್ನು ಸೇರುತ್ತದೆ. ಮಣ್ಣಿನಲ್ಲಿರುವ ಈ ಅಂಶವನ್ನು ಸಸ್ಯಗಳು ತಮ್ಮ ಆಹಾರ ತಯಾರಿಕೆಯ ಕೈಂಕರ್ಯಕ್ಕೆ ಬಳಸಿಕೊಳ್ಳುತ್ತವೆ. ಹೀಗೆ ಆಹಾರ ಮೂಲ ವಸ್ತುರೂಪದಲ್ಲಿ ಸಸ್ಯಗಳನ್ನು ಸೇರಿ ಆಹಾರವಾಗಿ ಪರಿವರ್ತನೆಗೊಂಡು ವಿವಿಧಸ್ತರದ ಪ್ರಾಣಿಗಳ ಮೂಲಕ ಪ್ರವಹಿಸಿ ಪುನಃ ಸಸ್ಯಗಳನ್ನು ತಲುಪುತ್ತದೆ. ಇದನ್ನೆ ಆಹಾರದ ಸರಪಣಿ ಎನ್ನುವುದು.

ನೀರು ಆಹಾರದ ಮೂಲಕ ಪ್ರಾಣಿಗಳ ದೇಹವನ್ನು ಸೇರುವುದೇ ಅಲ್ಲದೆ, ಪ್ರಾಣಿಗಳು ನೀರನ್ನು ಕುಡಿಯುತ್ತವೆ ಮತ್ತು ಮೂತ್ರ ವಿಸರ್ಜನೆಯ ಮೂಲಕ ಸ್ವಲ್ಪ ಭಾಗ ನೀರನ್ನು ಹೊರಹಾಕುತ್ತವೆ. ಸಸ್ಯಗಳನ್ನು ಸೇರಿದ ನೀರಿನ ಸ್ವಲ್ಪ ಅಂಶ ಬಾಷ್ಪವಿಸರ್ಜನೆಯ ಮೂಲಕ, ಸಸ್ಯ, ಪ್ರಾಣಿಗಳು ಉಸಿರಾಡುವಾಗ ಹಾಗೂ ಜೀವಿಗಳು ಮರಣಿಸಿ ಕೊಳೆತಾಗ ನೀರು ಪುನಃ ಪರಿಸರವನ್ನು ಸೇರಿ ಜೀವಗೋಳದ ಮೂಲಕ ಪರಿಚಲಿಸುತ್ತದೆ. ನೀರಿನ ಈ ಆವರ್ತನ ಪರಿಚಲನೆಯಲ್ಲಿ ಯಾವ ಭಾಗದಲ್ಲಿಯಾದರೂ ಹೆಚ್ಚು ಕಡಿಮೆ ಆದರೆ ಅದು ಪರಿಸರದಲ್ಲಿ ಘೋರ ಪರಿಣಾಮಗಳನ್ನು ಉಂಟುಮಾಡುತ್ತದೆ.

ಕಾಡುಗಳು ಸೊರಗಿ ಈಗಿನ ದಿನಗಳಲ್ಲಿ ಅನಾವೃಷ್ಟಿ ಹೆಚ್ಚುತ್ತಿರುವುದನ್ನು ಎಲ್ಲರೂ ಬಲ್ಲರು.

ಗಾಳಿ ಭೂಮಿಯ ಮೇಲೆ ನಿರಂತರವಾಗಿ ಬೀಸುತ್ತಿರುತ್ತದೆ. ಆದರೂ ಗಾಳಿಯ ರಾಸಾಯನಿಕ ಸಂಯೋಜನೆ ಸುದೈವದಿಂದ ಬದಲಾಗದೆ ಉಳಿದಿದೆ. ಗಾಳಿಯಲ್ಲಿ ಶೇಕಡ ೭೮ ರಷ್ಟು ನೈಟ್ರೋಜನ್ (ಸಾರಜನಕ), ಶೇಕಡ ೨೧ ರಷ್ಟು ಆಕ್ಸಿಜನ್ ಮತ್ತು ಶೇಕಡ ೧ ರಷ್ಟು ಇಂಗಾಲದ ಡೈಆಕ್ಸೈಡು ಇವೆ. ಗಾಳಿಯ ಸಂಯೋಜನೆಯಲ್ಲಿ ಬದಲಾಗುವುದು ನೀರಿನ ತೇವಾಂಶ ಮಾತ್ರ.

ನೀರಿನ ರಾಸಾಯನಿಕ ಗುಣ ಜೀವಗೋಳದ ಒಂದು ವಲಯದಿಂದ ಇನ್ನೊಂದು ವಲಯಕ್ಕೆ ಬದಲಾಗುತ್ತದೆ. ಈ ಬದಲಾವಣೆ ಜೀವಿಗಳ ಜೀವನದ ಮೇಲೆ ಮಹತ್ಪರಿಣಾಮ ಬೀರುತ್ತದೆ. ಕಡಲ ನೀರು ಉಪ್ಪು. ಕಾರಣ ಆ ನೀರಿನಲ್ಲಿ ಕರಗಿರುವ ಲವಣಾಂಶಗಳು ಹೆಚ್ಚು. ಕೆರೆ-ಕೊಳ ನದಿಗಳ ನೀರು ನಿತ್ಯನೂತನ. ಏಕೆಂದರೆ ಕಡಲ ನೀರಿಗೆ ಹೋಲಿಸಿದರೆ ವರ್ಷಂಪ್ರತಿ ಬದಲಾಗುತ್ತಿರುತ್ತದೆ. ಇವುಗಳ ನೀರು ಹರಿದು ಕಡಲು ಸೇರುತ್ತದೆ. ಇಲ್ಲವೆ ಆವಿಯಾಗಿ ಒಣಗಿ ಮಳೆ ಬಿದ್ದಾಗ ಪುನಃ ನೀರು ಸಂಗ್ರಹವಾಗುತ್ತದೆ. ಒಂದು ರೀತಿಯಲ್ಲಿ ಇವುಗಳ ನೀರು ಸಿಹಿ. ಅವುಗಳಲ್ಲಿ ಇರುವ ಲವಣಾಂಶ ಬಹಳ ಕಡಿಮೆ. ನೀರಿನ ಈ ರಾಸಾಯನಿಕ ವ್ಯತ್ಯಾಸ ಜೀವಿಗಳ ಅಂಗ ರಚನೆ, ಚಯಾಪಚಯಕ್ರಿಯಾ ವಿಧಾನಗಳ ಮೇಲೆ ಪ್ರಭಾವ ಬೀರುತ್ತದೆ. ವಲಸೆ ಹೋಗುವ ಕೆಲವು ಜಾತಿಯ ಮೀನುಗಳ ವಿನಹ ಕಡಲ ಜೀವಿಗಳು ಸಿಹಿ ನೀರಿನಲ್ಲೂ, ಸಿಹಿ ನೀರಿನ ಜೀವಿಗಳು ಕಡಲ ನೀರಿನಲ್ಲೂ ಬದುಕುವುದು ಸಾಧ್ಯವಿಲ್ಲ. ಕಡಲ ನೀರು ಕುಡಿದು ನಾವು ಬಾಯಾರಿಕೆ ಇಂಗಿಸಿಕೊಳ್ಳುವುದು ಸಾಧ್ಯವಿಲ್ಲ.

ಮಣ್ಣು ಜೀವಗೋಳದ ಮತ್ತೊಂದು ಮುಖ್ಯ ಘಟಕ. ಮಣ್ಣು ಉತ್ಪತ್ತಿಯಾದುದೇ ಜೀವಿಗಳ ಚಟುವಟಿಕೆಯಿಂದ. ಶಿಲೆಗಳು ಶಿಥಿಲಗೊಂಡು ಉತ್ಪತ್ತಿಯಾದ ಪುಡಿ, ಕೊಳೆತು ಕರಗಿದ ಜೀವಿಶವಗಳು ಹಾಗು ಜೀವಿ ಉತ್ಪನ್ನಗಳು ಬೆರೆತು ಮಣ್ಣು ಉತ್ಪತ್ತಿಯಾಗಿದೆ. ಮಣ್ಣು ಕಣಗಳ ನಡುವೆ ಇರುವ ನೀರು ಸಸ್ಯಗಳಿಗೆ ನೀರು ಒದಗಿಸುವ ಭಂಡಾರ. ಭೌತಿಕ ಮತ್ತು ಜೈವಿಕ ಪರಿಸರಗಳ ನಡುವೆ ಕಂಡುಬರುವ ವ್ಯತ್ಯಾಸಗಳು ನಿರಪೇಕ್ಷವಲ್ಲ. ಮಣ್ಣು ಸಸ್ಯಗಳಿಗೆ ಆಧಾರ ಒದಗಿಸುವುದರೊಂದಿಗೆ ನೀರು ಲವಣಗಳನ್ನೂ ಪೂರೈಸುತ್ತದೆ. ಮಣ್ಣಿನಲ್ಲಿ ಮೊಳೆತು ಬೆಳೆಯುವ ಸಸ್ಯಗಳು ಮತ್ತು ಸಸ್ಯಗಳನ್ನವಲಂಬಿಸಿರುವ ಪ್ರಾಣಿ ಸಮುದಾಯವೆಲ್ಲ ಮರಣಿಸಿ ಪುನಃ ಮಣ್ಣಿಗೆ ಮರಳುತ್ತವೆ. ಮಣ್ಣಿನಲ್ಲಿ ಜೀವಿಸುವ ಅಸಂಖ್ಯಾತ ಸೂಕ್ಷ್ಮ ಜೀವಿಗಳಾದ ಬ್ಯಾಕ್ಟೀರಿಯ, ಬೂಷ್ಟು, ಜಂತುಗಳು ಸಸ್ಯಗಳಿಗೆ ಗೊಬ್ಬರದ ರೂಪದಲ್ಲಿ ಆಹಾರ ಮೂಲ ಪದಾರ್ಥಗಳನ್ನು ಒದಗಿಸುತ್ತವೆ. ಮಣ್ಣಿನಲ್ಲಿ ವಾಸಿಸುವ ಈ ಜೀವಿಗಳ ಜೈವಿಕ ಕ್ರಿಯೆಗಳಿಂದಾಗಿ ಮಣ್ಣಿನ ರಾಸಾಯನಿಕ ಗುಣ ಹುಲುಸಾಗಿ ಮಾರ್ಪಡುತ್ತದೆ. ಆದುದರಿಂದ ಮಣ್ಣು ನಿರ್ಜೀವ ಜಡ ವಸ್ತುವಲ್ಲ. ಅದು ಜೀವಗೋಳದ ಅಂತರ್ಗತ ಭಾಗ ಮತ್ತು ಅದೂ ಸಹ ಒಂದು ಜೀವ ಸಂಡಣಿಯಂತೆ ವರ್ತಿಸುತ್ತದೆ.

ಜೀವಿಗಳು ಪರಿಸರದಿಂದ ಪ್ರಭಾವಿತವಾಗುವಂತೆ ಪರಿಸರವೂ ಜೀವಿಗಳಿಂದ ಪ್ರಭಾವಿತವಾಗುತ್ತದೆ. ಇದರ ಜೊತೆಗೆ ಜೀವಿಗಳು ಪರಿಸರದ ಇತರ ಜೀವಿಗಳೊಂದಿಗೆ ಪ್ರತಿಕ್ರಿಯಿಸುತ್ತವೆ. ಒಂದೊಂದು ಜೀವಿ ಪ್ರಭೇದಕ್ಕೂ ತನ್ನದೇ ಆದ ನಿಯಮಿತ ಪಾತ್ರವಿದೆ. ಇದನ್ನು ಜೀವಿಗಳ ಅಂತರ ವರ್ತನೆ ಎನ್ನಬಹುದು. ಈ ಅಂತರ ವರ್ತನೆ ಪರಿಸರದಲ್ಲಿ ಒಂದು ರೀತಿಯ ಜೀವಜಾಲವನ್ನು ಸೃಷ್ಟಿಸಿದೆ ಮತ್ತು ಜೀವಜಾಲದ ಸಮತೋಲನವನ್ನು ರಕ್ಷಿಸುತ್ತದೆ. ಜೀವಜಾಲದಲ್ಲಿ ಗಾತ್ರದ ಪರಿವೆ ಇಲ್ಲದೆ ಸಣ್ಣಪುಟ್ಟ ಜೀವಿಗಳಿಗೂ ಪಾತ್ರವಿದೆ. ಜೀವಜಾಲದ ಪ್ರತಿಯೊಂದು ಜೀವಿಯೂ ಪರಿಸರದ ಸೌಲಭ್ಯಗಳನ್ನು ಹಂಚಿಕೊಳ್ಳಬೇಕಾಗುತ್ತದೆ ಮತ್ತು ಈ ಸೌಲಭ್ಯಗಳಿಗಾಗಿ ಇತರ ಜೀವಿಗಳೊಡನೆ ಸ್ಪಂದಿಸಬೇಕಾಗುತ್ತದೆ, ಸ್ಪರ್ಧಿಸಬೇಕಾಗುತ್ತದೆ. ಸಸ್ಯಗಳು ಸೌರಶಕ್ತಿಯನ್ನು ಜೈವಿಕ ಶಕ್ತಿಯಾಗಿ ಪರಿವರ್ತಿಸಿ ಜೀವಜಾಲದ ಆಹಾರ ಸರಪಳಿಯನ್ನು ಆರಂಭಿಸುತ್ತವೆ. ಆಹಾರ ಸರಪಳಿಯು, ಸಣ್ಣ ಸಸ್ಯಾಹಾರಿ, ದೊಡ್ಡ ಮಾಂಸಾಹಾರಿ, ಹೀಗೆ ಒಂದು ಪರಂಪರೆಯ ಮೂಲಕ ಮುಂದುವರಿಯುತ್ತದೆ. ಜೈವಿಕ ಶಕ್ತಿ ಈ ಪರಂಪರೆಯ ಮೂಲಕ ಪ್ರವಹಿಸಿ ಜೀವಗೋಳವನ್ನು ಉಣಿಸಿ ತಣಿಸುತ್ತದೆ. ಇದನರಿತೆ ಹೇಳಿರಬೇಕು ಸರ್ವಜ್ಞ ಕವಿ

ಜೀವಿ ಜೀವಿಯ ತಿಂದು ಜೀವಿಸುವುದು
ಜಗವೆಲ್ಲ
ಜೀವದಿಂ ಹೊರಗೆ ತಿಂಬರ ನಾ ಕಾಣೆ
ಸರ್ವಜ್ಞ

ಆಹಾರ, ಆಶ್ರಯಗಳಿಗಾಗಿ ಜೀವಿಜೀವಿಗಳ ನಡುವೆ ನಡೆಯುವ ಹೋರಾಟ ಅದ್ಭುತ. ನಿರಂತರ ಬೇಟೆಯಾಡುವುದು ಮತ್ತು ಬೇಟೆಗೆ ಗುರಿಯಾಗುವುದು ಜೀವಗೋಳದ ಮುಖ್ಯ ಅಂಶ. ಇದನ್ನರಿತೆ ಕವಿ ಬೇಂದ್ರೆ ಹಾಡಿದ್ದಾರೆ.

ಜೀವನವು ವಿಷವಾದ ವಿಷಮ ಲೀಲೆ,
ಜೀವ ಕಲಹದ ಪ್ರಥಮ ಪಾಠಶಾಲೆ
ಜೀವ ಜೀವಕೆ ಹರಣ, ಜೀವ ಮರಣ,
ಪ್ರಾಣ ಜೀವನವೊಂದು ಪ್ರಾಣ ಹರಣ

ಭೂಮಿಯ ಇತಿಹಾಸದಲ್ಲಿ ಜೀವಗೋಳದ ಯಶಸ್ಸು, ಜೀವಿಗಳ ಸೋಲು-ಗೆಲವುಗಳು ಜೀವವಿಕಾಸಕ್ಕೆ ನಾಂದಿ. ಜೀವಗೋಳ ಜೀವವಿಕಾಸದ ತೊಟ್ಟಿಲು ಮತ್ತು ಪರಿಸರ ಜೀವವಿಕಾಸದ ಮಡಿಲು. ಪ್ರತಿಯೊಂದು ಜೀವಿಯೂ ಈ ತೊಟ್ಟಿಲಿನಲ್ಲಿ ಬೆಳೆದಿದೆ ಮತ್ತು ಈ ಮಡಿಲಿನಲ್ಲಿ ಸಾಂತ್ವನ ಪಡೆದಿದೆ. ಅಂತೆ ಎಲ್ಲ ಜೀವಿಗಳಿಗೂ ಜೀವಗೋಳ ಮತ್ತು ಪರಿಸರದ ಮೇಲೆ ಸಮಾನ ಹಕ್ಕು ಇದೆ. ಇವುಗಳಲ್ಲಿ ಯಾವುದೊಂದನ್ನೂ ಯಾವುದಾದರೂ ಒಂದು ಜೀವಿ ಬಲಾತ್ಕಾರವಾಗಿ ತನ್ನದನ್ನಾಗಿಸಿಕೊಳ್ಳಲು ಪ್ರಯತ್ನಿಸಿದರೆ ಜೀವಜಾಲಕ್ಕೆ ಹಾನಿಯಾಗಬಹುದು. ಇಂತಹ ಸಾಧ್ಯತೆಗಳನ್ನು ನಿರೀಕ್ಷಿಸಿಯೆ ಜೀವಜಾಲವು ಕೆಲವೊಂದು ನೀತಿ, ನಿಯಮ, ಸೂತ್ರಗಳನ್ನು ಸೃಷ್ಟಿಸಿದಂತಿದೆ. ಈ ಸೂತ್ರಗಳ ಚೌಕಟ್ಟಿನಲ್ಲಿಯೆ ಎಲ್ಲ ಜೀವಿಗಳೂ ಬದುಕಬೇಕು, ನೀತಿ ನಿಯಮಗಳನ್ನು ಪಾಲಿಸಬೇಕು. ಯಾವುದೆ ಒಂದು ಜೀವಿ ಪ್ರಭೇದ ಮಿತಿಮೀರಿ ಬೆಳೆದು ಜೀವಜಾಲದ ಸಮತೆ

ಯನ್ನು ಕೆಡಿಸಬಹುದಾದ ಸಾಧ್ಯತೆಯನ್ನು ತನ್ನದೇ ಆದ ರೀತಿಯಲ್ಲಿ ನಿಯಂತ್ರಿಸುತ್ತದೆ, ಪರಿಹರಿಸುತ್ತದೆ.

ಒಂದು ಸರಳ ಉದಾಹರಣೆಯನ್ನು ಪರಿಶೀಲಿಸೋಣ. ಒಂದು ಕೊಳದಲ್ಲಿ ನಾಲ್ಕು ಕಪ್ಪೆಗಳಿದ್ದವೆಂದು ಊಹಿಸೋಣ. ಪ್ರತಿ ಸಾರಿ ಸಂತಾನೋತ್ಪತ್ತಿ ನಡೆದಾಗಲೂ, ಅವು ರೂಪಾಂತರಗೊಂಡು ಕಪ್ಪೆಗಳಾಗುವುದಾದರೆ ಕೆಲವೇ ವರ್ಷಗಳಲ್ಲಿ ಆ ಕೊಳ ಕಪ್ಪೆಗಳಿಂದ ತುಂಬಿ ತುಳುಕುವಂತಾಗುವುದು. ವಾಸ್ತವದಲ್ಲಿ ಹಾಗಾಗುವುದಿಲ್ಲ. ಮೊಟ್ಟೆಗಳನ್ನು ತಿನ್ನುವ, ಗೊದಮೊಟ್ಟೆಗಳನ್ನು ತಿನ್ನುವ, ಕೊನೆಗೆ ಕಪ್ಪೆಗಳನ್ನು ತಿನ್ನುವ ಮಾಂಸಾಹಾರಿ ಪರಭಕ್ಷಕ ಪ್ರಾಣಿಗಳಿವೆ. (ಮೀನು, ಇತರ ಕಪ್ಪೆ ಜಾತಿಗಳು, ಹಾವುಗಳು, ಹದ್ದು, ಗೂಬೆ, ಗಿಡುಗ ಇತ್ಯಾದಿ). ಹೀಗೆ ಪರಿಸರ ಮಿತಿ ಘಟಕಗಳನ್ನು ಸೃಷ್ಟಿಸಿ ಜೀವಿಗಳ ಸಂಖ್ಯೆಯನ್ನು ನಿಯಂತ್ರಿಸುತ್ತದೆ. ಆಹಾರ, ಶಾಖಗಳು ಇಲ್ಲಿ ಇತಿ ಮಿತಿ ಘಟಕಗಳಾಗಬಹುದು. ಜೀವಿಗಳಿಗೆ ಜೀವಜಾಲದಲ್ಲಿ ದೊರಕುವ ಶಕ್ತಿಯ ಪಾಲೂ ಒಂದು ಪರಿಮಿತಿಯಾಗಿ ವರ್ತಿಸಬಲ್ಲದು.

ಜೀವಗೋಳ ಒಂದು ಬೃಹದ್ ಸಮುದಾಯ. ಅದರಲ್ಲಿ ಲಕ್ಷಾಂತರ ಪ್ರಭೇದಗಳು ಮತ್ತು ಕೋಟ್ಯಾಂತರ ಜೀವಿಗಳಿವೆ. ಇವುಗಳ ನಡುವೆ ಅಂತರವರ್ತನೆ, ಸಹನೆ, ಪ್ರತಿವರ್ತನೆಗಳು ಪಾತ್ರವಹಿಸುವ ಬೃಹದ್ ಜೀವಜಾಲ ಇದು. ಜೀವಜಾಲದಲ್ಲಿ ವಿವಿಧ ಸ್ತರಗಳಿವೆ. ಈ ವಿವಿಧ ಸ್ತರಗಳ ಮೊತ್ತ ಮತ್ತು ಸಂಖ್ಯೆಗಳನ್ನು ಎಣಿಸಿ ಗುರುತಿಸಿದರೆ ಒಂದು ತ್ರಿಕೋನಾಕಾರದ ಪಿರಮಿಡ್‌ರೂಪುಗೊಳ್ಳುತ್ತದೆ. ಉದಾಹರಣೆಗೆ ಒಂದು ಕಾಡಿನಲ್ಲಿರುವ ಮಾಂಸಾಹಾರಿ ಹುಲಿಗಳು, ಅವುಗಳ ಆಹಾರವಾಗುವ ಸಸ್ಯಾಹಾರಿ ಜಿಂಕೆಗಳು ಮತ್ತು ಜಿಂಕೆಗಳ ಆಹಾರವಾಗುವ ಹುಲ್ಲನ್ನು ಪರಿಶೀಲಿಸೋಣ. ನಾಲ್ಕಾರು ಹುಲಿಗಳನ್ನು ಪೋಷಿಸಲು ನೂರಾರು ಜಿಂಕೆಗಳು ಬೇಕು. ಜಿಂಕೆಗಳನ್ನು ಪೋಷಿಸಲು ಅನೇಕ ಎಕರೆ ವಿಸ್ತೀರ್ಣದ ಹುಲ್ಲು ಗಾವಲುಬೇಕು. ಹುಲ್ಲು ಗಿಡಗಳನ್ನು ಎಣಿಸಬಹುದಾದರೆ ಅವು ಲಕ್ಷಾಂತರ ಸಂಖ್ಯೆಯಲ್ಲಿ ಇರುತ್ತವೆ. ಲಕ್ಷಾಂತರ ಹುಲ್ಲುಗಿಡಗಳನ್ನು ಕೆಳಗಿನ ಸ್ತರದಲ್ಲಿ, ನೂರರ ಸಂಖ್ಯೆಯ ಜಿಂಕೆಗಳನ್ನು ಮೇಲಿನ ಸ್ತರದಲ್ಲಿ, ನಾಲ್ಕು ಹುಲಿಗಳನ್ನು ಅದಕ್ಕೂ ಮೇಲಿನ ಸ್ತರದಲ್ಲಿ ಅವುಗಳ ಮೊತ್ತ ಸಂಖ್ಯೆಗಳಿಗನುಗುಣವಾಗಿ ಗುರುತಿಸಿದರೆ ಒಂದು ಪಿರಮಿಡ್ ರೂಪುಗೊಳ್ಳುತ್ತದೆ. ಇಂತಹುದೊಂದು ಪ್ರಾಯೋಗಿಕ ವಿಮರ್ಶೆ ಯುರೋಪು ಖಂಡದಲ್ಲಿ ನಡೆಯಿತು. ಅಲ್ಲಿ ಜನ ದನಗಳ ಮಾಂಸ ತಿನ್ನುತ್ತಾರೆ. ಈ ಪ್ರಯೋಗದ ಫಲಿತಾಂಶದ ಪ್ರಕಾರ ೧೦೫ ಪೌಂಡು ತೂಕದ ೧೨ ವರ್ಷದ ಒಬ್ಬ ಬಾಲಕನನ್ನು ಬೆಳಸಲು ವರ್ಷಕ್ಕೆ ೨೨೫೦ ಪೌಂಡು ತೂಕದ ಮಾಂಸ ಒದಗಿಸುವ ನಾಲ್ಕೂವರೆ ಕರುಗಳು ಬೇಕು. ಈ ಕರುಗಳನ್ನು ಬೆಳೆಸಲು ೧೭,೮೫೦ ಪೌಂಡು ತೂಕದ, ೨ ಕೋಟಿ ಸಂಖ್ಯೆಯ ಅಲ್ಫ ಅಲ್ಫ (ಒಂದು ರೀತಿಯ ಹುಲ್ಲು ಗಿಡ) ಸಸ್ಯದ ಅಗತ್ಯವಿದೆ. ಇದನ್ನು ರೇಖಾಚಿತ್ರವಾಗಿ ಗುರುತಿಸುವಾಗ ೧೭,೮೫೦ ಪೌಂಡು ತೂಕದ ಅಲ್ಫ ಅಲ್ಫ ಕೆಳಗಿನ ಸ್ತರದಲ್ಲೂ, ೨೨೫೦ ಪೌಂಡು ತೂಕದ ಕರುವಿನ ಮಾಂಸ ಮೇಲಿನ

ಎರಡನೆಯ ಸ್ತ್ರರದಲ್ಲೂ, ೧೦೫ ಪೌಂಡು ತೂಗುವ ಬಾಲಕ ಮೇಲಿನ ಸ್ತ್ರರದಲ್ಲೂ ಇರುವುದರಿಂದ ಪಿರಮಿಡ್ ನಿರ್ಮಾಣ ವಾಗುತ್ತದೆ. ಸಂಖ್ಯೆಯನ್ನು ಪರಿಗಣಿಸಿದರೆ, ಮೇಲೆ ಒಬ್ಬ ಬಾಲಕ, ನಡುವಿನ ಸ್ತ್ರರದಲ್ಲಿ ನಾಲ್ಕೂವರೆ ಕರುಗಳು ಮತ್ತು ಕೆಳಗಿನ ಸ್ತ್ರರದಲ್ಲಿ ೨ ಕೋಟಿ ಆಲ್ಫ ಆಲ್ಫ ಸಸ್ಯವಿರು ತ್ತದೆ. ಆಹಾರ ಸರಣಿಯಲ್ಲಿ ಪಿರಮಿಡ್ ಇರುವುದಕ್ಕೆ ಇದೊಂದು ಸರಳ ಉದಾಹರಣೆ.

ಜೀವಜಾಲದ ಒಂದು ಮೂಲೆಯಲ್ಲಿ ಎಷ್ಟೆ ಸಣ್ಣ ಹಾನಿಯಾದರೂ ಅಥವಾ ಸ್ವಲ್ಪ ಕೆಡಿಸಿದರೂ ಇಡೀ ಜೀವಗೋಳಕ್ಕೆ ಹಾನಿ ತಗುಲಬಹುದು. ಕೆಲವು ಉದಾಹರಣೆ ಗಳನ್ನು ಪರಿಶೀಲಿಸೋಣ. ಭೂ ಇತಿಹಾಸ ದಲ್ಲಿ ಸಸ್ತನಿಗಳ ವಿಕಾಸ ಜೋಗುಳಿ ಪ್ರಾಣಿ ಗಳು (ಉದಾ : ಕಾಂಗರೂ) ಕಾಣಿಸಿಕೊಂಡ ಅವಸ್ಥೆಯಲ್ಲಿ ಆಸ್ಟ್ರೇಲಿಯಾ ಭೂಖಂಡ ಇತರ ಭೂಖಂಡಗಳಿಂದ ಬೇರ್ಪಟ್ಟಿತು. ಅದ ರಿಂದಾಗಿ ಆ ಖಂಡದಲ್ಲಿ ಈನುವ ಪ್ರಾಣಿಗಳು ಕಾಣಿಸಿಕೊಳ್ಳಲಿಲ್ಲ. ಅಲ್ಲಿ ಈನುವಪ್ರಾಣಿ ಗಳಾದ ದನ, ಕುರಿ, ಆಡು, ನಾಯಿ, ಬೆಕ್ಕು, ಕುದುರೆ ಮುಂತಾದವು ಇಂದು ಇರುವು ದಾದರೆ ಅಲ್ಲಿಗೆ ವಲಸೆಬಂದ ಜನ ತಮ್ಮ ಉಪಯೋಗಕ್ಕಾಗಿ ತಂದ ಪ್ರಾಣಿಗಳವು. ಮೂಲನಿವಾಸಿ ಪ್ರಾಣಿಗಳಲ್ಲಿ ಮಾಂಸಾಹಾರಿ ಸಸ್ತನಿಗಳಿರಲಿಲ್ಲ ಎನ್ನುವುದು ಮುಖ್ಯಅಂಶ. ಆಸ್ಟ್ರೇಲಿಯಾ ಖಂಡದ ಶೋಧನೆ ನಡೆದುದು ೧೭ನೆ ಶತಮಾನದಲ್ಲಿ. ಇಂಗ್ಲೆಂಡಿನಿಂದ ಅಲ್ಲಿಗೆ ಪಾಶ್ಚಿಮಾತ್ಯರು ವಲಸೆಬಂದು ನೆಲಸಿದುದು ೧೮ನೆ ಶತಮಾನದಲ್ಲಿ. ಆದಿಯಲ್ಲಿ ವಲಸೆ ಬಂದವರೆಲ್ಲ ಯೂರೋಪು ಖಂಡದಲ್ಲಿ ತಮ್ಮ ಬಾಳ್ವೆ ಸಾಧ್ಯವಾಗದೆ ಸುಖ, ಭಾಗ್ಯ ಅರಸಿ ಬಂದವರು. ಹೀಗೆ ವಲಸೆಬಂದ ಒಬ್ಬ ಇಂಗ್ಲೀಷಿನವನು ತನ್ನ ತಾಯ್ನಾಡಿನ ನೆನಪಿ ಗಾಗಿ ಮುದ್ದಾದ ಒಂದು ಜೊತೆ ಮೊಲ ಗಳನ್ನು ಜೊತೆಯಲ್ಲಿ ಕೊಂಡೊಯ್ದ, ಮೊಲದ ಸಂತಾನ ಶಕ್ತಿ ಅಪಾರ. ಕೆಲವೇ ತಿಂಗಳಲ್ಲಿ ಅವುಗಳ ಸಂಖ್ಯೆ ಮಿತಿಮೀರಿ, ವಲಸಿಗ ಅವುಗಳೆಲ್ಲವನ್ನು ಕಾಪಾಡದಾದ. ಅವನ ಮನೆಯ ಎಲ್ಲೆಯನ್ನು ದಾಟಿ ಕೆಲವು ಕಾಡು ಸೇರಿದವು. ಬೇರೆ ಖಂಡಗಳಲ್ಲಿ ಅವು ಮಾಂಸಾಹಾರಿ ಸಸ್ತನಿಗಳ ಆಹಾರವಾಗು ತ್ತಿದ್ದವು. ಆಸ್ಟ್ರೇಲಿಯಾದಲ್ಲಿ ಮಾಂಸಾಹಾರಿ ಸಸ್ತನಿಗಳು ಇರಲಿಲ್ಲವಾಗಿ ಕೆಲವೇ ವರ್ಷ ಗಳಲ್ಲಿ ನೂರ್ಮಡಿ ಹೆಚ್ಚಿ ಆಸ್ಟ್ರೇಲಿಯಾದ ಕೃಷಿ ಬೆಳೆಗಳನ್ನು ತಿಂದು ಪಿಡುಗುಗಳಾದವು. ತಮ್ಮ ಬೆಳೆಗಳನ್ನು ರಕ್ಷಿಸಿಕೊಳ್ಳಲು ಅಲ್ಲಿನ ರೈತರು ಸಾವಿರಾರು ಮೈಲಿ ಉದ್ದ ಮುಳ್ಳು ತಂತಿ ಬೇಲಿಗಳನ್ನು ನಿರ್ಮಿಸಬೇಕಾಯಿತು.

ಇನ್ನೊಂದು ಉದಾಹರಣೆಯಲ್ಲಿ ಅದೇ ಆಸ್ಟ್ರೇಲಿಯಾಕ್ಕೆ ಸ್ಕಾಟ್‌ಲ್ಯಾಂಡ್ ದೇಶದ ವನು ವಲಸೆ ಹೊರಟಾಗ ತನ್ನ ತೌರೂರಿನ ನೆನಪಿಗಾಗಿ ಅಲ್ಲಿ ಸಾಮಾನ್ಯವಾಗಿ ಬೆಳೆಯುವ ಮುಂಡಕಳ್ಳಿಯ ಗಿಡವನ್ನು ಕುಂಡದಲ್ಲಿ ಜೋಪಾನವಾಗಿ ಕೊಂಡೊಯ್ದ, ಅದನ್ನು ಮನೆಯಲ್ಲಿಟ್ಟು ಆರೈಕೆ ಮಾಡಿ ಬೆಳೆಸಿದ. ಅದು ಮನೆಯ ಹೊಸ್ತಿಲನ್ನು ದಾಟಿ ಹೊರಗೂ ದಟ್ಟ ಕಾಡಾಗಿ ಬೆಳೆಯಿತು. ಅದರ ಬೆಳವಣಿಗೆಯನ್ನು ನಿಯಂತ್ರಿಸಲು, ಅದರ ರಸಹೀರಿ ಅದನ್ನು ಸ್ಕಾಟ್‌ಲ್ಯಾಂಡಿನಲ್ಲಿ ನಿಯಂತ್ರಿಸುವ ಒಂದು ಕೀಟವನ್ನು ಆಮದು ಮಾಡಿಕೊಂಡರು. ಅನಂತರ ಇತರ ಸಸ್ಯಗಳಿಗೂ ಪಿಡುಗಾದ ಈ ಕೀಟವನ್ನು ನಿಯಂತ್ರಿಸಲು ಸ್ಕಾಟ್

ಲ್ಯಾಂಡಿನಿಂದ ಗುಬ್ಬಚ್ಚಿಯಂತಹ ಹಕ್ಕಿಯನ್ನು ತರಿಸಿಕೊಳ್ಳಬೇಕಾಯಿತು.

ಹೀಗೆ ತಿಳಿದೊ ತಿಳಿಯದೆಯೊ ಪರಿಸರದ ಸಮತೋಲನವನ್ನು, ಜೀವಜಾಲವನ್ನು ಕೆಡಿಸುವುದರಿಂದ ಅಪಾರ ಹಾನಿ ಆಗುತ್ತದೆ. ಜೊತೆಗೆ ಮನುಷ್ಯನಿಗೆ ಹೊಸ ಸಮಸ್ಯೆಗಳನ್ನು ಸೃಷ್ಟಿಸಿ ಅವನನ್ನು ಸಂಕಷ್ಟಗಳಿಗೆ ಗುರಿಮಾಡುತ್ತದೆ.

ಮನುಷ್ಯ ಜೀವನ ನಾಟಕದ ಖಳನಾಯಕನಾಗಿದ್ದಾನೆ. ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಜೀವಗೋಳವನ್ನು ಮಾರ್ಪಡಿಸುತ್ತಿದ್ದಾನೆ. ಈ ಮಾರ್ಪಾಟುಗಳು ತಿರುಗುಬಾಣವಾಗಿ ಬಂದು ಶಾಪವಾಗಿ ಪರಿಣಮಿಸುತ್ತಿವೆ. ವಿಜ್ಞಾನ, ವೈದ್ಯಕೀಯ ಕ್ಷೇತ್ರಗಳಲ್ಲಿ ಇತ್ತೀಚೆಗೆ ನಡೆದ ಪ್ರಗತಿಯಿಂದಾಗಿ ರೋಗರುಜಿನಗಳು ಹತೋಟಿಗೆ ಬಂದಿವೆ, ಮನುಷ್ಯನ ಆರೋಗ್ಯದಲ್ಲಿ ಸುಧಾರಣೆ ಆಗಿದೆ. ಇದರ ಪ್ರತಿಫಲ ಬದುಕುವವರ ಆಯಸ್ಸು ಹೆಚ್ಚಿ, ಸಾಯುವವರ ಸಂಖ್ಯೆ ಕಡಿಮೆಯಾಗಿ, ಜನಿಸುವವರ ಸಂಖ್ಯೆಯೂ ಸೇರಿ ಜಗತ್ತಿನ ಮಾನವ ಜನಸಂಖ್ಯೆ ಮಿತಿಮೀರಿ ಬೆಳದಿದೆ. ಫಲಿತಾಂಶ ಜನಸಂಖ್ಯಾ ಆಸ್ಫೋಟ. ಈ ಆಸ್ಫೋಟ ಪರಮಾಣು, ನ್ಯೂಟ್ರಾನು ಬಾಂಬುಗಳ ಆಸ್ಫೋಟಕ್ಕಿಂತ ತೀವ್ರವಾದ ಪರಿಣಾಮ ಬೀರುತ್ತದೆ. ಮಾನವನನ್ನೂ ಸೇರಿದಂತೆ ಜೀವ-ಜನಸಂಖ್ಯೆ ಜೀವಗೋಳದ, ಪರಿಸರದ ಅಂತರ್ಗತ ಅಂಶ. ಇದು ಮಾನವನಿಗೆ ಇತರ ಜೀವಿಗಳಿಗೆ ಶಾಪವಾಗಬಹುದು. ಕೆಲವು ಕೋಟಿ ವರ್ಷಗಳ ಹಿಂದೆ ನೆಲದ ಮೇಲಕ್ಕೆ ವಲಸೆಬಂದು ಸ್ವೇಚ್ಛೆಯಾಗಿ ಬೆಳೆದು, ಸಂಖ್ಯೆಯಲ್ಲಿ ವೃದ್ಧಿಸಿ ಬೆಳೆದು ಮೆರೆವ ಡೈನೊಸಾರ್‌ಗಳೆಂದು ಪ್ರಸಿದ್ಧವಾದ ದೈತ್ಯೋರಗಗಳು ಹೇಳ ಹೆಸರಿಲ್ಲದಂತೆ ಹಠಾತ್ತಾಗಿ ನಿರ್ನಾಮವಾದವು. ಇಂದು ಅವು ಬದುಕಿದ್ದವು ಎಂದು ತಿಳಿಸುವುದು ದೊರಕಿರುವ ಅವುಗಳ ಪಳೆಯುಳಿಕೆಗಳು ಮಾತ್ರ, ಅವು ನಿರ್ನಾಮವಾಗಲು ಅವುಗಳ ಮಿತಿಮೀರಿದ ಸಂಖ್ಯೆಯೂ ಒಂದು ಕಾರಣ. ಇಂತಹ ಇನ್ನೂ ಅನೇಕ ನಿದರ್ಶನಗಳು ದೊರಕುತ್ತವೆ. ಭೂ ಇತಿಹಾಸದಲ್ಲಿ ಜೀವಗೋಳದ ಚರಿತ್ರೆಯಲ್ಲಿ. ಇದರಿಂದ ಮಾನವ ಎಚ್ಚೆತ್ತುಕೊಳ್ಳಬೇಕು. ಪರಿಸರ ಸೂತ್ರಗಳನ್ನು ಬಳಸಿ ಮನುಷ್ಯನ ಜನಸಂಖ್ಯೆಯನ್ನು ನಿಯಂತ್ರಿಸಬೇಕು, ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕು. ಇಲ್ಲದಿದ್ದರೆ ಹಿಂದಿನ ಜೀವಿಗಳಿಗಾದ ಗತಿಯೆ ಮನುಷ್ಯನಿಗೂ ಕಾದಿದೆ.

ಜೀವಗೋಳದಲ್ಲಿ ಮನುಷ್ಯನೊಬ್ಬನೆ ಅದರ ಸದಸ್ಯನಲ್ಲ. ಇಂದು ಪ್ರಬಲ ಪ್ರಮುಖ ಜೀವಿಯಾಗಿರಬಹುದು. ನಾವು ಹಿಡಿದು ಹೊರಟಿರುವ ಮಾನವ ಕಲ್ಯಾಣ ಎಂಬ ಭಾವನೆ ಅರ್ಥಶೂನ್ಯ. ಪ್ರಾಯಶಃ ಜೀವಿಕಲ್ಯಾಣ, ಜೀವಗೋಳ ಸಂರಕ್ಷಣೆ ಎಂದು ತೊಡಗಿದರೆ ಮಾತ್ರ ಉಳಿವು. ಮನುಷ್ಯ ತನ್ನ ವಿಷಯದಲ್ಲಿ ಮಾತ್ರ ಚಿಂತಿಸುವುದನ್ನು ಬಿಟ್ಟು ಜೀವಗೋಳದಲ್ಲಿ ತಾನೂ ಒಬ್ಬ ಸದಸ್ಯ ಎಂಬುದನ್ನು ಮಾನ್ಯಮಾಡುವವರೆಗೆ ಮಾನವನ ಏಳಿಗೆ ಸಾಧ್ಯವಿಲ್ಲ.

ವೈವಿಧ್ಯತೆಯಲ್ಲಿ ಏಕತೆ ಜೀವಗೋಳದ ಪ್ರಮುಖ ಲಕ್ಷಣ. ಅದನ್ನು ಉಳಿಸಿ ಬೆಳಸಬೇಕಾದುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯ. ಜನಸಂಖ್ಯೆ ಮಿತಿಮೀರಿ

ಬೆಳೆಯಲು ಅವಕಾಶಮಾಡಿಕೊಟ್ಟಿದ್ದೇವೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ, ಆಶ್ರಯ ಒದಗಿಸಲೆಂದು ಕೃಷಿಭೂಮಿಯನ್ನು ವಿಸ್ತರಿಸುತ್ತಿದ್ದೇವೆ, ನಗರೀಕರಣ ವ್ಯಾಪಕವಾಗಿ ನಡೆದಿದೆ. ಇವುಗಳಿಗಾಗಿ ಜೀವನಾಧಾರವಾದ ಕಾಡುಗಳನ್ನು ಕಡಿದಿದ್ದೇವೆ, ಕಡಿಯುವುದನ್ನು ಮುಂದುವರಿಸಿದ್ದೇವೆ. ವನ್ಯಜೀವಿಗಳು ತಬ್ಬಲಿಗಳಾಗಿ ತಮ್ಮ ಉಳಿವಿಗಾಗಿ ಹೋರಾಡುತ್ತಿವೆ. ಪರಿಸರ ಪ್ರತಿಭಟಿಸುತ್ತಿದೆ. ಆಗಿರುವ ತಪ್ಪುಗಳನ್ನು ತಿದ್ದಿಕೊಂಡು ಜೀವಗೋಳವನ್ನು ಹಿಂದಿನ ಸುಸ್ಥಿತಿಗೆ ಒಯ್ಯಬೇಕಾಗಿದೆ. ವೈಜ್ಞಾನಿಕ, ಮಾನವಿಕ, ಸಾಮಾಜಿಕ ಸಮುದಾಯಗಳು ಒಡಗೂಡಬೇಕಾಗಿದೆ. ನೈತಿಕ, ಆರ್ಥಿಕ ಮತ್ತು ನ್ಯಾಯಾಧಾರ ಚಿಂತನೆಗಳಿಂದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಸಾಮಾಜಿಕ ಅಥವಾ ಆರ್ಥಿಕ ಕ್ರಾಂತಿಗಿಂತ ಹೆಚ್ಚಾಗಿ ಮಾನವನ ಮನೋಭಾವ ಕ್ರಾಂತಿ ಆಗಬೇಕಾಗಿದೆ.

ಮಾನವ ಸ್ವಾರ್ಥಲಾಲಸೆ
ಆಟಾಟೋಪಕ್ರೌರ್ಯ
ಭುವಿಯ ಆಳುವ ಚಪಲ ಪ್ರಗತಿ
ಪ್ರದರ್ಶನ ಕೈಂಕರ್ಯ
ನಷ್ಟ ಜೀವಕೋಟಿ ಜನಸಂಖ್ಯೆ
ಆಸ್ಫೋಟ
ಕಷ್ಟ ಜೀವಗೋಳ ಕಾದಿಹುದು
ವನವಾಸ ಕಾದಾಟ,
ಬದುಕು ಅವಸರ, ಅಪಸ್ವರದಿ
ಸೋತಿಹುದು ಪರಿಸರ
ಅದಕೆಂದರೆ ಜೀವನ ನಶ್ವರ,
ಮೂಡಲಿ ಪ್ರಜ್ಞೆ ಈಶ್ವರ
ಅರಿತುನಡೆಯೆ ಉಳಿಯಬಹುದು
ಅನೇಕ ವರ್ಷ
ಕಲಿತು ನಡೆಸೆ ಸಹಬಾಳ್ವೆ
ಜೀವಗಳೊಡನೆ ಹರ್ಷ



ಮಾನವ ಜನ್ಮ ದೊಡ್ಡದು. ಅದನ್ನು ವೃಥಾ ಹಾಳುಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ !

—ಪುರಂದರದಾಸ

ಮೊಲ ಸಾಕಿ ಲಾಭ ಗಳಿಸಿ

ಎಸ್. ರಾಮನಾಥ

ಕುರಿ, ಕೋಳಿ, ಹಸು, ಹಂದಿ ಇತ್ಯಾದಿ ಪ್ರಾಣಿ ಸಾಕಾಣಿಕೆಗಿಂತ ಅತ್ಯಂತ ಲಾಭ ದಾಯಕವಾಗಿರುವ ಮೊಲ ಸಾಕಾಣಿಕೆ ಇಂದು ಉದ್ಯೋಗವಾಗಿ, ಜನಪ್ರಿಯ ಉದ್ದಿಮೆಯಾಗಿ ಹೊರ ರಾಜ್ಯಗಳಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಈ ಉದ್ಯಮ ಪ್ರಾರಂಭಿಸಲು ಅವಶ್ಯವಿರುವ ಕೆಲ ಮುಖ್ಯ ಮಾಹಿತಿಗಳನ್ನು 'ಪುಸ್ತಕ ಪ್ರಪಂಚ'ದ ಓದುಗರಿಗೆ ಪರಿಚಯಿಸುವ ಒಂದು ಪ್ರಯತ್ನ ಈ ಲೇಖನ.

ಭಾರತ ಕೃಷಿ ಪ್ರಧಾನವಾದ ದೇಶ. ವ್ಯವಸಾಯವೇ ಪ್ರಮುಖ ಕಸುಬಾಗಿರುವ ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚು ಜನರು ಚಿಕ್ಕ ಹಾಗೂ ಅತೀ ಚಿಕ್ಕ ರೈತರು. ನೀರಿನ ಸೌಲಭ್ಯದ ಕೊರತೆಯಿಂದಾಗಿ, ಮಳೆಯನ್ನೇ ನಂಬಿ ಬೇಸಾಯ ಮಾಡುವ ಇವರು ಪ್ರತಿ ಬೆಳೆ ಬೆಳೆಯುವಾಗಲೂ ಆತಂಕದಿಂದಿರುತ್ತಾರೆ.

ನಿರುದ್ಯೋಗ ಸಮಸ್ಯೆಯಂತೂ ದಿನೇ ದಿನೇ ಹೆಚ್ಚುತ್ತಲಿದೆ. ಒಂದು ಮಾಹಿತಿಯ ಪ್ರಕಾರ ಭಾರತದಲ್ಲಿ ಆರು ಮಿಲಿಯಗಿಂತಲೂ ಹೆಚ್ಚು ಜನ ನಿರುದ್ಯೋಗಿಗಳಿದ್ದಾರೆ. ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಯಸುವ ರೈತರು, ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವ ಯುವಕರು ಕಡಿಮೆ ಬಂಡವಾಳದಲ್ಲಿ ಪ್ರಾರಂಭಿಸಬಹುದಾಗಿರುವ ಒಂದು ಲಾಭದಾಯಕ ಉದ್ಯಮ 'ಮೊಲ ಸಾಕಾಣಿಕೆ'.

ಸಾಮಾನ್ಯವಾಗಿ ಮಾಂಸದ ಮಾರುಕಟ್ಟೆಯಲ್ಲಿ ದೊರೆಯುವ ಮೂರ್ನಾಲ್ಕು ಪ್ರಾಣಿಯ ಮಾಂಸಗಳನ್ನು ಹೊರತುಪಡಿಸಿ ಮೊಲದ ಮಾಂಸವನ್ನು ಮಾಂಸಾಹಾರಿಗಳು ಬೇಟೆಯಾಡಿ, ಬರುವವರ ಕೈಗಳನ್ನೇ ಕಾಯಬೇಕಾಗಿದೆ. (ಬೇಟೆಯಾಡುವುದನ್ನು ಸರ್ಕಾರ ನಿಷೇಧಿಸಿದೆ!) ಇದು ಪರಿಸ್ಥಿತಿ. ಆದರೆ ತನ್ನ ರುಚಿಕರ ಹಾಗೂ ಸುಲಭವಾಗಿ ಪಚನವಾಗುವ ಮಾಂಸದಿಂದಾಗಿ ಜನರಿಗೆ ಇಷ್ಟವಾಗುವ ಮೊಲಗಳನ್ನು ಇತರೇ ಪ್ರಾಣಿಗಳಂತೆಯೇ ಸಾಕಾಣಿಕೆ ಮಾಡಬಹುದು. ಉತ್ತಮ ಲಾಭಗಳಿಸಬಹುದು. ಇದು ವಾಸ್ತವ. ಮೊಲ ಸಾಕಾಣಿಕೆಯನ್ನು ಕಡಿಮೆ ಬಂಡವಾಳದಲ್ಲಿ ಪ್ರಾರಂಭಿಸಬಹುದಾಗಿರುವುದರಿಂದ, ಅಲ್ಲದೆ ಸಾಕಾಣಿಕೆ ಕೆಲಸಗಳಿಗೆ ಹೆಚ್ಚಿನ ಸಮಯದ ಅವಶ್ಯಕತೆ ಇಲ್ಲದಿರುವುದರಿಂದ, ರೈತರು ತಮ್ಮ ಬಿಡುವಿನ ವೇಳೆಯಲ್ಲಿ ಸಾಕಾಣಿಕೆ ಕೆಲಸ ನಿರ್ವಹಿಸಿದರೆ, ತಮ್ಮ ಆದಾಯವನ್ನು

ಹೆಚ್ಚಿಸಿಕೊಳ್ಳಬಹುದು. ಅಲ್ಲದೆ ಸ್ತ್ರೀಯರು, ವೃದ್ಧರು ಮತ್ತು ಮಕ್ಕಳು ಸಹ ಸಾಕಾಣಿಕೆ ಕೆಲಸಗಳನ್ನು ನಿರ್ವಹಿಸಬಹುದಾಗಿದೆ. ನಿರುದ್ಯೋಗಿಗಳು ಲಭ್ಯವಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡಲ್ಲಿ, 'ಮೊಲ ಸಾಕಾಣಿಕೆ'ಯನ್ನು ಒಂದು ಉದ್ಯಮವನ್ನಾಗಿ ಬೆಳೆಸಿ, ಕೆಲವರಿಗಾದರೂ ಈ ಮೂಲಕ ಉದ್ಯೋಗ ನೀಡಬಹುದು.

ಹಿಮಾಚಲ ಪ್ರದೇಶದ ಕುಲು ಕಣಿವೆಯ ಸಂಶೋಧನಾ ಕೇಂದ್ರವೊಂದರಲ್ಲಿ ಮೊದಲು ಪ್ರಾರಂಭವಾದ ಈ ಉದ್ಯಮ ಭಾರತಕ್ಕೆ ಕಾಲಿಟ್ಟದ್ದು ೧೯೬೮ರಲ್ಲಿ. ಅನಂತರದ ವರ್ಷಗಳಲ್ಲಿ ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಇತ್ಯಾದಿ ರಾಜ್ಯಗಳಲ್ಲಿ ಪೂರ್ಣಪ್ರಮಾಣದ ಉದ್ಯಮವಾಗಿ ರೂಪುಗೊಂಡ ಈ ಉದ್ಯಮ ಕರ್ನಾಟಕ ಸರ್ಕಾರದ ಗಮನ ಸೆಳೆದದ್ದು ೧೯೮೩ರಲ್ಲಿ. ಶಿರ್ಸಿ, ಅಜ್ಜಂಪುರ, ಸಾಗರ, ಹೆಸರಘಟ್ಟ ಹೀಗೆ ಬೆರಳೆಣಿಕೆ ಸಂಖ್ಯೆಯಲ್ಲಿ ಮಾತ್ರ ಈಗ ಸರ್ಕಾರದ ಮುಖ್ಯ ಮೊಲ ಸಾಕಾಣಿಕಾ ಕೇಂದ್ರಗಳಿವೆ.

'ಮೊಲ ಸಾಕಾಣಿಕೆ'ಯ ಮುಖ್ಯ ಉದ್ದೇಶ, ಪ್ರಾಯಕ್ಕೆ ಬಂದಿರುವ ಹತ್ತಾರು ಹೆಣ್ಣು ಮೊಲಗಳನ್ನು, ನಾಲ್ಕಾರು ಗಂಡು ಮೊಲಗಳನ್ನು (ಸಾಮಾನ್ಯವಾಗಿ ಐದು ಹೆಣ್ಣಿಗೆ ಒಂದು ಗಂಡು ಸಾಕು) ಪ್ರತ್ಯೇಕವಾದ ಗೂಡುಗಳಲ್ಲಿ ಸಾಕಿಕೊಂಡು ನಿಯಮಿತ ಬೆದೆಕಾಲ ಇಲ್ಲದಿರುವ, ಈ ಹೆಣ್ಣು ಮೊಲಗಳಿಂದ ಲೆಕ್ಕಾಚಾರದಂತೆ ಮರಿಗಳನ್ನು ಪಡೆದು (ಗರ್ಭ ಧರಿಸಿರುವ ಅವಧಿ ೩೦ ದಿನಗಳು, ಒಂದು ಬಾರಿಗೆ ೨–೧೩ರಷ್ಟು ಮರಿ ನೀಡುತ್ತವೆ.) ಮೂರು ತಿಂಗಳ ಕಾಲ ಬೆಳೆಸಿ ಮಾಂಸಕ್ಕಾಗಿ ಮಾರಾಟ ಮಾಡುವುದು. ಅಂತೆಯೇ ಉಣ್ಣೆ ತಳಿಯ ಮೊಲಗಳನ್ನು ಸಾಕಾಣಿಕೆ ಮಾಡಿ, ಪ್ರತಿ ಮೂರು ತಿಂಗಳಿಗೊಮ್ಮೆ ಅದರ ಉಣ್ಣೆ ಕತ್ತರಿಸಿ, ಉಣ್ಣೆ ಸಾಕಷ್ಟು ದಾಸ್ತಾನಾದಾಗ ಮಾರಾಟ ಮಾಡುವುದು.

ತಳಿಗಳು

ಮೊಲಗಳಲ್ಲಿ ೩೨ ವಿವಿಧ ಜಾತಿಯ, ೬೭ ವಿವಿಧ ಬಣ್ಣಗಳ ತಳಿಗಳಿದ್ದರೂ, ಸದ್ಯಕ್ಕೆ ಭಾರತದಲ್ಲಿ ಸಾಕಾಣಿಕೆ ಮಾಡಲ್ಪಡುತ್ತಿರುವುದು ೪–೬ ಜಾತಿ ತಳಿಗಳಿಂದ ಮಾತ್ರ, ಮೊಲಗಳಿಂದ ಪಡೆಯಬಹುದಾಗಿರುವ ಉಣ್ಣೆ ಮತ್ತು ಮಾಂಸಕ್ಕೆ ಬೇರೆ ಬೇರೆಯದಾದ ತಳಿಗಳಿವೆ.

ಗ್ರೇಜಯಂಟ್, ವೈಟ್ ಜಯಂಟ್, ಬ್ರಿಟಿಷ್ ಬ್ಯಾಕ್, ಸೋವಿಯತ್ ಚಿಂಚಿಲಾ, ಕ್ಯಾಲಿಫೋರ್ನಿಯಾ ವೈಟ್ ಇತ್ಯಾದಿ ಮಾಂಸದ ತಳಿಗಳಾದರೆ, ಜರ್ಮನ್ ಅಂಗೋರಾ, ರಷ್ಯನ್ ಅಂಗೋರಾ ಉಣ್ಣೆಗಾಗಿ ಸಾಕಾಣಿಕೆ ಮಾಡುವ ತಳಿಗಳು.

ಸಂತಾನ ವೃದ್ಧಿ ಕಾರ್ಯ

ಮೊಲ ಸಾಕಾಣಿಕೆಯನ್ನು ಪ್ರಾರಂಭಿಸಲು ಇಚ್ಛಿಸುವವರು ಪ್ರಾರಂಭದಲ್ಲಿ ೧೦ ಹೆಣ್ಣು ಮತ್ತು ೨ ಗಂಡು ಮೊಲಗಳಿಂದ ಪ್ರಾರಂಭಿಸುವುದು ಒಳ್ಳೆಯದು. ಏಕೆಂದರೆ ಮೊಲದಲ್ಲಿ ಸಂತಾನ ವೃದ್ಧಿ ಕಾರ್ಯ ಬಲು ಶೀಘ್ರ. ಮರಿಯೊಂದು ಹುಟ್ಟಿದ ೬–೭ ತಿಂಗಳಿಗೆ ಪ್ರಾಯಕ್ಕೆ ಬರುತ್ತದೆ. ಗಂಡಿನೊಡನೆ ಸುಮಾರು ೧೫ ರಿಂದ ೩೦ ನಿಮಿಷಗಳ ಕಾಲ ಕೂಡಿದ್ದ ಹೆಣ್ಣು ಮೊಲವೊಂದು, ಅನಂತರದ ೨೮–೩೨ ದಿನಗಳಲ್ಲಿ ೨ ರಿಂದ

೧೩ ರಷ್ಟು ಮರಿ ನೀಡುತ್ತದೆ. ಹೆಣ್ಣು ಮೊಲವೊಂದರಿಂದ ವರ್ಷದಲ್ಲಿ ೮–೧೦ ಬಾರಿ ಮರಿ ಪಡೆಯುವುದು ಸಾಧ್ಯವಿದೆಯಾದರೂ ತಾಯಿಯ ಆರೋಗ್ಯದ ದೃಷ್ಟಿಯಿಂದ ೪–೬ ಬಾರಿ ಮಾತ್ರ ಮರಿ ಪಡೆಯುವುದು ಉತ್ತಮ. ಪ್ರಾಯಕ್ಕೆ ಬಂದಿರುವ ಹೆಣ್ಣು ಮತ್ತು ಗಂಡುಗಳನ್ನು ಕ್ರಾಸ್ ಮಾಡಿಸುವ ಅವಧಿ ಹೊರತುಪಡಿಸಿ ಯಾವಾಗಲೂ ಬೇರ್ಪಡಿಸಿ ಇಡಬೇಕು. ಹುಟ್ಟಿದ ಮರಿಗಳನ್ನು ಒಂದೂವರೆ ತಿಂಗಳವರೆಗೆ ತಾಯಿಯ ಜೊತೆಯೇ ಬಿಟ್ಟಿದ್ದು ಅನಂತರ ಬೇರ್ಪಡಿಸಬೇಕು.

ಸಾಕಾಣಿಕೆ ಮಾಡುವ ಪರಿಸರ

ಮೊಲಗಳು ೨°C ನಿಂದ ೩೪°C ವರೆಗಿನ ಉಷ್ಣತೆಯಲ್ಲಿ ಬದುಕಬಲ್ಲವು. ಉಷ್ಣತೆ ಹೆಚ್ಚಿದಂತೆಲ್ಲ ಸಂತಾನ ವೃದ್ಧಿ ಕಾರ್ಯ, ಮರಿಗಳ ಬೆಳವಣಿಗೆ ಇತ್ಯಾದಿ ಕ್ರಿಯೆಗಳು ಕುಂಠಿತಗೊಳ್ಳುತ್ತ ಹೋಗುತ್ತವೆ. ಮೊಲ ಸಾಕುವ ಸ್ಥಳದಲ್ಲಿ ತೇವಾಂಶದ ಬಗೆಗೆ ಗಮನ ಹರಿಸಬೇಕು.

(೧೬°C ಉಷ್ಣತೆಯಲ್ಲಿ ಶೇ. ೭೫ ರಷ್ಟು ತೇವಾಂಶವಿರಬೇಕು)

ತಂತಿಗೂಡುಗಳಲ್ಲಿ, ಮಣ್ಣಿನ ನೆಲದ ಮೇಲೆ ೨–೩ ಅಡಿ ಎತ್ತರದಲ್ಲಿ ಸಾಕಬೇಕು. ಉತ್ತಮವಾದ ಗಾಳಿ ಬೆಳಕಿನ ವ್ಯವಸ್ಥೆ ಇರಬೇಕು. ಮನೆಯ ಹಿಂಬದಿಯ ಅಥವಾ ಬೇಲಿ ರಕ್ಷಿತ ಪ್ರದೇಶಗಳಲ್ಲಿ ರೈತರು ಹೆಚ್ಚಿನ ವೆಚ್ಚವಿಲ್ಲದೇ ಕೊಟ್ಟಿಗೆ ನಿರ್ಮಿಸಬಹುದು. ಮಹಿಳೆಯರೂ, ಮಕ್ಕಳೂ ಈ ಸಾಕಾಣಿಕೆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬಹುದಾಗಿರುವುದಕ್ಕೆ ಮುಖ್ಯ ಕಾರಣ, ಸಾಕಾಣಿಕೆ ಕಾರ್ಯ ಹೆಚ್ಚಿನ ಶ್ರಮ ಮತ್ತು ಸಮಯ ಬೇಡುವುದಿಲ್ಲ ಮೊಲಗಳಿಗೆ ರೋಗ ತಗಲುವುದು ಬಹಳ ಕಡಿಮೆ. ಸಾಮಾನ್ಯವಾಗಿ ಬರುವ ಕಾಯಿಲೆಗಳನ್ನು ಸುಲಭವಾಗಿ ಗುರ್ತಿಸಿ, ಔಷಧಗಳನ್ನು ತಂದಿಟ್ಟುಕೊಂಡು ರೈತನೇ ಚಿಕಿತ್ಸೆ ನೀಡಬಹುದು.

ಆಹಾರ :

ಮೊಲಗಳು ಸಾಮಾನ್ಯವಾಗಿ ಎಲ್ಲಾ ರೀತಿಯ ಹಸುರುಗಳನ್ನು ಇಷ್ಟಪಡುತ್ತವೆ. ಕುದುರೆಮಸಾಲೆ ಸೊಪ್ಪು ಮೊಲಕ್ಕೆ ಹೆಚ್ಚು ಪ್ರಿಯ. ಮಾರುಕಟ್ಟೆಯಲ್ಲಿ ಅಂದಿನ ದಿನ ದೊರೆಯುವ ಕಡಿಮೆ ಬೆಲೆಯ ತರಕಾರಿಗಳನ್ನು (ಹುರಳೀಕಾಯಿ, ಎಲೆಕೋಸು, ಕ್ಯಾರೆಟ್, ಮೂಲಂಗಿಸೊಪ್ಪು) ನೀಡಬಹುದು. ಮಾರುಕಟ್ಟೆಯಲ್ಲಿ ಮೊಲಕ್ಕೆಂದೇ ದೊರೆಯುವ ಸಿದ್ಧಪಡಿಸಿದ ಆಹಾರ ದೊರೆಯುತ್ತದೆ. ಅದು ಒಂದಿಷ್ಟು ದುಬಾರಿ ಎನಿಸಿದರೂ, ಮೊಲದಿಂದ ಹೆಚ್ಚು ಮಾಂಸ ಪಡೆಯುವ ದೃಷ್ಟಿಯಿಂದ ಉಪಯೋಗಿಸುವುದು ಒಳ್ಳೆಯದು.

ಮೊಲದ ಮಾಂಸ :

ಮೊಲದ ಮಾಂಸ ಹಲವಾರು ದೃಷ್ಟಿಯಿಂದ ಇತರೇ ಸಾಕುಪ್ರಾಣಿಗಳ ಮಾಂಸಕ್ಕೆ ಹೋಲಿಸಿದಾಗ ಉತ್ತಮವಾದದ್ದು. ಮೊಲದ ಮಾಂಸದಲ್ಲಿ ಸೋಡಿಯಮ್‌ನ ಪ್ರಮಾಣ ಅತ್ಯಂತ ಕಡಿಮೆ ಇರುವುದರಿಂದ, ರಕ್ತದೊತ್ತಡ ಕಾಯಿಲೆಯಿಂದ ಬಳಲುತ್ತಿರುವವರಿಗೆ ಉತ್ತಮವಾದ ಆಹಾರ. ಅಲ್ಲದೆ, ಬೇರೆ ಪ್ರಾಣಿಗಳ ಮಾಂಸಕ್ಕೆ ಹೋಲಿಸಿದಾಗ ಮೊಲದ ಮಾಂಸದಲ್ಲಿ ಕೊಲೆಸ್ಟ್ರಾಲ್ ಪ್ರಮಾಣ ಅತ್ಯಂತ ಕಡಿಮೆ ಪ್ರಮಾಣದಲ್ಲಿ

ರುವುದರಿಂದ ಹೃದಯರೋಗದಿಂದ ಬಳಲು ತ್ತಿರುವವರಿಗೆ ಒಳ್ಳೆಯದು.

ಮಾರುಕಟ್ಟೆ :

ಮೂರು ತಿಂಗಳ ಮೊಲದ ಮರಿಯೊಂದು ಅಂದಾಜು ಎರಡು ಕೆ. ಜಿ.ಯಷ್ಟು ತೂಗು ತ್ತದೆ. ಗೋವಾ ಮಾರುಕಟ್ಟೆಯಲ್ಲಿ ಒಂದು ಕೆ. ಜಿ.ಗೆ ಅರುವತ್ತು ರೂಪಾಯಿಯಷ್ಟು ಬೆಲೆಯಿದೆ. ಇತ್ತೀಚೆಗೆ ಮೈಸೂರು-ಬೆಂಗಳೂರು ಮಾರುಕಟ್ಟೆಯಲ್ಲಿ ಮೊಲದ ಮಾಂಸಕ್ಕೆ ಬೇಡಿಕೆ ಹೆಚ್ಚುತ್ತಿದ್ದು ಒಂದು ಕೆ.ಜಿ. ಮಾಂಸಕ್ಕೆ ರೂ. ೨೫ ರಿಂದ (ಲೈವ್ ವೈಟ್) ರೂ ೫೦ (ಸಿದ್ದಪಡಿಸಿದ ಮಾಂಸಕ್ಕೆ) ವರೆಗೂ ಬೆಲೆಯಿದೆ.

ಹದಗೊಳಿಸಿದ ಮೊಲದ ಚರ್ಮಕ್ಕೆ ಉತ್ತಮ ಬೆಲೆ ದೊರೆಯುತ್ತಿದ್ದು, ಚರ್ಮ ದಿಂದ ತಯಾರಿಸಿದ ಉಡುಪುಗಳಿಗೆ ಅಧಿಕ ಬೆಲೆ ದೊರೆಯುತ್ತಿದೆ. ಮೊಲದ ಚರ್ಮ ದಿಂದ ಪರ್ಸ್, ಮಕ್ಕಳ ಉಡುಪುಗಳು, ಟೋಪಿ ಇತ್ಯಾದಿಗಳನ್ನು ತಯಾರಿಸಬಹು ದಾಗಿದೆ.

ಮಾಂಸದ ತಳಿ ಮೊಲಕ್ಕಿಂತ ಹೆಚ್ಚು ಲಾಭತರುವ ಉಣ್ಣೆ ತಳಿಯ ಮೊಲವೊಂದು ಪ್ರಥಮ ವರ್ಷದಲ್ಲಿ ಒಂದೂ ಕಾಲು ಕೆ.ಜಿ. ಯಷ್ಟು ತುಪ್ಪಳ (ಉಣ್ಣೆ) ನೀಡುತ್ತದೆ. ಅನಂತರದ ದಿನಗಳಲ್ಲಿ ಹೆಚ್ಚು ಹೆಚ್ಚು ಉಣ್ಣೆ ನೀಡುವ ಮೊಲದ ಆಯುಷ್ಯ ೮-೯ ವರ್ಷಗಳು ಮಾತ್ರ. ಮೊಲದ ಉಣ್ಣೆಗೆ ಮಾರುಕಟ್ಟೆ ಬೆಲೆ ಕೆ.ಜಿ.ಗೆ ರೂ. ೮೦೦-೯೦೦ ಇದೆಯಾದರೂ, ಉಣ್ಣೆ ತಳಿಯ ಮೊಲದ ಸಾಕಾಣಿಕೆ ಕರ್ನಾಟಕದ ಪರಿಸರ ದಲ್ಲಿ ಗಣನೀಯ ಪ್ರಮಾಣದಲ್ಲಿ ಯಶಸ್ವಿ ಯಾಗಿಲ್ಲವಾದುದರಿಂದ, ಸಧ್ಯಕ್ಕೆ ಮಾಂಸದ ತಳಿಯ ಮೊಲ ಸಾಕಾಣಿಕೆ ಮಾಡುವುದು ಒಳ್ಳೆಯದು.

ಮಾಂಸದ ತಳಿಯ ಮೊಲಗಳು ಅಜ್ಜಂಪುರ, ಶಿರಸಿ, ಮೈಸೂರು, ಬೆಂಗಳೂ ರಿನ ಹೆಸರಘಟ್ಟ ಮುಂತಾದ ಕಡೆ ದೊರೆಯು ತ್ತದೆ.

ತೀವ್ರ ನಿರುದ್ಯೋಗ ಸಮಸ್ಯೆಯನ್ನು ಯುವಕರು ಎದುರಿಸುತ್ತಿರುವ ಈ ಸಮಯ ದಲ್ಲಿ ಕರ್ನಾಟಕದಲ್ಲಿ ಈಗಷ್ಟೇ ಪ್ರಚಲಿತ ವಾಗುತ್ತಿರುವ, ಹೆಚ್ಚಿನ ಬಂಡವಾಳವಿಲ್ಲದೇ ಪ್ರಾರಂಭಿಸಬಹುದಾಗಿರುವ ಈ ಹೊಸ ಲಾಭದಾಯಕ ಉದ್ಯಮವನ್ನು ಪ್ರಾರಂಭಿ ಸಲು ಇಚ್ಚಿಸುವವರಿಗೆ ಸಾಲ ನೀಡಲು ವಾಣಿಜ್ಯ ಬ್ಯಾಂಕುಗಳು ಮುಂದೆ ಬರುತ್ತಿವೆ. ಮೊಲಗಳಿಗೆ ವಿಮೆಯ ಸೌಲಭ್ಯವು ಇದೆ.

ಅಮರ್ಸ್

ಮೈಸೂರಿನ ನಾಲ್ವರು ಉತ್ಸಾಹಿ ತರುಣರು ಮೊಲ ಸಾಕಾಣಿಕೆಯನ್ನು ಜನಪ್ರಿಯಗೊಳಿಸಬೇಕೆಂಬ ಉದ್ದೇಶದಿಂದ ಕಟ್ಟಿ ಬೆಳೆಸಿರುವ ಒಂದು ಸಂಸ್ಥೆ ಅಮರ್ಸ್.

ಮೊಲ ಸಾಕಾಣಿಕೆಯಲ್ಲಿ ಆಸಕ್ತಿ ಉಳ್ಳ ವರು ಕೆಳಕಂಡ ವಿಳಾಸ ಸಂಪರ್ಕಿಸುವುದು.

ಅಮರ್ಸ್
1037, 8ನೇ ಮೈನ್
ಮೂರನೇ ಹಂತ, ಗೋಕುಲಂ
ಮೈಸೂರು-570002

ಮಾನವೀಯತೆಯನ್ನು ಬಡಿದೆಚ್ಚರಿಸಿದ ಮನುಷ್ಯ ಮಾತ್ರರ ಸ್ವಾತಂತ್ರ್ಯಕ್ಕಾಗಿ ಸಮರವೆಸಗಿದ—

ಮಹಾಯೋಧ ವಿಲಿಯಂ ವಿಲ್ಬರ್‌ಫೋರ್ಸ್

ಸರಸ್ವತಿಬಡೆಕ್ಕಿಲ

ಕ್ರಿಸ್ತಶಕ ಸಾವಿರದೆಂಟುನೂರ ಮೂವತ್ನಾಲ್ಕು! ಜುಲೈ ಮೂವತ್ತೊಂದು! ಬ್ರಿಟಿಷ್ ವೆಸ್ಟ್ ಇಂಡೀಸಿನ ಇಗರ್ಜಿಗಳಲ್ಲಿ ಸಾವಿರಾರು ನೀಗ್ರೋಗಳು ಕಾತರದಿಂದ ಕಾಯುತ್ತಿದ್ದಾರೆ. ಬಾಲಕರಿಂದ ಹಿಡಿದು ವಯೋವೃದ್ಧರವರೆಗೂ ಎಲ್ಲ ವಯಸ್ಸಿನವರು ಜಮಾಯಿಸಿದ್ದಾರೆ! ಅವರೆಲ್ಲರ ವದನಗಳು ಏನೋ ಒಂದು ಅದ್ಭುತ ಘಟನೆಯ ಪ್ರತೀಕ್ಷೆಯಲ್ಲಿ ಪ್ರಜ್ವಲಿತವಾಗಿವೆ.

ಅದೋ! ಮಧ್ಯರಾತ್ರಿ ಹನ್ನೆರಡರ ಮೊದಲ ಘಂಟಾನಾದ! ಎಲ್ಲರೂ ಒಂದೇ ಬಾರಿಗೆ ಹರ್ಷೋದ್ಗಾರಗೈದರು! ಉನ್ಮಾದಗೊಂಡಂತೆ ನೆಗೆದರು! ಕುಣಿದು ಕುಪ್ಪಳಿಸಿದರು. ಅವರ ಕೇಕೆ, ವಿಜಯಧ್ವನಿಗಳಿಗೆ ಚರ್ಚಿನಮಾಡು ಹಾರಿಹೋಗುವುದೋ ಎಂಬಂತೆ ಭಾಸವಾಯಿತು. ಮಧ್ಯರಾತ್ರಿಯ ಆ ಅಮೃತಘಳಿಗೆಯಲ್ಲಿ ಬ್ರಿಟಿಷ್ ಧ್ವಜದ ಅಡಿಯಲ್ಲಿನ ಎಂಟು ಲಕ್ಷ ಗುಲಾಮರು ಸರ್ವತಂತ್ರ ಸ್ವತಂತ್ರರಾದರು.

ಈ ಮಹಾನ್ ಘಟನೆಯು ಬಿಳಿಯನೊಬ್ಬ ಕರಿಯ ನೀಗ್ರೋಗಳಿಗಾಗಿ ನಡೆಸಿದ ಕಠಿಣ ಸಂಘರ್ಷದ ಪರಾಕಾಷ್ಠೆಯ ಪರಮ ಘಟ್ಟವಾಗಿತ್ತು. ಈ ಸ್ವಾತಂತ್ರ್ಯಸಮರದ ಮುಖ್ಯಸೇನಾನಿ, ನೇತಾರ, ವಿಲಿಯಂ ವಿಲ್ಬರ್‌ಫೋರ್ಸ್. ಕೋಮಲ ಕಾಯದ ಕುಳ್ಳವ್ಯಕ್ತಿ. ಯೋರ್ಕ್‌ಶಯರಿನಲ್ಲಿ ಹುಟ್ಟಿದ ಈತ ಸದಾ ಒಂದಲ್ಲ ಒಂದು ನೋವಿನಿಂದ ನರಳುತ್ತಿದ್ದ. ಜೀವನದುದ್ದಕೂ ಅವನ ದುರ್ಬಲ ದೇಹದಲ್ಲಿ ನೋವಿಲ್ಲದ ದಿನ ಒಂದೂ ಇರಲಾರದು. ಅವನ ಕಣ್ಣುಗಳೂ ದುರ್ಬಲ. ಹೆಚ್ಚಾಗಿ ಇತರರೇ ಅವನಿಗೆ ಓದಿ ಹೇಳಬೇಕಾಗಿತ್ತು. ಪ್ರತಿವರ್ಷ ಒಂದು ಲಕ್ಷಕ್ಕಿಂತಲೂ ಹೆಚ್ಚು ನತದೃಷ್ಟ ನೀಗ್ರೋ ಗಂಡಸರು ಹೆಂಗಸರು ಮತ್ತು ಮಕ್ಕಳನ್ನು ಕೂಡ ಆಫ್ರಿಕದಿಂದ ಸೆರೆಹಿಡಿದು ದೇಶ ವಿದೇಶಗಳಲ್ಲಿ (ಜಾನುವಾರುಗಳನ್ನು ಮಾರುವಂತೆ) ಮಾರಾಟ ಮಾಡುವಂಥ ಗುಲಾಮವ್ಯಾಪಾರವನ್ನು ಕಿತ್ತೊಗೆದ ಕೀರ್ತಿ ವಿಲಿಯಂ ವಿಲ್ಬರ್

‘ರೀಡರ್ಸ್ ಡೈಜೆಸ್ಟ್’ ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಲಿಯಂ ವಿಲ್ಬರ್‌ಫೋರ್ಸ್ ಅವರ ‘ಫ್ರೀಡಮ್ಸ್ ಕ್ರುಸೇಡರ್’ ಲೇಖನದ ಅನುವಾದ.

ಫೋರ್ಸ್‌ನದು. ಮುಂದೆ ವಿಶಾಲ ಬ್ರಿಟಿಷ್ ಸಾಮ್ರಾಜ್ಯದಿಂದ (ಬ್ರಿಟಿಷರು ಅರ್ಧ ವಿಶ್ವವನ್ನೇ ಗೆದ್ದು ತಮ್ಮ ಪಾದಾಕ್ರಾಂತ ಮಾಡಿಕೊಂಡಿದ್ದ ಕಾಲವದು)ಲೇ ದಾಸ್ಯವನ್ನು, ಗುಲಾಮಗಿರಿಯನ್ನು, ನಿರ್ನಾಮಗೊಳಿಸಿದ ಅಳಿಸಿಹಾಕಿದ ಮಹಾನ್ ವ್ಯಕ್ತಿಯೂ ಅವನೇ!

ಯೋರ್ಕ್‌ಶಯರಿನ 'ಹಲ್' ಎಂಬಲ್ಲಿ ೧೭೫೯ರಲ್ಲಿ ವಿಲಿಯಂ ವಿಲ್ಬರ್ ಫೋರ್ಸ್ ಜನಿಸಿದ. ಶ್ರೀಮಂತ ವ್ಯಾಪಾರೀ ಕುಟುಂಬದಲ್ಲಿ ಹುಟ್ಟಿದ ಈತ ಜನ್ಮತಃರೋಗಿ. ಆದರೆ ಶರೀರದ ಅಶಕ್ತಿ ಅವನ ಮನೋಬಲವನ್ನೆಂದೂ ಕುಗ್ಗಿಸಲಿಲ್ಲ. ತನ್ನ ೨೧ನೇ ವಯಸ್ಸಿಗೇ ಕ್ರೇಂಬ್ರಿಜ್ ವಿಶ್ವವಿದ್ಯಾನಿಲಯದ ಪದವೀಧರನಾದ, ಮಾತ್ರವಲ್ಲ, ಪಾರ್ಲಿಮೆಂಟಿಗೂ ಆಯ್ಕೆಗೊಂಡ.

ವಿಲಿಯಂ ವಿಲ್ಬರ್‌ಫೋರ್ಸ್‌ನ ರೋಗಗ್ರಸ್ತ ಶರೀರವು ಸರಿಯಾದ ಬೆಳವಣಿಗೆ ಹೊಂದದೆ ದುರ್ಬಲವಾಗಿ, ಮುದುಡಿ ಬಾಗಿಕೊಂಡಿತ್ತು. ಆದರೆ ಅವನ ಹೊಳೆವ ಚಂಚಲ ಕಣ್ಣುಗಳಲ್ಲಿನ ಕರುಣಾದ್ರ್ರ ಉಲ್ಲಾಸವು ಅವನ ಬಾಹ್ಯ ಅನಲಕ್ಷಣಗಳನ್ನು ನೋಟಕರು ಮರೆವಂತೆ ಮಾಡುತ್ತಿತ್ತು.

ಬಹುಬೇಗನೆ ಆತ ಲಂಡನ್ನಿನ ಅತ್ಯಂತ ಜನಪ್ರಿಯ ವ್ಯಕ್ತಿಗಳಲ್ಲೊಬ್ಬನಾದ. ಅವನ ಭೌತಿಕವಾದಿಗೆಳೆಯರ ಬಳಗದಲ್ಲಿ ಅವನೊಬ್ಬ ಪ್ರತಿಭಾವಂತ ವಾಕ್ಚತುರ—ಆದರೆ ನಾಸ್ತಿಕನೆಂದು ಹೆಸರಾಗಿದ್ದ. ಸುಂದರಿ ಮಿಸ್‌ಸಿಡೊನ್ಸ್‌ಳ ಜತೆ ನಾಟಕ, ಔತಣಗಳಲ್ಲಿ ಭಾಗವಹಿಸುವುದು, ಮೋಜಿನ ಜೀವನ, ಕ್ಲಬ್ಬುಗಳಲ್ಲಿ ವಿಲಾಸಿ ಸಾಹಸಿಗಳ ಜತೆ ಇಸ್ಪೇಟ್, ಜೂಜು ಇತ್ಯಾದಿ ನಿಷಿದ್ಧ ಆಟಗಳಲ್ಲಿ ಹೊತ್ತುಕಳೆಯುವುದು.

ಅವನ ವಾಕ್ಪಟುತ್ವ, ಸುಮಧುರ ಕಂಠ—ಇವುಗಳಿಂದ ಜನ ಎಷ್ಟೊಂದು ಆಕರ್ಷಿತರಾಗಿದ್ದರೆಂದರೆ, ಅವನು ಪಾರ್ಲಿಮೆಂಟಿನ ಕೋಗಿಲೆ (ನೈಟಿಂಗೇಲ್) ಎಂದು ಹೆಸರುಗಳಿಸಿದ್ದ. ಅವನೀಗ ಮಹತ್ವದ ರಾಜಕೀಯ ಭವಿಷ್ಯದೆಡೆಗೆ, ಗೆಲುವಿನೆಡೆಗೆ ಮುನ್ನುಗ್ಗುತ್ತಿರುವುದು ಸ್ಪಷ್ಟವಾಗಿತ್ತು. ಅವನ ವಿಷಯ ನಿರೂಪಣೆ, ವಾದ ವೈಖರಿ, ಪ್ರತಿವಾದಿಗಳನ್ನೆಲ್ಲ ಹಿಮ್ಮೆಟ್ಟಿಸಿ ಜನಪ್ರಿಯತೆಯೆಡೆಗೆ ಕೊಂಡೊಯ್ಯುತ್ತಿದ್ದಿತು.

ವಿಲ್ಬರ್‌ಫೋರ್ಸ್‌ಗೆ ಆಗ ಕೇವಲ ಇಪ್ಪತ್ತೈದು ವರ್ಷ. ರೆವರೆಂಡ್ ಐಸಾಕ್ ಮಿಲ್ನರ್ ಎಂಬ ಕ್ರೈಸ್ತ ಪಾದ್ರಿಯ ಗೆಳೆತನವಾಯಿತು. ಅವನೊಬ್ಬ ಭೀಮಕಾಯದ ವ್ಯಕ್ತಿ; ನಗೆಮೊಗದ ಉತ್ಸಾಹೀ ತರುಣ ಸನ್ಯಾಸಿ. ಅವನ ಜತೆ ವಿಲಿಯಂ ವಿಲ್ಬರ್ ಹಲವು ಭೂ ಭಾಗಗಳನ್ನು ಭೂಖಂಡಗಳನ್ನು ಸುತ್ತಾಡಿದ. ಮಣ್ಣಿನ ರಸ್ತೆಗಳಲ್ಲಿ, ಕೊರಕಲು ಕಣಿವೆಗಳದಾರಿಯಲ್ಲಿ, ಅಲ್ಲಲ್ಲಿ ನಡೆಯುತ್ತಾ ಎತ್ತು, ಕುದುರೆಗಳ ಬಂಡಿಗಳಲ್ಲಿ ತಿರುಗಾಡುತ್ತಾ ಇಬ್ಬರು ಗೆಳೆಯರೂ ಕೊನೆ ಮೊದಲಿಲ್ಲದಂತೆ ಮಾತಾಡುತ್ತಾ ಧರ್ಮದ ಬಗ್ಗೆ, ಧರ್ಮದ ತಿರುಳಿನ ಬಗ್ಗೆ, ಗ್ರೀಕ್ ಭಾಷೆಯ ಹೊಸ ಟೆಸ್ಟಮೆಂಟ್ (ಬೈಬಲ್) ಬಗ್ಗೆ ಚರ್ಚಿಸುತ್ತಾ ಸಂಚರಿಸಿದರು. ವಿಲ್ಬರ್ ಬದಲಾದ. ನಾಸ್ತಿಕ, ಮೋಜುಗಾರ, ಭೌತಿಕವಾದಿ ವಿಲಿಯಂ ವಿಲ್ಬರ್ ಫೋರ್ಸ್ ನಿಜವಾದ ಆಧ್ಯಾತ್ಮವಾದಿಯಾದ. ತನ್ನ ಜೀವಿತದ ಉದ್ದೇಶವನ್ನರಿತುಕೊಂಡ. ಅಧ್ಯಾತ್ಮವು ಅವನ ತನುಮನಗಳನ್ನು

ಪವಿತ್ರಗೊಳಿಸಿತು. "ಸಹಜೀವಿಗಳ ಒಳಿತಿಗಾಗಿ ಬಾಳುವುದೇ ಜೀವನ. ಅವರಿಗಾಗಿ ಬಾಳು ಸವೆಸುವುದೇ ಭಗವಂತನಿಗೆ ಪ್ರಿಯವಾದುದು. ಆತನ ಪ್ರೀತಿಗಾಗಿ ಬಾಳನ್ನು ಸವೆಸಬೇಕು." ಎಂದು ಸಂಕಲ್ಪ ತಾಳಿದ. ಅವನ ಅಂತರಂಗ ಬಹಿರಂಗಗಳೆರಡರಲ್ಲೂ ಆದ ಈ ಅದ್ಭುತ ಬದಲಾವಣೆ ದೈವಪ್ರೇರಣೆ ಎನ್ನಬಹುದು. ಮುಂದಿನ ದಿನಗಳಲ್ಲಿ ಅವನ ಕಾರ್ಯ ಕ್ಷೇತ್ರಗಳು ವಿಶಾಲವಾಗುತ್ತ ಹೋಗುವುದನ್ನು ಗಮನಿಸಿದರೆ ವಿಲ್ಬರ್‌ಫೋರ್ಸ್ ಆಸ್ತಿಕನಾದುದು, ಕ್ರೈಸ್ತ ಜನ ಸಮುದಾಯದಲ್ಲೇ ಅಪೂರ್ವವಾದ, ಕೆಲವೇ ಅತಿಪ್ರಾಮುಖ್ಯ ಐತಿಹಾಸಿಕ ಘಟನೆಗಳಲ್ಲಿ ಒಂದು ಎಂದು ಹೇಳಬೇಕು. ತಾನು ನಂಬಿದಂತೆ, ತನ್ನ ಹೃದಯವು ಒಪ್ಪಿಕೊಂಡಂತೆ, ತನ್ನ ಅಂತರಾತ್ಮದ ವಾಣಿಯಂತೆ, ದೈವೀ ಮಾರ್ಗದರ್ಶದದಲ್ಲಿ ಪಾರ್ಲಿಮೆಂಟಿನ ಈ ಎಳೆಯ ಸದಸ್ಯ ಜೀವನದುದ್ದಕ್ಕೂ ಹೋರಾಡಲು ಉದ್ಯುಕ್ತನಾದ.

ವಿಲಿಯಂ ವಿಲ್ಬರ್ ಚಿಕ್ಕವನಿದ್ದಾಗ, ಬ್ರಿಸ್ಟಲ್‌ನಗರದಲ್ಲಿ ಗುಲಾಮರ ಮಾರಾಟವನ್ನು ಕಣ್ಣಾರೆ ಕಂಡಿದ್ದ. ಆಗ ಅವನ ಮನದಲ್ಲಾದ ದುಃಖ, ರೋಷಗಳನ್ನು ಅದುಮಿಡದೆ, ಸಮಾಚಾರ ಪತ್ರಿಕೆಯೊಂದರಲ್ಲಿ ದಿಟ್ಟ ಹೇಳಿಕೆಯೊಂದನ್ನು ನೀಡಿದ— "ಅತ್ಯಂತ ಹೇಯ ಕೃತ್ಯವಾದ ಈ ನರಮಾಂಸದ ಮಾರಾಟವನ್ನು ತಕ್ಷಣ ನಿಲ್ಲಿಸಬೇಕು" ಎಂದು. ಆಗ ಅವನ ವಯಸ್ಸು ಕೇವಲ ಹದಿನಾಲ್ಕು ವರ್ಷ. ಬೆಳೆಯು ಗುಣ ಮೊಳಕೆಯಲ್ಲಿ ಕಂಡು ಬಂದಿತ್ತು. ಇದು ಅವನ ನ್ಯಾಯಪ್ರಿಯ, ನಿರ್ಭೀತ ವ್ಯಕ್ತಿತ್ವಕ್ಕೆ ಸಾಕ್ಷಿ.

ಮಾನವ ಸೇವೆಯ ಪಣತೊಟ್ಟ ಕೆಲವೇ ದಿನಗಳಲ್ಲಿ ನಂಬಲಸಾಧ್ಯವಾದ, ಕೇಳಿದವರ ಎದೆನಡುಗಿಸುವಂಥ ಭೀಕರ ಸತ್ಯ ಸಂಗತಿಗಳು ತಿಳಿದುಬಂದುವು. ಗುಲಾಮರನ್ನು ಸಾಗಿಸುತ್ತಿದ್ದ ಹಡಗಿನ ಮಾಜಿ ಅಧಿಕಾರಿಯೊಬ್ಬ ತಿಳಿಸಿದ ಕಠೋರ ತಥ್ಯಗಳು! ಗುಲಾಮ ವ್ಯಾಪಾರದಲ್ಲಿ ತೊಡಗಿರುವವರು, ಕ್ರೂರತೆಯಲ್ಲಿ ಪಳಗಿದಂಥ ಕೊಲೆಗಡುಕರನ್ನು ಬಾಡಿಗೆಗೆ ಪಡೆದು, ಪಶ್ಚಿಮ ಆಫ್ರಿಕಕ್ಕೆ ಕರೆದೊಯ್ದು, ಅಲ್ಲಿನ ಹಳ್ಳಿಗಳಿಗೆ ನುಗ್ಗಿ ಕೈಲಾಗದ ಮುದುಕರನ್ನೂ ಶಿಶುಗಳನ್ನೂ ಕೊಂದಿಕ್ಕಿ, ರೋಗಿಗಳಿದ್ದಲ್ಲಿ ಅವರನ್ನೂ ಸದೆ ಬಡಿದು, ಹಳ್ಳಿಗೆ ಹಳ್ಳಿಯನ್ನೇ ಸುಟ್ಟು ವಿಧ್ವಂಸಗೊಳಿಸಿ, ಕೆಲಸ ಮಾಡಲು ಸಮರ್ಥರಾದವರನ್ನು ಮಾತ್ರ ಉಳಿಸಿ, ಅವರಿಗೆ ಸಂಕೋಲೆ ತೊಡಿಸಿ, ಸಮುದ್ರತೀರಕ್ಕೆ ಎಳೆದು ತರುವರು! ತಮ್ಮ ಹಡಗಿನೊಳಗೆ ತುಂಬುವರು! ಇನ್ನು ಆ ಹಡಗಿನೊಳಗೋ! ಸಂಖ್ಯೆಯ ಇತಿಮಿತಿ ಇಲ್ಲದೆ, ಈ ಕೈದಿಗಳನ್ನು— ದೈತ್ಯಾಕಾರದ ವಜ್ರಶರೀರದ ಆದರೆ ಮುಗ್ಧ, ಭಯಪೀಡಿತ–ಕೈದಿಗಳನ್ನು ತಳ್ಳುವರು– ಕಟ್ಟಿಗೆಯನ್ನು ಬಿಟ್ಟುವಂತೆ! ಉಸಿರಾಟಕ್ಕೂ ಎಡೆ ಇಲ್ಲದಂತೆ! ಮೂವರಲ್ಲೊಬ್ಬನಂತೆ ಗಾಳಿಸಾಲದೆ ಉಸಿರಿಗಾಗಿ ಚಡಪಡಿಸುತ್ತಾ ಸಾಯುವವರು! ಹಲವರು ಕಷ್ಟತಾಳಲಾರದೆ ಹುಚ್ಚೆದ್ದು ತಾವಾಗಿಯೇ ಸಮುದ್ರಕ್ಕೆ ಹಾರುವವರು! ಕಬ್ಬಿಣದ ದಪ್ಪವಾದ ಸಂಕೋಲೆಗಳಿಂದ ಜೋತಾಡಿ ಅಸುನೀಗುವರು! ಇಂಥ ಅಮಾನುಷ ಪೈಶಾಚಿಕ, ಗುಲಾಮ ವ್ಯಾಪಾರವನ್ನು ನಾಮಾವಶೇಷಗೊಳಿಸುವ ದೀಕ್ಷೆ ತೊಡಬೇಕಾದಲ್ಲಿ ತನ್ನ

ಸ್ವಂತದ ರಾಜಕೀಯ ಮಹತ್ವಾಕಾಂಕ್ಷೆಗಳಿಗೆ ವಿದಾಯ ಹೇಳಲೇಬೇಕಾಗುವುದೆಂದು ವಿಲ್ಬರ್ ತಿಳಿದಿದ್ದ. ಪಾರ್ಲಿಮೆಂಟಿನಲ್ಲಿ ತನ್ನ ಈ ಧರ್ಮಯುದ್ಧಕ್ಕೆ ಯಾರ ಬೆಂಬಲವೂ ಸಿಗಲಾರದೆಂದು ಅವನಿಗೆ ಮೊದಲೇ ಗೊತ್ತಿತ್ತು.

ಧರ್ಮದಲ್ಲಿ ನೀತಿಯಲ್ಲಿ ಶ್ರದ್ಧೆಯುಳ್ಳ, ಅನ್ಯಾಯದ ವಿರುದ್ಧ ಸ್ವರವೆತ್ತಬಲ್ಲ ಹತ್ತು ಜನ ಸದಸ್ಯರ ಸಂಘವೊಂದನ್ನು ರಚಿಸಿಕೊಂಡ. ಬೆರಳೆಣಿಕೆಯೊಳಗಿನ ಈ ಜನರನ್ನು ಬಿಟ್ಟರೆ ಗುಲಾಮಗಿರಿಯನ್ನು ವಿರೋಧಿಸುವ ಯಾವುದೇ ಸಂಸ್ಥೆಯಾಗಲೀ, ವ್ಯಕ್ತಿಯಾಗಲೀ ಇರಲಿಲ್ಲ. ಗುಲಾಮ ಮಾರಾಟ ಮತ್ತು ಕೊಳ್ಳುವಿಕೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ, ಅನಾಯಾಸವಾಗಿ ಅಪಾರ ಸಂಪತ್ತು, ಶೌರ್ಯಗಳು ಲಭಿಸುತ್ತಿದ್ದುದರಿಂದ ಇದಕ್ಕೆ ವಿರೋಧ ವ್ಯಕ್ತಪಡಿಸುವವರಾರೂ ಇರಲಿಲ್ಲ. ಪ್ರತಿವರ್ಷ ೩೫,೦೦೦ರಿಂದ ೬೦,೦೦೦ದ ವರೆಗೆ ಪಶ್ಚಿಮ ಆಫ್ರಿಕದ ನೀಗ್ರೋಗಳನ್ನು ಸೆರೆಹಿಡಿದು ತಮ್ಮ ಸಾಮ್ರಾಜ್ಯದ ಉದ್ದಗಲಕ್ಕೂ ರವಾನಿಸಿ ಅವರನ್ನು ಲಾಭದಾಯಕವಾದ ಹೊಗೆಸೊಪ್ಪು, ಕಬ್ಬು, ಹತ್ತಿ ಬೆಳೆಯುವ ವೆಸ್ಟ್ ಇಂಡೀಸ್ ಮುಂತಾದ ವಸಾಹತು ಪ್ರದೇಶಗಳಲ್ಲಿ ಆಳುಗಳಾಗಿ ದುಡಿಯಲು ಹಚ್ಚುತ್ತಿದ್ದರು. ಕ್ರಿ.ಶ. ೧೭೭೫ರ ಹೊತ್ತಿಗೆ ಅಮೇರಿಕದ ಬ್ರಿಟಿಷ್ ರಾಜ್ಯಭಾರದ ಪ್ರದೇಶಗಳಲ್ಲಿ ಅರ್ಧ ಮಿಲಿಯ ಗುಲಾಮರು ಶ್ರಮಿಕರಾಗಿ ಸೇವೆ ಸಲ್ಲಿಸುತ್ತಿದ್ದರು. ಇಂಗ್ಲೆಂಡಿನ ಬಹಳಷ್ಟು ಮಂದಿ ಮಾತ್ರವೇ ಅಲ್ಲ, ಬ್ರಿಟಿಷರ ಮಾನಸ್ತಂಭದಂತಿರುವ ಚಕ್ರವರ್ತಿ ಮೂರನೇ ಜಾರ್ಜ್ ಕೂಡ ಈ ಗುಲಾಮ ವ್ಯಾಪಾರವನ್ನು ಕೊನೆಗೊಳಿಸುವುದಕ್ಕೆ ವಿರೋಧಿಗಳಾಗಿದ್ದರು. ಗುಲಾಮರ ಕಠಿಣ ಶ್ರಮದಿಂದ ಉತ್ಪಾದಿಸಲಾಗುವ ಕಚ್ಚಾಪದಾರ್ಥಗಳ ಸರಬರಾಜು ನಿಂತು ಹೋದರೆ ಇಂಗ್ಲೆಂಡಿನ ಕಾರ್ಖಾನೆಗಳು ಹಾಳುಬಿದ್ದು, ಇಂಗ್ಲೆಂಡಿನ ವೈಭವ ನಾಶವಾಗುವುದೆಂದು ನಂಬಿದ್ದರು. ಅಧಿಕಾರ ದರ್ಪ ಮತ್ತು ದಬ್ಬಾಳಿಕೆಯ ಕ್ರಮಗಳಿಂದ ಸೂರೆ ಮಾಡುತ್ತಿದ್ದ ಸಂಪತ್ತನ್ನು ಬಿಟ್ಟುಕೊಡಲು ಅವರಾರೂ ತಯಾರಿರಲಿಲ್ಲ.

ಪಾರ್ಲಿಮೆಂಟಿನ 'ಹೌಸ್ ಆಫ್ ಕಾಮನ್ಸ್'ನಲ್ಲಿ ೧೭೮೭ರಲ್ಲಿ ಇಪ್ಪತ್ತೆಂಟು ವರ್ಷದ ಈ ತರುಣ ಎಂ.ಪಿ.ಯು ತನ್ನ ಚರಿತ್ರಾರ್ಹ ಹೇಳಿಕೆ ನೀಡಿದ—ತನ್ನ ಅಭಿಪ್ರಾಯ ಮತ್ತು ತೀವ್ರ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಈ ರೀತಿ ನುಡಿದ. ಕಲ್ಲಾಗಿ ಹೋದ ಅವರ ಹೃದಯಗಳು ಕರಗುವಂತೆ ಧನ ಸಂಪತ್ತಿನ ದಾಹದಿಂದ ಕುರುಡಾಗಿ ಹೋದವರನ್ನು ಕಣ್ತೆರೆಯುವಂತೆ ಬಡಿದೆಬ್ಬಿಸಿದ! —"ಇಲ್ಲ! ನಮ್ಮ ಹೋರಾಟವನ್ನು ನಾವೆಂದೂ, ಎಂದೆಂದಿಗೂ ನಿಲ್ಲಿಸಲಾರೆವು. ನಿಲ್ಲಿಸುವುದಿಲ್ಲ! ಎಲ್ಲಿಯವರೆಗೆ ಈ ಹೇಯ ವಹಿವಾಟಿನ ಒಂದೊಂದು ನೆರಳೂ ಮಾಯವಾಗುವುದಿಲ್ಲವೋ ಅಲ್ಲಿಯವರೆಗೂ ಹೋರಾಟವನ್ನು ಕೈಬಿಡುವುದು ಅಸಾಧ್ಯ. ಈ ವ್ಯಾಪಾರವು ನಮ್ಮ ಗೌರವಾನ್ವಿತ ದೇಶಕ್ಕೇ ಅಪಮಾನಕಾರಕ. ಜಗತ್ತಿನಲ್ಲೇ ಅತ್ಯಂತ ಸಭ್ಯ ಜನರೆಂದುಹೆಮ್ಮೆಪಡುವ ಬ್ರಿಟಿಷರ ಮುಖಕ್ಕೆ ಮಸಿ ಬಳಿದಿರುವ ಕಳಂಕಪ್ರಾಯವಾದ ವಹಿವಾಟನ್ನು ಈಗಿಂದೀಗಲೇ ನಿಲ್ಲಿಸಿರಿ". ಅವನ ಭಾಷಣ ಸಭಿಕರಲ್ಲಿ ಸಂವೇದನೆಯನ್ನು ಭಾವೋದ್ವೇಗ

ವನ್ನು ಉದ್ದೀಪನಗೊಳಿಸಿತು. ಕೂಡಲೆ ವಿಲಿಯಂ ವಿಲ್ಬರ್ ಫೋರ್ಸ್ ಹನ್ನೆರಡು ಠರಾವುಗಳನ್ನು ಮಂಡಿಸಿ ಸರಕಾರದ ವಿರುದ್ಧ ತನ್ನ ನೈತಿಕ ಸಮರವನ್ನು ಸಾರಿದ. ನ್ಯಾಯಾಂಗವು ಈ ದುರ್ವ್ಯವಹಾರದ ಒಳಹೊರಗನ್ನು ಕೂಲಂಕುಶ ಪರಿಶೀಲಿಸಿ ಅದರಲ್ಲಿ ನಿರತರಾದ ವ್ಯಕ್ತಿಗಳನ್ನು ತನಿಖೆಮಾಡಿ ವಿಚಾರಣೆಗೊಳಪಡಬೇಕೆಂದು ಸರಕಾರವನ್ನು ಒತ್ತಾಯಿಸಿದ. ಎರಡು ದಶಕಗಳಿಂದಲೂ ನಡೆಯುತ್ತಿರುವ ಈ ಹೇಯಕೃತ್ಯವನ್ನು, ನಿರಪರಾಧಿ ಮುಗ್ಧ ಜನರ ಮೇಲಾಗುತ್ತಿರುವ ಅನ್ಯಾಯವನ್ನು, ಗುಲಾಮರ ದಾರುಣ ಅವಸ್ಥೆಯನ್ನು ಪರಾಂಬರಿಸಿ, ಮಾನವೀಯತೆಯನ್ನು ಎತ್ತಿ ಹಿಡಿದು ಗುಲಾಮಗಿರಿಯಿಂದ ಅವರನ್ನು ವಿಮುಕ್ತಗೊಳಿಸಬೇಕೆಂದು ಬಿನ್ನವಿಸಿದ.

ಸರಕಾರವು ಬೇರೆ ವಿಧಿಯಿಲ್ಲದೆ ಗುಲಾಮ ವರ್ತಕರನ್ನು ಪಾರ್ಲಿಮೆಂಟಿನ ಉಪಸಮಿತಿಯ ಮುಂದೆ ಹಾಜರಾಗಬೇಕೆಂದು ಆದೇಶ ನೀಡಿತು. ಗುಲಾಮ ನೌಕೆಯ ಅಧಿಪತಿಗಳು ಮತ್ತು ವರ್ತಕರು ತಾವು ನಿರಪರಾಧಿಗಳೆಂದು, ತಮ್ಮ ಮೇಲೆ ಸುಳ್ಳು ಆಪಾದನೆ ಹೊರಿಸಲಾಗಿದೆಯೆಂದು ದೂರಿದರು. ಆದರೆ ಅವನ್ನು ಸಾದರಪಡಿಸಲು ಸಾಕ್ಷಾಧಾರವೆಲ್ಲಿದೆ? ತಿಂಗಳುಗಟ್ಟಲೆ ಒದ್ದಾಡಿದರೂ ನಂಬತಕ್ಕ ಸಾಕ್ಷಿಗಳು ಸಿಗಲಿಲ್ಲ. ಕೊನೆಗೆ ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುತ್ತಾ ಈ ರೀತಿ ವಾದಿಸಿದರು—"ಆಫ್ರಿಕಾದ ನೀಗ್ರೋ ಜನಾಂಗವೆಂದರೆ, ಮನ್ಯ ಮೃಗ ಜಾತಿಗೆ ಸೇರಿದ ದೊಡ್ಡ ವಾನರ 'ಒರಾಂಗ್ ಔಟಾಂಗ್'ಗಿಂತ ಕಿಂಚಿತ್ ಮಾತ್ರ ಬುದ್ಧಿಶಾಲಿಗಳು. ಅವರು ಈಗ ಬಾಳುತ್ತಿರುವ ರೀತಿಯಿಂದ ಅವರ ಏಳಿಗೆಯಾಗುತ್ತಿದೆಯೇ ವಿನಃ ಅವನತಿಯಲ್ಲ! ಅಲ್ಲದೆ, ಅವರಲ್ಲಿ ಹೆಚ್ಚಿನವರು ಅಪರಾಧಿಗಳು ; ಶಿಕ್ಷಾರ್ಹರು. ವಿಚಾರಣೆಗೊಳಪಡಿಸಿದ ನಂತರವೇ ಅವರನ್ನು ವ್ಯಾಪಾರೀ ಹಡಗುಗಳಿಗೆ ಮಾರಲಾಗಿತ್ತು ಮತ್ತು ಹಡಗು ಪ್ರಯಾಣದ ಅಸೌಕರ್ಯದ ಬಗ್ಗೆ ಮಾಡಲಾಗುತ್ತಿರುವ ಆಪಾದನೆಗಳು ದುರುದ್ದೇಶಪೂರಿತ ; ಬೇಕೆಂದೇ ಅತಿಶಯಗೊಳಿಸಲಾದ ಹೇಳಿಕೆಗಳು" ಎಂದು ತಮ್ಮ ನ್ಯಾಯನಿಷ್ಠೆಯನ್ನು ತಾವೇ ಹೊಗಳಿಕೊಂಡರು.

ವಿಲಿಯಂ ವಿಲ್ಬರ್ ಮತ್ತು ಆತನ ಚಿಕ್ಕ ಸಂಸ್ಥೆಯ ಸದಸ್ಯರು—(ಇವರಿಗೆ ಬಿಳಿ ನೀಗ್ರೋಗಳೆಂಬ ಹಣೆ ಪಟ್ಟಿ ನೀಡಲಾಗಿತ್ತು)—ನ್ಯಾಯ ನಿಷ್ಠರೂ, ನೀತಿ ಧರ್ಮಗಳ ಪ್ರತಿಪಾದಕರೂ ಆಗಿದ್ದ ಸಚ್ಚರಿತ್ರರು—ನೀಗ್ರೋಗಳ ಮೇಲೆ ನಡೆದ ಮತ್ತು ನಡೆಯುತ್ತಿರುವ ಅನ್ಯಾಯಗಳ ಸಾಕ್ಷಿಗಳನ್ನು ಹುಡುಕಿ ತೆಗೆಯುವ ಮತ್ತು ಸಂಗ್ರಹಿಸುವ, ಮಹತ್ತರ ಕಾರ್ಯ ಕೈಗೊಂಡರು. ಆದರೆ ಅದು ತುಂಬಾ ಅಪಾಯಕಾರಿ ಕೆಲಸವಾಗಿತ್ತು.

ಸಾಕ್ಷಿ ನೀಡಲು ಮುಂದೆ ಬಂದ ಗುಲಾಮರು ಎಲ್ಲ ರೀತಿಯಿಂದಲೂ ಕಷ್ಟ ತೊಂದರೆಗಳಿಗೆ ಈಡಾಗುತ್ತಿದ್ದರು. ಕೆಲಸದಿಂದ ತೆಗೆದುಹಾಕುವುದಲ್ಲದೆ, ಶಾರೀರಕ ಯಾತನೆಯನ್ನೂ ನೀಡುತ್ತಿದ್ದರು. ವೆಸ್ಟ್ ಇಂಡೀಸಿನ ಜಮೀನ್ದಾರನೊಬ್ಬ ವಿಲ್ಬರನನ್ನು ಕೊಲ್ಲುವ ಬೆದರಿಕೆ ಹಾಕಿದ. ಅವನ ಮಾನಖಂಡನೆಗೂ ಪ್ರಯತ್ನ ನಡೆಸಿದ.

"ವಿಲಿಯಂಗೆ ಆಫ್ರಿಕದ ನೀಗ್ರೋ ಪತ್ನಿಯೊಬ್ಬಳಿದ್ದಾಳೆ. ಅವಳನ್ನು ತನ್ನ ಲಂಡನ್ನಿನ ಮನೆಯಲ್ಲಿ ಅಡಗಿಸಿಟ್ಟಿದ್ದಾನೆ" ಎಂಬ ಸುದ್ದಿಗಳನ್ನು ಹರಡಿಸಿದ. "ಅವನು ಫ್ರೆಂಚ್‌ರ ಗೂಢಚಾರ ಇಂಗ್ಲೆಂಡಿನ ವೈಭವ ಮತ್ತು ಸಮೃದ್ಧಿಯನ್ನು ಹಾಳುಗೈವುದೇ ಅವನ ಉದ್ದೇಶ." ಇಂಥ ದೋಷಾರೋಪಣೆಗಳ ಸುತ್ತೋಲೆಗಳು ಮನೆ ಮನೆಗಳನ್ನು ತಲಪಿದವು. ಇಂಥ ದುರಾಕ್ರಮಣಗಳಿಗೆ ಅಂಜದೆ, "ನೀಗ್ರೋಗಳ ಬೌದ್ಧಿಕ ಮಟ್ಟವು ಮೃಗಗಳಿಗಿಂತ ಭಿನ್ನವಾಗಿಲ್ಲ" ಎಂಬ ಭಾವನೆಯು ಶುದ್ಧ ತಪ್ಪೆಂದು ತನ್ನ ದೇಶ ಬಾಂಧವರಿಗೆ ತೋರಿಸಿಕೊಡುವ ಪ್ರಯತ್ನ ಮುಂದುವರಿಸಿದ.

ನೀಗ್ರೋಗಳು ಸಾಮಾನ್ಯ ಮನುಷ್ಯರೆಂಬುದನ್ನು ತೋರಿಸಲು ಅವರು ತಮ್ಮ ಪರಂಪರಾಗತ ಶೈಲಿಯಲ್ಲಿ ನಿರ್ಮಿಸಿದ ಕರಕುಶಲ ವಸ್ತುಗಳನ್ನು ಸಂಗ್ರಹಿಸಿದ. ಅವರೇ ಸ್ವತಃ ಬಣ್ಣ ಹಚ್ಚಿ ನೇಯ್ದ ಬಟ್ಟೆಗಳು, ಕುಸುರಿ ಕೆಲಸ ಮಾಡಿದ ಬಂಗಾರದ ಆಭರಣಗಳು ಕಲಾತ್ಮಕ ಮುಖವಾಡಗಳು, ಕೊಂಬು ಗಿಂಡಿಗಳು, ('ಟೀ ಕೆಟಲ್'ನಂಥ, ನೀರು ಮುಂತಾದ ಪಾನೀಯಗಳನ್ನು ಬಸಿಯಲು ಉಪಯೋಗಿಸುವ ಪಾತ್ರೆಗಳು) ಇತ್ಯಾದಿ. ಅವರ ಬೌದ್ಧಿಕ ಚಟುವಟಿಕೆಗಳ ಪ್ರತೀಕಗಳನ್ನು, ಅವರ ಸೌಂದರ್ಯ ಪ್ರಜ್ಞೆಯನ್ನು ಬಿಂಬಿಸುವ, ಹಸ್ತಕೌಶಲ್ಯವನ್ನು ಎತ್ತಿ ತೋರಿಸುವ ಸರಕುಗಳನ್ನು ಪಾರ್ಲಿಮೆಂಟ್ ಉಪ ಸಮಿತಿಯ ಮುಂದೆ ಹಾಜರು ಪಡಿಸಿದ. ಅದಲ್ಲದೆ ಗುಲಾಮ ರವಾನೆಯ ಹಡಗು ಎಷ್ಟರ ಮಟ್ಟಿಗೆ ಕಿಕ್ಕಿರಿದಿರುತ್ತವೆ ಎಂದರೆ ಎಂಥವರೂ ಆಶ್ಚರ್ಯ ಚಕಿತರಾದರು. ಪುಸ್ತಕಗಳನ್ನು ಜೋಡಿಸಲು ಮಾಡುವ ಅರೆ (ಶೆಲ್ಫ್)ಗಳಂತೆ ಜೋಡಿಸಲಾದ ಹಲಗೆಗಳಲ್ಲಿ ಆ ನೀಗ್ರೋ ಸೆರೆಯಾಳುಗಳಿಗೆ ನೆಟ್ಟಗೆ ಕುಳಿತಿರಲೂ ಆಗದೆ, ಮಲಗಲೂ ಸಾಧ್ಯವಿಲ್ಲದ, ಪಂಜರದಂತಿರುತ್ತಿತ್ತು; ಎಂಬ ಹಲವು ಮಾಹಿತಿಗಳನ್ನು ಸಾಕ್ಷಿಗಳ ಮೂಲಕ ಸರಕಾರಕ್ಕೆ ತಿಳಿಯಪಡಿಸಿದ. ಇಷ್ಟು ಕ್ರೌರ್ಯವೂ ಸಾಲದೆಂಬಂತೆ ಕೈದಿಗಳಲ್ಲಿ ಕಾಲುಭಾಗ ಎಳೆಯ ಬಾಲಕರಾಗುತ್ತಿದ್ದರೆಂಬ ವಿಚಾರವನ್ನೂ ದಾಖಲೆಗಳ ಸಮೇತ ಸಮಿತಿಯ ಮುಂದೆ ರುಜುವಾತು ಪಡಿಸಿದ.

ವಿಲಿಯಂ ವಿಲ್ಬರ್‌ನ ಸಂಸ್ಥೆ ಎರಡು ವರ್ಷ ಕಾಲ ಪತ್ತೇದಾರಿಕೆ ನಡೆಸಿತು. ಬಳಿಕ ೧೭೯೧ ರಲ್ಲಿ 'ಗುಲಾಮ ಮಾರಾಟ' ನಿರ್ಮೂಲನಾ ಕಾಯಿದೆಯನ್ನು ಪಾರ್ಲಿಮೆಂಟಿನ 'ಹೌಸ್ ಆಫ್ ಕಾಮನ್ಸ್' ಸಭೆಯಲ್ಲಿ ಮೊದಲ ಬಾರಿ ಮತಕ್ಕೆ ಹಾಕಲಾಯಿತು. ಆದರೆ ೧೬೩ ಮತಗಳು ವಿರೋಧವಾಗಿ ೮೮ ಮತಗಳು ಮಸೂದೆಯ ಪರವಾಗಿ ಬಿದ್ದುವು. ಪಾರ್ಲಿಮೆಂಟ್ ಸದಸ್ಯರು ಒಮ್ಮೆ ನಿಜಾಂಶಗಳನ್ನು ತಿಳಿದುಕೊಂಡರೆ, ತಮ್ಮ ಕಡೆಗೇ ಮತ ನೀಡುವರೆಂದು ತಮ್ಮ ಜಯ ನಿಶ್ಚಿತವೆಂದು ನಂಬಿಕೊಂಡಿದ್ದ ವಿಲ್ಬರ್‌ನ ಅನುಯಾಯಿಗಳು ಕಹಿಗುಟುಕು ನುಂಗಬೇಕಾಯಿತು. ಸ್ವಾತಂತ್ರ್ಯ ಯೋಧರು ನಿರಾಶರಾದರು. ಆದರೆ ವಿಲಿಯಂ ಬಿಟ್ಟುಕೊಡುವ ಸ್ವಭಾವದವನಾಗಿರಲಿಲ್ಲ. ಮುಂದೆ ಮಾಡತಕ್ಕುದೇನೆಂಬುದನ್ನು ನಿಶ್ಚೈಸಿಕೊಂಡ. ನೇರವಾಗಿ ಜನರನ್ನೇ ಕಂಡು ಅವರಲ್ಲಿ

ಮಾನವೀಯ ಭಾವನೆಗಳನ್ನು ಜಾಗೃತಗೊಳಿಸಬೇಕೆಂದುಕೊಂಡ. ನೀಗ್ರೋಗಳ ಬವಣೆ ಮತ್ತು ಗುಲಾಮ ವ್ಯಾಪಾರಿಗಳ ಅಮಾನುಷ ದೌರ್ಜನ್ಯಗಳ ಸಾಕ್ಷ್ಯಾಧಾರಗಳ ಸಂಕ್ಷಿಪ್ತ ವಿವರಣೆಯುಳ್ಳ ಕಿರುಹೊತ್ತಿಗೆಗಳನ್ನು ಮನೆಮನೆಗೂ ತಲುಪಿಸಿದ. ತನ್ನ ಸ್ವಂತಹಣದಲ್ಲಿ ೫೦,೦೦೦ ಕ್ಕೂ ಮೇಲ್ಪಟ್ಟು ಪುಸ್ತಕಗಳನ್ನು ಮುದ್ರಿಸಿ ವಿತರಿಸಿದ. ರಾಷ್ಟ್ರದುದ್ದಕ್ಕೂ ತಿರುಗಾಡಿ ಭಾಷಣ ಮಾಡುತ್ತ ಜನಮನಗಳನ್ನೊಲಿಸಿದ. ಸಾವಿರಾರು ಜನ ಅನುಯಾಯಿಗಳನ್ನು ಗೆದ್ದುಕೊಂಡ.

ಮುಂದೆ ಹಲವಾರು ಬಾರಿ ಪಾರ್ಲಿಮೆಂಟಿನಲ್ಲಿ ಮಂಡಿಸಿದ ಅವನ ಪ್ರಸ್ತಾವನೆಗಳು, ನೀಗ್ರೋಗಳ ಬಗ್ಗೆ ಠರಾವುಗಳು, ಕೆಳಮನೆಯಲ್ಲಿ ಮಂಜೂರಾದರೂ, ಮೇಲ್ಮನೆಯಲ್ಲಿ ಕುಸಿದು ಬೀಳುತ್ತಿದ್ದುವು. ಈ ರೀತಿ ಹನ್ನೊಂದು ವರ್ಷದ ಹೋರಾಟ ಮತ್ತು ಅಪಜಯಗಳ ಸರಣಿ ಬಾರಿ ಬಾರಿಗೂ ಅವನ ಧೃತಿಗೆಡಿಸಿದರೂ ಪುನಃ ಪುನಃ ಮೇಲೆದ್ದು ನಿಂತು ತನ್ನ ಪ್ರಯತ್ನ, ಶ್ರಮಗಳನ್ನು ಮುಂದುವರಿಸಿದ. ಸದಾ ಅಂಗಾಂಗಗಳ ನೋವಿನಿಂದ ಬಳಲುತ್ತಿದ್ದರೂ ಅವನ ಇಂಥ ಹಠಸಾಧನೆಯು, ನಿರಂತರಪ್ರಯತ್ನವು, ಒಂದು ಪವಾಡವೆಂದೇ ಹೇಳಬೇಕು. ಅವನ ಪತ್ರವ್ಯವಹಾರಗಳು ಸಾಮ್ರಾಜ್ಯದ ಉದ್ದಗಲಕ್ಕೂ ಹರಡಿದ್ದುವು. ಆಗಾಗ ಅಲ್ಲಲ್ಲಿ ಭಾಷಣಗಳು, ಪತ್ತೇದಾರಿಕಾರ್ಯಕರ್ತರಿಗೆ ನಿರ್ದೇಶನ, ಪತ್ರಿಕೆಗಳಿಗೆ ಲೇಖನ ಬರೆಯುವುದು, ಸಭೆ ಸಮಿತಿಗಳಲ್ಲಿ ಭಾಗ ವಹಿಸುವುದು, ಇತ್ಯಾದಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಆತ ಸದಾ ಮಗ್ನನಾಗಿರುತ್ತಿದ್ದ.

ಅಂತೂ, ಇಂತೂ ಕೊನೆಗೊಮ್ಮೆ ೧೮೦೭ರಲ್ಲಿ ಅವನ ೨೦ ವರ್ಷಗಳ ಅವಿಶ್ರಾಂತ ಶ್ರಮ ಫಲ ನೀಡಿತು. ನೀಗ್ರೋ ಮಾರಾಟ ನಿಷೇಧ ಕಾನೂನನ್ನು ೨೮೩ ಮತಗಳಿಂದ ಪಾರ್ಲಿಮೆಂಟಿನ ಎರಡೂ ಮನೆಗಳು ಎತ್ತಿ ಹಿಡಿದುವು. ಕೇವಲ ಹದಿನಾರು ಮತಗಳು ಮಾತ್ರ ವಿರುದ್ಧವಾಗಿದ್ದುವು. ಹೌಸ್ ಆಫ್ ಕಾಮನ್ಸ್ ಕಂಡ ಅತ್ಯದ್ಭುತ ಘಟನೆಗಳಲ್ಲಿ ಒಂದು—ನೀಗ್ರೋ ವ್ಯಾಪಾರ ನಿಷೇಧ ಮಸೂದೆ ಅಂಗೀಕೃತವಾದ್ದು –ಎಂಬುದಾಗಿ ಹೇಳಲಾಗುತ್ತದೆ. ಉತ್ಸಾಹಗೊಂಡ ಸದಸ್ಯರ ಕರತಾಡನ ಮತ್ತು ಜಯಘೋಷಗಳು ಗಗನಕ್ಕೇರಿದುವು. ವಿಲ್ಬರ್‌ಫೋರ್ಸ್ ತನ್ನೆರಡೂ ಕೈಗಳ ಮೇಲೆ, ತನ್ನೆಲ್ಲ ಬಳಲಿಕೆಗಳ ಹೊರೆ ಹೊತ್ತ ತಲೆ ಇಟ್ಟು ನಿಸ್ತಬ್ಧನಾಗಿ ಕುಳಿತ್ತಿದ್ದ. ಕಣ್ಣೀರ ಧಾರೆ ಹರಿಯತೊಡಗಿತ್ತು.

ಈಗ ವಿಲಿಯಂ ವಿಲ್ಬರ್ ತನ್ನ ರಾಜಕೀಯ ಜೀವನದಿಂದ ನಿವೃತ್ತನಾಗಲು ಬಯಸಿದ. ಬೈಬಲ್ ಅಧ್ಯಯನ ಮಾಡುತ್ತಾ, ಸ್ನೇಹಿತರ ಜತೆ ಒಳ್ಳೆಯ ಮಾತುಕತೆ ನಡೆಸುತ್ತಾ ಇರಲು ಬಯಸಿದ. ತನ್ನ ಶಾರೀರಿಕ ನೋವಿಗೆ ಚಿಕಿತ್ಸೆಯೋ ಉಪಶಮನವೊ, ನೀಡುವುದೂ ಅವನ ಉದ್ದೇಶವಾಗಿರಬೇಕು.

ಆದರೆ ಬಹುಬೇಗನೆ ಅವನ ಆಶಾಗೋಪುರವು ನುಚ್ಚುನೂರಾಯಿತು. ಕಾನೂನು ಪ್ರಕಾರ ಗುಲಾಮ ಮಾರಾಟ ನಿಷಿದ್ಧವೆಂದಾದರೂ ಗುಟ್ಟಾಗಿ ಈ ವಹಿವಾಟು ನಡೆಯುತ್ತಿರುವುದು ತಿಳಿದು ಬಂತು. ಗುಲಾಮ ಸಾಗಾಣಿಕೆಯ ನೌಕೆ

ಗಳು ಆಫ್ರಿಕದ ಮುಗ್ಧ ಜನರನ್ನು ಕದ್ದುಕೊಂಡೊಯ್ಯುವುದು ಮೊದಲಿಗಿಂತ ಇಮ್ಮಡಿಯಾಯಿತು. ಅಲ್ಲದೆ, ಎಲ್ಲಾದರೊಂದು ಬ್ರಿಟಿಷ್ ಯುದ್ಧ ಹಡಗು ಎದುರಾದರೆ ಈ ಕಳ್ಳವ್ಯಾಪಾರಿಗಳು ತಕ್ಷಣ ತಮ್ಮ ನೀಗ್ರೋ ಕೈದಿಗಳನ್ನು ಸಮುದ್ರದೊಳಕ್ಕೆ ತಳ್ಳಿಬಿಡುವುದು ಸರ್ವಸಾಮಾನ್ಯವಾಯಿತು!

"ಈ ಹೋರಾಟದ ಬಾಳ್ವೆಸಾಕಾಗಿದೆ ಶಾಂತಿಬೇಕು! ನನಗೆ ವಿಶ್ರಾಂತಿಬೇಕು" ಎಂದೆಲ್ಲ ಆತ ನೊಂದು ಉದ್ಗರಿಸುತ್ತಿದರೂ, "ಈ ನನ್ನ ಬಡಗುಲಾಮರನ್ನು ನಡು ನೀರಿನಲ್ಲಿ, ಈ ಸುಳಿಗುಂಡಿಯಲ್ಲಿ, ಕೈಬಿಡಲಾರೆ" ಎನ್ನುತ್ತಾ ಪುನಃ ಹೋರಾಟದ ಕಣಕ್ಕಿಳಿಯುತ್ತಿದ್ದ. ವಿರೋಧಿಗಳನ್ನೆದುರಿಸುತ್ತಿದ್ದ. ಈ ರೀತಿ ಮತ್ತೆ ೨೬ ವರ್ಷ ಅನ್ಯಾಯದ ವಿರುದ್ಧ, ರಾಕ್ಷಸೀ ವೃತ್ತಿಯ ವಿರುದ್ಧ, ಸಂಘರ್ಷ ನಡೆಸಿದ.

ಬಳಲಿ ಬೆಂಡಾಗಿದ್ದ ವಿಲಿಯ ವಿಲ್ಬರ್ ಮತ್ತೊಮ್ಮೆ ಪಾರ್ಲಿಮೆಂಟಿಗೆ ಸ್ಪರ್ಧಿಸಬೇಕೆಂದು ನಿಶ್ಚಯಿಸಿದ. ಈ ಬಾರಿ ಆತ ಗೆಲ್ಲುವುದು ಅಸಾಧ್ಯವೆಂದು ಮೊದಮೊದಲು ತೋರುತ್ತಿತ್ತು. ಅವನು ಯಾವುದೇ ರಾಷ್ಟ್ರೀಯ ಪಕ್ಷದ ಬೆಂಗಾವಲು ಇಲ್ಲದೆ ಸ್ವತಂತ್ರ ಹುರಿಯಾಳಾಗಿ ಸ್ಪರ್ಧಿಸುವವನಿದ್ದ. ಅವನ ಯೋರ್ಕ್ ಕ್ಷೇತ್ರದಿಂದಲೇ ಇನ್ನಿಬ್ಬರು ಸ್ಪರ್ಧಾಳುಗಳು ಚುನಾವಣಾ ಕಣದಲ್ಲಿದ್ದರು. ಆ ಇಬ್ಬರು ಪ್ರತಿಸ್ಪರ್ಧಿಗಳು ಪ್ರಖ್ಯಾತ ವ್ಯಕ್ತಿಗಳಾಗಿದ್ದರು. ಶ್ರೀಮಂತರೂ ಆಗಿದ್ದರು. ಚುನಾವಣಾ ಪ್ರಚಾರಕ್ಕಾಗಿ ವಿಲ್ಬರನಿಗಿಂತ ಇಪ್ಪತ್ತು ಪಟ್ಟು ಹಣ ಖರ್ಚು ಮಾಡಬಲ್ಲವರಾಗಿದ್ದರು. ಆದರೆ, ಮತದಾನ ಪ್ರಾರಂಭವಾದೊಡನೆ ಆಶ್ಚರ್ಯವೆನಿಸುವಂಥ ಜನಪ್ರವಾಹವು ನಾಲ್ದೆಸೆಗಳಿಂದಲೂ ಹರಿದು ಯೋರ್ಕ್ ಪಟ್ಟಣವನ್ನು ಸೇರತೊಡಗಿತು. ಕತ್ತೆಗಳ ಬೆನ್ನಮೇಲೇರಿ, ಗದ್ದೆ ತೋಟಗಳಿಂದ ಕುದುರೆಗಾಡಿಗಳಲ್ಲಿ, ಯೋರ್ಕ್‌ಗೆ ಧಾವಿಸಿದರು. ನದಿಯಾಚೆ ಇದ್ದವರು ದೋಣಿಗಳಲ್ಲಿ ಬಂದರು. ಸಾವಿರಾರು ಜನ ಕಾಲ್ನಡಿಗೆಯಲ್ಲೇ ಬಂದು ಸೇರಿದರು. ನಡೆದು ನಡೆದು ಬಸವಳಿದವರ ಗುಂಪೊಂದನ್ನು ವಿಚಾರಿಸಿದರು ಕೆಲವರು "ನಿಮ್ಮ ಓಟು ಯಾರಿಗೆ?" "ಇನ್ನಾರಿಗೆ? ವಿಲ್ಬರ್ ಫೋರ್ಸ್‌ಗೆ! ನಿಜವಾದ ಮಾನವನಿಗೆ! ನಿಜವಾದ ಧೀರನಿಗೆ!" ಎಲ್ಲರ ಒಕ್ಕೊರಲಿನ ದನಿ. ಕುಳ್ಳ ಯೋಧ ವಿಲ್ಬರ್ ಎದುರಾಳಿಗಳನ್ನು ಸುಲಭವಾಗಿ ಸೋಲಿಸಿಬಿಟ್ಟಿದ್ದ.

ಪಾರ್ಲಿಮೆಂಟಿನ ಇತಿಹಾಸದಲ್ಲಿ ಆತನ ಈ ಬಾರಿಯ ಪಾತ್ರವು ವಿಶೇಷವಾಗಿ ಅಂಕಿತವಾಯಿತು. ಗುಲಾಮ ವಹಿವಾಟು ಬ್ರಿಟಿಷರ ಇತರ ವಸಾಹತುಗಳಿಗೂ ಹಬ್ಬದಂತೆ ತಡೆಗಟ್ಟುವುದಕ್ಕಾಗಿ, ಅವುಗಳ ಕಡಲತೀರಗಳಲ್ಲೆಲ್ಲಾ ಬ್ರಿಟಿಷ್ ಯುದ್ಧ ನಾವೆಗಳು ಗಸ್ತು ತಿರುಗುವಂತೆ ನೇಮಿಸಿದ. ೧೮೧೦ರವರೆಗೂ ಕಳ್ಳಸಾಗಾಣಿಕೆ ಮುಂದುವರಿಯುತ್ತಲೇ ಇತ್ತು. ಅಟ್ಲಾಂಟಿಕ್ ಸಾಗರವನ್ನು ದಾಟಿಸಿ ಸೆಳೆದು ತಂದ ಗುಲಾಮರ ಸಂಖ್ಯೆ ೮೦,೦೦೦ಕ್ಕೂ ಮೀರಿತು. ಈಗ ಸರ್ಕಾರ ಪೂರ್ತಿ ಎಚ್ಚರಗೊಂಡಿತ್ತು. 'ಬ್ಲಾಕ್ ಬರ್ಡಿಂಗ್' ಎಂದು ಕರೆಯಲಾಗುತ್ತಿದ್ದ, ಮೇರೆ ಇಲ್ಲದ ದೌರ್ಜನ್ಯದ ಈ ವಹಿವಾಟನ್ನೂ ಜತೆಯಲ್ಲೇ ಕಡಲು ಕಳ್ಳರನ್ನೂ ಮಟ್ಟ ಹಾಕುವ ಹೊಸ ಮಸೂದೆ ಒಂದನ್ನು

ಜಾರಿಗೊಳಿಸಿತು. ಇದರ ಪ್ರಕಾರ ಗುಲಾಮರು ಸಾಗಾಣಿಕೆ ಮತ್ತು ಮಾರಾಟ ಮಾಡುವವರನ್ನು ಹಿಡಿದು ಮರಣ ದಂಡನೆಗೆ ಗುರಿಪಡಿಸುವ ಅಧಿಕಾರ ಸರಕಾರಕ್ಕೆ ಪ್ರಾಪ್ತವಾಯಿತು. ಈಗ ಗುಲಾಮ ವ್ಯಾಪಾರಿಗಳು ಹೊಸತೊಂದು ಹಂಚಿಕೆ ಮಾಡಿಕೊಂಡರು. ಸ್ಪೆಯಿನ್ ಮತ್ತು ಪೋರ್ಚುಗಲ್ ರಾಷ್ಟ್ರಗಳ ನಾಮಾಂಕಿತ ಪರವಾನಗಿಯ ಸೋಗಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳತೊಡಗಿದರು ! ಈ ನಿಷ್ಕರುಣೆಯ ರಾಕ್ಷಸೀ ಕೃತ್ಯಗಳನ್ನು ಕಾನೂನು ಸಮ್ಮತಿಗೊಳಿಸಿದ್ದ ರಾಷ್ಟ್ರಗಳೆಂದರೆ ಸ್ಪೆಯಿನ್ ಮತ್ತು ಪೋರ್ಚುಗಲ್!

ಆದರೆ ಹಟತೊಟ್ಟ ವಿಲ್ಬರ್ ಅಷ್ಟಕ್ಕೆ ಬಿಟ್ಟುಕೊಡುವನೇ? ಮತ್ತೆ ಹೋರಾಟ ಮುಂದುವರಿಸಿದ. ಸ್ಪೆಯಿನ್ ಮತ್ತು ಪೋರ್ಚುಗಲ್ ಸರಕಾರಗಳ ಮನ ಒಲಿಸಲು, ಒಂದು ಒಪ್ಪಂದಕ್ಕೆ ಬರಲು, ನಿರಂತರ ಪ್ರಯತ್ನ ನಡೆಸಿದ. ನೀಗ್ರೋಗಳ ಸಾಗಾಣಿಕೆಯನ್ನು ಸಂಪೂರ್ಣ ನಿಷೇಧಿಸಬೇಕೆಂದು ಹಲವು ವರ್ಷಗಳ ಕಾಲ ಒತ್ತಾಯಿಸುತ್ತಾ ಬಂದ, ಶತಮಾನ ಕಾಲ ಬೆಳೆದ ಈ ಹಳೆಯ ಜಾಡ್ಯ, ಒಮ್ಮೆ ತೊಲಗಿಬಿಟ್ಟರೆ ಮುಂದೆ ಶಾಶ್ವತವಾಗಿ ದೂರವಾದೀತೆಂಬ ಆಶಾಭಾವನೆ ಅವನಲ್ಲಿ ಇನ್ನೂ ಇತ್ತು.

ಬ್ರಿಟಿಷ್ ಸರಕಾರವೂ ಸೇರಿದಂತೆ ಅವನು ಕೈಕೊಂಡ ಎಲ್ಲ ಪ್ರಯತ್ನಗಳೂ ವಿಫಲಗೊಳ್ಳುವುದನ್ನು ಕಂಡು ತನ್ನ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಿದ. "ತಕ್ಷಣ ಗುಲಾಮಗಿರಿಯನ್ನು ರದ್ದುಪಡಿಸಬೇಕು ; ಮತ್ತು ಎಲ್ಲ ನೀಗ್ರೋಗಳು ಅವರು ಎಲ್ಲೇ ಇರಲಿ, ಏನೇ ಮಾಡುತ್ತಿರಲಿ ಸರ್ವತಂತ್ರ ಸ್ವತಂತ್ರ ಪ್ರಜೆಗಳೆಂದು ಘೋಷಿಸಬೇಕು" ಎಂದು ಘಂಟಾಘೋಷವಾಗಿ ಸಾರಿದ.

ಉತ್ತರವಾಗಿ, ವಿರೋಧಿಗಳು "ಆಫ್ರಿಕನ್ನರು ತೀರಾ ಮಂದಮತಿಗಳು, ಸ್ವತಂತ್ರ ಪ್ರಜೆಗಳಾಗಿ ಬಾಳುವ ಯೋಗ್ಯತೆ ಅವರಿಗಿಲ್ಲ" ಎಂದು ನೆಪಹೇಳಿ ಕಾನೂನಿನ ಪರಿಧಿಯಿಂದ ತಪ್ಪಿಸಿಕೊಳ್ಳುವವರ ಉಪಾಯಗಳಿಗೆ ಸೋಲದೆ, ವಿಲ್ಬರ್ ಪ್ರತ್ಯಕ್ಷ ಪ್ರಮಾಣಗಳಿಂದ ನೀಗ್ರೋಗಳ ಸಾಮರ್ಥ್ಯವನ್ನು ಪ್ರದರ್ಶಿಸಿದ. ಸಿಯೆರಾ ಲಿಯೋನ್ ಎಂಬ ನೀಗ್ರೋವನ್ನು ತೋರಿಸಿ ಅವನ ಪರಿಚಯ ಮಾಡಿಸಿದ.

ವಿಲ್ಬರ್ ಫೋರ್ಸ್ ಮತ್ತು ಅವನ ಜತೆಯ—ಗುಲಾಮಗಿರಿ ನಿರ್ಮೂಲನೆಯ ಸಮರ್ಥಕರು—ಬಂಧನದಿಂದ ತಪ್ಪಿಸಿಕೊಂಡ ನೀಗ್ರೋ ಗುಲಾಮರಿಗಾಗಿ "ನಿರಾಶ್ರಿತ ರಕ್ಷಣಾ ಶಿಬಿರ"ವೊಂದನ್ನು ರೂಪಿಸಿದರು. ೧೭೯೧ರಲ್ಲಿ ಈ ಗ್ರಾಮವನ್ನು ರಚಿಸಿದ್ದರು. ಅದೊಂದು ಶಾಂತಿಪೂರ್ಣ, ಸಹಬಾಳ್ವೆಯ, ಸಮೃದ್ಧಿಯ ಬಡಾವಣೆಯಾಗಿ ಬೆಳೆಯತೊಡಗಿತ್ತು. ಆ ಗ್ರಾಮದಲ್ಲಿ ಅಕ್ಷರಾಭ್ಯಾಸ, ವ್ಯಾಪಾರ, ವಹಿವಾಟುಗಳ ತರಬೇತಿ, ಮಕ್ಕಳಿಗಾಗಿ ಶಾಲೆ, ತಾವೇ ಒಗ್ಗೂಡಿ ನಿರ್ಮಿಸಿಕೊಂಡ ಚರ್ಚ್‌ಗಳು, ವ್ಯಾಪಾರೀ ಕೇಂದ್ರಗಳು ಎಲ್ಲ ನಾಗರೀಕ ಆವಶ್ಯಕತೆಗಳೂ ದೊರಕುವಂತೆ ರಚನೆಗೊಂಡುವು. ನೀಗ್ರೋಗಳು ಕೂಡ ಅವಕಾಶಗಳನ್ನು ಕಲ್ಪಿಸಿದಲ್ಲಿ ಇತರ ಮಾನವರಂತೆ ಬಾಳಬಲ್ಲರು, ಸಭ್ಯ ಸುಸಂಸ್ಕೃತರಾಗಬಲ್ಲರು ಎಂಬುದನ್ನು ವಿಲ್ಬರ್ ತೋರಿಸಿಕೊಟ್ಟ.

ತನ್ನ ಚಟುವಟಿಕೆಯ ದಿನಗಳು ಮುಗಿಯಿತೆಂದು ವಿಲ್ಬರ್‌ಗೆ ಮನವರಿಕೆಯಾಯಿತು. ತನ್ನ ಶಾರೀರಿಕ ದೌರ್ಬಲ್ಯದ ಜತೆಗೆ ಬಹುಕಾಲದಿಂದ ಅಂಟಿಕೊಂಡು ಬಂದಿದ್ದ ಶ್ವಾಸಕೋಶಗಳ ಉರಿಯೂತದ ಕಾಯಿಲೆ ಉಲ್ಬಣ

ಗೊಳ್ಳುತ್ತಾ ಬಂದು ಆತ ಇನ್ನಷ್ಟು ಶಕ್ತಿ ಹೀನನಾದ. ೧೮೨೫ರಲ್ಲಿ ಅನವರತ ಹೋರಾಟದಿಂದಲೂ ವಯಸ್ಸಿನಿಂದಲೂ ಹಣ್ಣಾದ ಮುದುಕ ವಿಲ್ಬರ್ ಪಾರ್ಲಿಮೆಂಟಿನಿಂದ ತನ್ನ ಸ್ಥಾನ ತೆರವು ಮಾಡಿದ. ಆದರೆ ಗುಲಾಮರ ಮುಕ್ತಿಗಾಗಿ ಹೋರಾಡುತ್ತಿದ್ದವರಿಗೆ ತನ್ನ ಅಮೂಲ್ಯ ಸಲಹೆಯನ್ನು, ಸಹಕಾರವನ್ನು ಮತ್ತು ಧೈರ್ಯವನ್ನು ನೀಡುತ್ತಲೇ ಇದ್ದ. ಪಾರ್ಲಿಮೆಂಟಿನ 'ಹೌಸ್ ಆಫ್ ಕಾಮನ್ಸ್'ನಿಂದ ಹೊರಬಂದ ಐದು ವರ್ಷದ ಮೇಲೆ ಅವನೊಂದು ತಪ್ಪು ಹೆಜ್ಜೆ ಇಟ್ಟುಬಿಟ್ಟ. ಒಂದು ಅಯೋಗ್ಯ ಕಂಪೆನಿಯಲ್ಲಿ ಹಣ ತೊಡಗಿಸಿಬಿಟ್ಟ. ಅದರಿಂದಾಗಿ ತನ್ನೆಲ್ಲ ಸಂಪಾದನೆಯನ್ನು ಕಳೆದುಕೊಂಡು ಬರಿಗೈಯವನಾಗಿ ಬಿಟ್ಟ. ಅವನ ಸ್ವಂತ ಮನೆಯೂ ಈ ನಷ್ಟದಲ್ಲಿ ಕೈಬಿಟ್ಟು ಹೋಯಿತು. ಆಗ, ಒಮ್ಮೆ ಒಬ್ಬ ಮಗನ ಜತೆ, ಮತ್ತೊಮ್ಮೆ ಇನ್ನೊಬ್ಬನ ಜತೆ, ತನ್ನ ಕೊನೆಯ ವರ್ಷಗಳನ್ನು ಕಳೆಯ ತೊಡಗಿದ. ಈ ರೀತಿ ಧನವಿಹೀನನಾದರೂ ವಿಲ್ಬರ್ ನಿರುದ್ವಿಗ್ನನಾಗಿದ್ದ, ನಿರಾಕುಲನಾಗಿದ್ದ.

"ನಿರ್ಧನನಾದರೂ, ಧನವಂತನಂತೆ ಆನಂದದಿಂದ, ಅಭಿಮಾನದಿಂದ, ನಿಶ್ಚಿಂತೆಯಿಂದ, ಬಾಳಬಲ್ಲೆನೆಂದು ಜಗತ್ತಿಗೆ ಸಾರುವುದೇ ಈ ನನ್ನ ಧೀರ್ಘ ಜೀವನದ ಉದ್ದೇಶವಿರಬಹುದೇ?" ವಿಲ್ಬರ್ ತನಗೆ ತಾನೇ ಕೇಳಿಕೊಂಡ ಪ್ರಶ್ನೆ. ಕೊನೆಗೊಂದು ದಿನ ಹಿಂದೆಂದೂ ಇರದ ಸಂತಸ ಅವನಿಗಾಯಿತು. ಅದು ಕ್ರಿ.ಶ. ೧೮೩೩. ಆ ದಿನ ಪಾರ್ಲಿಮೆಂಟ್ ಒಂದು ಅತ್ಯಂತ ಮಹತ್ವಪೂರ್ಣ ಕಾನೂನು ಜಾರಿಗೊಳಿಸಿತು. ಅಂದಿನಿಂದ ಬ್ರಿಟಿಷ್ ಧ್ವಜದಡಿಯ ಎಲ್ಲ ಪ್ರದೇಶಗಳಲ್ಲಿನ ಎಲ್ಲ ವಸಾಹತುಗಳಲ್ಲಿನ ಗುಲಾಮರು ಸ್ವತಂತ್ರರಾದರು, ಜೀತಮುಕ್ತರಾದರು, ಗುಲಾಮರ ಈ ಸ್ವಾತಂತ್ರ್ಯ ಘೋಷಣೆಯ ಸುದ್ದಿ ಬಂದಾಗ, ವಿಲ್ಬರ್ ಮರಣಾಸನ್ನನಾಗಿದ್ದ. ಆದರೆ ಆ ಸುದ್ದಿ ಕೇಳಿ, ತಿಳಿದು, ಸಂತಸಪಡುವ ಸ್ಥಿತಿಯಲ್ಲಿ ಇನ್ನೂ ಇದ್ದನಾತ. ತನ್ನ ಜೀವಮಾನದ ತಪಸ್ಸಿನ ಫಲ ಕೊನೆಗೂ ದೊರಕಿದುದಕ್ಕೆ ಭಗವಂತನಿಗೆ ಧನ್ಯವಾದವನ್ನೂ ಅರ್ಪಿಸಿದ. ಆ ಧನ್ಯತೆಯ ಆನಂದ ಹೃದಯ ತುಂಬಿರುವಾಗಲೇ ಆತನ ದಿವ್ಯಾತ್ಮ ಚಿರಶಾಂತಿಯನ್ನೈದಿತು. ಜುಲೈ ೩೦ ರಂದು ವೆಸ್ಟ್‌ಮಿನಿಸ್ಟರ್ ಅಬೇಯಲ್ಲಿ ಅವನ ಪಾರ್ಥಿವ ಶರೀರದ ಅಂತ್ಯಸಂಸ್ಕಾರ ನಡೆಯಿತು. ಶವಯಾತ್ರೆಯ ಸಮಯ ನಗರದ ಎಲ್ಲ ಬೀದಿಗಳೂ ಜನಸ್ತೋಮದಿಂದ ತುಂಬಿದ್ದುವು. ಎಲ್ಲೆಲ್ಲೂ ಅಶ್ರುಪೂರಿತ ವದನಗಳು!

ವಿಲ್ಬರ್‌ನ ಅವಿಶ್ರಾಂತ ಜೀವನ
ಸಾರ್ಥಕವಾಯಿತು!
ಅವನು ಮಾಡಿದ ಪ್ರತಿಜ್ಞೆ ಪೂರೈಸಿತು!
"ಕೊನೆಯವರೆಗೂ ಹೋರಾಡುವೆನು;
ವಿಜಯುಲಭಿಸದೆ ವಿರಮಿಸೆನು!"

ಈ ರೀತಿ ಆಯುಷ್ಯವನ್ನೆಲ್ಲ ಒಂದು ಮಹಾವ್ರತದಂತೆ ಆಚರಿಸಿದ ಮಹಾಯೋಧ ವಿಲಿಯಂ ವಿಲ್ಬರ್ ಫೋರ್ಸ್. ಆತನ ಜೀವನ ಇಂದಿಗೂ ಅನ್ಯಾಯದ ವಿರುದ್ಧ ಹೋರಾಡಲು ದಾರಿ ದೀಪವಾಗಬಲ್ಲುದು.

ಪುಸ್ತಕ ಪರಿಚಯ

ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಒಂದು ಚಿಂತನೆ: ಲೇಖಕರು ಮತ್ತು ಪ್ರಕಾಶಕರು: ಟಿ. ಆರ್. ನಾಗಪ್ಪ, ೨೯೦೪, ಚಾಮುಂಡಿಪುರಂ, ಮೈಸೂರು–೫೭೦ ೦೦೪. ಪುಟಗಳು: xii+೧೦೦. ಬೆಲೆ ೨೫–೦೦ ರೂ.

ಸುಮಾರು ಮೂರು ದಶಕಗಳಿಗೂ ಮಿಗಿಲಾಗಿ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಶ್ರೀ ಟಿ. ಆರ್. ನಾಗಪ್ಪ ಅವರು 'ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ ಒಂದು ಚಿಂತನೆ'ಯ ಲೇಖಕರು. ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣದ ಹುಟ್ಟು ಮತ್ತು ಬೆಳವಣಿಗೆ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ನಡೆದು ಬಂದ ದಾರಿ, ಸಮಿತಿ ಕಾರ್ಯಚಟುವಟಿಕೆಯ ಅಂದಿನ ಮತ್ತು ಇಂದಿನ ಸಂಕ್ಷಿಪ್ತ ಪರಿಚಯ, ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ರೂಪರೇಖೆ. ಸಾಮೂಹಿಕ ಸಾಕ್ಷರತಾ ಕಾರ್ಯಕ್ರಮ, ಸಂಪೂರ್ಣ ಸಾಕ್ಷರತಾ ಆಂದೋಲನ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಸಾಕ್ಷರತಾ ಆಂದೋಲನದ ಸಂಕ್ಷಿಪ್ತ ಪರಿಚಯವನ್ನು ಈ ಕೃತಿಯು ಒಳಗೊಂಡಿದೆ. ಆಸಕ್ತರನ್ನು ಮರು ಚಿಂತನೆಗೆ ಒಳಗು ಮಾಡುವ ಡಾ|| ದೇಜಗೌ ಅವರ ಮೌಲಿಕ ಮುನ್ನುಡಿಯನ್ನು ಹೊಂದಿರುವುದು ಈ ಕೃತಿಯ ಗುಣಾತ್ಮಕ ಅಂಶವಾಗಿದೆ.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯ ಚಟುವಟಿಕೆಗೆ ಈ ಕೃತಿಯಲ್ಲಿ ಹೆಚ್ಚಿನ ಸ್ಥಾನ ಮೀಸಲಾಗಿದೆ. ೧೯೭೮ರ ರಿಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮ ಜಾರಿಗೆ ಬರುವವರೆಗೆ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಚರಿತ್ರೆಯೇ ರಾಜ್ಯದ ವಯಸ್ಕರ ಶಿಕ್ಷಣ ಚರಿತ್ರೆಯೂ ಆಗಿರುವುದರಿಂದ ಈ ಕೃತಿಯಲ್ಲಿ ಸಮಿತಿಯ ಕಾರ್ಯಚಟುವಟಿಕೆಯು ಸಿಂಹಪಾಲು ಪಡೆದುಕೊಂಡಿರುವುದು ಸೂಕ್ತವೂ ಅನಿವಾರ್ಯವೂ ಆಗಿದೆ.

ಪತ್ರಿಕಾ ವರದಿಗಳು, ಪತ್ರಿಕೆಗಳ ವಾಚಕರ ವಾಣಿ ವಿಭಾಗದಲ್ಲಿ ಚರ್ಚಿಸಬಹುದಾದ ವಿಷಯಗಳು, ಕಛೇರಿ ಕಡತದಲ್ಲಿ ವ್ಯವಹಾರಕ್ಕೆ ಸೀಮಿತವಾದ ಅಂಶಗಳು, ಆದೇಶ-ಸುತ್ತೋಲೆಗಳು, ಮೌಲ್ಯಮಾಪನ ವರದಿಗಳ ಉದ್ಧೃತಿಗಳು, ವಾರ್ಷಿಕ ವರದಿಗಳಿಂದ ಆಯ್ದ ಅಂಶಗಳು ಕೃತಿಯ ವಸ್ತುವಾಗಿದೆ. ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿರುವ ಲೇಖಕರ ಸಾಹಸ ಮೆಚ್ಚುವಂತಹುದು. ಆದರೆ ಇವುಗಳಲ್ಲಿನ ಬಹುಪಾಲು ಚರ್ಚಿತ ಅಂಶಗಳು ಪ್ರಸ್ತುತ ಚಿಂತನೆಗೆ ಒಳಗು ಮಾಡುತ್ತದೆಯೆ ಎಂಬುದು ಚಿಂತಿಸುವ ವಿಷಯ

ವಾಗಿದೆ. ನಿದರ್ಶನಕ್ಕಾಗಿ ಈ ಕೆಲವು ಅಂಶಗಳನ್ನು ನೋಡಬಹುದಾಗಿದೆ.

—"ಬಾ ತಾಯಿ ಕಲಿಯೋಣ" ಪಠ್ಯ ಪುಸ್ತಕ ಸುಧಾರಣೆಗೆ ನೀಡಿದ ಸಲಹೆಗಳನ್ನು ಲೆಕ್ಕಿಸಲಿಲ್ಲ; ಪಠ್ಯ ಪುಸ್ತಕದಲ್ಲಿ ನ್ಯೂನತೆಗಳು ಮುಂದುವರಿದು ಅಚ್ಚಾಗಿವೆ (ಪುಟ-೪೫).

೧೯೭೮ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮದ ಅನ್ವಯ 'ಬಾ ತಾಯಿ ಕಲಿಯೋಣ' ಪಠ್ಯ ಪುಸ್ತಕವನ್ನು ಸಿದ್ಧಪಡಿಸಿ ಬಳಸಿಕೊಳ್ಳಲಾಯಿತು. ೧೯೮೮ರಿಂದ ಅನುಷ್ಠಾನದಲ್ಲಿರುವ ಸಾಕ್ಷರತಾ ಆಂದೋಲನದ ಅನ್ವಯ ಪ್ರಸ್ತುತ ಕಾರ್ಯಕ್ರಮ ನಡೆಯುತ್ತಿದ್ದು, ರಾಜ್ಯದ ಪ್ರತಿ ಜಿಲ್ಲೆಗಳಿಗೂ ಪ್ರತ್ಯೇಕವಾದ ಪಠ್ಯ ಪುಸ್ತಕಗಳು ರಚನೆಯಾಗಿ ಬಳಕೆಯಾಗುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ 'ಬಾ ತಾಯಿ ಕಲಿಯೋಣ' ಪಠ್ಯ ಪುಸ್ತಕದ ಪ್ರಸ್ತಾಪ ಪ್ರಸ್ತುತವೆನಿಸುವುದಿಲ್ಲ.

ಅಂತೆಯೇ ಕೃತಿಯಲ್ಲಿ ಸಲಹೆಗಿಂತ ವ್ಯಂಗ್ಯ ವಿಡಂಬನೆಗಳಿದ್ದು, ಈ ಕೆಲವನ್ನು ನೋಡಬಹುದಾಗಿದೆ.

—ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಯ ಒಂದು ಅಂಗವಾದ ಗ್ರಾಮ ಕಲೆಯ ಬಗ್ಗೆ ಲೇಖಕರು ಹೀಗೆ ಹೇಳುತ್ತಾರೆ. "ಗ್ರಾಮಕಲೆಗೆ ಸಂಬಂಧಪಟ್ಟ ಸಾಮಾನುಗಳನ್ನು ಸಮಿತಿ ಸಂಗ್ರಹಿಸಿ ಕೇಂದ್ರ ಕಛೇರಿಯಲ್ಲಿ ಅವುಗಳ ಪ್ರದರ್ಶನವನ್ನು ಏರ್ಪಡಿಸಿತ್ತು. ಈಗ ಅವು ಕಾಣುತ್ತಿಲ್ಲ. ಕಾರಣ, ಅವು ವಾನ ಪ್ರಸ್ಥಾಶ್ರಮಕ್ಕೆ ತೆರಳಿರಬೇಕು" (ಪುಟ. ೩೯)

—ಸಮಿತಿಯ ವಿದ್ಯಾಪೀಠಗಳ ಬಗ್ಗೆ ಹೇಳುತ್ತಾ "ಮಂಡ್ಯ ಜಿಲ್ಲೆಯಲ್ಲಿ ಎರಡು ವಿದ್ಯಾಪೀಠಗಳಿವೆ. ಕಾರಣ, ಮಂಡ್ಯ ಜಿಲ್ಲೆಯ ಮುಖಂಡರ ಪ್ರಭಾವ (ಪುಟ. ೩೭)

—ರಾಜ್ಯದಲ್ಲಿ ನಡೆಯುತ್ತಿರುವ ಸಾಕ್ಷರತಾ ಆಂದೋಲನದ ಸ್ವಯಂಸೇವಕರ ತರಬೇತಿ ವ್ಯವಸ್ಥೆಯ ಬಗ್ಗೆ ಈ ರೀತಿ ಹೇಳುತ್ತಾರೆ. "ಸ್ವಯಂಸೇವಕರ ತರಬೇತಿ ಅವಧಿ ಎರಡು ದಿನಗಳು ಅದು ಸಾಲದು. ಈ ಕ್ಷೇತ್ರದಲ್ಲಿ ಸಾಕಷ್ಟು ಸೇವೆಸಲ್ಲಿಸಿ ಅಪಾರ ಅನುಭವ ಪಡೆದ ಕಾರ್ಯಕರ್ತರ ಸೇವೆಯನ್ನು ಬಳಸಿಕೊಳ್ಳಲಿಲ್ಲ. ರಾಜಕೀಯ ಮತ್ತು ಗುಂಪುಗಾರಿಕೆ ಮನೆಮಾಡಿಕೊಂಡಿದೆ ಎಂದು ಹೇಳಿದಲ್ಲಿ ತಪ್ಪಾಗಲಾರದು"(ಪುಟ.೬೨)

—ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ಷರ ಆರೋಗ್ಯ ಕಾರ್ಯಕ್ರಮ ಕುರಿತು —"ಪ್ರಾರಂಭದಲ್ಲಿದ್ದ ಸಂಯೋಜನಾಧಿಕಾರಿಗಳು ರಾಜಿನಾಮೆ ಇತ್ತರು. ಅವರ ಜಾಗದಲ್ಲಿ ವಿದ್ಯಾಭ್ಯಾಸ ಇಲಾಖೆಯಲ್ಲಿ ಸೇವೆ ಸಲ್ಲಿಸಿ ವಿಶ್ರಾಂತಿ ಅನುಭವಿಸುತ್ತಿದ್ದವರು ಕಾರ್ಯದರ್ಶಿಗಳಾಗಿ ನೇಮಕವಾದರು. ಅವರು ನಿರ್ಲಿಪ್ತರಾಗಿ 'ಹೌದಪ್ಪನ ಚಾವಡಿಯಲ್ಲಿ ಹೌದು' ಎಂದು ಹೇಳಿ ಕಾಲಯಾಪನೆ ಹಾಕಿದರು. ಕಡೆಗೆ ಅವರೂ ವಿಧಿಯಿಲ್ಲದೆ ರಾಜಿನಾಮೆ ಇತ್ತರು" (ಪುಟ. ೮೯) ಇಂತಹ ಹಲವಾರು ವ್ಯಕ್ತಿಗತ ನಿದರ್ಶನಗಳನ್ನು ಕೃತಿಯಲ್ಲಿ ಕಾಣಬಹುದಾಗಿದೆ.

ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಕೆಲಸ ಮಾಡಿರುವ, ಅದರಲ್ಲಿಯೂ ವಯಸ್ಕರ ಸಾಹಿತ್ಯ ರಚನೆ ಮತ್ತು ಸಂಶೋಧನೆಯಂತಹ ವಿಶಿಷ್ಟ ಕ್ಷೇತ್ರದಲ್ಲಿ ಲೇಖಕರು ಅನುಭವ ಪಡೆದವರಾಗಿದ್ದಾರೆ. ರಾಷ್ಟ್ರ ಮತ್ತು ಅಂತರಾಷ್ಟ್ರಮಟ್ಟದ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಕಾರ್ಯಕ್ರಮದ ಏಳು ಬೀಳುಗಳನ್ನು ಮನವರಿಕೆ ಮಾಡಿಕೊಂಡಿರುವ ಅನುಭವಶೀಲರು. ದೇಶ ವಿದೇಶಗಳನ್ನು ಸುತ್ತಿ ಅಲ್ಲಿನ ಕಾರ್ಯಸ್ವರೂಪಗಳನ್ನು ಪರಿಚಯಿಸಿಕೊಂಡವರು. ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸುಮಾರು ೪೦ ಕೃತಿಗಳ ಕರ್ತೃ. ಈ ಎಲ್ಲ ವೈವಿಧ್ಯಮಯ ಅನುಭವಗಳ ಹಿನ್ನಲೆಯಲ್ಲಿ ಶ್ರೀಯುತ ಟಿ. ಆರ್. ನಾಗಪ್ಪನವರು ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಮೌಲಿಕ ಕೃತಿಯೊಂದನ್ನು ನೀಡುವುದು ಅಪೇಕ್ಷಣೀಯ.

ಚಂದ್ರಶೇಖರಾರಾಧ್ಯ



ಪರರನ್ನು ಮುಸುಕಿರುವ ಕತ್ತಲೆಯನ್ನು ಪರಿಹರಿಸಲು ಹೋಗುವ ಮುನ್ನ, ನಿನ್ನ ಕಾಲಿನ ಬುಡಕ್ಕಿರುವ ಕತ್ತಲೆಯನ್ನು ಪರಿಹರಿಸಲು ದೀಪ ನಿನ್ನ ಬಳಿಯಿದೆಯೋ ಇಲ್ಲವೋ ನೋಡಿಕೊ. ಇಲ್ಲದಿದ್ದರೆ ನೀನೂ ಆ ಕತ್ತಲೆಯಲ್ಲಿ ಸಿಕ್ಕಿ ಪೇಚಾಡಬೇಕಾದೀತು.

—ಮಹಾವೀರ

ತಾಳ್ಮೆಯಿಲ್ಲದವನು ಜಗತ್ತಿನಲ್ಲಿ ಬಹುಕಾಲ ತಾಳ್ಮೆಯಿಂದ ಬದುಕಲಾರ. ಬಿಸಿನೀರನ್ನು ತಾಳ್ಮೆಯಿಂದ ತಣಿಸಿಯೇ ಕುಡಿಯಬೇಕೇ ವಿನಃ ತಣ್ಣೀರಿನಂತೆ ಗಳಗಳ ಕುಡಿಯುವದಲ್ಲ.

—ರಮಣ ಮಹರ್ಷಿ

ಓದುಗರ ಅನಿಸಿಕೆಗಳು

—'ಪುಸ್ತಕ ಪ್ರಪಂಚ' ಸಮಿತಿಯ ಒಂದು ಪ್ರತಿಷ್ಠಿತ ಪ್ರಕಟಣೆ. ಓದುಗರ ಅನಿಸಿಕೆ ವಿಭಾಗವನ್ನು ತೆರೆದುದಕ್ಕೆ ಪ್ರಥಮ ವಾಗಿ ನಿಮಗೆ ಅಭಿನಂದನೆಗಳು.

—'ರೀಡರ್ಸ್ ಡೈಜೆಸ್ಟ್' ಮಾದರಿಯಲ್ಲಿ 'ಪುಸ್ತಕ ಪ್ರಪಂಚ'ವನ್ನು ಸಂಪಾದಿಸು ವುದು ಇದರ ಆಯಕಟ್ಟು ಎಂದು ತಾವು ಹೇಳಿದ್ದೀರಿ. ಈ ಬಗ್ಗೆ ಈ ನನ್ನ ಕೆಲವು ಅನಿಸಿಕೆಗಳನ್ನು ತಿಳಿಸ ಬಯಸು ತ್ತೇನೆ.

೧) 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರತಿ ಮಾಹೆ ಇರುವ ಕೆಲವು ಸ್ಥಿರ ಶೀರ್ಷಿಕೆ ಗಳಡಿಯಲ್ಲಿರುವ ಬರಹಗಳು ಪುಸ್ತಕ ಪ್ರಪಂಚದಲ್ಲಿಲ್ಲ.

ಉದಾಹರಣೆ :

ಅ) ನಿಮ್ಮ ಶಬ್ದ ಭಂಡಾರವನ್ನು ಸಂವೃದ್ಧಿ ಗೊಳಿಸುತ್ತದೆ.
ಆ) ಇದು ಜೀವನದ ರೀತಿ
ಇ) ವೈಯಕ್ತಿಕ ಒಳನೋಟ
ಈ) ಹಾಸ್ಯ–ಅತ್ಯುತ್ತಮ ಔಷಧಿ

ಇಂತಹ ಶೀರ್ಷಿಕೆಗಳಡಿಯಲ್ಲಿ ಬರಹಗಳನ್ನು ಪ್ರಕಟಿಸುವುದು ಸೂಕ್ತ ಎನ್ನಿಸುತ್ತದೆ.

೨) ಮೈಸೂರುನಗರದ ಮತ್ತು ರಾಜ್ಯದ ಖ್ಯಾತ ಕಲಾವಿದರ ಚಿತ್ರಗಳಲ್ಲಿ ಒಂದನ್ನು ರಕ್ಷಾಪುಟದ ಕೊನೆಯ ಪುಟದಲ್ಲಿ ಸಂಕ್ಷಿಪ್ತ ವಿವರ ಸಹಿತ ಮುದ್ರಿಸಬಹುದು.

೩) ಹಾಸ್ಯಭರಿತ ಚುಟುಕಗಳನ್ನು ಅಲ್ಲಲ್ಲಿ ನೀಡಬಹುದು.

೪) ಜಾಹಿರಾತುಗಳು ಬೇಡ ಎಂಬ ಮಡಿ ವಂತಿಕೆಯನ್ನು ಬಿಟ್ಟು ಸಾರ್ವಜನಿಕ, ಖಾಸಗಿ, ಸರ್ಕಾರಿ ಉದ್ದಿಮೆಗಳ ಜಾಹೀ ರಾತುಗಳನ್ನು ಪಡೆದು ಪ್ರಕಟಿಸುವುದರಿಂದ 'ಪುಸ್ತಕ ಪ್ರಪಂಚ' ಸ್ವಾವಲಂಬಿಯಾಗಲು ಸಾಧ್ಯ.

೫) 'ಪುಸ್ತಕ ಪ್ರಪಂಚ'ದ ಆಕಾರ ಮತ್ತು ವಿನ್ಯಾಸ ಎಲ್ಲ ಸಂಚಿಕೆಯಲ್ಲಿಯೂ ಒಂದೇ ಆಗಿರಬೇಕು.

ಟಿ. ವಿ. ಶ್ರೀನಿವಾಸರಾವ್
ಅಡ್ವೊಕೇಟ್, ಮೈಸೂರು

* * *

—ಲೇಖನಗಳು ನಮ್ಮ ದೇಶ–ಕಾಲಕ್ಕೆ ಹೊಂದುವಂತಿರಲಿ. 'ರೀಡರ್ಸ್‌ಡೈಜೆಸ್ಟ್' ಆದರ್ಶವಾಗಿರಲಿ, ಆದರೆ ಅದೇ ಅಂತ್ಯ ವಾಗಬಾರದು. ಉದಾಹರಣೆಗೆ 'ಬದು ಕನ್ನು ಎದುರಿಸಲು ಮಕ್ಕಳಿಗೆ ನೆರ ವಾಗುವ ಬಗೆ' (೯೫ರ ಮಾರ್ಚಿ ಸಂಚಿಕೆ) ಲೀಲಾ ಮಣ್ಣಾಲರ ಭಾಷೆ. ಭಾಷಾಂತರ ಗಳು ಚೆನ್ನಾಗಿದೆಯಾದರೂ ನಮ್ಮ

ದೇಶ–ಕಾಲಕ್ಕೆ ಡೈಜೆಸ್ಟ್ ಆಗಲಾರದ ಸಾಮಾಜಿಕ ಸಮಸ್ಯೆಯನ್ನು ಪರಿಹಾರವನ್ನೂ ಸೂಚಿಸುವುದರಿಂದೇನು ಲಾಭ?

ಸಂಚಿಕೆ ಇಡಿಯಾಗಿ ಚೆನ್ನಾಗಿದೆ. ಛಾಯಾ ಚಿತ್ರಕ್ಕೂ ಪತ್ರಿಕೆಯಲ್ಲಿ ಅವಕಾಶವಾಗುವುದಾದರೆ ಇನ್ನೂ ಚೆನ್ನ.

ಎ. ಪಿ. ಚಂದ್ರಶೇಖರ

ಕಳಲವಾಡಿ, ಮೈಸೂರು

*   *   *

೧೯೯೫ರ ಮಾರ್ಚ್ ಪುಸ್ತಕ ಪ್ರಪಂಚದಲ್ಲಿ 'ಬೇಕು ಕೃಷಿರಂಗಕ್ಕೆ ಕಾಯಕಲ್ಪ' ಲೇಖನ ಓದಿದೆ. ತುಂಬಾ ಹಿಡಿಸಿತು. ವಿಷಯದ ವಿಶ್ಲೇಷಣೆಯನ್ನು ಪರಿಣಾಮಕಾರಿಯಾಗಿ ಮಾಡಿದ್ದಾರೆ. ಈ ತಮ್ಮ ಲೇಖನ ಮತ್ತು ಈ ಬಗೆಯಾಗಿ ಮುಂದೆ ಬರೆಯುವ ಲೇಖನಗಳನ್ನು 'ರೈತನ ಪೇಟೆ' ಪತ್ರಿಕೆಗೆ ಕಳುಹಿಸಿಕೊಡಿ. ಆ ಪತ್ರಿಕೆ ಕರ್ನಾಟಕ ಸರ್ಕಾರ ಕೃಷಿ ಮಾರಾಟ ಮಂಡಲಿ, ವಿದ್ಯಾನಗರ ಹುಬ್ಬಳ್ಳಿಯಿಂದ ಹೊರಡುತ್ತದೆ.

—ತಮ್ಮಂಥವರು ಬರೆದ ಲೇಖನದಿಂದ ಸಂಬಂಧಿತ ಜನ ವರ್ಗಕ್ಕೆ ಪ್ರಯೋಜನವಾದೀತು.

ಮಾಧವರಾವ್ ಮುಧೋಳ್

ಮೈಸೂರು

(ಶ್ರೀ ಮಾಧವರಾವ್ ಮುಧೋಳ್ ಅವರು; ಲೇಖಕ ಶ್ರೀ ಎ. ಪಿ. ಚಂದ್ರಶೇಖರ ಅವರಿಗೆ ಬರೆದ ಪತ್ರ)

ತಿದ್ದುಪಡಿ

೯೫ ನೇ ಜನವರಿ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟವಾದ ಡಾ. ಸಿ.ಪಿ. ಸಿದ್ಧಾಶ್ರಮರವರ 'ಶ್ರೇಷ್ಠ ವಿದ್ವಾಂಸ, ಅಪರೂಪದ ಅನುಭಾವಿ' ಲೇಖನದಲ್ಲಿ ಈ ಕೆಳಕಂಡ ಸಾಲುಗಳು ಬಿಟ್ಟುಹೋಗಿದ್ದು, ಅವುಗಳನ್ನು ಕೆಳಕಂಡಂತೆ ಸೇರಿಸಿಕೊಂಡು ಓದಿಕೊಳ್ಳಲು ಕೋರಿಕೆ. —ಸಂ.

೧) ಪುಟ ೩೧ ರ ೧ ನೇ ಕಾಲಂನ ೯ ನೇ ಸಾಲಿನ 'ಬೇಕಾಗಿ ಬಂತು' ಅಲ್ಲಿಂದ 'ನಂತರ ಕುತೂಹಲದಿಂದ' ಎನ್ನುವವರೆಗೆ ಸೇರಿಸಿಕೊಳ್ಳಬೇಕಾದ ವಿಷಯ.

"ಬೇಕಾಗಿ ಬಂದಾಗ ವೀರಶೈವ ಸಾಹಿತ್ಯದ ಹಲವು ಕೃತಿಗಳೊಂದಿಗೆ ತಿಪ್ಪೇರುದ್ರಸ್ವಾಮಿಯವರ 'ಶರಣರ ಅನುಭಾವ ಸಾಹಿತ್ಯ' ಕೃತಿಯನ್ನು ಅಧ್ಯಯನ ಮಾಡಬೇಕಾಗಿ ಬಂತು".

೨) ಪುಟ ೩೧ ರ '೨ ನೇ ಕಾಲಂನ ೧೭ ನೇ ಸಾಲಿನ "ಕೂರಲು ತಿಳಿಸಿ" ಎಂಬಲ್ಲಿಂದ ಮುಂದುವರಿದಂತೆ

"ಬಂದ ಕೆಲಸದ ಬಗ್ಗೆ ವಿಚಾರಿಸಿದರು. ನಾನು ಅವರಿಗೆ ನನ್ನ ಸಂಕ್ಷಿಪ್ತ ಪರಿಚಯ ತಿಳಿಸಿ" ಎಂದು ಸೇರಿಸಿಕೊಳ್ಳುವುದು.

೩) ಪುಟ ೩೩ ರ ೧ ನೇ ಕಾಲಂ ನ ೧೮ ನೇ ಸಾಲಿನಲ್ಲಿ ಪ್ರಾಜೆಕ್ಟನ' ಎಂಬಲ್ಲಿನಿಂದ "ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಗಾಂಧೀಭವನದ ನಿರ್ದೇಶಕರಾಗಿ, ಎಂದು ಸೇರಿಸಿಕೊಳ್ಳುವುದು.

೪) ಪುಟ ೩೩ ರ ೨ ನೇ ಕಾಲಂನ ೪ನೇ ಸಾಲಿನ 'ಕನ್ನಡ' ಎಂಬಲ್ಲಿಂದ "ವಿಭಾಗದ ಮುಖ್ಯಸ್ಥರಾಗಿದ್ದಾಗ, ಕನ್ನಡ" ಎಂದು ಸೇರಿಸಿಕೊಳ್ಳುವುದು.

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಡಾ|| ದೇ. ಜವರೇಗೌಡ, ವಿಶ್ರಾಂತ–ಉಪಕುಲಪತಿಗಳು
'ಕಲಾ ನಿಲಯ' ಕಾಳಿದಾಸ ರಸ್ತೆ
ಜಯಲಕ್ಷ್ಮಿಪುರಂ, ಮೈಸೂರು–೫೭೦ ೦೧೨

೨. ಡಾ|| ಎಚ್. ಬಿ. ದೇವರಾಜಸರ್ಕಾರ್
ದೇವಶ್ರೀ, ೧೪ನೇ ಮುಖ್ಯರಸ್ತೆ, ಸರಸ್ವತಿಪುರಂ
ಮೈಸೂರು–೫೭೦ ೦೦೬

೩. ಜಿ. ಟಿ. ನಾರಾಯಣರಾವ್
ನಂ. ೮ "ಅತ್ರಿ" ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೪. ಸಿ. ನಾಗಣ್ಣ
ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಮಹಾರಾಜ ಕಾಲೇಜು, ಮೈಸೂರು.

೫. ಡಾ|| ಎನ್. ಎಸ್. ಲೀಲಾ
೧೦೫, ವೆಸ್ಟ್‌ಪಾರ್ಕ್ ಅಪಾರ್ಟ್‌ಮೆಂಟ್
೧೪–ಎ, ಅಡ್ಡಬೀದಿ, ಮಲ್ಲೇಶ್ವರಂ
ಬೆಂಗಳೂರು–೫೬೦ ೦೦೩

೬. ಪಿ. ಶಿವಕುಮಾರಿ
ಹಿಂದಿ ಉಪನ್ಯಾಸಕಿ
ವಿಜಯಾ ಕಾಲೇಜು, ಮುಲ್ಕಿ, ದಕ್ಷಿಣ ಕನ್ನಡ

೭. ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಸಾವಯವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ, ಮೈಸೂರು–೫೭೦ ೦೦೮

೮. ಡಾ|| ಎಂ. ಎಸ್. ಲಕ್ಷ್ಮೀನಾರಾಯಣ ಆರೋರಾ
ರೀಡರ್, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೮

ಸರ್ವಶ್ರೀಗಳಾದ—

೯. ಎಸ್. ಶ್ರೀಧರಮೂರ್ತಿ
ಭಾಷಾಂತರಕಾರ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ
ಮೈಸೂರು.

೧೦. ಮಾಧವರಾವ್ ಮುಧೋಳ್
"ರಾಮಶ್ರೀ" ನಂ. ೧೧೬೭–ಬಿ೧, ಎಂ.ಐ.ಜಿ.
೨ನೇ ಹಂತ, ಶ್ರೀರಾಮಪುರ
ಮೈಸೂರು–೫೭೦ ೦೨೩

೧೧. ಸರಸ್ವತಿ ಬಡೆಕ್ಕಿಲ
ನಂ. ಎಂ–೪೭, ૩ನೇ ಹಂತ, ಕುವೆಂಪುನಗರ
ಮೈಸೂರು–೫೭೦ ೦೨೩

೧೨. ಬಿ. ಜಿ. ಕನಕೇಶಮೂರ್ತಿ
ಸಂಶೋಧನ ಸಹಯೋಜಕ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು.

೧೩. ಚಂದ್ರಶೇಖರಾರಾಧ್ಯ, ಸಂಪಾದಕ
ಕ.ರಾ.ವ.ಶಿ.ಸ, ಮೈಸೂರು–೫೭೦ ೦೦೬

Reg. No. KRNN.29 / WPP 6

LICENCE No. 21
LICENCED TO POST WITH PAYMENT

ಕವಿ ಮಹರ್ಷಿ ಅಂದು ಹಾಡಿದ ರಾಮಾಯಣ ಇಂದು ಮತ್ತೊಮ್ಮೆ ನಮ್ಮಲ್ಲಿ ಮೂಡಿದ ಹೊರತು ಸಾರ್ಥಕವಾಗುವುದಿಲ್ಲ. ಏಕೆಂದರೆ ಕೃತಿಯ ರಸಾಸ್ವಾದನೆಯೂ ಕೃತಿ ರಚನೆಯಂತೆಯೇ ಒಂದು ಸೃಷ್ಟಿ ಕಾರ್ಯ. ಓದುವ ಅಥವಾ ಆಲಿಸುವ ನಮ್ಮ ಒಬ್ಬೊಬ್ಬರ ಹೃದಯದಲ್ಲಿಯೂ ರಾಮಾಯಣದ ಪುನಃಸೃಷ್ಟಿಯಾಗಬೇಕು. ಹಾಗೆ ಒಂದೊಂದು ಚೇತನದಲ್ಲಿಯೂ ರಾಮಾಯಣಾವತಾರವಾಗುವುದರಲ್ಲಿಯೇ ವಾಲ್ಮೀಕಿಯ ಕೃತಿ ಸಾರ್ಥಕತೆ ಪಡೆಯುತ್ತದೆ. ನಮ್ಮ ಬಾಳುವೆಗೂ ಪುರುಷಾರ್ಥ ಸಿದ್ಧಿಯಾಗುತ್ತದೆ.

—ಕೃತಿಯನ್ನು ಕುರಿತು ಶ್ರೀ ಕುವೆಂಪು ಅವರು

Edited by Chandrashekhararadhya, Printed by H. V. Sreenivasa char, Printed and Published by Karnataka State Adult Education Council, 5/1, Vinoba Road, Manasa Gangothri, Mysore-570 006.